ಅನುವಾದಿಸಿದವರು:

ಕು. ಶಿ. ಹರಿದಾಸ ಭಟ್ಟ, ಎಂ. ಎ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್

ಅಮೇರಿಕದ ಆರು ಕತೆಗಳು

ಬರೆದವರು:

- ನಾಥಾನ್ ಆಶ್ಚ್
- ಲೂಯಿ ಬ್ರೊಮ್‌ಫೀಲ್ಡ್
- ವಿಲ್ಲಿಯಂ ಫಾಕ್‌ನೇರ್
- ಎಡ್ನಾ ಫರ್ಬರ್
- ಮೇರಿ ಇ. ವಿಲ್ಕಿನ್ಸ್ ಫ್ರೀಮ್ಯಾನ್
- ಜಾನ್ ಸ್ಟೀನ್‌ಬೆಕ್

ಅನುವಾದಿಸಿದವರು:

ಕು. ಶಿ. ಹರಿದಾಸ ಭಟ್ಟ, ಎಂ ಎ.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ

1959

ಮುದ್ರಕರು:
ನವಯುಗ ಪ್ರೆಸ್,
ಉಡುಪಿ

ಬೆಲೆ: ಒಂದೂಮುಕ್ಕಾಲು ರೂಪಾಯಿ
(೧=೭೫)

ಬಿನ್ನಹ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕತೆಗಳನ್ನು ಆಯ್ದು ಒಂದು ಸುಂದರ ಕಥಾಸಂಕಲನವನ್ನು ಇಲ್ಲಿ ಓದುಗರ ಮುಂದೆ ಇರಿಸಿದ್ದೇನೆ. ಇದರಲ್ಲಿ ಅಡಕವಾಗಿರುವ ಕಥೆಗಾರರಲ್ಲಿ ಹಲವರು ಅಮೇರಿಕನ್ ಸಾಹಿತ್ಯದಲ್ಲಿ ಸರ್ವೋತ್ತಮ ಸ್ಥಾನವನ್ನು ಪಡೆದಿರುವರು. ವಿಲ್ಲಿಯಂ ಫಾಕ್‌ನೇರ್ ಅಂಥ ನೋಬೆಲ್ ಪಾರಿತೋಷಕ ವಿಜೇತರನ್ನು ಇಲ್ಲಿ ಕಾಣಬಹುದು. ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ. ಈ ಕಥೆಗಳನ್ನು ಅನುವಾದಿಸುತ್ತಿರುವಾಗ ನನಗುಂಟಾದ ಆನಂದದಲ್ಲಿ ಸ್ವಲ್ಪವನ್ನಾದರೂ ವಾಚಕರು ಅನುಭವಿಸುವಂತಾದರೆ ನನ್ನ ಶ್ರಮವು ಸಾರ್ಥಕವೆಂದು ಎಣಿಸುತ್ತೇನೆ.

ಇತಿ,

ಮಾರ್ಚ್ ೧೯೫೯
ಕುಂಜಿಬೆಟ್ಟು, ಉಡುಪಿ.

ಕು. ಶಿ. ಹರಿದಾಸ ಭಟ್ಟ

ಪರಿವಿಡಿ

* * *

ಒಳನಾಡಿನ ಪಡುಗಡಲು

ಲೇಖಕ: ನಾಥಾನ್ ಆಶ್ಚ್.

ನಾಥಾನ್ ಆಶ್ಚ್ ಪೋಲೆಂಡ್ ದೇಶದ ವಾರ್ಸಾ ನಗರದಲ್ಲಿ ೧೯೦೨ರಲ್ಲಿ ಜನಿಸಿದರು. ಕಾದಂಬರಿಕಾರ ಶೊಲೆಮ್ ಆಶ್ಚ್ ಅವರಿಗೆ ಇವರು ಮಗನಾಗಬೇಕು. ಹದಿಮೂರನೆಯ ವರ್ಷದಲ್ಲಿ ಅಮೇರಿಕಕ್ಕೆ ಆಗಮಿಸುವ ಮುನ್ನ ತಂದೆತಾಯರೊಡನೆ ಇವರ ಸ್ವಿಟ್ಝರ್ಲೆಂಡ್, ಜರ್ಮನಿ ಮತ್ತು ಫ್ರಾನ್ಸ್ ದೇಶಗಳನ್ನು ಕಂಡಿದ್ದರು. ಅಮೇರಿಕದ ಸಂಯುಕ್ತರಾಜ್ಯದಲ್ಲಿರುವ ಸಿರಾಕ್ಯೂಸ್ ಮತ್ತು ಕೊಲಂಬಿಯ ವಿಶ್ವವಿದ್ಯಾಲಯಗಳಲ್ಲಿ ಇವರು ಶಿಕ್ಷಣವನ್ನು ಪಡೆದರು. 'ಆಫೀಸು' ಎಂಬ ಇವರ ಮೊದಲ ಗ್ರಂಥವು ೧೯೨೫ರಲ್ಲಿ ಪ್ರಕಟವಾಯಿತು. ಅಂದಿನಿಂದ ಇವರು ಐದು ಗ್ರಂಥಗಳನ್ನು ರಚಿಸಿರುವರಲ್ಲದೆ ಹಲವಾರು ಸಣ್ಣ ಕತೆಗಳನ್ನು ಬರೆದಿದ್ದಾರೆ. ಈಗಿವರು ಕ್ಯಾಲಿಫೋರ್ನಿಯಾದ ಸ್ಯಾನ್ ಫ್ರಾನ್ಸಿಸ್ಕೋದ ಬಳಿಯಲ್ಲಿರುವ ಮಿಲ್ ವ್ಯಾಲಿಯಲ್ಲಿ ವಾಸಮಾಡುತ್ತಿದ್ದಾರೆ.

ಊರಿನಿಂದ ಹೊರಗೆ ಹೊರಡುವ ಬಸ್ಸಿನಲ್ಲಿ ಸುಖಾಸೀನರಾಗಿದ್ದ ಪ್ರಯಾಣಿಕರು ನಿಲ್ದಾಣದ ಕೊಠಡಿಯಿಂದ ತನ್ನ ಪಿಳ್ಳೆಗಳ ಸಹಿತ ಬಸ್ಸಿನ ಕಡೆಗೆ ಹೊರಟು ಬರುತ್ತಿದ್ದ ಮಾರ್ಜಳನ್ನು ನೋಡಿ ಕಳವಳ ದಿಂದ ತಮ್ಮ ಅಕ್ಕಪಕ್ಕದ ಖಾಲಿ ಸ್ಥಳಗಳನ್ನು ಪರಿಶೀಲಿಸಿದರು. ಎಲ್ಲರಿ ಗಿಂತ ಹೆಚ್ಚು ವೇದನೆಯನ್ನು ಅನುಭವಿಸಹತ್ತಿದವರೆಂದರೆ ಮಿಸ್ಟರ್ ಪರ್ಸೆಲ್. ಅವರು ಬಹಳ ಮುಂಚಿತವಾಗಿ ಬಂದು ಬಸ್ಸಿನ ಹಿಂದುಗಡೆಯ ಒಂದು ಒಳ್ಳೆಯ ಸ್ಥಳವನ್ನು ಆರಿಸಿ ಕೂತಿದ್ದರು. ರಾಜ್ಯದ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಅವರ ಸುಪುತ್ರನು ಅವರು ಕಣ್ಣಲ್ಲಿಯೂ ಕಾಣದ ಯಾರೋ ಒಬ್ಬಾಕೆಯನ್ನು ಮದುವೆ ಮಾಡಿ ಕೊಂಡನೆಂಬ ವಾರ್ತೆ ಹಿಂದಿನ ರಾತ್ರಿ ಅವರಿಗೂ ಅವರ ಪತ್ನಿಗೂ ತಂತಿಯ ಮೂಲಕ ಬಂದಿತ್ತು. ಮಗನನ್ನು ಭೆಟ್ಟಿಯಾಗಲು ಹೊರ ಟಿದ್ದ ಮಿಸ್ಟರ್ ಪರ್ಸೆಲ್ ಅವರಿಗೆ ಮಾರ್ಜ್ ಕುಟುಂಬವು ತನ್ನ ಬಳಿ ಕುಕ್ಕರಿಸಿದರೆ ಎಲ್ಲಿ ಮನಸ್ಸಿನೊಳಗಿನ ದುಃಖಕ್ಕೆ ಪರಿಹಾರವನ್ನು ಶೋಧಿ ಸುವ ಕೆಲಸ ಕಷ್ಟವಾಗುವುದೋ ಎಂಬ ಭೀತಿ ಅಂಟಿಕೊಂಡಿತು.

ಅವರಿಗೆ ಆರು ಸೀಟು ಮುಂಭಾಗದಲ್ಲಿ ಕೂತಿದ್ದ ಮಿಸ್ ಬಾಮಾ ಹಿಂದಿನ ರಾತ್ರಿ ತನ್ನ ಭೂತಪೂರ್ವ ವಿದ್ಯಾರ್ಥಿಗಳು—ಅವರಲ್ಲೆಷ್ಟೋ ಜನರ ಸ್ಮರಣೆಯೂ ಅವಳಿಗೀಗ ಆಗಲಾರದು—ಕೊಟ್ಟ ವಿದಾಯ ಸತ್ಕಾರದ ಪ್ರಭಾವದಿಂದ ಇನ್ನು ಚೇತರಿಸಿಕೊಂಡಂತಿರಲಿಲ್ಲ. ಕೆಲಸ

ದಿಂದ ವಿಶ್ರಾಂತಳಾದ ಆಕೆಗೆ ತಮ್ಮ ಕೃತಜ್ಞತೆಯ ಸಂಕೇತವೆಂದು ಅವರು ಒಂದು ಪ್ರವಾಸದ ಸೂಟ್‌ಕೇಸನ್ನು ಕಾಣಿಕೆ ಇತ್ತಿದ್ದರು. ಅತ್ಯಂತ ಸುಂದರವಾದ ಆ ಉಡುಗೊರೆ ಆಕೆಯ ತಲೆಯ ಮೇಲ್ಗಡೆ ನಾಗಂದಿಗೆಯಲ್ಲಿ ಸುಭದ್ರವಾಗಿತ್ತು. ಇನ್ನೊಂದು ಸಾಧಾರಣ ಟ್ರಂಕು ಬಸ್ಸಿನ ಲಗ್ಗೇಜ ಇಡುವ ಜಾಗದಲ್ಲಿ ಇದ್ದಿತು. ಇವೆರಡು ಪೆಟ್ಟಿಗೆಗಳು ಮತ್ತು ಆಕೆ—ಇಷ್ಟೇ ಆಕೆಯ ವ್ಯಕ್ತಿತ್ವ. ಆಕೆಯ ಪ್ರಪಂಚವೂ ಇಷ್ಟೇನೆ. ಹಿಂದಿನ ರಾತ್ರಿ ಆಕೆಯ ವಿದ್ಯಾರ್ಥಿಗಳಾಗಿದ್ದ ಸ್ತ್ರೀ ಪುರುಷರು ಆಕೆ ಉಪಯೋಗಿಸಿದ ಪದ ಮತ್ತು ನುಡಿಗಟ್ಟುಗಳನ್ನೂ, ಕ್ಲಾಸ್ ರೂಮಿನಲ್ಲಿ ಆಕೆ ಅತ್ತಿಂದಿತ್ತ ತಿರುಗಾಡುತ್ತಿದ್ದ ವಿಶಿಷ್ಟ ನಡಿಗೆಯನ್ನೂ, ವಿನಾಕಾರಣ ಆಕೆ ತೋರುತ್ತಿದ್ದ ಹಾವಭಾವಗಳನ್ನೂ ಮತ್ತೆ ಮತ್ತೆ ನೆನಪಿಗೆ ತಂದು ಇವೆಲ್ಲ ಹೇಗೆ ಒಂದೊಂದಾಗಿ ತಮ್ಮ ವ್ಯಕ್ತಿತ್ವದಲ್ಲಿ ಸೇರಿಕೊಂಡಿವೆ ಎಂಬುದನ್ನು ನಗುಮೊಗದಿಂದ ವಿಶದಗೊಳಿಸಿದ್ದರು. ಅಮೂಲ್ಯವಾದ ಆ ಸವಿ ನೆನಪುಗಳನ್ನು ಅವರು ಎಂದೆಂದೂ ಮರೆಯುವುದಿಲ್ಲವೆಂದು ಆಕೆಗೆ ಆಶ್ವಾಸನೆ ಕೊಟ್ಟಿದ್ದರು. ಮಿಸ್ ಬಾಮಳ ಭುಜವು ಒಂದಿಷ್ಟು ಹಿಗ್ಗಿತು. ಆದರೆ ತಾನು ಮಾಡಿದ ಯಾವುದೊಂದೂ ಆಕೆಯ ನೆನಪಿನಲ್ಲಿ ಉಳಿದಿರಲಿಲ್ಲ. ಪಾಠಕಲಿಸುವುದನ್ನು ನಿಲ್ಲಿಸಿದ ಮೇಲೆ ಉಪಾಧ್ಯಾಯರ ಅವಸ್ಥೆ ಏನಾಗುವುದೋ ಎಂದಾಕೆ ಚಿಂತಿಸುತ್ತಿದ್ದಳು. ಚಿಕ್ಕದೊಂದು ಆವರಣವನ್ನು, ಕರೆಯ ಪ್ರತಿಯೊಂದು ತಿರವು ಮುರವನ್ನೂ, ಕರಾವಳಿಯ ಪ್ರತಿಯೊಂದು ಬಂಡೆಯನ್ನೂ ಬಲ್ಲ ನಾವೆಯೊಂದು ವಿಶಾಲ, ಅಜ್ಞಾತ ಸಾಗರದಲ್ಲಿ ಅಪರಿಚಿತ ಹಡಗುಗಳನ್ನು ಸಂಧಿಸುವ ಒಂದು ಕಾಲ್ಪನಿಕ ನೋಟ—ಮಿಸ್ ಬಾಮಳ ಕಣ್ಣಿಗೆ ಕಟ್ಟಿದಂತಾಯಿತು.

ಬಸ್ಸಿನ ಬಾಗಿಲಿನ ಬಳಿ ಇರುವ ಮುಂದುಗಡೆಯ ಸೀಟಿನಲ್ಲಿ ಮಗಳು ಲಾರಾಳೊಡನೆ ಕೂತಿದ್ದ ಶ್ರೀಮತಿ ಆರ್ಥರ್ ಬೆರ್ರಿಮನ್ ತನ್ನ ಕೋಟನ್ನು ಮೈಗೆ ಮತ್ತಷ್ಟು ಒತ್ತಿ ಹಿಡಿದುಕೊಂಡಳು. ನಗರದ ನರ್ತನಶಾಲೆಯಲ್ಲಿ ಮಗಳಿಗೆ ಶಿಷ್ಯವೇತನವು ದೊರೆತ ಸಂಭ್ರಮದ ಸದುಪಯೋಗವೋ ಎಂಬಂತೆ ಆಕೆ ಹಿಂದುಮುಂದು ನೋಡದೆ ಹಣ

ವನ್ನು ವೆಚ್ಚಮಾಡಿ ಮಗಳಿಗೂ ತನಗೂ ಹೊಸ ಉಡುಪನ್ನು ಹೊಂದಿಸಿ ಕೊಂಡಿದ್ದಳು. ಅಷ್ಟಾದ ಮೇಲೆ ಆಕೆಗೆ ಅಯ್ಯೋ ಹೀಗೇಕೆ ಹುಚ್ಚಳಂತೆ ವರ್ತಿಸಿದೆ, ದಾರಿ ಕವಲೊಡೆಯುವ ಗಂಭೀರ ಸನ್ನಿವೇಶದಲ್ಲಿಯೆ ವ್ಯರ್ಥವಾಗಿ ವೆಚ್ಚಮಾಡಿ ಭವಿಷ್ಯವನ್ನು ಹಾಳುಮಾಡಿದೆನೇನೊ ಎಂದು ವ್ಯಥೆಯಾಯಿತು. ಆರ್ಥರನನ್ನು ಗ್ರಾಮಾಂತರದಲ್ಲಿ ಕಂಡ ಮೇಲೆ ತಾನೂ ಮಗಳೂ ನಗರಕ್ಕೆ ಮರಳಿ ನೃತ್ಯವಿದ್ಯೆಯನ್ನು ಮುಂದುವರಿಸ ಬೇಕು, ಗಂಡ ಆರ್ಥರ ಗ್ರಾಮದಲ್ಲಿ ದುಡಿದು ತಮ್ಮ ವೆಚ್ಚವನ್ನು ನಡೆಯಿಸಬೇಕೆಂದು ಅವಳು ಯೋಜನೆ ಹೂಡಿದ್ದಳು. ಮಗಳು ದೊಡ್ಡ 'ಬಲೆ' ನರ್ತಕಿಯಾಗಲು ಹೆತ್ತವರಾದ ತಾವು ಹೊಟ್ಟೆಯನ್ನು ಕಟ್ಟಿ ಕೊಂಡು ಸಕಲ ತ್ಯಾಗಕ್ಕೂ ಸಿದ್ಧರಾಗಿರತಕ್ಕದು. ಲಾರಾ ನರ್ತನದಲ್ಲಿ ಅಪ್ರತಿಮ ಪ್ರತಿಭಾವಂತಳಾಗಿದ್ದು ಕೀರ್ತಿವಂತೆ ಎನಿಸುವುದರಲ್ಲಿ ಸಂದೇಹವೇ ಇರಲಿಲ್ಲ. ಆದಕ್ಕಾಗಿ ತಾವು ಮಾಡುವ ಯಾವ ತ್ಯಾಗವೂ ದೊಡ್ಡದಲ್ಲ. ಆದರೆ ಈ ಹೊಸ ಉಡುಪನ್ನು ನೋಡಿಯೆ ಅದರ ಬೆಲೆ ಯನ್ನು ಅಳೆಯುವ ಆರ್ಥರನನ್ನು ಈ ವಿಷಯದಲ್ಲಿ ಸಮಜಾಯಿಸು ವುದು ಸುಲಭವಾದೀತೆ? ಎಂಬುದು ಶ್ರೀಮತಿ ಬೆರ್ರಿಮೆನಳನ್ನು ತೀವ್ರ ಚಿಂತೆಗೆ ಒಳಗುಪಡಿಸಿತು. ಮಾರ್ಜ್ ಮತ್ತವಳ ಪಿಳ್ಳೆಗಳು ಬಸ್ಸಿನ ಕಡೆ ಹೊರಟುದನ್ನು ನೋಡಿ ಶ್ರೀಮತಿ ಬೆರ್ರಿಮೆನ್ ಕೂಡ ತುಸು ಅಂಜಿ ದಳು. ಯಾರೋ ಒಬ್ಬನ ಬೇಜವಾಬ್ದಾರಿತನದ ಫಲಿತಾಂಶ—ಈ ಮಕ್ಕಳು—ಎಂದುಕೊಂಡು ಲಾರಾಳನ್ನು ಸಂರಕ್ಷಿಸುವ ರೀತಿಯಲ್ಲಿ, ತಾವಿಬ್ಬರೂ ಅಂಥ ಮೂರ್ಖತನಕ್ಕೆ ಬಲಿಯಾಗುವುದಿಲ್ಲವೆಂದು ಹಠ ತೊಡುವಂತೆ, ಇನ್ನಷ್ಟು ಒತ್ತಿ ಕೂತುಕೊಂಡಳು.

ಬಸ್ಸಿನ ಹಿಂದುಗಡೆಯ ಮೃದುವಾದ ಆಸನದಲ್ಲಿ—ಏಕೆ ಇಡಿ ಪ್ರಪಂಚದ ಶಿಖರದಲ್ಲೆ—ಮಂಡಿಸಿದಂತೆ ಆಸೀನನಾದ ಆ ವ್ಯಕ್ತಿಯೇ ಪೀಟ್ ಡಾಲಿ. ಅವನ ತಲೆಯೊಳಗೆ ಸುತ್ತುತ್ತಿದ್ದುದು ನೃತ್ಯ ಸಂಗೀತ. ಒಂದು ಕೈ ಜೇಬಿನೊಳಗಿನ ಬೆಳ್ಳಿಯ ಅದೃಷ್ಟತಾಯಿತವನ್ನು ಸವರು ತ್ತಿತ್ತು. ಅದೇ ಕಾಲಕ್ಕೆ ಆ ಕೈಯ ಹಿಂಭಾಗಕ್ಕೆ ೧೧೫ ಡಾಲರಿನ ನೋಟುಗಳ ಕಟ್ಟು ತಗಲುತಿತ್ತು. ಮಾರ್ಜ್ ಮತ್ತು ಮಕ್ಕಳು ಬಸ್

ನಿಲ್ಮನೆಯ ಪ್ಲಾಟಫಾರವನ್ನು ದಾಟುತ್ತಿರುವುದನ್ನು ಕಂಡಾಗ ಪೀಟ್ ಡಾಲಿಯ ಸಂಗೀತ ಒಂದರೆಕ್ಷಣ ಸ್ತಬ್ಧವಾಯಿತು. ಜೇಬಿನೊಳಗಿಲ್ಲದೆ ಸ್ವತಂತ್ರವಾಗಿದ್ದ ಅವನ ಇನ್ನೊಂದು ಕೈ ಪಕ್ಕದ ಅನಾಕ್ರಮಿತ ಸ್ಥಳದ ಮೇಲೆ ಹಾದು ಹೋಯಿತು. ಹಿಂದಿನ ರಾತ್ರಿ ಮದ್ಯಗೃಹವೊಂದರ ಹಿಂದುಗಡೆಯ ಕೊಠಡಿಗೆ ಜುಗಾರಿ ಆಡುವುದನ್ನು ನೋಡಲು ಪೀಟ್‌ಡಾಲಿ ಹೋಗಿದ್ದನು. ಅದರ ಪರಿಣಾಮವಾಗಿ ಆತ ಇಂದು ಡಾಲರ್ ನೋಟುಗಳ ಕಟ್ಟನ್ನು ಮಾತ್ರವಲ್ಲದೆ ಒಂದು ಬಸ್ ಟಿಕೆಟನ್ನೂ ಸಂಪಾದಿಸುವಂತೆ ಆಯಿತು. ಡಾಲಿಗೆ ಏಕೋ ತುಸು ನಗು ಉಮ್ಮಳಿಸಿತು. ನಿಲ್ಮನೆಯ ವೇಟಿಂಗ್ ರೂಮಿನಿಂದ ಇನ್ನಾವ ಸುಂದರ ಸ್ತ್ರೀ ಹೊರಬೀಳುವಳೋ ಎಂದು ಕುತೂಹಲದಿಂದ ಪೀಟ್ ಡಾಲಿ ನಿರೀಕ್ಷಿಸುತ್ತ ಪಕ್ಕದ ಸೀಟನ್ನೇ ಏಕೆ ಜೇಬಿನ ನೋಟಿನ ಕಟ್ಟಿನಲ್ಲಿ ಕೆಲವನ್ನೂ ಆಕೆಗೋಸ್ಕರ ಮೀಸಲಿಡುವೆನೆಂದು ಎಂದುಕೊಂಡನು.

ನಡೆಯ ಆಚೆಗೆ ಕೂತ ಹೊರೇಸ್ ಕಾಯ್ ಸ್ಯಾಂಪಲ್ ತುಂಬಿದ ಎರಡು ಪೆಟ್ಟಿಗೆಗಳನ್ನು ಪಕ್ಕದಲ್ಲಿರಿಸಿಕೊಂಡು ಲೆಕ್ಕದ ಪುಸ್ತಕದಲ್ಲಿ ವೆಚ್ಚವನ್ನು ಬರೆದಿಡುತ್ತಿದ್ದನು. ವಿಮನಸ್ಕನಾಗಿ ಆತ ಹೊರನೋಡಿದಾಗ ಮಾರ್ಜ್ ಆತನ ಕಣ್ಣಿಗೆ ಬಿದ್ದಳು. ಕಣ್ಣು ಸ್ವಾಭಾವಿಕವಾಗಿ ಆಕೆಯ ಮೊಣಕಾಲನ್ನು ಪರೀಕ್ಷಿಸಿತು. ಆಕೆ ಧರಿಸಿದ ಸ್ಟಾಕಿಂಗ್ಸ್ ತಾನು ಮಾರುವ ಜಾತಿಯದಲ್ಲವೆಂದು ಅವನ ಮನಸ್ಸಿನಲ್ಲಿ ತನ್ನಿಂದ ತಾನೇ ಸ್ಥಿರವಾಯಿತು.

ವರ್ಜೀನಿಯ ಗವೆನಸಳ ದೃಷ್ಟಿ ಪೀಟ್‌ಡಾಲಿಯ ಮೇಲೆ ನೆಟ್ಟಿರಲಾಗಿ ಆಕೆಗೆ ಮಾರ್ಜ್ ಮತ್ತು ಮಕ್ಕಳು ಬಸ್ ಹತ್ತುವಾಗಲೇ ಅವರ ಜ್ಞಾನವಾಯಿತು. ಡ್ರೈವರನ ಸೀಟಿನ ಹಿಂದುಗಡೆಯಲ್ಲಿ ಕೂತಿದ್ದ ವರ್ಜೀನಿಯ ಡ್ರೈವರನನ್ನು ಸಂಭಾಷಣೆಗೆಳೆಯುವ ಸನ್ನಾಹದಲ್ಲಿದ್ದಳು. ಆದರೆ ಪೀಟ್ ಡಾಲಿಯ ಕಣ್ಣುಗಳಲ್ಲಿ ಸೂಸುತ್ತಿದ್ದ ತುಂಟತನವನ್ನು ಕಂಡಮೇಲೆ ಆಕೆಗೆ ಡ್ರೈವರನನ್ನೇಕೆ ಆರಿಸಿದೆನೋ ಎಂದು ತಳಮಳವಾಯಿತು.

ಮಾರ್ಜಳ ಚಿಕ್ಕ ಪರಿವಾರ ಬಸ್ಸು ಹತ್ತುವಾಗ ಅದರಲ್ಲಿ ಇನ್ನೂ ಎಷ್ಟೋ ಜನ ಇದ್ದರು. ಮೂಟೆಗಟ್ಟಲೆ ಸಾಮಾನನ್ನು ಬಳಿಯಲ್ಲಿರಿಸಿ ಪಕ್ಕದ ಸೀಟಿನ ಚಿಂತೆಯೇ ಇಲ್ಲದಿದ್ದ ಶ್ರೀಮತಿ ಫ್ರೇಜರ್ ಎಂಬವಳಿದ್ದಳು. ಅಲ್ಲದೆ ಬೇರಾವುದೋ ಬಸ್ಸನ್ನು ಹಿಡಿಯಬೇಕಾಗಿದ್ದ ಮಿಸ್ ಟೇಟ್ ಗಡಿಬಿಡಿಯಲ್ಲಿ ಈ ಬಸ್ಸಿನೊಳಕ್ಕೆ ಬಂದು ಹೊರಡುವ ಮುನ್ನ ಕೋಪಾವಿಷ್ಟಳಾಗಿ ಇಳಿಯಬೇಕಾಗಿತ್ತು.

ಮಾರ್ಜ್, ಜೋಯಿ, ಜರೂಸಲೆಮ್ ಬೆಲಿ ಮತ್ತು ಮಗು ಇದೇ ಈಗ ಬಸ್ಸನ್ನು ಹತ್ತಿದರು. ವಸಂತಕಾಲದ ಕುಳಿರಿನ ಈ ದಿನವೂ ಮಾರ್ಜ್ ಹತ್ತಿಯ ಬಟ್ಟೆಯ ಸ್ಟಾಕಿಂಗ್ಸ್, ಉಡುಪು ಧರಿಸಿದ್ದಳು. ತಲೆಯ ಮೇಲೆ ಹ್ಯಾಟೂ ಇರಲಿಲ್ಲ. ಮಗುವನ್ನು ಕಂಕುಳಲ್ಲಿರಿಸಿ ಕೊಂಡಿದ್ದಳು. ಜೋಯಿ ಮತ್ತು ಜರೂಸಲೆಮ್ ಬೆಲಿಗೆ ಪಾದರಕ್ಷೆಗಳಿರಲಿಲ್ಲ. ಜೋಯಿಯ ಚಣ್ಣಕ್ಕೆ ತೇಪೆ ಹೊಂದಿಸಲಾಗಿತ್ತು; ಆತನ ಡರ್ಬಿ ಹ್ಯಾಟು ವಿದೀರ್ಣವಾಗಿತ್ತು. ಜರೂಸಲೆಮ್ ಬೆಲಿ ಓವರಾಲ್ ಧರಿಸಿದ್ದಳು, ತಲೆಯಲ್ಲೊಂದು ಕೆಂಪು ರಿಬ್ಬನ್ ಕಟ್ಟಿಕೊಂಡಿದ್ದಳು. ಬಸ್ಸಿಗೆ ಹತ್ತು ಮಾರು ದೂರದಲ್ಲಿ ಈ ಎರಡು ಮಕ್ಕಳೂ ತಾಯಿಯ ಗುಂಪನ್ನು ಬಿಟ್ಟು ಧಾವಿಸಿದರು. ಮೊದಲು ಬಸ್ ಹತ್ತಿದವಳು ಜರೂಸಲೆಮ್. ಬಸ್ಸಿನ ಸೀಟುಗಳ ನಡುವಿನ ನಡೆಯಲ್ಲಿ ಓಡಿ ಬಂದು ಕಿಟಕಿಯ ಪಕ್ಕದ ಖಾಲಿ ಸ್ಥಳವೊಂದನ್ನು ಆಕೆ ಹಿಡಿದಳು. 'ನೋಡು, ನಿನ್ನನ್ನು ಕೊಂದು ಹಾಕಿ ಬಿಡುತ್ತೇನೆ' ಎಂದು ಗಟ್ಟಿಯಾಗಿ ಅಂದವನೇ ಜೋಯಿ ಕೂಡ ಆಕೆಯ ಪಕ್ಕದಲ್ಲಿ ಕುಕ್ಕರಿಸಿದನು.

ತರಂಗ ತರಂಗವಾಗಿ ಎದ್ದ ಗುಡ್ಡಗಳ ನಡುವೆ ಏರುತಗ್ಗಿನ ರಾಜಮಾರ್ಗದಲ್ಲಿ ಸಮುದ್ರದಲ್ಲಿ ಸಂಚರಿಸುವ ಹಡಗಿನಂತೆ ಬಸ್ಸು ಸರಾಗವಾಗಿ ಹರಿಯುತ್ತಿತ್ತು. ಒಳಗಡೆ ಹಸುರು ಸೀಟಿನ ಸಾಲುಸಾಲು, ಸೀಟಿನ ಹಿಂದುಗಡೆ ತಲೆ ಇಡುವಲ್ಲಿ ಬಿಳಿಯ ಹೊದಿಕೆ. ನಡೆಯಲ್ಲಿ ಆಧಾರಕ್ಕೆಂದು ಇರಿಸಿದ ಕೈಹಿಡಿಕೆಗಳು, ಇಳಿಬಿಟ್ಟ ಪರದೆ, ದೀಪ. ಡ್ರೈವರನಿಗೆ ಸೂಚನೆ ಕೊಡಲು ಎಳೆಯುವ ಹಗ್ಗ, ಪಕ್ಕನೆ ರಸ್ತೆ

ತಿರುಗಿದ್ದಲ್ಲಿ ಆಧರಿಸಿಕೊಳ್ಳಲು ಬೇಕಾದ ಬೆಲ್ಟು, ಎಚ್ಚರಿಕೆಯ ನೋಟೀಸುಗಳು, ಜಾಹೀರಾತಿನ ಹಲಗೆಗಳು, ಥಳಥಳಿಸುವ ಅಗ್ನಿಶಾಮಕ, ತಣ್ಣೀರಿನ ಕೂಜೆ ಇಷ್ಟನ್ನು ಒಳಗೂಡಿಸಿಕೊಂಡ ಬಸ್ಸು ತುಂಬಿ ಓಡುತ್ತಿತ್ತು. ಸಾಲದುದಕ್ಕೆ ವಿಂಡ್‌ಗ್ಲಾಸಿನ ಮೇಲ್ಗಡೆ ತೂಗಹಾಕಿದ್ದ ಕನ್ನಡಿಯಲ್ಲಿ ಇಡಿ ಬಸ್ಸಿನ ಪ್ರತಿಬಿಂಬವು ಬಿದ್ದು ಒಳಗಿನ ಸರಕು ಇಮ್ಮಡಿಸಿದಂತೆ ಕಾಣುತಿತ್ತು. ಬಸ್ಸಿನ ಹೊರಗಡೆ ಹಣಿಕಿದರೆ ಅಲ್ಲಿಯೂ ಅಷ್ಟೆ—ಕ್ಷಣಕ್ಷಣಕ್ಕೂ ಬದಲಾಗುವ ನೈಸರ್ಗಿಕ ದೃಶ್ಯಗಳು, ಟೆಲಿಗ್ರಾಫ್ ಕಂಬಗಳು, ತಂತಿಗಳು, ಮನೆ ಮತ್ತು ಹೊಲಗಳು, ಪೆಟ್ರೋಲ್ ಪಂಪುಗಳು ಮತ್ತು ದೃಕ್ಪಥಕ್ಕೆ ಬಂದು ಕ್ಷಣಾರ್ಧದಲ್ಲಿ ಹಾದುಹೋಗುವ ಹಳ್ಳಿಗಳು. ಬಸ್ಸು ಒಳಗೂ ತುಂಬಿತ್ತು, ಹೊರಗೂ ತುಂಬಿತ್ತು.

ಡ್ರೈವರ್ ಚಾರ್ಲಿ ಫ್ಯಾರೆಲ್ (ಕಂಪನಿ ವರ್ಗೀಕರಣ ಬಿ1—ಒಂದು ಎಚ್ಚರಿಕೆ ಪಡೆದವನು—ವಿವಾಹಿತ, ಒಬ್ಬ ಮಗ) ತನ್ನ ಬೆಂಗಡೆಯ ರ್‍ಯಾಕಿನಲ್ಲಿಟ್ಟ ಮೂರು ಡಜನ್ ತತ್ತಿಗಳನ್ನು ನೋಡಿ, ವ್ಹೀಲಿನಿಂದ ಒಂದು ಕೈಯನ್ನು ತೆಗೆದು ಟೈಗಂಟನ್ನು ಸರಿಪಡಿಸಿಕೊಂಡನು. ಬಸ್ಸಿನೊಳಗಿನ ಪ್ರಯಾಣಿಕರು ಯಾವ ಯಾವ ಸ್ಥಳದಲ್ಲಿ ಕೂತಿರುವರೆಂದು ಅವನಿಗೆ ಕನ್ನಡಿಯೊಳಗಿಂದಲೆ ತೋರುತಿತ್ತು. ಒಂದು ಸಲ ಆಚೆ ಕಣ್ಣು ಹರಿಯಿಸಿ, ಎಕ್ಸಿಲರೇಟರನ್ನು ಕಾಲಿಂದ ಅಮುಕಿದನು. ರಸ್ತೆ ಮತ್ತಷ್ಟು ವೇಗದಿಂದ ಹಿಂದೆ ಹೊರಳಲು ಆರಂಭವಾಯಿತು. ಬಸ್ಸಿನ ಇಂಜನಿನ ನಡುಕವು ಡ್ರೈವರನ ಕಾಲುಗಳಲ್ಲಿ ಪ್ರವಹಿಸತೊಡಗಿತು. ಕೆಂಗೂದಲನ್ನು ಮುಖದ ಮೇಲೆ ಚೆಲ್ಲಿಕೊಂಡಿದ್ದ ಪ್ರಯಾಣಿಕನು ಮದ್ಯದ ಬಾಟಲಿಯನ್ನೇನೂ ಹಿಡಿದಿಲ್ಲವಷ್ಟೇ ಎಂದು ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಡ್ರೈವರ ಮುಂದಿನ ಕನ್ನಡಿಯನ್ನು ಒಮ್ಮೆ ವೀಕ್ಷಿಸಿದನು. ಹಿಂದುಗಡೆ ಕೂತಿದ್ದ ಮಹಿಳೆಯು ಚಡಪಡಿಸುತ್ತಿರುವುದು ಅಷ್ಟರಲ್ಲಿ ಡ್ರೈವರನಿಗೆ ವಿದಿತವಾಯಿತು, ಇನ್ನೇನು ನಿರರ್ಥಕ ಪ್ರಶ್ನೆಗಳಿಗೆ ಆತ ಸಿದ್ಧನಾದನು. ಭುಜವನ್ನು ಏರಿಸಿ ವ್ಹೀಲಿನ ಮೇಲೆ ಬಗ್ಗಿದನು.

ಮಿಸ್ಟರ್ ಪರ್ಸೆಲರ ಪಕ್ಕದ ಸೀಟು ಖಾಲಿಯಾಗಿಯೇ ಉಳಿದಿತ್ತು. ಮಗನ ಇದಿರಲ್ಲಿ ಬಣ್ಣ ಬಳೆದುಕೊಂಡ ಆ ಹೆಣ್ಣಿನ ಕಡೆಗೆ ಬೆರಳು

ತೋರಿಸುತ್ತ "ಎದೆ ಒಡೆದು ಹೋಗುವಂತೆ ಅಳುತ್ತಿರುವ ನಿನ್ನ ತಾಯಿಯನ್ನಾದರೂ ಯೋಚಿಸಿ ನೋಡು," ಎಂದು ತಾನು ಹೇಳುತ್ತಿರುವಂತೆ ಅವರಿಗೆ ಭಾಸವಾಯಿತು. ಮಿಸ್ ಬಾಮಳ ಕಣ್ಣು ಮುಚ್ಚಿಕೊಂಡಿದ್ದವು. "ಅರುವತ್ತು ವರ್ಷಗಳ ಕಾಲ ಬುದ್ಧಿವಂತೆ ಎನಿಸಿದ ನಿನಗೆ ಈಗ ಮರುಳು, ಶುದ್ಧಮರುಳು", ಎಂದು ಡಾಕ್ಟರ್ ಕೌಲಿ ಹೇಳಿದ ಮಾತುಗಳು ಆಕೆಯ ಕಿವಿಯಲ್ಲಿ ಪಡಿದನಿಗುಡುತ್ತಿದ್ದವು: ಆದೇಕೋ ಪೀಟ್ ಡಾಲಿಗೆ ಹಸಿವೆ ಹತ್ತಿಕೊಂಡಿತು; ಗಡಿಬಿಡಿಯಲ್ಲಿ ನೋಟು ಕೊಟ್ಟರೆ ಊಟ ಸಿಗುವುದೆಂಬುದೂ ಅವನಿಗೆ ಮರೆತು ಹೋಗಿತ್ತೇನು? "ಇಡಿ ದಿನ ಬಸ್ಸು ಓಡಿಸಿದರೆ ನಿನಗೆ ದಣುವಾಗುವುದಿಲ್ಲವೆ?' ಎಂದು ಡ್ರೈವರನಿಗೆ ಪ್ರಶ್ನೆ ಕೇಳಬೇಕೆಂದು ವರ್ಜೀನಿಯ ಗವೆನೆಸ್ ಯೋಚಿಸುತ್ತಿರುವನಿತರಲ್ಲಿ ಅವಳ ಹಿಂದಿನಿಂದ ಪೀಟ್ ಡಾಲಿಯ ಕಿಲಕಿಲ ನಗು ಹರಿದುಬಂದಿತು. ಒಂದು ಸಲ ತಿರುಗಿನೋಡಿ ಕೂಡಲೇ ಆಕೆ ತಲೆ ತಿರುಗಿಸಿದಳು—ಸಿಟ್ಟನಿಂದ. ಆಕೆ ತಿರುಗಿ ನೋಡಿದಾಗ ಆತನು ಕುಡಿನೋಟ ಬೀರಿಯೇ ಬಿಟ್ಟದ್ದನು. ಕಿಟಕಿಯ ತಂಪಿಗೆ ಮೂಗನ್ನೊಡ್ಡಿ ಜರುಸಲೆಮ್ ಬೆಲಿ ಹೊರಗಿನ ಮರಗಳನ್ನು ಒಂದೊಂದಾಗಿ 'ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು....' ಎಂದು ಲೆಕ್ಕಮಾಡುತ್ತಿದ್ದಂತೆ ಮರಗಳು ಮರೆಯಾದುವು. ಪಕ್ಕದ ಜೋಯಿಯ ಭಾರವು ತನ್ನ ಮೇಲೆ ಬೀಳುವುದನ್ನು ತಿಳಿದು ಆತನನ್ನು ಆಕೆ ಸ್ವಲ್ಪ ದೂಡಿದಳು. ಸೀಟಿನ ನಡುವೆ ಬೆರಳಿನಿಂದ ಒಂದು ಗೀಟೆಳೆದು, ಇಕೋ ಇದು ನನ್ನದು, ಅದು ನಿನ್ನದು' ಎಂದು ಸೀಟನ್ನು ಹಂಚಿದಳು.

ಜೋಯಿ ಮತ್ತು ಜರೂಸಲೆಮ್ ಬೆಲಿಯ ಹಿಂದಿನ ಸೀಟಿನಲಿ ಕೂತಿದ್ದ ಮಾರ್ಜಳ ತೋಳಿನ ತೆಕ್ಕೆಯಲ್ಲಿ ಮಗು ಸುಖವಾಗಿ ನರೆಗೂದಲಿನ ಮುದುಕಿಯನ್ನು ನೋಡುವುದರಲ್ಲಿ ಮಗ್ನವಾಗಿತ್ತು. ಶ್ರೀಮತಿ ಬಾಮ ಕಣ್ಣುತೆರೆದು ಮಾರ್ಜಳನ್ನೂ ಆಕೆಯ ಮಗುವನ್ನೂ ನೋಡಿ, 'ಮಗು ಭಾರವಾಗಿದೆಯಲ್ಲವೆ?' ಎಂದು ಕೇಳಿದಳು. ಮಾರ್ಜ್

ಬರೇ ಗೋಣಲ್ಲಾಡಿಸಿದಳು. 'ಎಷ್ಟು ದೊಡ್ಡ ಮಗು!'—ಎಂದು ಶ್ರೀಮತಿ ಬಾವಾ ಉಸುರ್ಗರೆದಳು.

ಮೆಟ್ರೊಪೊಲಿಟನ್ ನಾಟ್ಯಗೃಹದ ನೇಪಥ್ಯದಲ್ಲಿ ಶ್ರೀಮತಿ ಬೆರ್ರಿಮೆನ್ ನಿಂತಿದ್ದಳು. ಮುಂದುಗಡೆಯಿಂದ ಸಾಮೂಹಿಕ ವಾದ್ಯ ಸಂಗೀತದ ತರಂಗಗಳು ಮೇಲೆ ಎದ್ದು ಬರುತ್ತಿದ್ದುವು. ಆಕೆಯ ರೇಶಿಮೆ ಕರವಸ್ತ್ರವನ್ನು ಹಿಡಿದ ಹಸ್ತವು ನಡುಗುತ್ತಿತ್ತು. ಅಪ್ಸರೆಯಂತೆ ಲಾರಾ ಬೆರ್ರಿಮೆನ್ ರಂಗಭೂಮಿಯ ಮೇಲೆ ತೇಲಿ ಬಂದಾಗ ಶ್ರೀಮತಿ ಬೆರ್ರಿಮೆನಳ ಹೃದಯದಲ್ಲಿ ಅನುಭೂತಿಪೂರ್ಣ ಕಂಪನವುಂಟಾಯಿತು. ಆಕೆ ತಲೆಯನ್ನು ಕೊಡಹಿದಳು. ಆರ್ಥರನನ್ನು ಬಿಟ್ಟಿರುವುದು ಎಂದರೆ ಅದು ವಿಮೋಚನೆಯಲ್ಲ, ತ್ಯಾಗವೆಂದು ಅವಳಿಗೆ ಗೊತ್ತು. ಆರ್ಥರ ಗಂಟಲು ಕೆರೆಯುತ್ತಿದ್ದಾಗ ಕೇಳಿಸುವ ಗೊಗ್ಗರಧ್ವನಿ, ಸಾಯಂಕಾಲದ ಹೊತ್ತು ಆತ ಮನೆಗೆ ಮರಳುವಾಗ ಮನೆಯ ಹೊರಜಗಲಿಯಲ್ಲಿ ಉಂಟಾಗುತ್ತಿದ್ದ ಅವನ ಕಾಲ ಸಪ್ಪಳ—ಬೇಸರದ ಇಂಥ ದೈನಂದಿನ ವಿದ್ಯಮಾನಗಳನ್ನು ಆಕೆ ಮರೆಯಲು ಯತ್ನಿಸುತ್ತಿದ್ದಳು. ವಿಹ್ವಲತೆಯಿಂದ ಲಾರಾಳನ್ನು ನೋಡಿ, 'ಚೂಯಿಂಗ್ ಗಮ್ಮಿನ ಒಂದು ಕಡ್ಡಿ ಕೊಡಲೇ?' ಎಂದು ಆಕೆ ಕೇಳಿದಾಗ ಲಾರಾ ಆಯಿತೆಂದು ತಲೆ ಅಲುಗಿಸಿದಳು.

"ನಿನ್ನ ಪೋಷಣೆಯ ಭಾರವನ್ನು ನನ್ನ ಹೆಗಲಿನಿಂದ ಇಳಿಸಿಬಿಟ್ಟು, ಒಂದು ಒಳ್ಳೆಯ ಕೆಲಸ ಹಚ್ಚಿಕೊಂಡೆಯಲ್ಲೋ ಮಗನೇ?" ಎಂದು ಮಿಸ್ಟರ್ ಪರ್ಸೆಲ್ ಗಡಸುಧ್ವನಿಯಲ್ಲಿ ಮಗನಿಗೆ ಉಪದೇಶ ಮಾಡುತ್ತಿದ್ದರು. ಸ್ಯಾಂಪಲ್ ಕೇಸುಗಳನ್ನು ನೋಡನೋಡುತ್ತ ಬಸ್ ನಿಲ್ದಾಣಕ್ಕೆ ಟ್ಯಾಕ್ಸಿ ತಂದಿದ್ದರೆ ತಪ್ಪಾಗುತ್ತಿರಲಿಲ್ಲವೆಂದು ಮಿಸ್ಟರ್ ಕೊಯರ್ ನಿರ್ಣಯಿಸಿದರು. ಎಂಭತ್ತೈದು ಸೆಂಟ್ಸ್ ಟ್ಯಾಕ್ಸಿ ಚಾರ್ಜು ಮತ್ತು ಹದಿನೈದು ಸೆಂಟ್ಸ್ ಬಕ್ಷೀಸನ್ನು ಖಾತೆಯಲ್ಲಿ ಬರೆದುಕೊಂಡರು. ಪೀಟ್ ಡಾಲಿ ಪುನರ್ವಿಮರ್ಶೆಯಲ್ಲಿ ತಲ್ಲೀನನಾಗಿದ್ದನು: ದಪ್ಪನಾಗಿ ಕಾಣುವ ಆ ತಿಂಡಿಯಲ್ಲಿ ನೀರುಳ್ಳಿಯ ಬದಲು ಬುಗುಟು ತುಂಬಿದ್ದಿರಬಹುದೆ' ಶ್ರೀಮತಿ ಬಾವಾಳ ಜ್ಞಾನಪಥದಲ್ಲಿ ಮಾರ್ಜಾಳ

ಮುಂದಿನ ಸೀಟಿನಲ್ಲಿ ಮಂಡಿಯೂರಿ ಕೂತ ಮಕ್ಕಳು ಹಾಯುವಂತಾಯಿತು. ಅವರು ತಲೆತಿರುಗಿಸಿ ಹಿಂದಕ್ಕೆ ನೋಡಿದರು. ಚಿಕ್ಕ ಹುಡುಗಿ, 'ನಾವು ಬೆಳಿಗ್ಗೆ ಏನೂ ತಿನ್ನಲೇ ಇಲ್ಲ' ಎಂದು ರಾಗ ಎಳೆಯಿತು.

'ಏನು!' ಎಂದು ಶ್ರೀಮತಿ ಬಾಮ ಆಶ್ಚರ್ಯವನ್ನು ವ್ಯಕ್ತ ಮಾಡಿದಳು.

ಜರೂಸಲೆಮ್ ಬೆಲಿ ಮತ್ತು ಜೋಯಿ ಹೌದೆಂದು ಗೋಣು ಹಾಕಿದರು. ತಾಯಿ ಕೂಡ ಒಪ್ಪಿಗೆ ಕೊಟ್ಟಳು. ಮಗುವು ಸ್ತಬ್ಧವಾಗಿತ್ತು.

ವರ್ಜೀನಿಯಾ ಗವೆನೆಸ್ ಡ್ರೈವರನಿಗೆ ಒಂದು ಪ್ರಶ್ನೆ ಕೇಳಿದಳು: 'ಹಿಂದಿನ ಸೀಟಿನಲ್ಲಿಯೂ ಇಲ್ಲಿಯ ಹಾಗೆ ಬಸ್ಸು ಹಾರುತ್ತದೆಯೆ?'

'ಎಲ್ಲಾ ಕಡೆಯೂ ಒಂದೇ' ಎಂದ ಚಾರ್ಲಿ.

ವರ್ಜಿನೀಯಾ ನಕ್ಕು, 'ನಿನಗೆ ಗೊತ್ತೇನಪ್ಪಾ, ನಾನು ಬಸ್ ಪ್ರಯಾಣ ಮಾಡುವುದು ಇದೇ ಮೊದಲ ಸಾರಿ. ಆದ್ದರಿಂದಲೇ ನನಗೆ ಬಸ್ಸಿನ ಕಂಪನ ಆಷ್ಟಾಗಿ ಅನಿಸುತ್ತಿರಬೇಕು' ಎಂದಳು.

'ನಾವು ಇನ್ನೊಮ್ಮೆ ನಿಲ್ಲುವಾಗ ನಿನ್ನನ್ನು ಬೇರೆಕಡೆ ಕೂರಿಸುತ್ತೇನೆ' ಎಂದ ಚಾರ್ಲಿ.

ಬಸ್ಸು ಕಣಿವೆಯೊಳಕ್ಕೆ ಇಳಿದು, ನದಿಯನ್ನು ಸಮೀಪಿಸಿ, ಸೇತುವೆಯ ಮೇಲಿಂದ ಹಾದು, ಏದುತ್ತ ಏದುತ್ತ ಗುಡ್ಡದ ಮೇಲೆ ಹತ್ತಿತು. ಚಾರ್ಲಿ ಗೇರನ್ನು ಬದಲುಮಾಡಿದಾಗ ಅದರ ಭರಾಟೆ ಸ್ವಲ್ಪ ಕಡಮೆಯಾಯಿತೇನೋ, ಮರುಕ್ಷಣ ಹಿಂದಿಗಿಂತಲೂ ಹೆಚ್ಚಿನ ಧ್ವನಿಯನ್ನು ಮಾಡುತ್ತ ಗುಡ್ಡದ ನೆತ್ತಿಯನ್ನು ತಲಪಿ, ಸುತ್ತಲಿನ ದೃಶ್ಯದೊಡನೆ ಹಾಸುಹೊಕ್ಕಾಗಿ ಬೆರೆತು ಮತ್ತೆ ಕೆಳಮುಖವಾಗಿ ಓಡುತಿತ್ತು. ಬಸ್ಸಿನೊಳಗಿದ್ದ ತಲೆಗಳು ಆಚೆ—ಈಚೆ ತೊನೆಯುತಿದ್ದುವು.

'ಜೋಸ್ ಬಾರ್ಬೆಕ್ಯು' (ಹೋಟಲ್) ಎಂದು ಹಲಗೆ ಹಚ್ಚಿದ ಜಾಗದಲ್ಲಿ ಬಂದು ಬಸ್ಸು ನಿಂತಿತು. ಚಾರ್ಲಿ ಅಂಗಿಯ ಜೇಬಿಂದ ಒಂದು ಸಿಗರೇಟನ್ನು ತೆಗೆದು, ಪಕ್ಕದ ಬಾಗಿಲನ್ನು ತೆರೆದು ಸ್ಟೇರಿಂಗ್

ಚಕ್ರಕ್ಕೂ ಸೀಟಿಗೂ ನಡುವೆ ನಿಂತು 'ಹತ್ತು ಮಿನಿಟು ನಿಲ್ಲುತ್ತದೆ ಇಲ್ಲಿ. ಮಹಿಳೆಯರಿಗೆ ಒಳಗೆ ಸ್ಥಳವಿದೆ, ಗಂಡಸರಿಗೆ ಹಿಂದುಗಡೆಯಿಂದ ಇದೆ' ಎಂದನು. ಸಿಗರೇಟನ್ನು ಬಾಯಲ್ಲಿರಿಸಿಕೊಂಡೇ ಆತ ಶ್ರೀಮತಿ ಬಾಮಾಳಿಗೆ ಕೆಳಗಿಳಿಯಲು ಕೈ ಕೊಟ್ಟನು. ಆಕೆ ಅವನ ಉಪಕಾರವನ್ನು ಸ್ಮರಿಸಿ ಮುರಕಲು ಬಾರ್ಜಿಕ್ಯಾನ ಒಳಹೊಕ್ಕಳು. ಅಲ್ಲಿ ಒಬ್ಬ ಕಾಫಿಯ ಕಿಟಲಿಯೊಳಗೆ ಬಿಸಿನೀರನ್ನು ಹೊಯ್ಯುತ್ತಿದ್ದನು. ಅವನಹತ್ತಿರ 'ಎರಡು ಕಪ್ ಹಾಲು ಸಿಗಬಹುದೆ?' ಎಂದಳು. ಆತ ತಿರುಗಿ 'ನೋಡುತ್ತೇನೆ. ಇರಲೂ ಬಹುದು' ಎಂದನು. 'ನಾಲ್ಕು ಚಾಕಲೇಟ್ ಬಾರ್ ಮತ್ತು ಸ್ವಲ್ಪ ಸಿಹಿ ತಿಂಡಿ ಏನಾದರೂ ಕೊಡಿ' ಎಂದು ಶ್ರೀಮತಿ ಬಾಮಾ ಹೇಳಿದಳು. ಬಾಗಿಲು ತೆರೆದುಕೊಂಡು ಪೀಟ್‌ಡಾಲಿ ಒಳನುಗ್ಗಿದ. 'ಏನಯ್ಯಾ ತಿನಲಿಕ್ಕಿದೆ? ಎಂದು ಕೇಳಿದ. ಹೋಟಲ್ ಮನುಷ್ಯ 'ಇಲ್ಲಿ ತಿಂಡಿ ಖಾಯಸ ಇಲ್ಲ ಸ್ವಾಮಿ. ಕಾಫಿ ಇದೆ, ಬಿಸ್ಕತ್ತಿದೆ, ಸಿಗರೇಟಿದೆ' ಎಂದ. 'ಅಲ್ಲಯ್ಯಾ ದೊಡ್ಡದಾಗಿ ಬೋರ್ಡು ಹಾಕಿಕೊಂಡಿದ್ದೀ—ಇಷ್ಟೇನೋ ನಿನ್ನ ಹತ್ತಿರ ಇರುವುದು?' ಎಂದು ಡಾಲಿ ಅಣಕಿಸಿದನು. ಆ ಮನುಷ್ಯ ಇವನ ಮಾತನ್ನು ಆಲಿಸುವ ಗೋಜಿಗೆ ಹೋಗಲಿಲ್ಲ. ಐಸಬಾಕ್ಸಗೆ ಕೈಹಾಕಿ ಹಾಲಿದೆಯೆ ಎಂದು ತಡಕಿದನು.

ಬಸ್ಸಿನೊಳಗೆ ವರ್ಜೀನಿಯ ಗವೆನಸಳನ್ನು ಚಾರ್ಲಿ ಹಿಂದಿನ ಸೀಟಿನಲ್ಲಿ ಉಪಚಾರದಿಂದ ಕೂರಿಸುವುದನ್ನು ಶ್ರೀಮತಿ ಬೆರ್ರಿಮೆನ್ ಮತ್ತು ಲಾರಾ ನೋಡಿದರು. ವರ್ಜೀನಿಯಾ ಉದ್ದೇಶಪೂರ್ವಕವಾದ ಸೌಜನ್ಯವನ್ನು ಪ್ರದರ್ಶಿಸುತ್ತಿದ್ದಳು. 'ಈ ಮಗುವಿನ ಕಾಲು ಮೆಟ್ಟಿದೆನೇನೋ ಕ್ಷಮಿಸಿ, ಕ್ಷಮಿಸಿ' ಎಂದು ಆಕೆ ಕುರಿತಾಗಿ ಹೇಳಿದರೂ ಶ್ರೀಮತಿ ಬೆರ್ರಿಮೆನ್ ಆಗಲಿ ಲಾರಾ ಆಗಲಿ ಅವಳ ಕಡೆಗೆ ತಿರುಗಿ ನೋಡಲಿಲ್ಲ.

ತುಂಬಾ ಗಂಟುಗಳನ್ನು ಹೊತ್ತಿದ್ದ ಶ್ರೀಮತಿ ಫ್ರೇಜರ್ 'ಓ, ಡ್ರೈವರ ಸ್ವಾಬರೇ, ಇದನ್ನು ಸ್ವಲ್ಪ ರ್‍ಯಾಕಿನ ಮೇಲಿರಿಸುತ್ತೀರಾ?' ಎಂದು ಬೇಡಿದಳು.

'ಯಾಕಾಗಬಾರದು?' ಎಂದವನೇ ಚಾರ್ಲಿ ವರ್ಜೀನಿಯಳ ಸೂಟ್ ಕೇಸನ್ನು ನಡೆಯಲ್ಲೇ ಬಿಟ್ಟು ಶ್ರೀಮತಿ ಫ್ರೇಜರಳ ಗಂಟನ್ನು ಸರಿಯಾಗಿರಿಸಿ, ಬಸ್ಸಿನಿಂದ ಕೆಳಗಿಳಿದನು. ಆಗಲೇ ಪೀಟ್ ಡಾಲಿ ಬಸ್ಸಿನೊಳಕ್ಕೆ ಬಂದನು. ವರ್ಜೀನಿಯಾ ಅವನನ್ನು ನೋಡಿದಳು. ಸೂಟ್ ಕೇಸಿನ ಪಕ್ಕದಲ್ಲಿ ನಿರಾಶೆಯಿಂದ ನಿಂತಿದ್ದ ವರ್ಜೀನಿಯಳನ್ನು ಕಂಡು ಡಾಲಿ 'ಏನು ಮೇಲಕ್ಕೇರಿಸಲೆ?' ಎಂದು ಕೇಳಿದನು. 'ನೀವು ಒಳ್ಳೆಯವರು' ಎಂದು ಆಕೆ ಮರುನುಡಿದಳು. ಪೀಟ್ ಸೂಟ್‌ಕೇಸನ್ನು ತೂಗಿ ರ್‍ಯಾಕಿನ ಮೇಲಿಟ್ಟು ನಡೆಯಲ್ಲಿ ಮುಂದುವರಿದು ತನ್ನ ಸೀಟಿನಲ್ಲಿ ಕೂರ ಹೋದರೆ ಪಕ್ಕದಲ್ಲೇ ವರ್ಜೀನಿಯ ಕೂತಿರಬೇಕೆ? 'ಕೆಲವರನ್ನು ನೋಡಿದ ಕೂಡಲೇ ನಂಬಬಹುದು' ಎಂದು ಆಕೆ ಹೇಳಿದಳು. ಆತ ಆ ಮಾತನ್ನು ಕೇಳಿಯೂ ಕೇಳಿಸದವನಂತೆ ನಟಿಸಿ ಗಾಜಿಗೆ ಮೂಗಿರಿಸಿ ಹೊರಗೆ ನೋಡಿದನು.

ಚಾರ್ಲಿ ಬಸ್ ಹತ್ತಿ 'ಎಲ್ಲರೂ ಬಂದರೆ?' ಎಂದು ವಿಚಾರಿಸಿದನು. ಶ್ರೀಮತಿ ಬಾಮಳ ಪೊಟ್ಟಣಗಳನ್ನು ಆಕೆ ಹತ್ತುವ ವರೆಗೆ ಕೈಯಲ್ಲಿ ಹಿಡಿದು ಕೊಂಡು, ಆಕೆ ಏರಿ ಕೂತ ಮೇಲೆ, ಬಾಗಿಲನ್ನು ಮುಚ್ಚಿ, ಬಸ್ಸನ್ನು ಮುಂದಕ್ಕೆ ಓಡಿಸಿದನು.

ಮಿಸ್ಟರ್ ಪರ್ಸೆಲ್ ಮುಗುಳ್ನಕ್ಕರು. ಮಗನನ್ನು ಆ ರಕ್ಕಸಿಯ ದವಡೆಯಿಂದ ತಪ್ಪಿಸಿದ ಮೇಲೆ ಖಾಸಗಿಯಾಗಿ ಕರೆದು, 'ನೀನು ನಾನು ಹೇಳಿದ ಹಾಗೆ ಕೇಳುವಿಯೆಂದು ನನಗೆ ಮೊದಲಿಂದಲೂ ಗೊತ್ತು. ಕೆಲವರಿಗೆ ಮಕ್ಕಳು ತುಂಬಾ ಕಷ್ಟ ಕೊಡುತ್ತಾರಂತೆ. ನಮಗೆ ದೇವರ ದಯದಿಂದ ಅದೊಂದಿಲ್ಲ. ನಾವಿಬ್ಬರೂ ಹಿಂದಿರುಗಿ ನಿನ್ನ ತಾಯಿಗೆ ಆಶ್ಚರ್ಯವನ್ನುಂಟು ಮಾಡೋಣ. ಅವಳಿಗೆ ನಿನ್ನದೇ ಚಿಂತೆ' ಎನ್ನುತ್ತಿದ್ದರು.

ಶ್ರೀಮತಿ ಬೆರ್‍ರಿಮೆನ್ ಲಾರಾಳಿಗೆ 'ನೋಡು, ಇನ್ನು ನನಗೆ ಮಾತನಾಡಲು ಬಿಡು. ನೀನು ಮಾತೆತ್ತಿದರೆ ಜೋಕೆ' ಎಂದಳು.

ಶ್ರೀಮತಿ ಬಾನೂ ಮೂರು ಕಾಗದದ ಕಪ್ಪುಗಳನ್ನು ತನ್ನ ಚೀಲದಿಂದ ತೆಗೆದು ಹಾಲಿನ ಸೀಸೆಯ ಬೂಚು ತೆಗೆದಳು. 'ಚಿಕ್ಕವನು

ಮೊದಲು ಕುಡಿಯಲಿ' ಎಂದಳು. 'ಚಿಕ್ಕವ,ಯಾತರ ಚಿಕ್ಕವ?' ಎಂದು ಮಾರ್ಜ ಗೋಣಲ್ಲಾಡಿಸಿದಳು. ಮಗು—ಚಿಕ್ಕವ--ತುಟಿ ನೆಕ್ಕುತ್ತಾ ಹಾಲಿಗೆ ಕಾದು ಕೂತಿತ್ತು. ಕಪ್ಪಿನ ಅಂಚು ಬಾಯಿಗೆ ತಗಲಿದೊಡನೆ ಅದು ಕಣ್ಣು ಮುಚ್ಚಿ ತುಟಿಯನ್ನು ಮಾತ್ರ ಅಲುಗಿಸಿ ಹಾಲು ಕುಡಿಯಲು ತೊಡಗಿತು.

ತನ್ನ ಸೀಟಿನ ಹಿಂದೆ ಯಾರೂ ಇಲ್ಲದಿದ್ದುದರಿಂದ ಚಾರ್ಲಿಯ ಮನಸ್ಸು ಶಾಂತವಾಯಿತು. ಆತ ಎದುರಿನ ಕನ್ನಡಿಯನ್ನು ನೋಡಿ ಹಲ್ಲು ಕಿರಿದ. 'ಚಿಂತಿಲ್ಲ ಹುಡುಗಿ ಘಟ್ಟಿಯೇ ಇದ್ದಾಳೆ. ಹುಡುಗ ಗಾಜಿಗೆ ಅಂಟಿ ಕೂತದ್ದನ್ನು ನೋಡಿದರೆ ಇವನಿಗೆ ಚಳ್ಳೆ ಹಣ್ಣು ತಿನಿಸಲು ಇವಳು ಸಾಕೆಂದು ತೋರುತ್ತದೆ' ಎಂದ.

ಶ್ರೀಮತಿ ಬಾವಾ ಹಿರಿಯ ಹುಡುಗರಿಗೆ ಚಾಕಲೇಟ್ ನೀಡಿದಳು. ಹುಡುಗರು ಸ್ವಲ್ಪ ಸಂಕೋಚಪಟ್ಟು ಆಕೆ ಮತ್ತೊಮ್ಮೆ 'ತೆಗೊಳ್ಳಿ' ಎಂದಾಗ ತೆಗೆದುಕೊಂಡು ಮುರಿದು ತಿನ್ನಲು ಆರಂಭಿಸಿದರು. ಚಪ್ಪಲಿಲ್ಲದ ಅವರ ಕಾಲುಗಳು ಒಂದನ್ನೊಂದು ಸುತ್ತಿಕೊಂಡವು. ತಲೆ ಬಗ್ಗಿ ಕೊಂಡಿತ್ತು. ಶ್ರೀಮತಿ ಬಾವಾ ಮಾರ್ಜಳ ಕಡೆ ತಿರುಗಿ 'ನೀನೊಂದು ಬಿಸ್ಕತ್ತು ತೆಗೆಯುತ್ತೀಯಾ'? ಎಂದು ಕೇಳಿದಳು.

ವರ್ಜೀನಿಯಾ ಗವೆನೆಸ್ 'ಒಬ್ಬರು ಏನು ಮಾಡುತ್ತಾರೆನ್ನುವುದು ದೊಡ್ಡ ವಿಷಯವಲ್ಲ .ನನಗೆ ಒಬ್ಬರನ್ನು ಕಂಡರೆ ಸಾಕು, ಆಗುತ್ತದೋ ಇಲ್ಲವೋ ಎಂಬುದು ಕ್ಷಣಾರ್ಧದಲ್ಲಿ ತಿಳಿಯುವುದು. ಒಬ್ಬನ ಕೈಯಲ್ಲಿ ದುಡ್ಡೆಷ್ಟಿದೆ ಎಂದು ಮೊದಲು ತಿಳಿದುಕೊಂಡು ಆ ಮೇಲೆ ಅವನನ್ನು ಪ್ರೀತಿಸುವ ಹುಡುಗಿಯರ ಪೈಕಿ ನಾನಲ್ಲ' ಎಂದಳು.

ಮಿಸ್ಟರ್ ಪರ್ಸೆಲ್ಲರ ಮಂದಹಾಸವು ಮಾಯವಾಯಿತು. ಅವರು ಜೇಬಿನಿಂದ ವಾಚನ್ನು ತೆಗೆದು, ಗಂಟೆ ನೋಡಿ, ಮರಳಿ ಜೇಬಿಗೆ ತುರುಕಿದರು. ಕಿಟಕಿಯಿಂದ ಹೊರಗೆ ಅಜ್ಞಾತ ಪ್ರದೇಶದತ್ತ ಕಣ್ಣು ಹಾಯಿಸಿದರು. ಮುಖದಲ್ಲಿ ಆಳವಾದ ರೇಖೆಗಳು ಮೂಡಿದವು. 'ಎಲ್ಲವೂ ಸರಿ ಹೋಯಿತು ಬಿಡು. ನೀನೇ ಬಿಡಿಸಿದ ಹಾಸಿಗೆ, ನೀನೇ ಮಲಗಲ್ಲಾ, ನಮಗೇನಂತೆ?' ಎಂದರು.

ಶ್ರೀಮತಿ ಬಾಮಾ, ‹ಬೇಡ, ಸಾಕು, ಹಸಿ ಹೊಟ್ಟೆಗೆ ಹೆಚ್ಚು ತಿಂದರೆ ಆಗಲಿಕ್ಕಿಲ್ಲ. ಇನ್ನು ಸ್ವಲ್ಪ ಹೊತ್ತು ಕಳೆಯಲಿ. ಈಗ ನೋಡಿ ಈ ಹಾಲು ಕುಡಿಯಿರಿ' ಎಂದಳು. ಮಕ್ಕಳು ಆಯಿತೆಂದರು. ಅವರ ಕಣ್ಣು ಮಾತ್ರ ಅವಳ ಕೈ ಮತ್ತು ಕೈ ಚೀಲದ ಮೇಲೆಯೆ ನೆಟ್ಟಿದ್ದಿತು. ಶ್ರೀಮತಿ ಬಾಮಾ ಚೀಲದೊಳಗೆ ಕೈಹಾಕಿ ಇನ್ನಷ್ಟು ಚಾಕಲೇಟ್ ಕೊಡುವಳೆಂಬ ಆಸೆಯಿಂದ ಮಕ್ಕಳು ಅವಳ ಚಲನೆಗಳನ್ನೇ ಪರಿಕಿಸು ತ್ತಿದ್ದುವು.

ಲಾರಳಿಗೆ ಬಾಯಲ್ಲಿ ನೀರೂರಿತು. 'ಅಮ್ಮಾ' ಎಂದು ಆವಳು ಕೂಗಿದಳು, 'ಏನೇ ಮರಿ?' ಎಂದು ಕೇಳಿದಳು ತಾಯಿ 'ಮಿಸ್ಟರ್ ಬರ್ನ್ಸ್ ಎಷ್ಟು ಒಳ್ಳೆಯವರಮ್ಮಾ?' ಎಂದಳು ಲಾರಾ.

ಶ್ರೀಮತಿ ಬೆರ್‍ರಿಮೆನ್‌ಳ ಹೃದಯವು ತಣ್ಣಗಾಯಿತು. ಲಾರಳ ಕಣ್ಣು ಹೇಗಿದೆ ನೋಡೋಣ ಎಂದಾಕೆ ಬಗ್ಗಿದರೂ ಆಕೆಯ ಹ್ಯಾಟು ಅವಳಿಗಡ್ಡವಾಗಿತ್ತು.

'ನಾವು ಊರಿಗೆ ಹೋದರೆ ಮತ್ತೆ ನಮ್ಮನ್ನು ನೋಡಲು ಬರು ತ್ತಾರೇನಮ್ಮ ಅವರು?' ಎಂದು ಲಾರಾ ಕೇಳಿದಳು.

‹ಬರಬಹುದು' ಎಂಬ ಮಾತು ಬೆರ್‍ರಿಮೆನಳ ಬಾಯಿಂದ ತಡವರಿ ಸುತ್ತಾ ಹೊರಬಿದ್ದಿತು.

'ನಮಗೆ ಬೇರೊಂದು ಮನೆ ತೆಗೆಸಿಕೊಟ್ಟಾರೇನು ಅವರು?'

ಶ್ರೀಮತಿ ಬೆರ್‍ರಿಮೆನ್ ಲಾರಳ ಸಪೂರವಾದ ಕೈಗಳನ್ನೊಮ್ಮೆ ನೋಡಿ ತನ್ನ ಮೌನಕ್ಕೆ ತಾನೇ ಬೆಚ್ಚಿಬಿದ್ದು 'ಕೊಟ್ಟರೂ ಕೊಟ್ಟಾರು' ಎಂದಳು.

'ನಿಲ್ಲಿಸಿ, ಬಸ್ ನಿಲ್ಲಿಸಿ' ಎಂದು ಜೋಯಿ ಬೊಬ್ಬಿಟನು. ಬಸ್ಸಿನೊ ಳಗಿನ ತಲೆಗಳೆಲ್ಲ ಸ್ವರ ಬಂದ ಕಡೆಗೆ ತೊನೆದುವು. ಚಾರ್ಲಿ ಸ್ಟೇರಿಂಗನ್ನು ತಿರುಗಿಸಿ ಗುಡ್ಡದ ನೆತ್ತಿಯ ಮೇಲೆ ಬಸ್ಸು ನಿಲ್ಲಿಸಿದನು. ಮಿಸ್ ಬಾಮಾ ಮಗುವಿನ ಆರಯ್ಕೆ ಮಾಡುವಲ್ಲಿಗೆ ಅವನು ಹೋದನು. ಯಾರೋ ಅಂದರು: 'ಹೌದು, ಮತ್ತೆ ಅಷ್ಟು ಚಾಕಲೇಟ್ ತಿಂದರೆ ಯಾತಕ್ಕಾ ದೀತು?' ಮಿಸ್ ಬಾಮಳಿಗೆ ಮಾತು ಬಾರದಾಯಿತು. ಅವನಿಗೆ ಸ್ವಲ್ಪ

ಸ್ವಚ್ಛ ಹವೆಬೇಕು. ಒಂದು ಕ್ಷಣ ಹೊರಗಡೆಗೆ ಒಯ್ದರೆ ಎಲ್ಲಾ ಸರಿ ಹೋಗುತ್ತದೆ' ಎಂದು ನುಡಿದಳು.

ಚಾರ್ಲಿಗೆ ಆಕೆಯ ನಿರಿಬಿದ್ದ ಮುಖವನ್ನು ನೋಡಿ ಕನಿಕರವುಂಟಾಯಿತು. ಆತ 'ನೀನು ಕೂತಿರಮ್ಮ, ನಾನು ಅವನನ್ನು ಹೊರಗೆ ಆಡ್ಡಾಡಿಸಿ ಬರುತ್ತೇನೆ' ಎಂದನು.

ಚಿಕ್ಕ ಮಗುವಿಗೆ ಈ ಗದ್ದಲದಿಂದ ಭಯವುಂಟಾಗಿ ಅದು ಅಳಲು ಆರಂಭಿಸಿತು. ಮಾರ್ಜ್ ಅದನ್ನು ಹೆಗಲ ಮೇಲೇರಿಸಿ ಸಮಾಧಾನ ಮಾಡಿದಳು. ಮಿಸ್ ಬಾಮ ತನ್ನ ಸೀಟಿಗೆ ಉಸ್ಸೆಂದು ಕೂತಳು. ಕಿವಿಯಲ್ಲಿ ಡಾಕ್ಟರ್ ಕೌಲಿಯ ಸ್ವರವು ಕೇಳಿಸುತ್ತಿತ್ತು. 'ನಾನು ಹೇಳಲಿಲ್ಲವೇ ನಿನಗೆ? ಹೀಗಾಗುವುದು ಖಂಡಿತ' ಆಕೆಗೆ ಎದೆಯೊಳಗೆ ನೋವು ಉಂಡೆ ಉಂಡೆಯಾಗಿ ಬಂದು ಹೆಗಲ ಮೇಲೇರಿ ಎಡ ತೋಳಿನಲ್ಲಿ ಹರಿದು ಮಾಯವಾಯಿತು. ಅವಳ ಸುತ್ತಲ ಪ್ರಪಂಚ ಕರಗಿ ಮಾಯವಾಗುತ್ತಿತ್ತು—ಅವಳ ನೋವಿಗೆ ಲಕ್ಷಾಂತರ ಮೈಲು ದೂರದಲ್ಲಿ, ಅವಳಿಗೆ ಎಂದೂ ತಲಪಲಾಗದಷ್ಟು ಅಂತರದಲ್ಲಿ. ಡಾಕ್ಟರ್ ಕೌಲಿಯು ಕೊಟ್ಟಿದ್ದ ಗುಳಿಗೆಗಳ ಕರಡಿಗೆ ಇತ್ತು.

ಕಿಟಕಿಯಿಂದ ಹೊರಗೆ ತಲೆ ಹಾಕಿ ಪೀಟ್ ಬಾಗಿಲಿನ ಕಡೆ ತಿರುಗಿ ಚಾರ್ಲಿಯನ್ನು ನೋಡಿದನು. ಚಾರ್ಲಿ ಹುಡುಗನಿಗೆ 'ಹೂಂ, ಸರಿಯಾಗಿ ಪ್ರಯತ್ನ ಮಾಡು. ಬರಲಿ ಓಕರಿಕೆ, ಬೇಗ' ಎಂದು ಒತ್ತಾಯಿಸುತ್ತಿದ್ದನು. ಪೀಟನ ಕೊರಳಿಗೆ ವರ್ಜೀನಿಯಳ ಉಸಿರು ಸ್ಪರ್ಶಿಸುವಂತೆ ಭಾಸವಾಯಿತು. ತಲೆಯನ್ನು ಸ್ವಲ್ಪ ಓರೆ ಮಾಡಿ ನೋಡಿದರೆ ಆಕೆ ನೋಡುತ್ತಿದ್ದುದು ತನ್ನ ಕಡೆಗೇ ಹೊರತು ಹೊರಗಲ್ಲವೆಂದು ಅವನಿಗೆ ಅರ್ಥವಾಯಿತು

ಜೋಯಿ ಎಷ್ಟು ತಿಣಿಕಿದರೂ ಅವನಿಗೆ ಓಕರಿಕೆ ಬರಲೊಲ್ಲದು ಆತ 'ಬರುವುದಿಲ್ಲಾ' ಎಂದು ಗೋಳು ಹೊಯ್ಯಲು ಆರಂಭಿಸಿ ಬಿಟ್ಟನು.

'ಸರಿ, ಚಿಂತಿಲ್ಲ. ಒಳಗೆ ಬಾ' ಎಂದು ಮಗುವನ್ನು ಮುಂದಿರಿಸಿಕೊಂಡು ಬಸ್ಸಿನೊಳಗೆ ಹೋದನು. 'ಇನ್ನು ಮಾತ್ರ ಬೊಬ್ಬೆ ಹಾಕಬೇಡ' ಎಂದು ಅವನನ್ನು ಎಚ್ಚರಿಸಿ ಮುಂದರಿದು ಮಿಸ್ ಬಾಮಳನ್ನು

ಕುರಿತು 'ನಿಮಗೇನಾದರೂ ಬೇಕಿದ್ದರೆ ಹಗ್ಗವನ್ನು ಎಳೆಯಿರಿ, ನಿಲ್ಲಿಸುತ್ತೇನೆ' ಎಂದು ಹೇಳಿದನು. ಜೋಯಿ ಹೆದರಿಕೆಯಿಂದ ಚಾರ್ಲಿಯ ಕಡೆ ನೋಡುತ್ತಿದ್ದರೆ, ಮಾರ್ಜ್ ಮಗುವನ್ನು ಹೆಗಲ ಮೇಲೆ ತೂಗುತ್ತ ಚಾರ್ಲಿಯ ಕಡೆಗೇ ನೋಡುತ್ತಿದ್ದಳು.

ಚಾರ್ಲಿ ಬಸ್ಸನ್ನು ಹೊರಡಿಸಿದಾಗ ಅವನ ಮುಖದಲ್ಲೊಂದು ಮಂದಹಾಸವು ಮಿನುಗಿತು. ಹೆಂಡತಿಯ ಹತ್ತಿರ ಮೊಟ್ಟೆಯ ಚೌಕಾಸಿಯನ್ನು ಮೊದಲು ಹೇಳಲೆ ಅಥವಾ ಇಂದು ಬಸ್ಸಿನಲ್ಲಿ ನಡೆದ ಘಟನೆಗಳನ್ನು ಮೊದಲು ವಿವರಿಸಲೇ ಎಂದು ಅವನು ಯೋಚಿಸಿದನು. ಹಾಗೆ ನೋಡಿದರೆ ಮೊಟ್ಟೆಗಳ ಸ್ವಾರಸ್ಯವಿರುವ ದಿನವೇ ಇಷ್ಟೆಲ್ಲ ಘಟನೆಗಳು ನಡೆದದ್ದು ಅವನಿಗೆ ಒಪ್ಪಿಗೆಯಾಗಲಿಲ್ಲ. ಯಾವತ್ತೂ ಮನೆಗೆ ಹೋದಾಗ ಅಂಗಳದಲ್ಲಿ ಮಗು ಆಡುತ್ತಿರುವುದು, ಹೆಂಡತಿ ಹೊರಗೆ ಬಂದು 'ಬಂದಿರಾ?' ಎನ್ನುವುದು—ಇಷ್ಟು ರೂಢಿ. ಇವತ್ತು ಒಂದೇ ದಿನ ಎರಡು ವಿಷಯ ಮಾತನಾಡಲು ದೊರಕಿತು. ಮುದುಕಮ್ಮ ಏನು ಸೀಟಿನ ಕೆಳಗೆ ಬಿದ್ದಳೋ ಆವಳು ಕನ್ನಡಿಯಲ್ಲಿ ಕಾಣುತ್ತಿರಲಿಲ್ಲ.

ಶ್ರೀಮತಿ ಬೆರ್ರಿಮೆನ್ ತಲೆ ಅಲ್ಲಾಡಿಸಿದಳು. ಮಗುವಿಗಾಗಿ ನಿನ್ನ ಜೀವವನ್ನು ಬಲಿದಾನಮಾಡು, ನಿನ್ನ ಜೀವನದ ಉತ್ತಮ ಭಾಗವನ್ನು ಅವಳಿಗೆ ಮುಡಿಪು ಕೊಡು, ರಾತ್ರಿ ಎಚ್ಚರಾಗಿದ್ದು ಅವಳ ಕುರಿತು ಚಿಂತೆ ಮಾಡು........ಹೀಗೆಲ್ಲಾ ನುಡಿಯುವ ಜಾಕ್‌ಬರ್ನ್ಸ್ ಮಹಾಶಯನನ್ನು ನೋಡಿದರೆ ಅವಳಿಗೆ ಅಳುಕುಂಟಾಗುವುದು, ಯೋಚಿಸುವುದೇ ಜೇಡವೆನಿಸುವುದು. 'ಹೌದು ಈಕೆ ದೊಡ್ಡ ನರ್ತಕಿಯಾಗುವುದಂತೆ, ಹುಚ್ಚು, ಬೆನ್ನಿಗೆ ನಾಲ್ಕು ಬಾರಿಸಿದರೆ ಆಜನ್ಮ ಮರೆಯಬಾರದು' ಎಂದು ಆಕೆ ಲಾರಾಳ ಜತೆ ಕಾಲ್ಪನಿಕ ಸಂವಾದವನ್ನು ಆರಂಭಿಸಿದ್ದಳು.

ಮಿಸ್ ಬಾಮಾಳ ಎದೆ ನೋವು ತಗ್ಗಿದರೂ ಆಕೆಗೆ ಪೂರ್ತಿ ಆರೋಗ್ಯವೆನಿಸಲಿಲ್ಲ. ತಲೆಯನ್ನು ಆಡಿಸಲು ಬರುವುದಿಲ್ಲವೇನೋ ಎಂದು ಭ್ರಮೆಯುಂಟಾಗಿ ಅಲುಗಿಸಿ ನೋಡಿದಳು, ತಲೆ ಆಡಿತು. ತನ್ನ ಹಿಂದಿನ-ಮುಂದಿನ ಅಪರಿಚಿತರನ್ನೂ, ಎರಡು ಮಕ್ಕಳನ್ನೂ ಮಗುವನ್ನು

ಹಿಡಿದ ತಾಯಿಯನ್ನು ನೋಡಿದಳು. ಮಗು ನಗುತಿತ್ತು. ಮಿಸ್ ಬಾಮೂಳಿಗೆ ಅದರ ಮೇಲೆ ಮಮತೆಯುಂಟಾಗಲಿಲ್ಲ. ಅದೇ ಆಶ್ಚರ್ಯ—ಅವಳಿಗೂ.

ಪೀಟ್ ಹೇಳಿದ 'ಬೇಡ, ಸೀದಾ ಹೋಗಿಬಿಡುತ್ತೇನೆ'.

ವರ್ಜೀನಿಯಾ 'ಸೀದಾ ಎಂದರೆ ಅರ್ಥವೇನು ವಿಶ್ರಾಂತಿ ತೆಗೆದುಕೊಳ್ಳದೆನೆ ಹೋಗುವಿಯಾ?' ಎಂದು ಕೇಳಿದಳು.

ಅವನು ತಲೆಯಲ್ಲಾಡಿಸಿ ಒಮ್ಮೆ ಆಕೆಯನ್ನು ಕದ್ದು ನೋಡಿದನು. ಅವಳಲ್ಲಿ ತನಗೆ ಇಷ್ಟವಾಗುವ ಅಂಶ ಯಾವುದಾದರೂ ಇದೆಯೇ ಎಂಬುದನ್ನು ಪರೀಕ್ಷಿಸಿದನು. ಅವನಿಗೆ ಚಿಂತೆ ಹಿಡಿಯಿತು. ಇವಳ ಯೋಗ್ಯತೆಗೆ ತಾನು ತಕ್ಕವನೆ? ಎಂದುಕೊಂಡನು. ಅದೃಷ್ಟವನ್ನೇ ಆತ ಪರೀಕ್ಷೆಮಾಡಲು ಹೊರಟಿರುವನೇನು?

ವರ್ಜೀನಿಯಾ 'ಯಾವ ತೊಂದರೆಯೂ ಇಲ್ಲ. ನನಗೆ ಉಪದ್ರವ ಎಂದು ನೀನು ಭಾವಿಸಬೇಡ. ಆಗಾಗ ಯಾರನ್ನಾದರೂ ಕಂಡು ನಕ್ಕು ಅವರಿಗೆ ಸಂತೋಷವಾಗುವುದಿದ್ದರೆ ನಾನು ಅದಕ್ಕೆ ಸಿದ್ಧಳು. ನನ್ನ ಸ್ವಭಾವವೇ ಹಾಗೆ" ಎಂದಳು.

ರಾಜಮಾರ್ಗದಿಂದ ಬಸ್ಸು ಆಗಲಕಿರಿದಾದ ಒಂದು ರಸ್ತೆಯನ್ನು ಪ್ರವೇಶಿಸಿತು. ಚಾರ್ಲಿ ಅದನ್ನು ನಿಧಾನಿಸಿದ. ಗಾಜಿನ ಮುಂದಿನ ಬಿಸಿಲಿನ ಫರದೆಯನ್ನು ಕೆಳಗೆ ಸರಿಸಿದ— ಸಂಜೆಯ ಸೂರ್ಯ ಅವನ ಕಣ್ಣಿಗೆ ಹೊಡೆಯುತ್ತಿದ್ದ.

ಅದು ಬಸ್ಸಿನ ಊಟದ ನಿಲ್ದಾಣ. ನಡುಹಾದಿಯ ಬಸ್ ಸ್ಟಾಂಡಿನಲ್ಲಿ ಬಸ್ಸನ್ನು ನಿಲ್ಲಿಸಿ, "ಇಪ್ಪತ್ತು ಮಿನಿಟು ಸಮಯವಿದೆ ಊಟಕ್ಕೆ" ಎಂದು ಎಲ್ಲ ಪ್ರವಾಸಿಕರಿಗೂ ಕೂಗಿ ಹೇಳಿ ಡ್ರೈವರನು ಮನೆಯ ಕಡೆಗೆ ಹೊರಟನು. ಮೊಟ್ಟೆ ಕೈಯಲ್ಲಿತ್ತು. ಬಸ್ಸು ಏಕಾಕಿಯಾಗಿ ನಿಂತ ಹಾಗಿತ್ತು. ಶ್ರೀಮತಿ ಬೆರ್ರಿಮನ್ ಮಗಳ ಜತೆ ಮೌನವಾಗಿ ಒಂದು ಟೇಬಲಿನ ಮುಂದೆ ಕೂತು ಉಂಡಳು. ಮಿಸ್ಟರ್ ಕೋಯ್ ಅವರು ಸೂಪವನ್ನುಂಡರು. ಆಯಾಸದ ಅತಿರೇಕದಿಂದ ಪೀಟ್ ಬಸ್ಸಿಂದ ಇಳಿಯುವುದೂ ಇಲ್ಲ, ತಿನ್ನುವುದೂ ಇಲ್ಲ ಎಂದು ನಿರ್ಧರಿಸಿದ್ದನು.

ವರ್ಜೀನಿಯಾಳಿಗೂ ಅದೇಕೋ ಊಟ ತಿಂಡಿ ಬೇಡವೆನಿಸಿತು. ಮಿಸ್ ಬಾಮಾ ಆಯಾಸಿತಳಾಗಿ ಸೀಟಿನಲ್ಲೇ ಕುಳಿತು ಹೊರಗಿನ ಪ್ರಪಂಚಕ್ಕೂ ತನಗೂ ಯಾವುದಾದರೂ ಸಂಬಂಧ ಸೂತ್ರವಿದೆಯೇ ಎಂದು ತಡಕಿ ನೋಡುತ್ತಿದ್ದಳು. ಕ್ಲಾಸ್‌ರೂಮಿನ ಕಿಟಕಿಯಿಂದ ಹೊರನೋಡಿದರೆ ತೋರುವ ಮಾಡಿನ ಸೂರು, ನಲ್ವತ್ತು ವರ್ಷವೂ ಶಾಲೆಯ ಜವಾನನಾಗಿದ್ದ ಮನುಷ್ಯನ ಮುಖ— ಅವಳ ಸ್ಮೃತಿಪಟಲದಲ್ಲಿ ಮೇಲಿಂದ ಮೇಲೆ ಸುಳಿಯುತ್ತಿದ್ದುವು.

ಬಸ್ಸು ಮತ್ತೆ ಹೊರಟಿತು. ಈಗ ಕಂಪನಿಯ ಹಳೇ ಅನುಭವಿಕ ಡ್ರೈಯವರ ಜಾನ್ ಜೋಸೆಫ್ ಟೂಹೇ ಬಿಡುತ್ತಿದ್ದನು. ಮನೆಯಲ್ಲಿ ಮಕ್ಕಳೆಲ್ಲ ಮದುವೆಯಾಗಿ ಅವರವರ ಬಿಡಾರ ಬೇರೆ ಮಾಡಿದ ಮೇಲೆ ಟೂಹೆ ರಾತ್ರಿಯ ಪಾಳಿಗೆ ಒಪ್ಪಿಕೊಂಡಿದ್ದನು. ಮುಂದೆ ಕಾಡಿನ ನಡುವೆ ದಾರಿ ಹಾಯುತ್ತಿತ್ತು. ಬಸ್ಸೇನು ಸೂರ್ಯನೊಳಕ್ಕೆ ಪ್ರವೇಶಿಸಲು ನೆಗೆಯುವುದೋ ಎಂಬಂತೆ ಪಡುವಣ ದಿಕ್ಕಿಗೆ ಧಾವಿಸುತಿತ್ತು. ಮಿಸ್ ಬಾಮಾ ಸೀಟಿನಲ್ಲಿ ಬೆನ್ನನ್ನು ನೇರ ಮಾಡಿದಳು. ಆಕೆಗೆ ತುಸು ಹಸಿವೆಯೂ ಆಯಿತು. ಚೀಲದಿಂದ ಹಾಲಿನ ಬಾಟ್ಲೆ ತೆಗೆಯುವಷ್ಟರಲ್ಲಿ ಇನ್ನೊಂದು ಬಸ್ ನಿಲ್ದಾಣ ಬಂದಿತು. ಟೂಹೆ ಬಾಗಿಲು ತೆರೆದು ಮಾರ್ಜ್‌ಗೆ 'ನೀವು ಇಳಿಯ ಬೇಕಾದ ಜಾಗ ಬಂತು' ಎಂದ ಅವಳು ತಲೆ ಅಲ್ಲಾಡಿಸಿದಳು. 'ಇದೇ ನಿನ್ನ ಟಿಕೇಟಿನಲ್ಲಿರುವ ಜಾಗ. ನೀನು ಟಿಕೇಟ್ ಕೊಂಡದ್ದೆಲ್ಲಿಗೆ?' ಎಂದು ಕೇಳಿದ ಟೂಹೆ.

ಜರೂಸಲೆಮ್ ಬೆಲ್ಲಿ 'ಅವಳೇ ಅದನ್ನು ಕೊಂಡಳು' ಎಂದಳು.

'ಯಾಕೆ ಅವಳಿಗೆ ಮಾತು ಬರುವುದಿಲ್ಲವೆ? ಎಂದು ಟೂಹೆ ಗದರಿಸಿದ.

ಎರಡು ಮಕ್ಕಳೂ 'ಬರುತ್ತದೆ' ಎಂದುವು.

ವರ್ಜೀನಿಯಾ ಗವೆನೆಸ್ ಡ್ರಾಯವರನ ಹತ್ತಿರ 'ಅವರ ಹತ್ತಿರ ಸಾಮಾನೇನೂ ಇಲ್ಲವೆಂತ ತೋರುತ್ತದೆ' ಎಂದಳು.

ಜರೂಸಲೆಮ್ 'ಅಮ್ಮ ದಸ್ಕತ್ತು ಹಾಕಿ ತೆಗೆದುಕೊಂಡಳು. ಟಿಕೆಟು ಕೊಟ್ಟವನು ಅಜ್ಜನ ಮನೆಗೆ ಹೋಗಿ ಎಂದ' ಎಂದಳು.

'ಯಾರವ?'

'ಅದೇ ಇನ್ಸೂರೆನ್ಸ್ ಮನುಷ್ಯ'.

ಹೊರಗೆ ಒಂದು ಕಾರು ಬಸ್ಸಿನ ಹಿಂದೆ ಹಾರ್ನ್ ಮಾಡುತ್ತ ಬರುತಿತ್ತು.

ಮಿಸ್ ಬಾವಾ 'ನಿಮ್ಮ ಗಜ್ಜ ಎಲ್ಲಿರುತ್ತಾರೆ?' ಎಂದು ಕೇಳಿದಳು.

ಮೊದಲ ಬಾರಿಗೆ ಮಾರ್ಜ್ ಬಾಯಿ ತೆರೆದಳು. 'ಈ ಬಸ್ಸಿನ ಆಖೈರಿ ಸ್ಟೇಶನಿನಲ್ಲಿ'

'ಅಂದರೆ ಅವರು ಇನ್ನೆಷ್ಟು ಕೊಡಬೇಕಾಯಿತು?" ಎಂದು ಮಿಸ್ ಬಾವಾ ಕೇಳಿದಳು.

'ನೋಡುವ, ಮಗುವಿಗೆ ಛಾರ್ಜಿಲ್ಲ. ಇಬ್ಬರು ಹುಡುಗರಿಗೆ ಅರ್ಧ. ಒಟ್ಟಿಗೆ ಎಂಟು ಡಾಲರು ಮೂವತ್ತು ಸೆಂಟ ಆಗುತ್ತದೆ".

'ಅದರಲ್ಲಿ ಒಂದು ಪಾಲು ನಾನು ಕೊಡುತ್ತೇನೆ. ಅಥವಾ ಇರಲಿ, ಎಲ್ಲಾ ತೆಗೆದುಕೋ' ಎಂದು ಪೀಟ್ ಡಾಲಿ ವರ್ಜೀನಿಯಳನ್ನು ದೂಡಿಕೊಂಡು ಡ್ರೈವರನ ಕಡೆಗೆ ಮುಂದೊತ್ತಿದನು.

'ನೀವು ಕೊಟ್ಟದ್ದು ಒಳ್ಳೆಯದಾಯಿತು. ಕಂಪೆನಿಯ ಕಾನೂನು. ನಾನೇನು ಮಾಡಬೇಕಾಗಿತ್ತು ಹೇಳಿ?' ಎಂದು ಟೂಹೆ ಹೇಳಿದನು.

'ಒಮ್ಮೆಗೆ ಮುಗಿಯಿತಲ್ಲಾ, ಮರೆತುಬಿಡು.' ಎಂದು ಪೀಟ್ ಡ್ರೈವರನಿಗೆ ಹೇಳಿ ಮಿಸ್ ಬಾವಾ ಕಡೆ ತಿರುಗಿ 'ನೀರಿನ ಹಾಗೆ ಬಂತು, ನೀರಿನ ಹಾಗೇ ಹೋಯಿತು' ಎಂದ.

ಮಿಸ್ ಬಾವಾ ಮುಗುಳ್ನಕ್ಕಳು. ಪೀಟ್ ಡಾಲಿ ಉಳಿದ ನೋಟುಗಳನ್ನು ಜೇಬಿನೊಳಗೆ ತುರುಕಿಸುತ್ತ ತನ್ನ ಸೀಟನ್ನು ಹಿಡಿದನು.

ಕೂತಾಗ ಅವನಿಗೆ ಹಾಯೆನಿಸಿತು. ಪಕ್ಕದ ಹೆಣ್ಣಿನ ಕಡೆ ನೋಡಿದನು. ಅಬ್ಬಾ, ಇವಳ ದೆಸೆಯಿಂದ ನನ್ನ ದುಡ್ಡು ಜಾರಲು ಸುರುವಾಯಿತು ಎಂದುಕೊಂಡನು.

ಮಿಸ್ಟರ್ ಪರ್ಸೆಲ್ ಮಗನಿಗೆ ಉಪದೇಶ ಮಾಡುವ ಚಿತ್ರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡರು. 'ಇಲ್ಲಿಗೆ ಬರುವವೇಳೆ ನನಗೆ ಒಂದು ಭಯಂಕರ ಪಾಠ ದೊರೆಯಿತು. ಬಸ್ಸಿನಲ್ಲಿ ಒಂದು ಬಡ ಕುಟುಂಬ

ಪ್ರವಾಸಮಾಡುತ್ತಿತ್ತು. ಆ ಮಕ್ಕಳ ಕಾಲಿನಲ್ಲಿ ಚಪ್ಪಲಿರಲಿಲ್ಲ, ಹಿಂದಿನ ರಾತ್ರಿ ಅವರು ಊಟಕೂಡ ಮಾಡಿರಲಿಲ್ಲ. ಯಾರೋ ಇನ್ಸೂರೆನ್ಸಿನವನು ದುಡ್ಡುಕೊಟ್ಟು ಅಜ್ಜನ ಮನೆಗೆ ಕಳಿಸಿದನಂತೆ. ಪ್ರಾಯಃ ಆ ಮಕ್ಕಳ ತಂದೆ ಹೆಂಡತಿ ಮಕ್ಕಳನ್ನು ತಬ್ಬಲಿಯಾಗಿ ಮಾಡಿ ಅಪಘಾತದಲ್ಲೋ ಇನ್ನಾವುದರಲ್ಲೋ ಸತ್ತಿರಬೇಕು. ಅವರು ಇಡಿ ಟಿಕೇಟ ಕೂಡ ಕೊಂಡಿರಲಿಲ್ಲ. ಬಸ್ಸಿನಲ್ಲಿದ್ದವರು ಚಂದಾ ಎತ್ತಿ ಅವರಿಗೆ ಮುಂದಿನ ದಾರಿಯ ಟಿಕೇಟಿನ ಏರ್ಪಾಡು ಮಾಡಬೇಕಾಯಿತು. ಅಜ್ಜನ ಮನೆಗೆ ಅನಾಥರಾಗಿ ಹೋಗಿ ಬಂಧುಗಳ ಕರುಣೆಯಿಂದ ಜೀವಿಸಬೇಕಾದ ಗತಿ ಅವರಿಗೆ ಯಾತಕ್ಕೆ ಬಂದಿತು ಗೊತ್ತೇ? ಯಾವುದೋ ಒಂದು ಮರವೆಯ ಕ್ಷಣದಲ್ಲಿ ಒಬ್ಬ ತರುಣ ಒಬ್ಬ ತರುಣಿ ನಿನ್ನ ಹಾಗೆ ಮಾಡಬಾರದಾಗಿದ್ದ ಮೂರ್ಖ ಕೆಲಸವನ್ನು ಮಾಡಿದ್ದರಿಂದ, ತಿಳಿಯಿತೆ?"

ಲಾರಾ 'ನನಗೆ ಬೇಕಾದ್ದು ಮಾಡುವೆ, ನನಗೆ ಇಷ್ಟಬಂದದ್ದು ಮಾಡುವೆ. ತಾಯಿ ಬಿಡದಿದ್ದರೆ ನಾನು ತಂದೆಗೆ ಬರೆಯುತ್ತೇನೆ" ಎಂದಳು.

ಸಂಜೆ ಕಳೆದು ಕತ್ತಲಾಯಿತು. ಬಸ್ಸಿನ ಎರಡು ಕಣ್ಣೂ ಅರಳಿದುವು. ಹೊರಗಡೆ ದೀಪದ ಪ್ರಕಾಶ ಚೆಲ್ಲಿದರೂ ಒಳಗೆ ಕತ್ತಲು ದಟ್ಟವಾಗಿ ಹರಡಿತ್ತು. ಪ್ರವಾಸಿಕರು ಒಬ್ಬೊಬ್ಬರೇ ನಿದ್ರಾಸನವನ್ನು ಸ್ವೀಕರಿಸಲು ಸಿದ್ಧರಾಗುತ್ತಿದ್ದರು. ಕೆಲವರಿಗೆ ನಿದ್ದೆಗೆ ಸರಿಯಾದ ಸ್ಥಳ ದೊರೆಯಲಿಲ್ಲ. ಅವರು ರಾತ್ರಿಯ ಕತ್ತಲನ್ನು ನೋಡುತ್ತ, ಡ್ರೈವರನ ಬೆನ್ನಿನ ಮೇಲೆ ದಿಟ್ಟಿ ಬೀರುತ್ತ ಹೇಗೋ ಕಾಲಹರಣ ಮಾಡತೊಡಗಿದರು.

ತನಗೆ ಸರಿಯಾದ ಸಂದರ್ಭವೇ ಒದಗಲಿಲ್ಲವೆಂದು ಶ್ರೀಮತಿ ಚೆರ್ರಿಮೆನ್ ಕಳವಳಿಸಿದಳು. ಅವಳಿಗೆ ಗಂಡ ಆರ್ಥರನು ತನ್ನ ಪ್ರಣಯ ಭಿಕ್ಷೆಗಾಗಿ ಪ್ರಯತ್ನಪಡುತ್ತಿದ್ದ ಹಳೆ ಕಾಲದ ನೆನಪಾಯಿತು. ಬೇರೆ ಹೈಸ್ಕೂಲ ಹುಡುಗರು ತಮ್ಮ ಪ್ರೀತಿಯ ಹುಡುಗಿಗೆ ಬರೇ ಸೋಡಾ ಕುಡಿಸುವುದರಲ್ಲೇ ಹರ್ಷಕಾಣಬೇಕಾಗಿತ್ತು. ಆದರೆ ಆರ್ಥರನ ಕೈಯಲ್ಲಿ ಅಷ್ಟು ಹೊತ್ತಿಗೆ ದುಡ್ಡು ಬರಲು ಆರಂಭವಾಗಿತ್ತು. ಅವನಿಗೆ

ವಯಸ್ಸಾಗಿತ್ತು. ಆದರೆ ಜೀವನದ ಅತ್ಯಂತ ಪ್ರಾಮುಖ್ಯ ನಿರ್ಣಯವನ್ನು ಅತ್ಯಂತ ಎಳೆವಯಸ್ಸಿನಲ್ಲೇ ಮಾಡಬೇಕಾದ್ದು ಅಕೆಗಂತೂ ತೀರ ಸೋಜಿಗದ ವಿಷಯ. ಈಗೇನು ಆರ್ಥರನಿಗಿಂತ ಶ್ರೀಮಂತರಾದವರು ಇದ್ದಾರೆ; ಅವನಿಗಿಂತ ತರುಣರೂ ಇದ್ದಾರೆ. ಆರ್ಥರನ ಜತೆ ಅವಳು ಮುದಿಯಳಾಗಬೇಕೊ ಹೇಗೆ? ಅವಳಿಗೆ ಇನ್ನೂ ವಯಸ್ಸಿದೆ, ನಗುವ, ಕೆಲೆಯುವ ಚಾಪಲ್ಯವಿದೆ. ಅವಳಿಗೆ ನಸುನಗುವು ಮೂಡಿತು. ಹಿಂದಿನ ರಾತ್ರಿ ಕುಡಿತದ ಮತ್ತೇರಿದಾಗ ಜಾರ್ಕ್‌ಬರ್ನ್ಸ್ ತನ್ನನ್ನು ಪ್ರಶಂಸಿಸಿದ ನೆನಪಾಯಿತು.

ಲಾರಾಳಿಗೆ ಕತ್ತಲೆಂದರೆ ಭಯ. ಅವಳು ತಾಯಿಗೆ ಒತ್ತಿ ಕೊತು "ಇಲ್ಲಮ್ಮ, ನಾನು ತಂದೆಗೆ ಬರೆಯುವುದಿಲ್ಲ" ಎಂದು ಮನಸ್ಸಿನಲ್ಲಿಯೇ ತನ್ನ ಹಿಂದಿನ ನಿರ್ಧಾರವನ್ನು ಕಿತ್ತೊಗೆದಳು. ಅದನ್ನು ಗಟ್ಟಿಯಾಗಿ ಹೇಳಿದರೆ ತಾಯಿಗೆ ಅದು ಸುಳ್ಳೆಂದು ಗೊತ್ತಾಗಿಯೇ ತೀರುವುದು. ಅವಳುಸುಳ್ಳಾಡಿದಾಗೆಲ್ಲ ತಾಯಿ ಅದನ್ನು ಕಂಡು ಹಿಡಿದಿರಲಿಲ್ಲವೆ?

ಜರೂಸಲೆಮ್ ಬೆಲಿ ಮತ್ತು ಜೋಯಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಸೀಟಿನಲ್ಲೇ ಅಡ್ಡವಾಗಿದ್ದರು. ಮಗು ಬಿಕ್ಕುತಿತ್ತು.

ಮಿಸ್ ಬಾಮಾ "ಇಲ್ಲಿ ಕೊಡು ಮಗುವನ್ನು" ಎಂದು ಬೆಚ್ಚಗಿನ ಮೈಯ ಮಗುವನ್ನು ತನ್ನ ಎದೆಯ ಮೇಲೆ ಇರಿಸಿಕೊಂಡು ಏನೋ ಜೋಗುಳ ಹಾಡನ್ನು ಗುಣುಗುತ್ತ ಅದನ್ನು ನಿದ್ದೆಹೋಗುವಂತೆ ಪ್ರೋತ್ಸಾಹಿಸಿದಳು.

ತನ್ನ ಮಗನು ಮಗುವಾಗಿದ್ದಾಗ ತನ್ನ ಹೆಂಡತಿ ಇದೇ ಹಾಡನ್ನೇ ಹಾಡುತ್ತಾ ತೊಟ್ಟಿಲು ತೂಗಿ ಅವನನ್ನು ಮಲಗಿಸುತ್ತಿದ್ದುದು ಜ್ಞಾಪಕಕ್ಕೆ ಬಂದಿತು—ಮಿಸ್ಟರ್ ಪರ್ಸೆಲ್ಲರಿಗೆ.

ಹಸಿವೆಯ ಮಧ್ಯೆ ಪೀಟ್‌ಗೆ ತಾನು ಉರುಳುವಂತೆ, ಹೊರಳಿ ಬೀಳುವಂತೆ ಅನಿಸಿತು. ಆತ ನಿನ್ನೆ ಇದ್ದುದೆಲ್ಲಿ? ಇಂದೆಲ್ಲಿ? ನಾಳೆ ಇನ್ನೆಲ್ಲಿಯೋ? ತಾನು ಯಾವುದಕ್ಕಾದರೂ ಸ್ಥಿರವಾಗಿ ಅಂಟಿಕೊಳ್ಳುವ ದಿವಸ ಬಂದೀತೆ? ಈ ಬಸ್ಸಿನಲ್ಲಿ ತಾನು ಬಂದದ್ದೇಕೆ?

ಅಲ್ಲಿ ತಾನು ಮಾಡುತ್ತಿರುವುದೇನು? ಈ ಚಪಲ ಚಿತ್ತದ ಹೆಣ್ಣು ತನ್ನಿಂದ ಏನುಬಯಸುತ್ತಿದೆ? ತನ್ನ ಹತ್ತಿರ ಆಕೆಗೆ ಬೇಕಾದ್ದು ಯಾವುದೂ ಇರಲಿಲ್ಲವೆಂದು ಆಕೆಗೆ ಪ್ರಾಯಶಃ ತಿಳಿಯದು. ಆತ ಸ್ವತಂತ್ರ, ಏಕಾಕಿ. ತಲೆಕೆಳಗಾಗಿ ಉರುಳಲು ಅವನೊಬ್ಬನಿಗೇ ಸ್ವಾತಂತ್ರ್ಯ.

ವರ್ಜೀನಿಯಳಿಗೆ ಅವನು ಯಾವುದೋ ಮೇಘದ ಮರೆಯಿಂದ, ಚಂದ್ರ ಲೋಕದಿಂದ ಬಿಳಿಗುದುರೆಯೇರಿ ವೈಭವದಿಂದ ಬರುತ್ತಿರುವಂತೆ ಕಾಣುತಿತ್ತು. ಅವನು ಪಕ್ಕದ ಹುಚ್ಚು ಮನುಷ್ಯನಾಗಿರಲಿಲ್ಲ. ಅವನ ಮೋರೆಯಲ್ಲಿ ಸದಾ ಮಂದಹಾಸವಿತ್ತು. ಅವನು ಆಕೆಯನ್ನು ಕಂಡೊಡನೆ «ಕೈ ಇತ್ತ ತಾ, ಹೋಗೋಣ" ಎಂದು ತಂಪಾದ ತನ್ನ ಕೈಯನ್ನು ಅವಳ ಕೈಯೊಳಗಿರಿಸಿ ಮೇಘ ಮಂಡಲವನ್ನು ಪ್ರವೇಶಿಸಿದನು.

ಮಿಸ್ಟರ್ ಕೊಯ್ ಬೆಲ್ಲ ತೂಗುತ್ತಿದ್ದರು. ಯಾವುದೋ ಒಂದು ವಿಷಯ ಬಿಟ್ಟು ಹೋಗಿದ್ದುದ್ದನ್ನು ನೋಟು ಮಾಡಿಕೊಂಡರು. ಆದರೂ ಕತ್ತಲಲ್ಲಿ ಬರೆದದ್ದು ಮರುದಿನ ತನಗೆಯೇ ಅರ್ಥವಾಗುತ್ತದೋ ಇಲ್ಲವೋ?

ಮಿಸ್ ಬಾವಾ ಅವಳ ಹಾಡಿನ ಕೊನೆಯ ಚರಣಕ್ಕೆ ಬಂದಳು. ಅದರ ಜತೆಗೆ ಅವಳ ಜೀವನದ ಕೊನೆಯ ಚರಣವೂ ಲೀನವಾಗಿತ್ತು. ಶ್ರೀಮತಿ ಬೆರ್ರಿಮೆನ್ ಮತ್ತು ಲಾರಾ ಒಬ್ಬರಿಗೊಬ್ಬರು ಅಂಟಿಕೊಂಡಿದ್ದರು ವರ್ಜೀನಿಯಾ ಮತ್ತು ಅವಳ ವೀರಯೋಧನು ಎತ್ತರ ಎತ್ತರಕ್ಕೆ ಏರುತ್ತಿದ್ದರು. ಅವನ ತೋಳು ಈಗ ಅವಳನ್ನು ಬಳಸಿಕೊಂಡಿತ್ತು. ಮಿಸ್ಟರ್ ಪರ್ಸೆಲ್ ನಾಳೆಗೆ ಹೊಂದಿಕೊಳ್ಳುತ್ತಿದ್ದರು ಮಿಸ್ ಬಾವಾ ಹಾಡನ್ನು ಮುಕ್ತಾಯ ಮಾಡಿ ಮಗುವನ್ನು ತಾಯ ಕೈಯಲ್ಲಿ ಕೊಟ್ಟಳು.

ಬೆಳಗಾಯಿತು. ಬಸ್ಸು ತನ್ನ ಗುರಿಯನ್ನು ಪ್ರವೇಶಿಸಿತು; ನಗರದ ಬೀದಿಯಲ್ಲಿ ಮುಂದುವರಿಯಿತು. ಮನೆಗಳ ಸಾಲನ್ನು ದಾಟಿ ಕೆಂಪು ದೀಪದ ಬಳಿ ಸ್ವಲ್ಪ ಹೊತ್ತು ನಿಂತ ಡ್ರೈವರನು ಮತ್ತೆ ಕ್ಲಚ್ ಮತ್ತು ಗೇರ್‌ಶಿಫ್ಟ್ ಬಿಟ್ಟಾಗ ಒಳಗಿನ ಪ್ರವಾಸಿಕರಿಗೆ ಎಚ್ಚರವಾಯಿತು. ಶ್ರೀಮತಿ ಬೆರ್ರಿಮೆನ್ ಚಿಕ್ಕದೊಂದು ಕನ್ನಡಿಯಲ್ಲಿ ಮುಖದ ನಿರಿಗಳನ್ನು

ನೋಡಿಕೊಂಡಳು. ಲಾರಾ ತಾಯಿ ತೊಡೆಯಲ್ಲಿ ನಿದ್ದೆಹೋಗಿದ್ದಳು. ಅವಳ ಮುಂದುಗಡೆಯ ಸೀಟಿನಲ್ಲಿ ಜೋಯಿ, ಮತ್ತು ಜರೂಸಲೆಮ್ ಬೆಲಿ ಹೊರಗೆ ಮುಖಮಾಡಿದ್ದರು. ಮಾರ್ಜ್ ತನ್ನ ಭಾರವಾದ ಮಗುವನ್ನು ಇನ್ನೂ ಹೊತ್ತಿದ್ದಳು. "ಡ್ರಾಯವರ್, ನನ್ನ ಸಾಮಾನು ತೆಗೆದುಕೊಡಲು ಮರೆಯಬೇಡ" ಎಂದು ಶ್ರೀಮತಿ ಫ್ರೇಜರ್ ಡ್ರಾಯವರನಿಗೆ ನೆನಪು ಹುಟ್ಟಿಸಿದಳು

ಬಸ್ ನಿಲ್ದಾಣದಲ್ಲಿ ಕ್ಷೌರಮಾಡಿಕೊಂಡು, ಉಡುಪು ಬದಲಿಸಿ ಹೊರಟರೆ ತಾನು ಪುಲ್‌ಮೆನ್ ಸ್ಲೀಪಿಂಗ್ ಕಾರಿನಲ್ಲಿ ಬಂದಹಾಗೆ ತೋರಬಹುದಲ್ಲಾ, ನಿಲ್ದಾಣದಲ್ಲಿ ಅದಕ್ಕೆ ಸ್ವಚ್ಛವಾದ ಸ್ಥಳ ಸಿಕ್ಕೀತೆ? ಎಂದು ಮಿಸ್ಟರ್ ಕೊಯ್ ಯೋಚಿಸಿದರು. ರಾತ್ರಿ ತೆರೆದ ಕಾಲರಿಗೆ ಮಿ. ಪರ್ಸೆಲ್ ಗುಂಡಿ ಹಾಕುತ್ತಿದ್ದರು. ವರ್ಜೀನಿಯಾ ತಲೆ ಬಾಚಿಕೊಳ್ಳುತ್ತಿದ್ದಳು. ಅವಳ ಬಾಯಲ್ಲಿ ಹೇರ್ ಪಿನ್ನುಗಳು ತುಂಬಿದ್ದುವು. ' ಇದು ಒಳ್ಳೆಯ ಊರು. ಒಳ್ಳೆಯ ಕೋಣೆ ಸಿಕ್ಕಿಯೇ ಸಿಗುತ್ತದೆ ನಿನಗೆ" ಎಂದಳು.

"ನನಗೆ ಇಲ್ಲೇನು ಕೆಲಸ?" ಎಂದು ಪೀಟ್ ಡಾಲಿ ಕೇಳಿದ.

"ನಿನಗೆ ದುಡ್ಡಿನ ಬೆಲೆಯೇ ಗೊತ್ತಿಲ್ಲ. ಅದನ್ನು ಕಲಿಸಿಕೊಡಲು ನಿನಗೆ ಯಾರಾದರೂ ಬೇಕು" ಎಂದಳು ವರ್ಜೀನಿಯಾ.

ಶ್ರೀಮತಿ ಜೆರ್ರಿಮೆನಳಿಗೆ ಮನೆಗೆ ಹೋಗಿ ಸ್ನಾನಮಾಡಿ ಉಡುಪು ಬದಲಿಸಿದರೆ ಅಷ್ಟೇ ಸಾಕೆನಿಸಿತು. ಹಿಂದಿನ ರಾತ್ರಿಯ ವಿಕಟ ಕಲ್ಪನೆಗಳೆಲ್ಲಾ ಈಗವಳನ್ನು ತೊರೆದಿದ್ದುವು. ಆರ್ಥರನ ಮೋರೆಯನ್ನು ನೋಡಬೇಕೆಂಬ ಲವಲವಿಕೆ ಕೂಡ ಅವಳ ಮನಸ್ಸಿನಲ್ಲಿ ಉದಯವಾಯಿತು. ಲಾರಾ ಎದ್ದಾಗ ಪ್ರೀತಿಯಿಂದ "ನಿದ್ರೆ ಚೆನ್ನಾಗಿ ಬಂತೆ?" ಎಂದು ಆಕೆ ಕೇಳಿದಳು. ಲಾರಳ ತುಟಿಯಲ್ಲಿ ನಗು ಮೂಡಿತು.

ಪೀಟ್ ಕಿಟಕಿಯಿಂದ ಹೊರಗೆ ನೋಡಿದನು. ಏನು, ಇಲ್ಲೇ ವಾಸಮಾಡುವುದೇ?. ಪ್ರತಿಯೊಂದು ಬೀದಿ, ಅದರ ತಿರುವು, ಅಂಗಡಿ, ಕಲ್ಲು, ಸುಳಿಯುವ ಜನ—ಇವರ ಪರಿಚಯವು ಅವನಿಗೆ ಕ್ಷಣ

ಮಾತ್ರದಲ್ಲಿ ಆಗುವುದು - ತಾನು ಇದೇ ಊರಿನಲ್ಲಿರುವ ನಿರ್ಧಾರ ಮಾಡಿದರೆ...............

"ಅಗೋ ಡ್ಯಾಡಿ," ಎಂದು ಲಾರಾ ಕೂಗಿದಳು.

ಮಿಸ್ ಬಾಮಳ ಹೊರತು ಉಳಿದ ಪ್ರಯಾಣಿಕರು ಎದ್ದು ನಿಂತರು. ಅವಳೊಬ್ಬಳೇ ಕಣ್ಣುಮುಚ್ಚಿ ನಸುನಗುವಂತೆ ಕೂತಿದ್ದಳು. ಶ್ರೀಮತಿ ಫ್ರೇಜರ್ ಡ್ರ್ಯಾವರನು ಸಾಮಾನು ತೆಗೆದು ಕೊಡಲೆಂದು ಕಾದುನಿಂತಳು; ಮಾರ್ಜ್ ಕುಟುಂಬ ಉಳಿದವರೆಲ್ಲ ಇಳಿಯಲಿ ಎಂದು ಕೊಂಡು ನಿಂತಿತ್ತು. ಪೀಟ್ ವರ್ಜೀನಿಯಳ ಬೆನ್ನಹಿಂದೆಯೆ ಇಳಿದನು. ಯಾಕೋ ಕೆಳಗಿಳಿಯುವಾಗ ಅವಳ ಸೂಟ್‌ಕೇಸನ್ನು ಎತ್ತಿ ಕೆಳಗಿರಿಸಿದನು. ಆಮೇಲೆ ಜೇಬಿನೊಳಗೆ ಕೈಹಾಕಿ ನೋಟಿನ ಸುರುಳಿಯನ್ನು ತೆಗೆದು ಜೋಯಿಯ ಹತ್ತಿರ "ಇಕೋ, ಇದನ್ನು ನಿನ್ನ ಅಮ್ಮನಿಗೆ ಕೊಡು" ಎಂದನು. ಅಲ್ಲೇ ಇದ್ದ ವರ್ಜೀನಿಯಾ ಕಡೆಗೆ ತಿರುಗಿ "ಇಲ್ಲಮ್ಮಾ, ನಾನು ನಿಂತಲ್ಲಿ ನಿಲ್ಲುವ ಆಸಾಮಿಯಲ್ಲ" ಎಂದನು. ಅವನು ಮಾಡಿದ್ದನ್ನು ಕಂಡು, ಹೇಳಿದುದನ್ನು ಕೇಳಿ ಅವಳು ಅವಾಕ್ಕಾಗಿದ್ದಳು. ಅವಳ ಮುಖವು ಅವಳ ಮುಖದಂತಿರಲಿಲ್ಲ.

"ಬಂದೆವು" ಎಂದ ಡ್ರೈವರ.

ಲಾರಾ "ಡ್ಯಾಡಿ, ಡ್ಯಾಡಿ" ಎಂದು ಅಪ್ಪನ ಕಡೆ ಓಡಿದಳು. ಶ್ರೀಮತಿ ಬೆರ್ರಿಮೆನ್ ಗಂಭೀರವಾಗಿ ಇಳಿದಳು. ಅವಳ ಹಿಂದೆ ಮಿಸ್ಟರ್ ಕೊಯ್ ಇಳಿದರು. ಬಸ್ಸಿನ ಕಿಟಕಿಯಿಂದ ಮಗನ ಮುಖವನ್ನು ಕಂಡು ಮಿ. ಪರ್ಸೆಲ್ಲರಿಗೆ ಆಶ್ಚರ್ಯವಾಯಿತು. ಅವನಿಗೆ ತಾನು ಬರುವ ಸಮಾಚಾರ ಹೇಗೆ ಗೊತ್ತು? ತಾಯಿ ತಂತಿ ಕಳಿಸಿರಬಹುದೆ? ಮಿಸ್ಟರ್ ಪರ್ಸೆಲ್ಲರ ಮೈಯಲ್ಲಿ ಪುಳಕವೆದ್ದಿತು. ಮಗ ಕೈಯಾಡಿಸಿ ಹತ್ತಿರದಲ್ಲಿದ್ದ ಒಬ್ಬ ಹುಡುಗಿಗೆ ಅವರನ್ನು ತೋರಿಸುತ್ತಿದ್ದ. ಮಿಸ್ಟರ್ ಪರ್ಸೆಲ್ ಆಕೆಯನ್ನು ನೋಡಿದರು. "ಎಲಾ, ಇದು ಒಂದು ಮಗು" ಎಂದು ಕೊಂಡರು.

ಮಾರ್ಜ್ ಮಗುವನ್ನೂ ಆಕಸ್ಮಿಕವಾಗಿ ದೊರೆತ ಹಣವನ್ನೂ ಎದೆಗವಚಿಕೊಂಡು ಇಳಿದಳು. ಜರೂಸಲೆಮ್ ಬೆಲಿ ಮತ್ತು ಜೋಯಿ

ಅವಳ ಹಿಂದೆ ಬರುತ್ತಿದ್ದರು. ಶ್ರೀಮತಿ ಫ್ರೇಜರ ಡ್ರೈವರನಿಗೆ ‹ಏನಯ್ಯಾ ನಾನಿನ್ನೂ ಇಲ್ಲೇ ಇದ್ದೇನೆ" ಎಂದು ಹಲುಬುತ್ತಿದ್ದಳು.

ಟೂಹೆ ಕನ್ನಡಿಯಲ್ಲಿ ನೋಡಿದ. ತಾಳ್ಮೆ ಕೆಟ್ಟು ಬೊಬ್ಬೆ ಹಾಕುವ ಈ ಹೆಂಗಸು, ಮತ್ತು ನಿದ್ರಿಸಿದ ಮುದುಕಿ ಇವರನ್ನು ಬಿಟ್ಟರೆ ಬಸ್ಸು ಖಾಲಿಯಾಗಿತ್ತು. ನಿದ್ದೆಯಲ್ಲಿದ್ದ ಮಿಸ್ ಬಾವಾ ಅವನಿಗೆ ತನ್ನ ಹೆಂಡತಿ ಮಾರ್ಥಳಂತೆಯೇ ತೋರಿದಳು. ಇಷ್ಟು ನಿದ್ದೆ ಯಾತಕ್ಕೆ? ಪ್ರಾಯಶಃ ಏಳುವ ಇಚ್ಛೆಯೇ ಇಲ್ಲವೇನೋ. ಶ್ರೀಮತಿ ಫ್ರೇಜರಳ ಪೆಟ್ಟಿಗೆಯನ್ನು ತೆಗೆದುಕೊಟ್ಟು ಆತ ಮಿಸ್ ಬಾಮಳ ಬಳಿಗೆ ಬರುವ ಹೊತ್ತಿಗೆ ಸರಿಯಾಗಿ ಆಕೆ ಕಣ್ಣು ತೆರೆದಳು.

ಹಳ್ಳಿ

ಲೂಯಿ ಬ್ರೊಮ್‌ಫೀಲ್ಡ್.

ಲೂಯಿ ಬ್ರೊಮ್‌ಫೀಲ್ಡ್ ಓಹಿಯೊ ರಾಜ್ಯದ ಮ್ಯಾನ್ಸ್ ಫೀಲ್ಡ್‌ನಲ್ಲಿ 1896ರಲ್ಲಿ ಜನ್ಮವೆತ್ತಿ ಕಾರ್ನೆಲ್ ಮತ್ತು ಕೊಲುಂಬಿಯಾ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಹೊಂದಿದರು. ಪ್ರಥಮ ಮಹಾಯುದ್ಧದ ಸಮಯ ಫ್ರೆಂಚ ಸೈನ್ಯದ ಎಂಬ್ಯುಲೆನ್ಸ ವಾಹನದ ಡ್ರೈವರರಾಗಿ ಸೇವೆ ಸಲ್ಲಿಸಿ 'ಕ್ರುವಾಕ್ಸ್ ಡಿ ಗೆರೆ' ಎಂಬ ಸೈನಿಕ ಪ್ರಶಸ್ತಿಯನ್ನು ಪಡೆದರು. 1923ರಿಂದ 1939ರ ವರೆಗೆ ಪ್ಯಾರಿಸಿನ ಸಮೀಪ ವಾಸಮಾಡಿದರು. ಇವರ ಶರತ್ಕಾಲದ ಆರಂಭ (Early Autumn) ಎಂಬ ಕಾದಂಬರಿಗೆ ಅಮೇರಿಕದ ಪುಲಿಟ್ಸರ್ ಬಹುಮಾನವು ದೊರೆಯಿತಲ್ಲದೆ, ಇವರ ಸಾಹಿತ್ಯ ಸೇವೆಯ ದೆಸೆಯಿಂದ ಇವರಿಗೆ 'ಲೀಜನ್ ಆಫ್ ಆನರ್' ಎಂಬ ಅತ್ಯುಚ್ಚ ಪ್ರಶಸ್ತಿಯೂ ಲಭಿಸಿದೆ. ಈಗ ಇವರು ಸಪತ್ನೀಕರಾಗಿ ಓಹಿಯೋ ರಾಜ್ಯದ ಒಂದು ಹೊಲದಲ್ಲಿ ವಾಸಮಾಡುತ್ತಿರುವರು. ಅವರ ಕೃಷಿ ಜೀವನವೂ, ಕೃಷಿ ಮತ್ತು ಅಮೇರಿಕನ್ ಜೀವನ ಕ್ರಮದ ಬಗ್ಗೆ ಅವರ ದೃಷ್ಟಿಕೋನವೂ ಅವರ 'ಸುಖಮಯ ಕಣಿವೆ' (The Pleasant Valley) ಎಂಬ ಕಾದಂಬರಿಯಲ್ಲಿ ಮೈತಳೆದು ಬಂದಂತಿವೆ. 'ಮಳೆ ಬಂದಿತು' (The Rains Came) ಮತ್ತು 'ಶ್ರೀಮತಿ ಪಾರ್ಕಿಂಗ್‌ಟನ್' (Mrs. Parkington) ಮುಂತಾದ ಇವರ ಹಲವು ಕೃತಿಗಳು ಚಲಚಿತ್ರ ಲೋಕದಲ್ಲಿಯೂ ಮೂಡಿಬಂದು ಜನರ ಮನಸ್ಸನ್ನು ಸೂರೆ ಮಾಡಿವೆ.

ಪ್ರಶಾಂತವಾದ ಆ ರಾತ್ರಿ ತಲೆಯಮೇಲಿನ ಆಕಾಶದಲ್ಲಿ ನಕ್ಷತ್ರಗಳು ಸ್ವಚ್ಛವಾಗಿ ಪ್ರಕಾಶಿಸುತ್ತಿದ್ದುವು. ನೀಳವಾದ ಅಡಿಕೆಯ ಮರದ ತುತ್ತತುದಿಯ ಗೊನೆಗಳ ಇರುಕಿನಲ್ಲಿ ಹೊಳ ಹೊಳೆಯುವ ನಕ್ಷತ್ರಗಳನ್ನು ಕಡು ನೀಲವಾದ ಆಕಾಶದ ಹರವಿನ ಹಿನ್ನೆಲೆಯಲ್ಲಿ ನೋಡಿದರೆ ವಜ್ರದ ಬೆಂಡೋಲೆಯನ್ನು ನೋಡಿದಂತಾಗುತ್ತಿತ್ತು. ಅಡಿಕೆಯ ಮರಗಳಿಗೊರಗಿ, ಅರ್ಧ ಮೈ ಬಿಟ್ಟುಕೊಂಡ ಹುಡುಗನೊಬ್ಬ, ಸ್ನಾನದ ಕಾಚವನ್ನು ಧರಿಸಿದ ಇನ್ನೊಬ್ಬ ಹುಡುಗ, ಕೂತಿದ್ದರು. ಒಬ್ಬನ ಬಣ್ಣ ಅಚ್ಚ ಬಿಳಿದಾಗಿದ್ದು ಅವನನ್ನು ಕಂಡರೆ ವಿಶಾಲ ಮೈಕಟ್ಟಿನ ಸ್ಫುರದ್ರೂಪಿ ಸ್ವೀಡಿಷ್ ಯುವಕನಂತೆ ತೋರುವುದು. ಎರಡನೆಯ ತರುಣನು ಅವನಷ್ಟು ಉದ್ದವಾಗಿರಲಿಲ್ಲ, ಬಿಳಿದಾಗಿಯೂ ಇರಲಿಲ್ಲ. ಆದರೂ ದೇಹವು ಗಟ್ಟಿಮುಟ್ಟಾಗಿತ್ತು. ಸ್ನಾನದ ಕಾಚವನ್ನು ಧರಿಸಿಕೊಂಡಾತನೇ ಸ್ಫುರದ್ರೂಪಿ ತರುಣನು.

ಅವರಿಬ್ಬರ ಹಿಂದುಗಡೆ ಇದ್ದ ತೆಂಗಿನ ತೋಟದ ನೆಳಲಲ್ಲಿ ಕಟ್ಟಲಾದ ಗೂಡಾರಗಳಲ್ಲಿ ಎಲ್ಲಿಂದಲೋ ಬಾಂಜೋ ಬಾರಿಸುವ ಶಬ್ದ ಕೇಳಬರುತಿದ್ದಿತು. ಇದನ್ನು ಬಿಟ್ಟರೆ ಕಡಲ ಮೇಲಿನ ಅಲೆಗಳ ಮಂದ ಮಂದವಾದ ಸಪ್ಪಳವಷ್ಟೇ ಆ ರಾತ್ರಿಯ ಮೌನವನ್ನು ಭೇದಿಸುವುದು. ವಾತಾವರಣದಲ್ಲಿ ಸೆಕೆ ಇದ್ದರೂ ಅಡಿಕೆಯ ಮರಗಳ ಸಂದಿನಲ್ಲಿ ಬೀಸುತ್ತಿದ್ದ ಗಾಳಿಯು ಸೊಳ್ಳೆಗಳ ಕಾಟವನ್ನಂತೂ ನಿವಾರಿಸಲು ನೆರವಾಗುತಿತ್ತು.

ತರುಣರು ಸ್ವಲ್ಪ ಹೊತ್ತು ಮಾತನಾಡುವರು. ತದನಂತರ ಸ್ವಲ್ಪ ಹೊತ್ತು ಆರಾಮವಾಗಿ ಸುಮ್ಮನೆ ಮಾತಿಲ್ಲದೆ ಕೂತಿರುವರು. ರಜೆಯ ಮೇಲೆ ಬಂದ ಸಮರ ವಿಮಾನ ಸಂಚಾಲಕರಾದ ಅವರಿಗೆ ರಾತ್ರಿಯ ನೀರವತೆಯು ಮಾದಕದಂತೆ ಮೋಹಕವಾಗಿತ್ತು. ಆಗಾಗ ಕಾಚವನ್ನು ಧರಿಸಿದ ತರುಣನು ಶಾಂತಸಾಗರದ ಕಡಲ್ಕರೆಗೆ ನಡೆದು ಬಿಸಿಯಾದ ನೀರಿಗೆ ಧುಮ್ಮಿಕ್ಕಿ ಸ್ವಲ್ಪ ಹೊತ್ತು ಅಲಸಿಗನಂತೆ ಈಸಿ ಕೊಂಡಿದ್ದು ತರುವಾಯ ಶ್ವೇತ ವರ್ಣದ ಮರಳು ಭೂಮಿಯನ್ನು ಮಂಡಲಾಕಾರದ ಜಲಮಾರ್ಗದಲ್ಲಿ ಮುಟ್ಟುವನು.

ಮೃತ್ಯುವಿನ ಬಾಗಿಲಲ್ಲಿರುವುದೆಂದರೇನೆಂದು ಅವರು ಬಲ್ಲರು. ಆದರೆ ಅವರಿನ್ನೂ ಹರೆಯದವರಾದುದರಿಂದ ಅವರ ಮಾತುಕತೆ ಹಚ್ಚಹರೆಯದ ಚಿಹ್ನವನ್ನು ತಾಳಿಕೊಂಡಿದ್ದರೆ ಆಶ್ಚರ್ಯವಿಲ್ಲ. ರಾತ್ರಿಯ ನೀರವತೆಯಲ್ಲಿ ಅವರಿಗೆ ಯೋಚಿಸಲು ಅವಕಾಶವೂ ಇದ್ದಿತು; ಯೋಚನೆ ಗೃಹಾಭಿಮುಖವಾಗಿ ತೆರಳಿತ್ತು.

"ಸ್ವಾರಸ್ಯವೆಂದರೆ ಇದು: ಈ ಶಾಂತಸಾಗರದ ನಟ್ಟನಡುವೆ ಈ ರೀತಿ ವಿಶ್ರಾಂತಿ ಹೊಂದುವ ಒಂದು ಸಂದರ್ಭ ಒದಗೀತೆಂದು ನಾನು ಎಂದೂ ಯೋಚಿಸಿದವನಲ್ಲ: ಪ್ರತಿ ಶನಿವಾರ ಲಾಂಗ್‌ಬೀಚಿಗೆ ಹೋಗಿ ಈಜುತ್ತಿರುವಾಗ ಈ ಸಾಗರದ ಆಚೆ ದಡಕ್ಕೆ ಇನ್ನೆಷ್ಟು ದೂರವಿರಬಹುದೆಂಬ ಹುಚ್ಚು ಕಲ್ಪನೆಯೊಂದು ನನ್ನಲ್ಲಿ ಸುಳಿದು ಮಾಯವಾಗುತ್ತಿತ್ತು. ಅಷ್ಟೆ."

"ವಯಸ್ಸಿಗೆ ಬಂದ ಮೇಲೆ ಏನು ಮಾಡಬೇಕೆಂದಿದ್ದೀ?"

ಎರಡನೆಯ ತರುಣನು ನಕ್ಕು, "ಅದರ ಯೋಚನೆಯೇ ನನಗಿರಲಿಲ್ಲ. ನಮ್ಮ ತಂದೆಯು ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಾ ಇದ್ದರೆ ಒಂದಲ್ಲ ಒಂದು ದಿನ ಅದು ನನಗೇ ಸಲಬೇಕಾದ್ದೆಂದು ತಿಳಿದ ನನಗೆ ಮುಂದಿನ ಯೋಚನೆ ಮಾಡಬೇಕಾಗಿಯೇ ಇರಲಿಲ್ಲ."

"ಬಾಲಕನಾಗಿದ್ದಾಗ ಸಾಗರಕ್ಕೆ ಅಷ್ಟು ಸಮೀಪವಾಗಿ ವಾಸ ಮಾಡುವುದು ಎಷ್ಟು ಸಂತೋಷದ ಸಂಗತಿ!'

'ನನಗೆ ಅದರ ಪರವೆಯೂ ಇರಲಿಲ್ಲ. ಅರ್ಧ ಗಂಟೆ ನಡೆದರೆ ಸಾಕು, ಕಡಲು ಯಾವಾಗಲೂ ಇರುತಿತ್ತೆಂಬುದಷ್ಟೇ ನಮ್ಮ ತಲೆಯೊಳಗಿದ್ದುದು. ಚಳಿಗಾಲದಲ್ಲಿ ಕಡಲ ಮೇಲಿನ ಮಂಜು ಊರೊಳಗೆ ಮುಸುಕಿದಾಗಲಂತೂ ನಾವು ಕಡಲಿಗೆ ಇಷ್ಟೇಕೆ ಹತ್ತಿರದಲ್ಲಿದ್ದೇವೆಂದು ಚಿಂತೆ ಹಿಡಿಯುತ್ತಿತ್ತು!'

ಅಲ್ಲಿಗೆ ಅವರ ಮಾತು ಮುಗಿದು ಮೌನವು ಆವರಿಸಿತು. ಸ್ಫುರದ್ರೂಪಿ ತರುಣನು ಮೆತ್ತಗೆ ಎದ್ದು ಕಡಲಲ್ಲಿ ಜಲಕ್ರೀಡೆಯಾಡಲು ಹೊರಟನು. ಉಳಿದೊಬ್ಬನು ಮಡಿಸಿದ ಕೈಗಳ ಮೇಲೆ ತಲೆಯನ್ನಿರಿಸಿಕೊಂಡು ಮುಂದಿನ ರಮ್ಯವಾದ ದೃಶ್ಯದ ಸವಿಯನ್ನು ತಿಳಿದೂ ತಿಳಿಯದಂತೆ ಸವಿಯತೊಡಗಿದನು: ಕಡುನೀರಿನಲ್ಲಿ ರಂಜಕತ್ವವು ಅತಿಶಯವಾಗಿದ್ದುದರಿಂದ ಅವನ ಮಿತ್ರನು ನೀರಿಗೆ ಹಾರಿದಾಗ ಉರಿಯುವ ಬೆಂಕಿಗೆ ಹಾರಿದಂತೆ ಕಂಡಿತು, ಧುಮುಕಾಟವೇನು ಬೆಂಕಿಯ ಜ್ವಾಜ್ವಲ್ಯಮಾನವಾದ ನಾಲಗೆಯಂತೆಯೂ, ನೀರಿನ ಪ್ರತಿಯೊಂದು ಬಿಂದುವು ಮನೋರಮವಾದ ಮರಕತದಂತೆಯೂ ಕಂಗೊಳಿಸಿದುವು. ಸ್ಫುರದ್ರೂಪಿಯು ಮೆಲ್ಲಮೆಲ್ಲನೆ ಈಸಾಡುತ್ತಿದ್ದರೆ ಅವನ ದೇಹವೆಲ್ಲ ಪ್ರಕಾಶಮಾನವಾಗಿ ಶೋಭಿಸುತ್ತಿತ್ತು. ಆತ ತೋಳಿನಲ್ಲಿ ನೀರನ್ನು ಅಮುಕಿದಾಗ ನೀರು ಭುಗ್ಗನೆ ತಳತಳಿಸುವುದು, ಆತ ಈಜು ಮುಗಿಸಿ ನೀರಿನಿಂದ ಮೇಲೆದ್ದು ಮರಳಿನಲ್ಲಿ ಬರುತ್ತಿದ್ದರೆ ರಂಜಕದ ಒಂದು ಮೂರ್ತಿಯೇ ನಡೆಯುವಂತೆ ತೋರುವುದು. ಅವನ ಕಾಯವು ನೀಳವಾಗಿದ್ದು, ಸ್ನಾಯುಗಳು ಲವಲವಿಕೆಯಿಂದ ಕೂಡಿದ್ದುವು. ಎದೆಯು ಅಗಲವಾಗಿಯೂ ಭುಜಗಳು ಸಶಕ್ತವಾಗಿಯೂ ಕಾಣಿಸುತ್ತಿದ್ದುವು.

ಕರ್ರಗಿನ ತರುಣನಿಗೆ ಹಠಾತ್ತನೆ ಒಂದು ಯೋಚನೆ ಹೊಳೆಯಿತು "ಸ್ವರ್ಗದ ಬಾಗಿಲನ್ನು ತಲಪುವ ಮನುಷ್ಯರು ಇದೇ ರೀತಿ ಕಂಗೊಳಿಸುತ್ತಿರಬೇಕಲ್ಲಾ" ಎಂದು ಅವನಿಗನಿಸಿತು. ಅರ್ಧ ನಾಚುಗೆಯಿಂದಲೂ ಅರ್ಧ ಭೀತಿಯಿಂದಲೂ ಆತನು ಈ ವಿಕಟವಾದ ಯೋಚನೆಯನ್ನು ಮನಸ್ಸಿನಿಂದ ಹೊರದೂಡಿದನು. ಇದಕ್ಕಿಂತ ಹುಚ್ಚು ವಿಚಾರ ಬೇರಾ

ವುದು? ಸ್ವರ್ಗದ ಕುರಿತ ಯೋಚನೆ ಇಂಥ ವೇಳೆ ಬರಲೇ ಬಾರದಲ್ಲ! ಇದರಿಂದ ಟಾಮ್‌ಗೇನಾದರೂ ಅಪಶಕುನವಾದರೋ! ಈ ದ್ವೀಪ ರಾಜ್ಯದ ವಾತಾವರಣದಲ್ಲಿ ಲಾಂಗ್‌ಬೀಚಿನಲ್ಲಿ ಕನಸಿಗೂ ನಿಲುಕದ ಎಷ್ಟೋ ದುರ್ವಿಚಾರಗಳು ಸ್ಫುರಿಸಲೇನು ಕಾರಣ?

ಅಷ್ಟರಲ್ಲಿ ಅವನ ಸಂಗಾತಿ ಪಕ್ಕದ ಅಡಿಕೆ ಮರಕ್ಕೆ ಒರಗಿ ಕೂತಾಗಿತ್ತು. ಆತ ರಂಜಕಪೂರ್ಣವಾದ ನೀರನ್ನು ಬೆರಳುಗಳಿಂದ ಒರಸಿಕೊಳ್ಳುತ್ತ, ನೆಲದ ಮೇಲಿನ ಪ್ಯಾಕೆಟಿನಿಂದ ಒಂದು ಸಿಗರೇಟನ್ನು ತೆಗೆದು ಹಚ್ಚಿ, ಮತ್ತಷ್ಟು ಸುಖಾಸೀನನಾಗಿ ಸಿಗರೇಟಿನ ಸುವಾಸನೆಯನ್ನು ಹೀರುವಂತೆ ಸುಂದರವಾದ ತನ್ನ ಗೋಣನ್ನಲ್ಲಾಡಿಸಿದನು.

ಕರ್ರಗಿನ ಬಣ್ಣದವನಾದ ಜಿಮ್ಮಿಯು, ಇದೇನು, ನಿನಗೆ ನೀರಿನಲ್ಲಿ ಬೇಸರವೆಂಬುದೇ ಇಲ್ಲವೆ?' ಎಂದು ಕೇಳಿದನು.

'ಅದು ಹೇಗೆ ಸಾಧ್ಯ? ನಾನು ಬೆಳೆದದ್ದು ಡಕೋಟದಲ್ಲಿ. ಕಡಲನ್ನು ನೋಡಿದ್ದೇ ಕಳೆದ ವರ್ಷ.' ಎಂದು ಟಾಮ್ ಮರುನುಡಿದನು.

ಆ ಮೇಲೆ, 'ನಮ್ಮ ಮಿಡ್ಲ್‌ವೆಸ್ಟ್‌ನ ಹುಡುಗರ ಕತೆಯೇ ಸ್ವಾರಸ್ಯವಾಗಿದೆ. ನಿನ್ನೆ ರಾತ್ರಿ ಪಾರ್ಕಿ ಹೇಳುತ್ತಿದ್ದ: ನಮ್ಮ ದೇಶದ ನೌಕಾಪಡೆಯಲ್ಲಿ ನಾಲ್ಕರಲ್ಲಿ ಮೂರು ಜನ ಮಿಡ್ಲ್‌ವೆಸ್ಟ್ ರಾಜ್ಯಗಳಿಂದ ಬರುತ್ತಿದ್ದಾರಂತೆ. ಅಂದರೆ ಜೀವನಪರ್ಯಂತ ಕಡಲೆಂದರೇನೆಂದು ಕಾಣದವರೇ ನೌಕಾಪಡೆಯನ್ನು ತುಂಬಿಕೊಂಡಿರುವರೆಂದಾಯಿತು.' ಎಂದನು.

ಟಾಮ್ ತುಸು ಹೊರಳಿ ಕಡಲಿನ ಕಡೆಗೆ ನೋಟ ಹರಿಯಿಸಿದಾಗ ನೀರು ಕತ್ತಲಲ್ಲಿ ಮಿರುಗುವುದನ್ನು ಕಂಡನು. 'ಇನ್ನೊಂದು ಗೊತ್ತೇನು? ಎಂದಾದರೂ ನನ್ನ ವಿಮಾನಕ್ಕೆ ಅಪಘಾತವಾಗಿ ನಾನು ಬೀಳಬೇಕಾಗಿ ಬಂದರೆ ನನಗೆ ಕಡಲಿನ ಮೇಲೆಯೇ ಬೀಳಬೇಕೆಂದು ಆಸೆ. ಅದೇಕೋ ನೆಲದ ಮೇಲ್ಗಡೆ ಹಾಯುವಾಗ ನನಗೆ ಸುಖವೆನಿಸುವುದಿಲ್ಲ, ಕಡಲಿನ ಮೇಲೆ ವಿಮಾನ ಬಿಡುವುದೇ ನನಗಿಷ್ಟ.' ಎಂದು ಆತ ಹೇಳಿದನು.

ದೂರದ ಗೂಡಾರದಿಂದ ಬಾಂಜೋದ ಟುಂಯ್ ಟುಂಯ್ ಗಾಳಿಯ ಅಲೆಯೊಡನೆ ಸಂಚಾರಕ್ಕೆ ಹೊರಟಿತ್ತು.

ಟಾಮ್ ಆತ್ಮಕಥೆಯನ್ನು ಮುಂದುವರಿಸಿದನು: 'ನನಗೆ ಹದಿನೈದು ವಯಸ್ಸಾಗುವವರೆಗೆ ನಾನು ಕಂಡ ನೀರೆಂದರೆ ನಮ್ಮ ಹೊಲದ ಒಂದು ಹಳ್ಳದ ನೀರೇ ಸರಿ. ಹಳ್ಳವೆಂದರೆ ಅಂಥದೇನೂ ದೊಡ್ಡದಲ್ಲ. ಹೆಚ್ಚೆಂದರೆ ಒಂದೆರಡೆಕರೆ ಹರಡಿಕೊಂಡಿದ್ದೀತು. ಬೇಸಗೆಯಲ್ಲಿ ಒಣಗಿ ಹೋದಾಗ ಅದು ಬರೀ ಒಂದು ಕೆಸರ ಹೊಂಡವಾಗುತಿತ್ತು.' ಎಂದು ಟಾಮ್ ಹಠಾತ್ತನೆ ನಕ್ಕುಬಿಟ್ಟನು. 'ಆದರೆ ನಮ್ಮಲ್ಲಿಂದ ಹಲವು ಮೈಲುಗಳವರೆಗೂ ಇಂಥ ಹಳ್ಳ ಸಿಗುವಂತಿರಲಿಲ್ಲ. ನಮ್ಮ ಪ್ರಾಂತವೂ ಹಾಗೆಯೇ ಸಪಾಟಾಗಿದ್ದು, ಎಷ್ಟು ದೂರ ಕಣ್ಣು ಚಾಚಿದರೂ ಮರ ಮಟ್ಟು ಯಾವುದೂ ಇಲ್ಲದೆ ಬೋಳಾಗಿರುವುದರಿಂದ ಅಲ್ಲಿನ ಏಕಾಂತಕ್ಕೆ ಈ ಹಳ್ಳದಿಂದ ವಿಶೇಷ ಉಪಕಾರ, ವೈಭವ ಕೂಡಿ ಬಂದಹಾಗಿತ್ತು. ನಾನು ಚಿಕ್ಕವನಾಗಿದ್ದಾಗ ನನಗೆ ಅದೇ ದೊಡ್ಡ ಸಾಗರವಾಗಿತ್ತು. ಅದರಲ್ಲಿ ಈಸುವುದು, ಅದರ ಮೇಲೆ ದೋಣಿ ಗಳನ್ನು ತೇಲಬಿಡುವುದು ಎಂದರೆ ನನಗೆ ಬಲು ಇಷ್ಟ. ಭೂಗೋ ಲವನ್ನು ಕಲಿಯುವ ಸರದಿ ಬಂದಾಗ ಆ ಹಳ್ಳವು ನನ್ನ ಅಟಲಾಂಟಿಕ ಸಾಗರವಾಗಿತ್ತು— ಅದರ ಒಂದು ದಡ ಅಮೇರಿಕ, ಇನ್ನೊಂದು ಯುರೋಪ ಖಂಡ—ಎಂದು ನಾನು ಭಾವಿಸುತ್ತಿದ್ದೆ. ನನ್ನ ಕಾಗದದ ದೋಣಿಗಳೇ ಸಾಗರ ಸಂಚಾರದ ಮಹಾನೌಕೆ ಗಳಾಗಿದ್ದುವು. ಕೊನೆಗೊಮ್ಮೆ ಚಿಕಾಗೋ ನಗರದಿಂದ ಬರುವ ಯಾವುದೋ ಪತ್ರಿಕೆಯಲ್ಲಿ ಐರೋಪ್ಯ ಪ್ರವಾಸದ ಜಾಹೀರಾತನ್ನು ನೋಡಿ ಅವರಿಗೆ ಬರೆದು ತರಿಸಿಕೊಂಡ ಪ್ರಕಟನೆಗಳಲ್ಲಿ ನಾನು ಮೊದಲ ಬಾರಿಗೆ ಸಾಗರದ ಮೇಲೆ ಓಡಾಡುವ ನೌಕೆಗಳನ್ನು ಕಂಡೆ. ಆಮೇಲೆ ನಾನು ಅಂಥದೇ ರೀತಿಯ ದೋಣಿಗಳನ್ನು ಮಾಡಲೂ ಕಲಿತುಕೊಂಡೆ.

ತನಗೆ ತಾನೇ ಮಾತಾಡಿಕೊಳ್ಳುವವರಂತೆ ಆತ ಮುಂದುವರಿ ದನು. 'ವಸಂತ ಕಾಲದಲ್ಲಿಯೂ, ಶಿಶಿರ ಋತುವಿನ ಆಗಮನ ಪೂರ್ವದಲ್ಲಿಯೂ ನಮ್ಮ ಹಳ್ಳದಲ್ಲಿ ಕಾಡುಬಾತುಕೋಳಿಗಳು ಬಂದು ತಂಗುತಿದ್ದುವು. ನಮ್ಮ ಹಳ್ಳವು ಅವು ನ್ಯಾಯವಾಗಿ ಹೋಗಬೇಕಾದ ದಾರಿಯಲ್ಲೇನೂ ಇರಲಿಲ್ಲವಾದರೂ ಅವು ಕ್ಲಪ್ತಕಾಲದಲ್ಲಿ ಬಂದೇ

ಬರುವುವು. ಋತುವಿನ ಮೊದಲ ಬಾತುಗಳಿಗೆ ನಮ್ಮ ತಾಯಿ ಗೋಧಿ, ಧಾನ್ಯ ತಿನಿಸುವುದು ರೂಢಿಯಾಗಿತ್ತು. ಆದರೆ ಹಾಗೆ ತಿನಿಸಬೇಕಾದರೆ ಆಕೆ ರಾತ್ರಿಯಾಗುವ ತನಕ ಕಾಯಬೇಕು. ತಂದೆಗೆ ಒಳ್ಳೆಯ ಧಾನ್ಯವನ್ನು ಮೃಗಪಕ್ಷಿಗಳಿಗೆ ಉಣಿಸುವುದರಲ್ಲಿ ಅರ್ಥ ತೋರುತ್ತಿರ ಲಿಲ್ಲವಾದುದರಿಂದ ಆಕೆ ಧಾನ್ಯವನ್ನು ಪೊದರುಗಳಿಂದ ಮರೆಯಾದ ದೂರದ ದಡಕ್ಕೊಯ್ದು ಇರಿಸುತ್ತಿದ್ದಳು. ಮುಂಜಾವಿನ ನಸುಕಿನಲ್ಲಿ ಬಾತುಗಳು ಅದನ್ನು ತಿಂದು ಮುಗಿಸುತ್ತಿದ್ದುದರಿಂದ ತಂದೆಗೆ ಈ ವಿಷಯವು ತಿಳಿಯುತ್ತಿರಲಿಲ್ಲ. ಹೀಗಾಗಿ ಬಾತುಗಳು ಉತ್ತರಕ್ಕೆ ಪಯಣಿಸುವಾಗಲೂ, ದಕ್ಷಿಣಕ್ಕೆ ಪಯಣಿಸುವಾಗಲೂ ನಮ್ಮ ಹಳ್ಳಿ ದಲ್ಲಿ ನಿಂತು ಹೋಗುವುದು ಪಾಠವಾಯಿತು.'

ಕರ್ರಗಿನ ತರುಣನು ಆಕಳಿಕೆ ತೆಗೆದು, 'ಮನೆಯ ನೆನಪಾದಾಗ ನಮ್ಮ ತಲೆಗೆ ಹೊಳೆಯುವ ವಿಷಯಗಳು ವಿಚಿತ್ರವಾಗಿರುತ್ತವೆ. ನನಗೆ ಯೋಚನೆ ಆದಾಗಲೆಲ್ಲ ನನ್ನ ಮುದುಕ ತಂದೆ ಮತ್ತು ಗ್ಯಾರೇಜಿನ ಚಿತ್ರ ನನ್ನ ಕಣ್ಣು ಮುಂದೆ ನಿಲ್ಲುವುದು' ಎಂದನು.

ಸ್ಫುರದ್ರೂಪಿಯು ಇನ್ನೊಂದು ಸಿಗರೇಟನ್ನು ಹಚ್ಚಿ, 'ನನಗೆ ನನ್ನ ತಾಯಿ, ಹೆಂಡತಿ ಮತ್ತು ಈ ಹಳ್ಳಿ ಇಷ್ಟರದೇ ಎಣಿಕೆ' ಎಂದು ನುಡಿದನು.

'ನನಗೆ ಮದುವೆಯಾಗಿಲ್ಲ. ಅಲ್ಲದೆ ಪ್ರೇಯಸಿ ಎಂಬವಳೂ ನನಗಿಲ್ಲ. ರಸಿಕನಂತೆ ಅತ್ತಿತ್ತ ಓಡಾಟ ನಡೆಸಿದರೂ ಸ್ಥಿರವಾಗಿ ನಾನು ಯಾರನ್ನೂ ನೆಚ್ಚಿಕೊಳ್ಳಲಿಲ್ಲ.'

ಭಾರಿ ಅನುಭವವುಳ್ಳ ಹಳಬರಂತೆ ಅವರು ಮಾತನಾಡುವು ದಕ್ಕಾರಂಭಿಸಿದ್ದರು.

ಬಾಂಜೋ ನುಡಿಸುವುದು ತನ್ನಂತೆ ನಿಂತುಹೋಯಿತು. ಆ ಮೇಲೆ ಉಳಿದುದು ಸುತ್ತಲ ಕಾಳವಾನ, ಹುಳಹುಪ್ಪಡಿಗಳ ಚೀರಾಟ ಮತ್ತು ಕಡಲಿನ ಅಲೆಗಳು ದಡಕ್ಕೆ ಅಪ್ಪಳಿಸುವ ಮೆಲುದನಿ—ಅಷ್ಟೆ.

'ನಿನ್ನ ಹೆಂಡತಿ ಹೇಗಿದ್ದಾಳೆ' ಎಂದು ಜಿಮ್ಮಿ ಅರೆನಿದ್ದೆಯ ದನಿ ಯಲ್ಲಿ ಕೇಳಿದನು. ಅವನಿಗೆ ಆ ವಿಷಯದಲ್ಲಿ ಅಭಿರುಚಿಯೇ ಇರಲಿಲ್ಲ

ವೆಂಬುದು ಅದರಲ್ಲಿ ಸ್ಪಷ್ಟವಾಗಿದ್ದು, ಅವನಿಗೆ ಪೂರ್ತಿ ಎಚ್ಚರವೂ ಇದ್ದಂತೆ ತೋರಲಿಲ್ಲ.

'ಇದ್ದಾಳೆ—ಸಣ್ಣಗೆ. ನಾಚಿಕೆಯೂ ಬೇಕಾದಷ್ಟಿದೆ. ನಾವು ಬಾಲ್ಯದಿಂದಲೂ ಪರಿಚಿತರು. ನಮ್ಮ ಹೊಲಕ್ಕೆ ಹತ್ತು ಮೈಲು ದೂರದಲ್ಲಿ ಅವರಿಗೆ ದೊಡ್ಡ ಹೊಲಮನೆ ಇದೆ. ಜಾಗ ಚೆನ್ನಾಗಿ ಏನೋ ಇದೆ, ಆದರೆ ನಮ್ಮಂಥ ಹಳ್ಳ ಅಲ್ಲಿರಲಿಲ್ಲ. ಈಕೆ ಚಿಕ್ಕವಳಾಗಿದ್ದಾಗ ನಮ್ಮ ಹಳ್ಳ ನೋಡಲು ಬರಬೇಕೆಂದು ಕಾಡುತಿದ್ದಳು.'

ಜಿಮ್ಮಿ ಮರುಮಾತಾಡದೆ ಸುಮ್ಮನಿದ್ದನು. ಟಾಮ್ ಮುಂದುವರಿಸಿದನು: 'ನನ್ನ ಹೆಂಡತಿ ಈಗ ಗರ್ಭಿಣಿ.'

'ಹೆರಲಿಕ್ಕೆ ಯಾವಾಗ?'

'ಸಮಯ ಪೂರ್ತಿ ತುಂಬಿದೆ ಎಂದೂ ಹೇಳಬಹುದು'.

'ಹಾಗಾದರೆ ನೀನೀಗ ಸ್ವಲ್ಪ ಗಾಬರಿಯಲ್ಲಿದ್ದೀ'.

ಟಾಮ್ ನಕ್ಕು 'ಇದರಲ್ಲಿಯೂ ನನಗೆ ಸ್ವಾರಸ್ಯವು ಕಾಣುತ್ತಿದೆ. ಈ ವರೆಗೆ ನನಗೆ ಮಕ್ಕಳಾಗಿಲ್ಲ. ಕೆಲವೊಮ್ಮೆ ಹೀಗೂ ಇದ್ದೀತೆ ಎನಿಸುತ್ತದೆ.'

ಮತ್ತೆ ಮೌನ. ಜಿಮ್ಮಿ 'ನಿನಗೆ ಗಂಡು ಹುಟ್ಟಬೇಕೆಂದು ಇಚ್ಛೆಯಲ್ಲವೆ?' ಎಂದು ಕೇಳಿದನು.

'ಗಂಡೋ ಹೆಣ್ಣೋ—ಅದರ ಯೋಚನೆ ನನಗಿಲ್ಲ. ಗಂಡಾದರೆ ಅವನೂ ನನ್ನಂತೆ ಹಳ್ಳದ ಸುತ್ತಲೂ ಆಟ—ಓಟ ಮಾಡಿಯಾನು.'

ಜಿಮ್ಮಿ ಎದ್ದು ನಿಂತು, ಆಕಳಿಸಿ ಮೈಮುರಿದು 'ನಾನು ಹೊರಟೆ' ಎಂದನು. ಟಾಮ್ 'ಸರಿ, ನಾನು ಇನ್ನೊಮ್ಮೆ ಸ್ನಾನಮಾಡಿ ಬರುತ್ತೇನೆ' ಎಂದನು ನಿದ್ದೆಗಣ್ಣಿನಲ್ಲೆಂಬಂತೆ ಜಿಮ್ಮಿ 'ನಿನಗೆ ಈ ಉಪ್ಪುನೀರಿನ ಬೇಸರವೇ ಬರದಲ್ಲಾ!' ಎಂದು ಕೇಳಿದನು. ಟಾಮ್ ಆ ಪ್ರಶ್ನೆಗೆ ನಗುವಿನಿಂದ ಉತ್ತರಿಸಿದನು. ಗೂಡಾರದ ಕಡೆಗೆ ಹೊರಳಿದ ಜಿಮ್ಮಿ 'ಶಾರ್ಕ್ ಮೀನಿನ ಬಾಯಿಗೆ ಸಿಕ್ಕಬೇಡ, ಜಾಗ್ರತೆ' ಎಂದು ಹೊರಟೇಬಿಟ್ಟನು. ಟಾಮ್ ಅಷ್ಟು ಹೊತ್ತಿಗಾಗಲೇ ಕಡಲ್ಕರೆಗೆ ಧಾವಿಸುತ್ತಿದ್ದನು. 'ನನಗೆ ಶಾರ್ಕಿನ ಹೆದರಿಕೆಯೂ ಇಲ್ಲ, ಯಾವುದರ

ಹೆದರಿಕೆಯೂ ಇಲ್ಲ." ಎಂದು ಆತ ಕೂಗಾಡಿದನು. ಜಿಮ್ಮಿ ತಿರುಗಿ ನೋಡಿದರೆ ಟಾಮ್ ಪ್ರಕಾಶದ ಮಂಡಲವನ್ನು ಸೃಷ್ಟಿಸಿಕೊಂಡು ಕಡಲನ್ನು ಪ್ರವೇಶಿಸುತ್ತಿದ್ದನು. ಈ ದೃಶ್ಯದ ಮೋಹಕತೆಗೆ ವಶನಾಗಿ ಜಿಮ್ಮಿ ಅರ್ಧಭೀತಿಯಿಂದಲೇ ನೋಡಲು ನಿಂತನೆನ್ನಬೇಕು. 'ಸಾಗರದ ದೇವತೆ ಸಾಗರವನ್ನು ಪ್ರವೇಶಿಸುವಂತಿದೆ" ಎಂದು ಆತನ ತಲೆಯಲ್ಲಿ ವಿಚಾರವೊಂದು ಮಿಂಚಿತು. ಶಿಬಿರದ ಕಡೆಗೆ ಮುಖ ತಿರುವಿ 'ಏನು ಈಗೀಗ ಇಂಥ ಹುಚ್ಚು ವಿಚಾರಗಳೇ ನನ್ನ ತಲೆಯನ್ನು ತುಂಬಿಕೊಂಡಿವೆಯಲ್ಲಾ! ಅಂತೂ ಪೂರ್ತಿ ತಲೆ ಕೆಡುವುದಕ್ಕೆ ಮೊದಲು ಗೂಡು ಸೇರಿದರೆ ಸಾಕು' ಎಂದುಕೊಂಡು ಮೆಲ್ಲನೆ ಶಿಬಿರದ ಕಡೆಗೆ ಕಾಲು ಹಾಕಿದನು.

* * * *

ರಂಜಕಮಯವಾದ ಕಡಲಿನ ಬಿಸುಪಾದ ನೀರಿನಲ್ಲಿ ಟಾಮ್ ಮೂರುಸಲ ಮಂಡಲಾಕಾರವಾಗಿ ಈಸಿ ಮೇಲಕ್ಕೆದ್ದನು. ಬೆಳ್ಳಗಿನ ಕಡಲ್ಕರೆಯ ಹರವಿನ ಆಚೆಗಿರುವ ದ್ವೀಪಸ್ತೋಮದ ಕಡೆಗೆ ದೃಷ್ಟಿ ಹರಿಯಲಾಗಿ ಆತ ನಿಂತಲ್ಲೆ ನಿಂತನು. ಆ ರಾತ್ರಿ ಆಕಾಶದಲ್ಲಿ ಚಂದ್ರನಿರಲಿಲ್ಲವಾದರೂ ಅಡಿಕೆಯ ಗೊನೆಗಳ ಆಕಾರವನ್ನು ತೋರಿಸುವಷ್ಟು ಮಟ್ಟಿನ ಬೆಳಕು ಆಕಾಶದಿಂದ ಹೊರಸೂಸುತ್ತಿತ್ತು. ಬಿಸಿಯಾದ ಮರಳಿನಲ್ಲಿ ಭದ್ರವಾಗಿ ಕಾಲೂರಿ ನಿಂತಿದ್ದ ಆತನಿಗೆ ಏನೋ ಒಂದು ಮಹಾನಂದದ ಅನುಭವವುಂಟಾಗುತಿತ್ತು. ಅದರಲ್ಲಿ ಲೀನವಾದ ಆತ ಒಬ್ಬ ವ್ಯಕ್ತಿಯಾಗಿರಲಿಲ್ಲ, ಕಡಲಕರೆಯಲ್ಲಿ ನಿಂತ ಒಬ್ಬ ಮನುಷ್ಯನಾಗಿರಲ್ಲಿಲ್ಲ. ಬದಲು ಆತ ಕೇವಲ ಒಂದು ಅಣುವಾಗಿದ್ದನು. ಕಂಗು ತೆಂಗಿನ ತೋಟಗಳನ್ನು, ವಿಶಾಲವಾಗಿ ಹರಡಿದ ಮರಳಿನ ಕಡಲ್ಕರೆಯನ್ನು, ಈ ನೆಲ, ರಂಜಕಪೂರ್ಣಜಲ, ಆಕಾಶ ಮತ್ತು ನಕ್ಷತ್ರಲೋಕವನ್ನು, ಒಳಗೊಂಡ ಬ್ರಹಾಂಡದಲ್ಲಿ ಅಂತರ್ಗತನಾದ ಒಂದು ಅಣೋರಣೀಯನಾದ ಪರಮಾಣುವಾಗಿದ್ದನು. ತನಗಿಂತಲೂ ಎಷ್ಟೋ ಮಹತ್ತರವಾದ ಒಂದು ವಿಶ್ವದ ಅಂಗವಾಗಿರುವುದರಿಂದ ಆತ ಅಣುವಾದರೂ ಅಮರನು, ನಾಶವಿಲ್ಲದವನು.

ಈ ಅನುಭವ ಅವನಲ್ಲಿ ಬಹಳ ಹೊತ್ತು ಉಳಿಯಲಿಲ್ಲ, ಹಠಾತ್ತನೆ ಅದು ಮಾಯವಾಗಿ ಅವನಿಗೆ ಮೈಮೇಲೆ ಮರಳಿ ಎಚ್ಚರ ಬಂದಂತಾಯಿತು. ತಾನು ಬಲಶಾಲಿಯೂ ತರುಣನೂ ಆದೊಬ್ಬ ಪುರುಷನೆಂದೂ, ಇನ್ನೇನು ಕೆಲವು ದಿನಗಳಲ್ಲಿ ಪ್ರಾಯಃ ಒಂದು ಮಗುವಿನ ತಂದೆಯಾಗತಕ್ಕವನೆಂದೂ ಅವನಿಗೆ ಅನಿಸಿತು. ಆ ಮಗುವು ಈ ವಿಶ್ವದ ಒಂದು ಭಾಗವೇ ಅಲ್ಲವೆ? ತಂದೆಯಾದ ತಾನು ಗತಿಸಿ ಹೋದ ಮೇಲೂ ಚೈತನ್ಯಪೂರ್ಣವಾಗಿ ಬದುಕುವ ಒಂದು ಘಟಕವಲ್ಲವೆ? ಎಂದಾತ ಯೋಚಿಸಿದನು ಮೃತ್ಯುವೆಂಬ ಚಿರಸತ್ಯವು ಟಾಮ್‌ಗೆ ಯಾವಾಗಲೂ ಅತ್ಯಂತ ಸಮೀಪದಲ್ಲಿರುವ ವಿಷಯವಿರಬಹುದಾದರೂ ಮಹತ್ತಾದ ಈ ಬ್ರಹ್ಮಾಂಡದ ಸತ್ಯಕ್ಕೆ ಅದು ಸರಿಸಾಟಿಯಾಗಲಾರದು. ಅವನಿಗೇಕೋ ಒಮ್ಮೆಲೆ ಅಳಬೇಕೆಂದೆನಿಸಿತು. ವೈಯಕ್ತಿಕವಾದ ದುಃಖವಲ್ಲ ಅದು. ವ್ಯಾಪಕವೂ, ಅಜ್ಞೇಯವೂ ಆದ ದುಃಖ. ಅಖಿಲ ಮನುಷ್ಯಜಾತಿಯ ಕ್ರೋಡೀಕೃತ ದುಃಖವಿತ್ತು ಅವನ ಅಳುವಿನ ಮೂಲದಲ್ಲಿ.

ಒಂದು ಏಡಿ ಅವನ ಕಾಲಿನ ಮೇಲಿಂದ ಹರಿದು ಹೋದಾಗ ಅವನು ಹೌಹಾರಿ ಮತ್ತೆ ವಾಸ್ತವ ಪ್ರಪಂಚಕ್ಕಿಳಿದನು. ಏಡಿಯನ್ನು ಕೊಲ್ಲುವುದಕ್ಕಾಗಲಿ, ಹಿಡಿಯುವುದಕ್ಕಾಗಲಿ ಆತ ಮುಂದಾಗಲಿಲ್ಲ. ಜಿಮ್ಮಿ ಮತ್ತು ತಾನು ಕೂತ ಕಡೆಗೆ ಅದು ಅಸಹ್ಯವಾದ ಭಂಗಿಯಲ್ಲಿ ಹರಿಯುವುದನ್ನು ಆತ ನೋಡಿದನು. ಏಡಿಯ ವಿಚಿತ್ರವಾದ ನಡೆಯಲ್ಲಿ ಈ ಪ್ರಪಂಚದ ಜನನವಾಗುವುದಕ್ಕಿಂತ ಪೂರ್ವಕಾಲದ, ಮನುಷ್ಯನು ಉದಯವಾಗುವುದಕ್ಕೆ ತೀರ ಹಿಂದಿನ ಯಾವುದೋ ಪ್ರಾಕ್ತನ, ಅಸಹ್ಯ ಮತ್ತು ವಿನೋದಪೂರ್ಣ ಸತ್ಯ ಹುದುಗಿದಂತಿಲ್ಲವೆ? ಎಂದು ಯೋಚಿಸಿದಾಗ ಆತನಿಗೆ ನಗು ಬಂದಿತು.

ಅಂತೂ ಪೂರ್ತಿ ಎಚ್ಚರದಿಂದಲೆ ಆತ ಕರಾವಳಿಯಿಂದ ಶಿಬಿರದ ಕಡೆಗೆ ತೆರಳಿದನೆನ್ನಬೇಕು. ಅಲ್ಲಿ ಎಲ್ಲಿನೋಡಿದರೂ ಅಂಧಕಾರ, ಮೌನ. ತರುಣರೆಲ್ಲ ನಿದ್ದೆ ಹೋಗಿದ್ದರು.

ಟಾಮ್‌ಗೆ ಕೂಡಲೆ ನಿದ್ದೆ ಬರಲಿಲ್ಲ. ಕಡಲಕರೆಯ ಅನುಪಮ ಅನುಭವದ ಉತ್ತೇಜನೆ ಒಂದು ಕಡೆ, ಮನೆಯ ಯೋಚನೆ ಇನ್ನೊಂದು

ಕಡೆ. ಕತ್ತಲಲ್ಲಿ ಸೊಳ್ಳೆಪರದೆಯ ಒಳಗೆ ನಿದ್ರಿಸುತ್ತಿದ್ದ ಅವನಿಗೆ ಮನೆಯ ಹಳ್ಳ, ತಾಯಿ ಮತ್ತು ಸೆಲ್ಲಿ ಕಣ್ಣಮುಂದೆ ನಿಂತಂತಾಯಿತು. ಹಳ್ಳದ ಯೋಚನೆ ಬಂದರೆ ಸಾಕು ಅದರೊಡನೆ ಇವರಿಬ್ಬರದೂ ಯೋಚನೆ ಹುಟ್ಟುವುದು. ಹಳ್ಳದ ಮೇಲೆ ಈಸುವ ಬಾತುಗಳಿಗೆ ಅವರು ಧಾನ್ಯ ಚೆಲ್ಲುತ್ತಿದ್ದಾರೆ; ಸೆಲ್ಲಿ ಹಳ್ಳದ ಅಂಚಿನಲ್ಲಿ ಬೆಳೆದ ಕಾಡುಪೊದೆಗಳನ್ನು ಕತ್ತರಿಸುತ್ತಿದ್ದಾಳೆ; ಇನ್ನೊಮ್ಮೆ ನೋಡಿದರೆ ಹಳ್ಳದ ಬಾತು ಕೋಳಿಗಳನ್ನು ಭೆಟ್ಟಿಯಾಗಲು ಬಂದ ಕಾಡುಬಾತುಗಳ ಗುಂಪನ್ನು ಅವರು ವೀಕ್ಷಿಸುತ್ತಿದ್ದಾರೆ. ಸೆಲ್ಲಿ ಮತ್ತು ಟಾಮ್ ಚಿಕ್ಕವರಾಗಿದ್ದಾಗಿನ ದೃಶ್ಯ— ಹಳ್ಳದ ಅಂಚಿನ ಕೆಸರು ನೀರಿನಲ್ಲಿ ದೋಣಿಗಳನ್ನು ತೇಲಿಸುವುದು ದೋಣಿಗಳನ್ನು ಕಟ್ಟಲೆಂದು ರೇವುಗಳನ್ನು ಕೆಸರುಮಣ್ಣಿನಲ್ಲಿ ವಿರಚಿಸುವುದ.— ಇದೇ ಅವರ ಆಟ. ಕೆಸರು ನೀರಿನ ಆ ಹಳ್ಳವೇ ಆಗ ಅವರ ಮಹಾಸಾಗರವಾಗಿತ್ತು. ಆ ಪುಟ್ಟ ಪ್ರಪಂಚಕ್ಕೆ ಅವನೇ ದೇವರು, ಆಕೆ ದೇವಿ. ತನ್ನ ಮತ್ತು ಸೆಲ್ಲಿಯ ಜೀವನದ ಒಂದು ಅಂಗವಾದ ಆ ಹಳ್ಳದ ಬುಡದಲ್ಲಿ ನಿರೀಹವಾಗಿ ಆಟವಾಡುತ್ತ ಆಡುತ್ತ ಒಂದು ದಿನ ಸರಳಸ್ನೇಹಕ್ಕೂ ಗಂಡುಹೆಣ್ಣಿನ ಒಲವಿಗೂ ವ್ಯತ್ಯಾಸವೇನೆಂಬುದನ್ನು ಅವನ ಮೈ ಅವನಿಗೆ ಹೇಳಿ ಕೊಟ್ಟಿತ್ತು. ಆ ಪ್ರಥಮ ಪ್ರೇಮವು ಮೊಳೆತಾಗ ಅದರಲ್ಲಿ ಹಳ್ಳಕ್ಕೆ ಒಂದು ಸ್ಥಾನವಿತ್ತು. ಸೆಲ್ಲಿಯ ಕೈಗಳನ್ನು ಟಾಮ್ ಹೊಸಬಗೆಯಲ್ಲಿ ಸ್ಪರ್ಶ ಮಾಡಿದಾಗ ಹಳ್ಳವು ಸಾಕ್ಷಿಯಾಗಿರಲಿಲ್ಲವೆ? ಹಳ್ಳದ ಹಕ್ಕಿ ಗಳಂತೆ ಬಾಳುವೆಯೆಲ್ಲ ಗೆಳೆಯ ಗೆಳತಿಯರಾಗಿ ಬಾಳುವ ಹಂಬಲದಿಂದ ಅವರು ಒಬ್ಬರನ್ನೊಬ್ಬರು ಮೊದಲ ಸಲ ಚುಂಬಿಸಿದಾಗ ಹಳ್ಳವು ಸಂತಸದ ಹೊನಲಾಗಿತ್ತು. 'ನಾನು ವೈಮಾನಿಕ ತರಬೇತಿ ಶಾಲೆಗೆ ಹೋಗುತ್ತೇನೆ. ಹೋಗುವುದರ ಮೊದಲು ಮದುವೆಯಾಗೋಣವೆ?' ಎಂದಾತ ಕೇಳಿದುದೂ ಆ ಹಳ್ಳದ ದಂಡೆಯಲ್ಲೇ.

ಮದುವೆಯಾದ ಕೂಡಲೆ ಪ್ರಿಯತಮೆಯನ್ನು ಅಗಲಿ ಹೋಗುವ ಸನ್ನಿವೇಶವಿದ್ದೂ ತಾನು ಮದುವೆಗೋಸ್ಕರ ಏತಕ್ಕೆ ಒತ್ತಾಯಿಸಿದೆನೆಂದು ಅವನಿಗರಿಯಲಿಲ್ಲ. ಅವನಿಗಿಂತಲೂ ಬಲವಂತವಾದ, ಅವರಿಬ್ಬರ

ನಡುವಣ ಪ್ರೇಮಕ್ಕಿಂತಲೂ ಮಿಗಿಲಾದ ಯಾವುದೋ ಒಂದು ಶಕ್ತಿ ಅವನ ಬಾಯಿಂದ ಈ ಮಾತನ್ನು ನುಡಿಸಿತೆ? ಇರಬಹುದು. ಇದೀಗ ಕರಾವಳಿಯಲ್ಲಿ ಉಂಟಾದ ಆನಂದಾನುಭವ, ಅಣುವಿನ ಮಹತ್ತ್ವಕೆಯ ಪ್ರಜ್ಞೆಯಿಂದುಂಟಾಗುವ ಅನುಭವಕ್ಕೂ ಈ ಶಕ್ತಿಗೂ ಏನೋ ಹೊಂದಿಕೆ ಇರಬೇಕು. ನಮಗಿಂತ ದೊಡ್ಡದಾದ ಯಾವುದೋ ಕಾರಣಕ್ಕಾಗಿ ಪ್ರವರ್ತಿಸಬೇಕಾದ ಈ ಸನ್ನಿವೇಶದಲ್ಲಿ ಆಲಸ್ಯಕ್ಕೆ ಅವಕಾಶವಿರಲಿಲ್ಲ; ಬದಲು ದವನಿಸಲು ಸಾಧ್ಯವಾಗದಂಥ ಕಡ್ಡಾಯವಿತ್ತು, ಆಜ್ಞೆ ಇತ್ತು. ಅಮೇರಿಕದಲ್ಲಿ ಎಲ್ಲಾ ಕಡೆ ತರುಣ--ತರುಣಿಯರು ಬೇಗ ಬೇಗನೆ ವಿವಾಹಿತರಾಗುವುದಕ್ಕೆ ಇದೇ ಕಾರಣವಿರಬೇಕು. ಸಾಮಾನ್ಯವಾಗಿ ಮದುವೆಯಾಗಿ ಎಷ್ಟೋ ಕಾಲದ ಅನಂತರ ಮಕ್ಕಳಾಗುವವರಿಗೂ, ಈಗ ಮದುವೆಯ ಬೆನ್ನ ಹಿಂದೆಯೇ ಮಕ್ಕಳಾಗುವುದಕ್ಕೂ ಇದೇ ಕಾರಣವೋ ಏನೋ.

ಇಷ್ಟೇ ಅಲ್ಲ, ಇನ್ನು ಏನೇನೋ ವಿಷಯ ತಲೆಯಲ್ಲಿ ಸುಳಿದುವು. ಆ ಪೈಕಿ ಜಿಮ್ಮಿಯ ಜತೆ ಅಡಿಕೆ ಮರಗಳ ನಡುವೆ ಕೂತಿದ್ದಾಗ ಆಡಿದ ಮಾತೂ ಜ್ಞಾಪಕಕ್ಕೆ ಬಂದುವು. ಆಡಿದ ಮಾತಿಗಿಂತಲೂ ಹೆಚ್ಚಾಗಿ ಅವರು ಆಡದ ಮಾತು ಹೆಚ್ಚು ಅರ್ಥಪೂರ್ಣವಾಗಿರಬೇಕಲ್ಲವೆ? ಮನುಷ್ಯರು ತಮ್ಮ ಹೃದಯವನ್ನು ಬಿಚ್ಚಿ ಮಾತನಾಡದಂತೆ ಅವರನ್ನು ತಡೆಯುವ ಶಕ್ತಿ ಯಾವುದಿರಬಹುದು? ರಂಜಕಪೂರ್ಣವಾದ ಸಮುದ್ರ ಜಲದ ದಂಡೆಯಲ್ಲಿ ನಿಂತಾಗ ಅವನಿಗೆ ಉಂಟಾದ ಅನುಭವವು ಅನಿರ್ವಚನೀಯವಷ್ಟೆ. ಅಂತೆಯೆ ಹಳ್ಳದ ವಿಷಯ ಅವನಿಗಿದ್ದ ಅಭಿಮಾನ, ಒಲುಮೆ ಕೂಡ ಅನಿರ್ವಚನೀಯ. ಹಳ್ಳವು ತನ್ನ ಜೀವನವನ್ನು ವ್ಯಾಪಿಸಿಕೊಂಡಿರುವ ಬಗೆಯನ್ನು ನೋಡಿದರೆ ಅವನು ಆ ಹಳ್ಳದ ಒಡಲಲ್ಲಿಯೇ ಜನಿಸಿದಂತೆ ಅವನಿಗೆ ಭಾಸವಾಗುವುದು. ಆದರೆ ಇದನ್ನು ಇನ್ನೊಬ್ಬರಿಗೆ ಹೇಳಿ ತೋರಿಸಲು ಸಾಧ್ಯವೆ?

ಜಿಮ್ಮಿಯೂ ಅವನೂ ಮಾತನಾಡಿಕೊಂಡುದು ನಿಶ್ಶಕ್ತವಾದ, ಅಸಂಪೂರ್ಣ ಶಬ್ದಗಳಲ್ಲಿ ತಾನೆ? ಜಿಮ್ಮಿ ಧೈರ್ಯಶಾಲಿ, ಬಲಶಾಲಿ ನಿಜ;

ಆದರೆ ಹೀಗಿದ್ದು ಅಥವಾ ಹೀಗಿರುವುದರಿಂದಲೆಯೋ ಏನೋ ಅವನಿಗೆ ಟಾಮ್‌ಗಿಂತಲೂ ಹೆಚ್ಚು ಲಜ್ಜೆ, ಅಳುಕು. ಲಾಂಗಬೀಚು, ತಂದೆ, ಗ್ಯಾರೇಜು ಮುಂತಾದ ವಿಷಯ ಪ್ರಸ್ತಾಪ ಮಾಡಿದ್ದು ನಿಜವಾದರೂ ಆವನು ಅವರ ಕುರಿತು ಹೇಳಬೇಕಾದ್ದನ್ನು ಹೇಳಿರಲಾರನೆಂಬುದು ಖಂಡಿತ. ಅಂತೂ ಹೇಳಿರುವ ವಿಷಯಗಳಿಗಿಂತ ಹೇಳಲಾಗದ ವಿಷಯಗಳೇ ಮುಖ್ಯವಾದುವು; ಅದಕ್ಕೂ ಹೆಚ್ಚಾಗಿ ಅವರ ಮನಸ್ಸಿನಲ್ಲಿ ಅಂಕುರಿಸಿ ಬಾಯಲ್ಲಿ ಹೊರಬೀಳದ ವಿಷಯಗಳೇ ಅತಿ ಮುಖ್ಯವೆನ್ನಬೇಕು. ತಾರುಣ್ಯ ಪ್ರಿಯವಾದುದು, ವಿಮಾನದಲ್ಲಿ ಹಾರಾಟ ನಡೆಸುವುದೆಂದರೆ ಎಷ್ಟು ಗಮ್ಮತ್ತು, ಜಿಮ್ಮಿಯಂಥ ಬೀದಿಯ ಕಾಮಣ್ಣನಿಗೂ ಪ್ರೀತಿಸುವುದೆಂದರೆ ಇಷ್ಟವೆ ಅಲ್ಲವೆ, ಆ ತೋಟದಲ್ಲಿ ವಿರಮಿಸುವಾಗ ಪಕ್ಕದಲ್ಲಿ ಮನದನ್ನೆಯರೂ ಇರುತ್ತಿದ್ದರೆ, ಸುಖೋಷ್ಣವಾದ, ನಕ್ಷತ್ರಮಯವಾದ ಆ ಶಾಂತರಾತ್ರಿಯಲ್ಲಿ—ಆತ, ಆತನ ಜೀವನದ ಸಂಗಾತಿ ಸೆಲ್ಲಿ, ಜಿಮ್ಮಿ ಮತ್ತು ಯಾರೇ ಆದರೊಬ್ಬಳು ಮಾಟಗಾತಿ—ಇಷ್ಟೇ ಮಂದಿ ಇದ್ದರೋ—ಹೌದು, ಶಬ್ದಗಳಿಗೆ ಸಿಲುಕದ ವಾಸ್ತವ ಈಪ್ಸೆಗಳೆಂದರೆ ಇವೇ ತಾನೇ.

ಯುದ್ಧದ ಅನುಭವವಿಲ್ಲದವರಿಗೆ ಈ ರೀತಿ ಒಳಗುದಿಯ ಅನಿಸಿಕೆಗಳಿರಬಹುದೇ ಇಲ್ಲವೇ ಎಂಬುದು ಟಾಮ್‌ಗೆ ಒಂದು ಸಮಸ್ಯೆ ಎನಿಸಿತು. ನಾಗರಿಕ ಜೀವನದ ರಂಕಲುರಾಟೆಯಲ್ಲಿ ಸಿಲುಕಿ ಮನುಷ್ಯಸಹಜವಾದ ರಾಗ-ಭಾವಗಳ ಮೊನೆಯೇ ಮೊಂಡಾದ ಜನರಲ್ಲಿ ಇಂಥ ಭಾವನೆಗಳಿಗೆ ಆಸ್ಪದವಾದರೂ ಎಲ್ಲಿದೆ? ವೈಮಾನಿಕರಿಗೆ, ಯುದ್ಧಮಗ್ನರಿಗೆ, ಮೃತ್ಯುವಿನ ಹೆಬ್ಬಾಗಿಲನ್ನು ಬಡಿಯುತ್ತಿರುವವರಿಗೆ ಮಾತ್ರವೇ ಇಂಥ ಭಾವನೆಗಳು ಮೀಸಲಾಗಿರಬಹುದೊ? ಶಾಂತಿಯ ಬೇಸರುಕಾಲದಲ್ಲಿ ಮದುವೆಯಾಗಿ ಪ್ರೀತಿಯ ಹೆಂಡತಿ ಮಗ್ಗಲಕೋಣೆಯಲ್ಲಿ ಮಗುವನ್ನು ಹೆರುವುದು ಹೇಗಿರುತ್ತದೆ? ಬದಲು ಅತಿದೂರದಲ್ಲಿ, ಪ್ರಪಂಚದ ಯಾವುದೋ ಮೂಲೆಯಲ್ಲಿರುವ ಕೋಣೆಯಲ್ಲಿ ಪ್ರಸವಿಸುವುದು ಹೇಗಿರುತ್ತದೆ? ಈ ಎರಡಕ್ಕಿರುವ ಅಂತರವನ್ನು ತಿಳಿಯಲು ಪ್ರಾಯಃ ಆತನ ವಯಸ್ಸು ಸಾಲದೇನೋ.

ಇದೆಲ್ಲ ಒಳ್ಳೆಯದಕ್ಕೆ ಇರಬಾರದೇಕೆ? ತಾರುಣ್ಯವೂ ಆರೋಗ್ಯವೂ ಇದ್ದು ವೈಮಾನಿಕ ದಳದಲ್ಲಿರುವುದಕ್ಕಿಂತ ಹೆಚ್ಚಿನದು ಇನ್ನೇನಿದೆ? ಈ ಕಠಿನ ಪರೀಕ್ಷೆಯಲ್ಲಿ ಪಳಗಿದರೆ ಮನೆಯಲ್ಲಿ ಕೂತುಣ್ಣುವವರಿಗೆ ಅರಿಯಲಾಗದ ಕೆಲವೊಂದು ವಿಷಯಗಳು ನಮ್ಮ ಪ್ರಜ್ಞೆಯನ್ನು ಕುದುರಿಸಲಾರವೆ? ಈ ಆರು ತಿಂಗಳು ನಡೆದ ವಿದ್ಯಮಾನಗಳನ್ನು ನೋಡಿದರೆ ಈ ಅಕಾಸ್ಮಾತ್ ಪ್ರಸಂಗದಿಂದ ಭವಿಷ್ಯ ಜೀವನದ ಸಂಪನ್ನತೆ, ವೈಶಾಲ್ಯ ಎಷ್ಟು ಅಭಿವೃದ್ಧಿಗೊಂಡಿದೆ ಎಂಬುದು ಸ್ಪಷ್ಟವಾಗಬಹುದು.

ಇಲ್ಲ, ನಿದ್ದೆ ಬರುವುದೇ ಇಲ್ಲ. ಟಾಮ್ ತಾವು ಪರಸ್ಪರ ಆಡಿಕೊಳ್ಳದ ವಿಷಯವನ್ನೇ ಮೇಲಿಂದ ಮೇಲೆ ಯೋಚಿಸಹತ್ತಿದನು. ಜಿಮ್ಮಿ ತಾಯಿಯ ಪ್ರಸ್ತಾಪವನ್ನೇಕೆ ತೆಗೆಯಲಿಲ್ಲ? ಅವನು ಚಿಕ್ಕವನಾಗಿದ್ದಾಗಲೇ ಪಾಪ ತೀರಿಕೊಂಡಳೇನೋ ಅಥವಾ ಯಾರಾದರೂ ಇನ್ನೊಬ್ಬನ ಬೆನ್ನಹಿಂದೆ ಓಡಿಹೋದಳೋ-ಗಂಡನನ್ನು ಬಿಟ್ಟು? ಟಾಮ್ ತನ್ನ ತಂದೆಯ ವಿಚಾರ ಜಿಮ್ಮಿಗೆ ವಿಶದವಾಗಿ ಯಾವುದನ್ನೂ ಹೇಳಿರಲಿಲ್ಲ, ಹೇಳುವಂಥ ವಿಷಯವೂ ಇರಲಿಲ್ಲ. ತನ್ನ ತಂದೆ ಕಾಸು ಕಾಸಿಗೆ ಗಂಟುಹಾಕುವ ಜಿಪುಣಾಗ್ರೇಸರ, ಹೆಚ್ಚುಕಡಮೆ ಮನುಷ್ಯತ್ವವೇ ಕುಂದಿರುವ ನಿರ್ಘೃಣನೆನ್ನಲೆ? ಆ ತಂದೆಗೆ ತನ್ನ ಮಗನೂ ಹೆಂಡತಿಯೂ ಹೊಲದ ಹಳ್ಳವನ್ನು ಅಷ್ಟೇಕೆ ಮನಸ್ಸಿಗೆ ಹಚ್ಚಿಕೊಂಡಿರುವರೆಂಬುದು ತಿಳಿಯದ ವಿಷಯವಾಗಿತ್ತು. ಹಳ್ಳವನ್ನು ಬತ್ತಿಸಿದರೆ ಅಷ್ಟು ಜಾಗದಲ್ಲಿ ಹೊಸದಾಗಿ ಬಿತ್ತನೆಮಾಡಿ ಹೆಚ್ಚು ಗೋಧಿ-ಜೋಳ ಬೆಳೆಯಬಹುದೆಂದು ಅವನ ಯೋಚನೆ. ಇದನ್ನೆಲ್ಲ ಜಿಮ್ಮಿಗೆ ಏತಕ್ಕೆ ಹೇಳಬೇಕು?

ಸ್ವಲ್ಪ ಹೊತ್ತಿನಲ್ಲಿ ಕೀಟಗಳ ಚೀರಾಟದಿಂದಾಗಿ ಆತನಿಗೆ ಅಲ್ಲೇ ಮಂಪರು ಹತ್ತಿತು. ಅವನು ಮಗ್ಗಲು ಹೊರಳಿಸಿ ಕೂಡಲೇ ನಿದ್ದೆ ಹೋದನು.

*   *   *

ಹಳ್ಳ ಎಂದಿನಿಂದಲೋ ಇದ್ದ ಜಾಗದಲ್ಲಿ ಇರುತಿತ್ತು. ಅನಂತವಾಗಿ ಹರಡಿದ ಪ್ರೇಯರಿ ಹೊಲಗಳ ಚಪ್ಪಟೆ ಭೂಮಿಯ ನಡುವೆ ಇದ್ದ ಈ ತಗ್ಗಿನಲ್ಲಿ ಸುತ್ತಲಿನ ನೀರು ಸಂಗ್ರಹವಾಗಿ ಹಳ್ಳದ ರೂಪವನ್ನು ತಳೆದು ಯುಗ ಯುಗಾಂತರಗಳಿಂದ ಅಲ್ಲಿ ನೆಲೆಯಾಗಿದ್ದಿತು. ಬಿಳಿ ಜನರು ಆ ಪ್ರದೇಶವನ್ನು ಆಕ್ರಮಿಸುವುದಕ್ಕೂ ಮೊದಲು ಅದು ನೀರು ಕುಡಿಯಲು ಬರುವ ಕಾಡು ಕೋಣಗಳ ಆಡುಂಬೊಲವಾಗಿರಬೇಕು. ರೆಡ್ ಇಂಡಿಯನ ಜನರು ತಮ್ಮ ಗೂಡಾರಗಳನ್ನು ಕಟ್ಟಿದುದೂ, ಪಡುವಣಕ್ಕೆ ಅಭಿಮುಖವಾಗಿ ಪಯಣಿಸುವ ವಲಸೆಗಾರರ ವಾಹನಗಳು ದನಕರು ಕುದುರೆಗಳಿಗೆ ನೀರುಣಿಸಲು ತಂಗಿದುದೂ ಇಲ್ಲೇ ಇರಬೇಕು. ಯಾರೂ ಬಹಳಕಾಲ ಅಲ್ಲಿ ನೆಲೆಯೂರಲಿಲ್ಲ. ಅಬ್ನೇರ್ ವೇಡ್ ಎಂಬಾತ ನಾಲ್ಕು ಎಕರೆ ಜಮೀನನ್ನು ತನ್ನದೆಂದು ಸ್ಥಾಪಿಸಿ ಮಣ್ಣಿನ ಮನೆಯನ್ನು ಕಟ್ಟಿ ತನ್ನ ಕುಟುಂಬದೊಡನೆ ಅಲ್ಲಿ ಬಾಳಲು ತೊಡಗುವ ವರೆಗೆ ಅದು ಎಲ್ಲರಿಗೂ ಹಾದಿಯ ಹಳ್ಳವಾಗಿತ್ತು, ಪಡುವಣ ಪಯಣದ ಒಂದು ಮಜಲಾಗಿತ್ತು.

ಭೂಮಿಯ ಫಲವತ್ತತೆಗಿಂತಲೂ ಹೆಚ್ಚಾಗಿ ಈ ಹಳ್ಳವು ಅಬ್ನೇರನನ್ನು ಆ ಜಮೀನಿಗೆ ಆಕರ್ಷಿಸಿತೆಂದು ಹೇಳಬೇಕು. ಅಲ್ಲಿಂದ ಎರಡು ದಿನಗಳ ವರೆಗೆ ಯಾವ ದಿಕ್ಕಿಗೆ ನಡೆದರೂ ಬೇರೆ ಇಂಥ ನೀರಿನ ನೆಲೆ ಕಾಣಲು ಸಾಧ್ಯವಿರಲಿಲ್ಲ. ಅಲ್ಲದೆ ಹಳ್ಳದ ಸುತ್ತಲೂ ದೊಡ್ಡ ದೊಡ್ಡ ಕಾರ್ಪಾಸ ವೃಕ್ಷದ ಒಂದು ಹಾಡಿಯೇ ಬೆಳೆದಿತ್ತು; ಅಂಚಿನಲ್ಲಿ ಗಿಡಗಂಟೆಗಳ ಪೊದೆಗಳೂ ಹೇರಳವಾಗಿದ್ದುವು. ಅವುಗಳ ನಡುವೆ ಹರಿದು ಹೋಗುವ ಕಾಡು ಕೋಣದ ನಡೆಯನ್ನು ಬಿಟ್ಟು ಉಳಿದ ಕಡೆ ದಟ್ಟವಾಗಿ ಹಬ್ಬಿಕೊಂಡಿದ್ದ ಪೊದೆಗಳನ್ನು ಕಂಡರೆ ಯಾರಿಗೂ ಬಾಯಿ ನೀರೂರಬೇಕು. ಏಕರೂಪವಾದ ಆ ಹುಲ್ಲುಗಾವಲೆಂಬ ಮರುಭೂಮಿಗೆ ಈ ಹಳ್ಳವೇ ಒಂದು 'ಓಯೆಸಿಸ್ಸು'.

ಅಬ್ನೇರ್ ಹೊಲ ಮನೆಯನ್ನು ತನ್ನ ಮಗನಿಗೆ ಬಿಟ್ಟು ಕಾಲವಾದನು. ಆ ಮಗನು ಅದನ್ನು ತನ್ನೊಬ್ಬಳು ಮಗಳಿಗೆ ಕೊಟ್ಟು ಗತಿಸಿದನು. ಆಕೆ ಹೊಸದಾಗಿ ಅಮೇರಿಕಾಕ್ಕೆ ವಲಸೆಬಂದ ಒಬ್ಬ ಸ್ವೀಡ ತರು

ಣವನ್ನು ಮದುವೆಯಾದಳು. ಸ್ವೀಡನ ಮರಣಕ್ಕೆ ಮೊದಲು ಹುಟ್ಟಿದ ಮಗನೇ ನಮ್ಮ ಟಾಮ್ ಪೀಟರ್ಸನ್ನನ ತಂದೆ. ಅಷ್ಟು ಹೊತ್ತಿಗೆ ಮಣ್ಣಿನ ಮನೆಯ ಸ್ಥಳದಲ್ಲಿ ಮರದ ಮನೆ ಬಂದು ಅದೂ ಹೋಗಿ ಅದರ ಸ್ಥಳದಲ್ಲಿ ಟಾಮ್ ಹುಟ್ಟಿ, ಬೆಳೆದು, ಸೆಲ್ಲಿಯ ಜತೆಗೆ ಚಲ್ಲಾಟವಾಡಿದ ದೊಡ್ಡ ಮನೆ ನಿಂತಿತ್ತು. ಜಮೀನು ಒಳ್ಳೆಯ ಸ್ಥಿತಿಯಲ್ಲೇ ಇತ್ತು. ಮೂರು ವರ್ಷಗಳಲ್ಲಿ ಎರಡು ವರ್ಷ ಒಳ್ಳೆಯ ಫಸಲು ಬರುವುದು. ಟಾಮನ ತಂದೆಯ ಹತ್ತಿರ ಬೇಕಾದಷ್ಟು ಜಾನುವಾರುಗಳಿದ್ದು ಆತ ಹೇರಳ ಗೋಧಿ ಬೆಳೆ ಎತ್ತುತ್ತಿದ್ದನು. ಹೊಲದಲ್ಲಿ ಬಾವಿಗಳನ್ನು ಯಾಂತ್ರಿಕವಾಗಿ ತೋಡಿಸಿದ ಮೇಲೆ ಅವನಿಗೆ ಹಳ್ಳದ ಅಗತ್ಯವೇ ಇರಲಿಲ್ಲ.

ಅವನ ಹೆಂಡತಿ, ಅಂದರೆ ಟಾಮನ ತಾಯಿ ಈ ಸಪಾಟು ಪ್ರೇಯರಿ ಪ್ರಾಂತದವಳಲ್ಲ. ಟಾಮನ ತಂದೆ ಏಕ್ಸೆಲ್ ಪಿಟರ್ಸನ್ ಅಯೋವಾ ರಾಜ್ಯದ ಸಂತೆಗೆ ಆಕಳು ತರಲು ಹೋದಾಗ ಈಕೆ ಅವನ ಕಣ್ಣಿಗೆ ಬಿದ್ದಳು. ಆತನ ರೂಪವು ಸುಂದರವಾಗಿತ್ತು. ನಿಲವು ನೇರವಾಗಿತ್ತು. ಇಪ್ಪತ್ತೆಂಟರ ವಯಸ್ಸಿನ ತರುಣ ಏಕ್ಸೆಲನ ಕಣ್ಣುಗಳು ನೀಲವಾಗಿಯೂ, ಬಾಯಿ-ದವಡೆ ಗಂಭೀರವಾಗಿಯೂ ಎದ್ದು ತೋರುತ್ತಿದ್ದುವಾಗಿ ಅಯೋವಾ ರಾಜ್ಯದ ಜಾನುವಾರು ಪೋಷಕರಲ್ಲಿ ಅಗ್ರಗಣ್ಯನೆಂದು ಪ್ರಖ್ಯಾತನಾದ ರೈತನೊಬ್ಬನ ನಿಜಸುತೆ ಆ್ಯನಿ ವಾಲೆಸ್ ಆತನಿಗೆ ಮನಸೋತಳು. ಆ ಮೇಲೆ ಏಕ್ಸೆಲ್ ಆರೆಂಟು ಸಲ ಆಕೆಯ ಮನ ಒಲಿಸಲು ತೆಂಕಲಿನ ಆ ರಾಜ್ಯಕ್ಕೆ ಪಯಣ ಬೆಳಸಿ ಕಟ್ಟಕೊನೆಗೆ ಮದುವೆಯಾಗಿ ಹಳ್ಳದ ಬುಡದ ಸಂಪದ್ಭರಿತವಾದ ಬೋಳು ಗೋಧಿಯ ಹೊಲದ ಊರಿಗೆ ಕರೆದು ಕೊಂಡು ಬಂದನು. ಮೊದಲ ವರ್ಷವೇ ಆಕೆ ಅವನಿಗೆ ಒಂದು ಹೆಣ್ಣು ಮಗುವನ್ನು ಕೊಟ್ಟಳು. ಎರಡನೆಯ ವರ್ಷ ಹುಟ್ಟಿದ ಗಂಡು ಕೂಸು ಥಾಮಸ್ ಎಂದು ಆಕೆಯ ತಂದೆಯ ಹೆಸರನ್ನು ಪಡೆದು 'ಟಾಮ್' ಎನಿಸಿತು. ಅಲ್ಲಿಗೆ ಡಾಕ್ಟರರು ಇನ್ನುಮುಂದೆ ನಿನಗೆ ಮಕ್ಕಳಾಗಕೂಡದೆಂದು ಆಕೆಗೆ ತಾಕೀತುಮಾಡಿದರು. ನಾಲ್ಕುವರ್ಷ ವಯಸ್ಸಾಗುವ ಹೊತ್ತಿಗೆ ಹುಡುಗಿ ಡಿಫ್ತಿರಿಯಾಕ್ಕೆಬಲಿ

ಯಾದಳು. ಅಷ್ಟು ಹೊತ್ತಿಗೆ ಆ್ಯನಿ ವಾಲೆಸ್‌ಗೆ ಗಂಡನ ಮೇಲೆ ಪ್ರೀತಿ ಹೊರಟೇ ಹೋಗಿತ್ತು. ಅವನ ಹೃದಯದಲ್ಲಿ ತನಗೆ ನಾಲ್ಕನೆಯ ಸ್ಥಾನವೆಂಬುದು ಅಷ್ಟು ಹೊತ್ತಿಗೆ ಆಕೆಗೆ ಅರಿವಾಗಿತ್ತು. ಅವಳಿಗಿಂತ ಮೊದಲಿನ ಮೂರು ಸ್ಥಾನ ಅವನ ಭೂಮಿಗೆ ಅವನ ದನಕರುಗಳಿಗೆ, ಬ್ಯಾಂಕಿನಲ್ಲಿರುವ ದುಡ್ಡಿಗೆ ಮೀಸಲು. ಸಸ್ಯ ಶ್ಯಾಮಲವೂ, ಫಲವೃಕ್ಷ ಭರಿತವೂ, ಜಲಸಂಪನ್ನವೂ ಆದ ಪ್ರಾಂತದಲ್ಲಿ ಸುಖ ಜೀವನವನ್ನು ಬೆಳಸುವ ತನ್ನ ತಂದೆಯ ಕುಲಕ್ಕೂ ತಾನು ಮದುವೆಯಾದ ಈ ಒರಟು ರೈತ ಜೀವನಕ್ಕೂ ಅಜಗಜಾಂತರವೆಂಬುದು ಆಕೆಗೆ ಗೊತ್ತಾಗಲು ಹೆಚ್ಚು ಸಮಯ ಹಿಡಿಯಲಿಲ್ಲ.

ಇದು ದುರಂತ ಸನ್ನಿವೇಶವೆಂದು ಆಕೆಗೆ ಗೊತ್ತು. ಆದರೂ ಆಕೆ ಗಟ್ಟಿಮನಸ್ಸಿನ ಹೆಂಗಸಾದುದರಿಂದ ಹೊಂದಿಕೊಂಡು ಬಾಳಲು ಯತ್ನಿಸಿದಳು. ಊಟದ ಮೇಜಿನ ಮುಂದೆ ತನಗೆ ಇದಿರಾಗಿ ಕೂತ ಗಂಡನನ್ನು ನೋಡುವಾಗಲೆಲ್ಲ ಅವನು ಹಾಗೇಕೆ ಇರುತ್ತಾನೆಂಬುದು ಆಕೆಗೆ ಸ್ಪಷ್ಟವಾಗುತಿತ್ತು. ಅವನ ತುಟಿಗಳು ತೆಳುಬಿದ್ದು ದವಡೆ ಮತ್ತಷ್ಟು ಕಠಿನತೆಯನ್ನು ಹೊಂದಿತ್ತು. ಹೊಲದಲ್ಲಿ ಹಗಲೆಲ್ಲ ದುಡಿಯುವುದರ ದೆಸೆಯಿಂದ ಅವನ ಬಡಕಲು ಶರೀರವು ಇನ್ನಷ್ಟು ಜೀರ್ಣವಾಗಿ ಅವನು ತನ್ನ ವಯಸ್ಸಿಗೂ ಹತ್ತು ವರ್ಷ ದೊಡ್ಡವನಂತೆ ತೋರುತ್ತಿದ್ದನು. ಗಟ್ಟಿ ಮನಸ್ಸಿನವಳಾದುದರಿಂದಲೆ ಆಕೆಗೆ ತಾನು ಗಂಡನಿಗೆ ಉಂಟುಮಾಡಿದ ನಿರಾಶೆಯು ಅರ್ಥವಾಗಿತ್ತು. ಅವನು ನಿಜವಾಗಿ ಯಾರಾದರೂ ಒಬ್ಬ ತುಂಬು ನಿತಂಬಿನಿಯಾದ ರೈತ ಹೆಣ್ಣನ್ನು ಮದುವೆಯಾಗಿದ್ದರೆ ಸರಿಹೋಗುತ್ತಿತ್ತು. ಆದರೆ ಮುಖಕ್ಕೆ ಮರುಳಾಗಿ ಹೊಲಗೆಲಸಕ್ಕೆ ಇಳಿದು ಅಭ್ಯಾಸವಿಲ್ಲದಿರುವ ಕುಟುಂಬದಿಂದ ಆತ ಮದುವೆಯಾಗಿದ್ದ. ಎರಡು ಮಕ್ಕಳನ್ನು ಹಡೆದಕೂಡಲೆ ಬಂಜೆತನವನ್ನು ಹೊಂದುವ ಹೆಣ್ಣು ಅವನಿಗೆ ಗಂಟು ಬಿದ್ದಿದ್ದಳು. ಎರಡೇ ಕರುಹಾಕಿ ಆ ಮೇಲೆ ಬಂಜೆಹೋದ ದನವನ್ನು ಆತ ಮಾಂಸಕ್ಕೋಸ್ಕರ ಬೆಳಸಿ ಪೇಟೆಗೆ ಮಾರಲು ಕಳಿಸುವಂತೆ ಹೆಂಡತಿಯನ್ನೂ ಸಾಗಹಾಕಬಹುದಾ

ಗಿತ್ತು. ಆದರೆ ಏಕ್ಸೆಲ್ ಶ್ರದ್ಧಾವಂತ ಲೂಥರನ್-ಕ್ರೈಸ್ತನಾದುದರಿಂದ ರಿಂದ ಇದು ಸಾಧ್ಯವಾಗಿರಲಿಲ್ಲ.

ಹೀಗಾಗಿ ಆಕೆ ಇಗರ್ಜಿಯ ಸೇವಾಕಾರ್ಯದಲ್ಲಿಯೂ, ಹೊಲಿಗೆ ಕೆಲಸದಲ್ಲಿಯೂ, ತೋಟಗಾರಿಕೆಯಲ್ಲಿಯೂ ದಿನಗಳೆಯುವಂತಾಯಿತು. ಅಷ್ಟಾಗಿಯೂ ಜೀವನದ ಬೇಸರ ತುಂಬಿ ಬರುವಂತಿರಲಿಲ್ಲ. ಮನೆಯ ಹತ್ತಿರದ ಹಳ್ಳ, ಮತ್ತು ಟಾಮ್ ಇವೆರಡೇ ಆಕೆಗೆ ಈಗ ಆಧಾರ. ಟಾಮ್ ತಂದೆಯಂತೆ ಉದ್ದವಾಗಿಯೂ ಹೃಷ್ಟಪುಷ್ಟನಾಗಿಯೂ ಬೆಳೆದಿದ್ದನು. ಅವನನ್ನು ನೋಡಿದರೆ ಅವನ ಪೂರ್ವಜ ಸ್ವೀಡನ ನೆನಪಾಗುತ್ತಿತ್ತು. ಆದರೆ ಕಣ್ಣುಗಳಲ್ಲಾಗಲಿ, ಬಾಯಿ ದವಡೆಗಳಲ್ಲಾಗಲಿ ಎಲ್ಲಿಯೂ ಕಾಠಿನ್ಯದ ಸುಳಿವಿದ್ದಿರಲಿಲ್ಲ. ಶಾಲೆ ಬಿಟ್ಟ ಮೇಲೆ ಆತ ಆಕಳನ್ನು ನೋಡಿಕೊಳ್ಳುತ್ತಿದ್ದ. ಚೆನ್ನಾಗಿಯೇ ನೋಡಿಕೊಳ್ಳುವ. ತಂದೆಗೆ ಬೇರೆ ಮಕ್ಕಳು ಇಲ್ಲದೆ ಇದ್ದುದರಿಂದ ಅವರೆಲ್ಲರ ಪಾಲನ್ನು ತಾನು ದುಡಿದು ತುಂಬಿಕೊಡಬೇಕೆಂಬ ತಿಳಿವು ಅವನಿಗೆ ಬಲುಬೇಗನೆ ಮೂಡಿದ್ದಿತು

ಆದರೂ ಆ್ಯನಿ ವಾಲೇಸಳ ಜೀವನವನ್ನು ಸಹನೀಯವಾಗಿ ಮಾಡಿದ ಕೀರ್ತಿ ಹಳ್ಳಕ್ಕೆ ಸಲ್ಲಬೇಕು. ಮರಮಟ್ಟು ಇಲ್ಲದ ಈ ಸಪಾಟು ಬೋಳು ನೆಲಕ್ಕೂ ಆಕೆಗೂ ಏತರ ಸಂಬಂಧವೂ ಇರಲಿಲ್ಲ. ಅವಳು ಹುಟ್ಟಿದ ಮನೆಯಲ್ಲಿ ಮರ, ಹೊಳೆ, ನದಿ, ಗುಡ್ಡ-ತಿಟ್ಟು ಎಲ್ಲ ಇದ್ದುವು. ಗುಡ್ಡ ಪ್ರದೇಶದಲ್ಲಿ ವಾಸ ಮಾಡುವವರಿಗೆ ಸದಾಕಾಲ ಜೀವನವು ಸ್ವಾರಸ್ಯವಾಗಿರುತ್ತದೆ. ಪ್ರತಿಯೊಂದು ಗುಡ್ಡದ ಆಚೆಗಿರುವ ಅಜ್ಞಾತ ಪ್ರಪಂಚದ ಎಣಿಕೆಯಲ್ಲಿ ಏನೋ ಒಂದು ಸಮ್ಮೋಹನವಿರುತ್ತವೆ. ಈ ಪ್ರೈಯರಿ ನೆಲದಲ್ಲಿ ಏನಿದೆ? ಎಷ್ಟು ದೂರ ಕಣ್ಣು ಚಾಚಿದರೂ ಏನೂ ಕಾಣಿಸದು. ಹಳ್ಳವೊಂದನ್ನು ಬಿಟ್ಟರೆ ಬೋಳು ನೆಲದ ಬೇಸರವನ್ನು ಹೋಗಲಾಡಿಸಲು ಬೇರೇನೂ ಇರಲಿಲ್ಲ. ಅಯೋವಾ ರಾಜ್ಯದ ನದಿ ಸರೋವರಗಳ ಮುಂದೆ ಈ ಹಳ್ಳವನ್ನು ಹೋಲಿಸುವುದು ಸಾಧ್ಯವಿಲ್ಲವಾದರೂ, ವೈವಿಧ್ಯರಹಿತ ಪ್ರೈಯರಿಯ ಅನಂತತೆಯ ನಡುವೆ ಅದೇ ಒಂದು ವಿಸ್ಮಯ ಎನಿಸಿತ್ತು ಆಕೆಗೆ ತಿಂಗಳ ಬೆಳಕಿನ ರಾತ್ರಿಯಲ್ಲಿ ಹಳ್ಳದ

ನೀರು ಸುತ್ತಲಿನ ಹೆಮ್ಮರಗಳ ಕರಿನೆಳಲ ನಡುವೆ ಬೆಳ್ಳಿಯಂತೆ ಹೊಳೆಯುವುದು. ಜೂನ್ ತಿಂಗಳಲ್ಲಿ ಅದರ ಸುತ್ತಲೂ ಐರಿಸ್ ಗಿಡಗಳ ಹಳದಿ—ನೀಲ ವರ್ಣದ ಪುಷ್ಪಗಳು ಕಾಡಿನಂತೆ ಬೆಳೆಯುವುವು. ಪಕ್ಕದ ಪೊದೆಗಳಲ್ಲಿ ಹಲವು ಹಾಡುವ ಹಕ್ಕಿಗಳು ಅವಿತುಕೊಂಡಿರುವುವು. ವಸಂತ ಮಾಸದಲ್ಲಿಯಂತೂ ಕಾಡುಹಕ್ಕಿಗಳ ಗುಂಪಿಗೆ ಗುಂಪೇ ಹಳ್ಳದಲ್ಲಿ ಸಭೆ ಸೇರುವುದು—ಕಾಡು ಬಾತು, ಬಕ, ಒಂದು ಜತೆ ಕಾಡು ಹಂಸ.

ಟಾಮ್‌ಗೆ ಹದಿನಾರು ವರ್ಷವಾದಾಗ ಆಕೆ ಅವನನ್ನು ಡೆಸ್ಮಿವಾನೇ ಎಂಬಲ್ಲಿರುವ ಶಾಲೆಗೆ ಕಳಿಸಿದಳು. ಅವನ ಶಿಕ್ಷಣದ ವೆಚ್ಚವನ್ನು ಮಾತ್ರವಲ್ಲದೆ, ಅವನ ಬದಲು ಹೊಲದಲ್ಲಿ ಕೆಲಸ ಮಾಡುವ ಆಳಿನ ಕೂಲಿಯ ವೆಚ್ಚವನ್ನು ಆಕೆಯೇ ನೋಡಿಕೊಂಡಳು—ಇಲ್ಲದಿದ್ದರೆ ಏಕ್ಸೆಲ್ ಮಗನನ್ನು ಸುಲಭದಲ್ಲಿ ಬಿಟ್ಟುಕೊಡುತ್ತಿರಲಿಲ್ಲ. "ಹೊಲದ ಆಡಳಿತವನ್ನೂ ದನಕರುಗಳ ಮೇಲ್ವಿಚಾರವನ್ನೂ ನೋಡಿಕೊಳ್ಳಲು ಬಂದರೆ ಸಾಲದೆ? ನಾಳೆಗೆ ಈ ಹೊಲದ ಒಡೆಯನಾಗುವ ಹುಡುಗನಿಗೆ ಬೇರೆ ಶಿಕ್ಷಣವೇತಕ್ಕೆ?" ಎಂಬುದು ಅವನ ವಾದವಾಗಿತ್ತು.

ಎಷ್ಟು ವೆಚ್ಚವಾದರೂ ಚಿಂತಿಲ್ಲ, ತನ್ನ ಹುಡುಗ ಗಂಡನ ಹಾಗಾಗ ಬಾರದೆಂದು ಆಕೆ ಪ್ರಯತ್ನಿಸಿದಳು.

ಟಾಮ್ ಶಾಲೆಗೆ ಹೋದ ಮೇಲಂತೂ ಹಳ್ಳವು ಆಕೆಯ ಜೀವನದ ಕೇಂದ್ರವಾಗಿ ಪರಿಣಮಿಸಿತು. ಹುಲ್ಲಿನ ಮೇಲೆ ಪೊದೆಗಳ ನಡುವೆ ಕೂತಿದ್ದರೆ ಯಾರಿಗೂ ಆಕೆ ಎಲ್ಲಿರುವಳೆಂದು ತಿಳಿಯದು. ಹಾಗೆಯೆ ಗಂಟೆಗಟ್ಟಲೆ ಅಲುಗಾಡದೆ ಕಾಡುಹಕ್ಕಿಗಳನ್ನು ನೋಡುತ್ತಿರುವಳು, ಕನಸುಗಾಣುತ್ತಿರುವಳು. ಗಂಡನ ಯೋಚನೆ ಬಂದರೆ ಅವನ ಎದೆ ಕಲ್ಲಾಗಿರುವುದನ್ನೂ ದೃಷ್ಟಿ ಸಂಕುಚಿತವಾಗಿರುವುದನ್ನೂ ಯೋಚಿಸಿ ಆಕೆಯ ಹೃದಯದಲ್ಲಿ ಕನಿಕರವುಂಟಾಗುವುದು. ಪಾಪ, ಜೀವನದ ನಿಜವಾದ ಸಂಪತ್ತೇನೆಂದು ಅರಿಯದವನಾತ. ಹಕ್ಕಿಗಳ ರೆಕ್ಕೆಯ ಕಡುಹೊಳಪಿನಲ್ಲಿಯೂ, ಕಾರ್ಪಾಸವೃಕ್ಷಗಳ ಎಳೆದಳಿರಿನ ಹಸುರಿನಲ್ಲಿಯೂ, ಕರುವಿನ ಮಿದುವಾದ ಮೂತಿಯು ಕೈಗೆ ನೇವರಿಸುವಾಗ ಉಂಟಾಗುವ ಸುಖೋಷ್ಣದಲ್ಲಿಯೂ ಅಡಗಿರುವ ಚೆಲುವನ್ನು ಆತ

ಕಾಣಲಾರ, ಅನುಭವಿಸಲಾರ. ಅವನ ಜಮೀನು, ಅದರ ಮೇಲೆ ಕೆಲಸಮಾಡುವ ದನ ಕರು ಆಳು ಕಾಳು ಎಲ್ಲ ಸೇರಿ ಒಂದು ಕಾರ್ಖಾನೆ ಯನ್ನೇ ಆತ ಹೊಲದಲ್ಲಿ ಸ್ಥಾಪನೆ ಮಾಡಿಬಿಟ್ಟಿದ್ದ.

ಟಾಮ್‌ಗೆ ಹದಿನೇಳು ವರ್ಷ ವಯಸ್ಸಾಗುವ ಹೊತ್ತಿಗೆ ಸರಿಯಾಗಿ ಗಂಡನ ಬಾಯಿಂದ ಮೊದಲ ಸಲಕ್ಕೆ ಹಳ್ಳವನ್ನು ಬತ್ತಿಸಿ ಬಿಡುವ ವಿಚಾರವನ್ನು ಆಕೆ ಕೇಳಿದಳು. ಹಳ್ಳದ ತಳದ ಜಮೀನು ಚನ್ನಾಗಿರುತ್ತದೆ, ಅದನ್ನು ಏಕೆ ವೃಥಾ ಬಿಡಬೇಕು. ಆಕಳಿಗೆ ಬೇಕಾದ ನೀರು ಬಾವಿಯಲ್ಲಿ ಬೇಕಷ್ಟಿರುವಾಗ ಹಳ್ಳದಿಂದ ಪ್ರಯೋಜನ ವಾದರೂ ಏನು? ಎಂದಿದ್ದ ಆತ.

ಅದನ್ನು ಕೇಳಿದೊಡನೆ ಆಕೆಯ ಮನಸ್ಸಿನಲ್ಲಿ ಒಂದು ಕೆಟ್ಟ ವಿಚಾರ ಸ್ಫುರಿಸಿತು: 'ಈತ ಬತ್ತಿಸಿ ನೋಡಲಿ. ನಾನೇನೂ ಆ ಮೇಲೆ ಇಲ್ಲಿ ಇರುವಂತಿಲ್ಲ ಹಳ್ಳವು ಹೋದಮೇಲೆ ನಾನಿಲ್ಲಿ ಬದುಕಲಾರೆ.'

ಆದರೆ ಆಕೆ ಪ್ರಕಟವಾಗಿ ಯಾವ ಭಾವನೆಯನ್ನೂ ಅವನಿಗೆ ತೋರ್ಪಡಿಸಲಿಲ್ಲ. ಏಕೆಂದರೆ ಈಗೀಗ ಅವನ ನಿಸ್ಸಹಾಯ ರೇಗಾಟವು ಬಂಜೆ ಹೆಂಗಸಿನ ಮೇಲೆ ನಿಶ್ಚಿತ ದ್ವೇಷದ ರೂಪದಲ್ಲಿ ಬಂದೆರಗುತಿತ್ತು. ಆದುದರಿಂದ ಎಲ್ಲಿ ತನ್ನ ಭಾವನೆಗಳನ್ನು ತುಳಿಯಬೇಕೆಂಬ ಉದ್ದೇಶ ದಿಂದಲೇ ಆತ ಹಳ್ಳದ ನೀರನ್ನು ಬತ್ತಿಸಿಬಿಟ್ಟಾನೋ ಎಂದು ಅಂಜಿ ಆಕೆ ಅವನು ಮನೆಯಲ್ಲಿದ್ದಾಗ ಹಳ್ಳದ ಕಡೆಗೆ ಹೋಗುತ್ತಲೇ ಇರಲಿಲ್ಲ. ಹಳ್ಳದ ಮೇಲೆ ತನಗೆ ಮಮತೆಯೇ ಹೊರಟು ಹೋಗಿರುವುದೆಂಬಂತೆ ಆಕೆ ನಟಿಸುತ್ತಿದ್ದಳು. ಆದರೆ ಗುಟ್ಟನಲ್ಲಿ ಅವನಿಗೆ ತಿಳಿಯದಂತೆ ರಾತ್ರಿ ಕಾಲದಲ್ಲಿ ಹಳ್ಳಕ್ಕೆ ಹೋಗಿ, ಹಕ್ಕಿಗಳಿಗೆ ಧಾನ್ಯವನ್ನು ಚೆಲ್ಲಿ ಅರ್ಧ ರಾತ್ರಿಯ ವರೆಗೂ ಅಲ್ಲೇ ಹುಲ್ಲಿನಲ್ಲಿ ಕೂತಿದ್ದು ಕಪ್ಪೆಗಳು ವಟಗುಟ್ಟು ವುದನ್ನೂ ಹಕ್ಕಿಗಳು ಚಿಲಿಪಿಲಿ ಎನ್ನುವುದನ್ನೂ ಆಲಿಸುತ್ತ ಕಾಲಹರಣ ಮಾಡುವಳು.

ಹಳ್ಳವು ಟಾಮ್ ಮತ್ತು ಸೆಲ್ಲಿಯ ಜೀವನದೊಡನೆ ಅದು ಹೇಗೋ ಬೆರೆತಿತ್ತು, ಅವರ ಜೀವನವನ್ನು ಬೆರೆಯಿಸಿತ್ತು. ಹಳ್ಳದ ದಂಡೆಯಲ್ಲೇ

ಅವರಪ್ರಥಮ ಪ್ರಣಯದ ಅಂಕುರವಾಗಿರಲಿಲ್ಲವೆ? ಆ್ಯನಿಗೂ ಸೊಸೆಗೂ ಅನ್ಯೋನ್ಯ ಸ್ನೇಹ ಬಹಳವಾಗಿತ್ತು. ಟಾಮ್ ವೈಮಾನಿಕನ ಸಮವಸ್ತ್ರವನ್ನು ಧರಿಸಿ ಸುಂದರ ಯುವಕನಾಗಿ ಮನೆಯವರನ್ನು ಬೀಳ್ಕೊಟ್ಟ ಮೇಲೆ ಅವನಿಲ್ಲದೆ ತೆರವಾದ ಹೃದಯವನ್ನು ಹಳ್ಳದಿಂದ ಅವರು ತುಂಬಿಸಿಕೊಂಡರು. ಹಳ್ಳ ಇರುವ ತನಕ ಟಾಮನ ಯಾವುದೋ ಒಂದು ಭಾಗ ಅವರ ಸಮೀಪವೇ ಇದ್ದಂತೆ ಅವರಿಗನಿಸುತಿದ್ದುದರಿಂದ ವಿರಹದ ವೇದನೆಯಾದರೂ ಕಡಿಮೆ ಎನಿಸುವುದು. ಸೆಲ್ಲಿಯು ಗರ್ಭಿಣಿ ಯಾದ ಮೇಲಂತೂ ಅತ್ತೆ—ಸೊಸೆ ಸಂಜೆಯ ಹೊತ್ತು ಹಳ್ಳದ ಬದಿಯಲ್ಲಿಯೇ ಕಳೆಯುತ್ತಿದ್ದರು. ಸೆಲ್ಲಿಗೂ ಹಳ್ಳವೆಂದರೆ ಜೀವ. ಅತ್ತೆಯನ್ನು ನೋಡಲೆಂದು ಆಕೆ ತವರಿನಿಂದ ಬರುತ್ತಿದ್ದಳೋ ಈ ಹಳ್ಳದ ನೆನಪಾಗಿ ಬರುತ್ತಿದ್ದಳೋ ಹೇಳುವುದು ಕಷ್ಟ.

ಸೆಲ್ಲಿ ಹಡೆಯಲು ಒಂದು ತಿಂಗಳಿರುವಾಗ ಆ್ಯನಿ ಪೀಟರ್ಸನ್ ಸೊಸೆಯನ್ನು ತನ್ನ ಸಸ್ಯಶ್ಯಾಮಲವಾದ ತವರೂರು ಆಯೋವಾ ರಾಜ್ಯಕ್ಕೆ ಕರೆದೊಯ್ದಳು. ಗೋಧಿಯ ಕೊಯ್ಲು ಮುಗಿದ ಮೇಲೆ ಆ ಬೋಳು ನೆಲದ ಸೆಕೆಯನ್ನು ತಡೆಯಲಾಸಲ್ಲ. ಆಯೋವಾದಲ್ಲಿಯೂ ಸೆಕೆ ಏನೂ ಕಡಮೆ ಇರಲಿಲ್ಲವಾದರೂ ಸುತ್ತ ಮುತ್ತಲಿನ ಪಚ್ಚೆಪಸುರು, ಗುಡ್ಡ ಕಣಿವೆಗಳಿಂದ ಕಣ್ಣಿಗೂ, ಹೃದಯಕ್ಕೂ ತಂಪೆರೆದಹಾಗಾಗುತಿತ್ತು. ಸೆಲ್ಲಿಗಂತೂ ನಿಸರ್ಗ ರಮಣೀಯವಾದ ಆಯೋವಾ ಪ್ರಾಂತವು ಸ್ವರ್ಗಕ್ಕೆ ಸಮವೆಂದು ಎನಿಸಿತು.

ಮೂರು ವಾರಗಳ ಸ್ವರ್ಗವಾಸವನ್ನನುಭವಿಸಿ ಅವರು ಹಿಂದಿರುಗ ಲನುವಾದರು. ಸೆಲ್ಲಿಯ ಹೆರಿಗೆ ಅಲ್ಲಿಯೇ ನಡೆಸಬಹುದಾಗಿತ್ತು. ಆದರೆ ಸೆಲ್ಲಿಯ ತಾಯಿಗೆ ಮಗಳು ಮನೆಯಲ್ಲೇ ಹೆರಬೇಕೆಂದು ಆಸೆ. ಮನ ರಂಜನೆಗೆ ಒಂದು ಹಳ್ಳವು ಕೂಡ ಇಲ್ಲದಂಥ ಡಕೋಟರಾಜ್ಯದ ಆ ಸಪಾಟು ಕೊಂಪೆಯಲ್ಲಿ ಆಕೆಗೆ ಇಷ್ಟಾದರೂ ಸಮಾಧಾನವಾಗಬೇಡವೆ? ಎಂಬುದರಿಂದ ಆ್ಯನಿ ಬೀಗತಿಯ ಮಾತಿಗೆ ಸೈಗುಟ್ಟಿದ್ದಳು.

ಒಂದೆರಡು ವಾರಗಳಿಗೊಮ್ಮೆ ಅವರಿಗೆ ಟಾಮನ ಪತ್ರಬರುತ್ತಿತ್ತು. ಆದರಲ್ಲಿ ಆತ ವಿಮಾನ ಸಂಚಾರದ ವಿಷಯವಾಗಲಿ, ಜಪಾನಿ ಶತ್ರುಗಳ

ವಿಮಾನವನ್ನುರುಳಿಸುವ ಶೌರ್ಯದ ಕುರಿತಾಗಲಿ, ಬರೆಯುವುದರ ಬದಲು ಕಡಲು, ದ್ವೀಪಸ್ತೋಮ, ಕಡಲಿನಲ್ಲಿ ಹಾರುವ ಮೀನುಗಳ ವಿಷಯ ವರ್ಣಿಸುತ್ತಿದ್ದನು. ಕರಿದಾದ ಕಡಲ ನೀರನ್ನು ಸೀಳಿಕೊಂಡು ಮುನ್ನುಗ್ಗುವ ಸಾಗರ ನೌಕೆಯ ಹಿಂದಿನಿಂದ ಹೇಗೆ ನೀರು ಸವೇಗವಾಗಿ ಹರಿಯುತ್ತದೆ, ವಿಮಾನದ ಎತ್ತರದಿಂದನೋಡಿದರೆ ಸಾಗರವು ಕಡು ನೀಲ ಮತ್ತು ಹಸುರು ಬಣ್ಣದ್ದಾಗಿ ಕಾಣಿಸಿಯೂ ಕರಾವಳಿಯ ಹತ್ತಿರ –ಹವಳದ್ವೀಪಗಳ ಸಮೀಪ–ಹೋದರೆ ಹೇಗೆ ಸ್ಫಟಿಕದಂತೆ ಪಾರದರ್ಶಕ ವಾಗಿದೆ ಎಂಬ ಅನೇಕ ವಿಷಯಗಳನ್ನು ವಿವರಿಸಿ ಕೊನೆಗಂತೂ ಹೊಲದ ನಡುವಿನ ಹಳ್ಳ ಹೇಗಿರುವುದೆಂದು ಕೇಳಲು ಆತ ಮರೆಯುತ್ತಿರಲಿಲ್ಲ. ಅಷ್ಟೊಂದು ಜಲರಾಶಿಯ ನಡುವೆ ಇದ್ದುಕೊಂಡೂ ಈ ಕೆಸರು ಹಳ್ಳ ವನ್ನವನು ಜ್ಞಾಪಿಸುತ್ತಿರುವುದು ಅವರಿಗೆ ಮೋಜೆನಿಸುತಿತ್ತು.

ಇನ್ನು ತಡವಾಗುವುದೆಂದು ಸೊಸೆಯನ್ನು ಕರೆದುಕೊಂಡು ಆ್ಯನಿ ಪಿಟರ್ಸನ್ ತನ್ನ ತವರು ಮನೆಯನ್ನು ಬಿಟ್ಟು ಹೊರಟಳು. ದೂರದ ಪಯಣದಿಂದ ಜೀವವು ಬಲು ಸೋತಿತ್ತು. ಇನ್ನೇನು ಮನೆಗೆ ಹತ್ತು ಮೈಲು ದೂರದ ಡಿಪೋದಲ್ಲಿ ಅವರು ತಂಗಿದಾಗ ಮನೆಗೆ ಹೋಗುವ ಹುಮ್ಮಸ್ಸೇ ಅವರಲ್ಲಿ ಉಳಿಯಲಿಲ್ಲ. ಇಡೀ ಡಕೋಟ ಪ್ರಾಂತವೇ ರಣಬಿಸಿ ಲಿಗೆ ಹುರಿಯುತಿತ್ತು. ಸೆಲ್ಲಿಯ ತಾಯಿ ನಿಲ್ದಾಣಕ್ಕೆ ತಂದ ಕಾರು ಕೂಡ ಕೆಂಧೂಳಿ ಬಣ್ಣವನ್ನು ಮೈಗೆ ಬಳಿದು ಕೊಂಡಿತ್ತು. ಅವರಿಬ್ಬರೂ ಕಾರನ್ನು ಹತ್ತುತ್ತಿದ್ದ ಹಾಗೆ ಆ್ಯನಿ ಯೋಚಿಸಿದಳು: 'ಹೇಗೂ ಹಳ್ಳ ವಿದೆಯಲ್ಲಾ. ರಾತ್ರಿ ಹೊತ್ತು ಹಾಯಾಗಿ ಅಲ್ಲಿ ಕೂತಿದ್ದು ಕಪ್ಪೆ ಮತ್ತು ಹಕ್ಕಿಗಳ ಗಾನವನ್ನು ಕೇಳಿದರೆ ಜೀವ ತಂಪಾಗುತ್ತದೆ, ಯೋಚನೆ ಏಕೆ?'

ಸೆಲ್ಲಿಯ ತಾಯಿ ನಿಧಾನವಾಗಿ, ಜಾಗರೂಕತೆಯಿಂದ ಕಾರನ್ನು ನಡೆ ಸುತಿದ್ದಳು. ಹಿಂದಿನ ಸೀಟಿನಲ್ಲಿ ಕೂತ ಆ್ಯನಿ ಪೀಟರ್ಸನಗೆ ಅವಳ ಬಡ ಕಲು ದೇಹವು ಬೋಳು ನೆಲದ ಬೇಸಾಯದ ಪರಿಶ್ರಮದಿಂದ ಮತ್ತಷ್ಟು ಸೊರಗಿ ಹೋದುದರ ಅರಿವಾಯಿತು. 'ಟಾಮ್ ಬಂದ ಮೇಲೆ ಸೆಲ್ಲಿ ಯನ್ನು ಈ ಒಣ ರಾಜ್ಯದಿಂದ ಎಲ್ಲಿಗಾದರೂ ದೂರ ಕರೆದೊಯ್ಯಲು

ಹೇಳಬೇಕು ಎಷ್ಟು ಗಟ್ಟಿ ಹೆಂಗಸಾದರೂ ಆಕೆಯನ್ನು ಇಲ್ಲಿನ ಹವೆ ಸದೆ ಬಡಿಯುವುದರಲ್ಲಿ ಸಂದೇಹವಿಲ್ಲ. ಎಂದು ಹೇಳುವ ನಿರ್ಧಾರವನ್ನು ಆ್ಯನಿ ಅಲ್ಲೇ ಕೈಗೊಂಡಳು. ಆದರೆ ಮಗ-ಸೊಸೆ ಪರರಾಜ್ಯಕ್ಕೆ ಹೋದರೆ ತನಗೆ ಯಾರು ಗತಿ........ಹಳ್ಳ ಒಂದೇ ಕೊನೆಯ ಆಸರೆಯೋ? ಚಿಂತಿಲ್ಲ. ತನಗಿನ್ನೇನಾಗಬೇಕಾಗಿದೆ? ಇಳಿವಯಸ್ಸಿನವರು ಹರೆಯದ ಹುಡುಗರ ಭವಿಷ್ಯಕ್ಕೆ ಅಡ್ಡ ಬರಲಾಗದು. ತನ್ನ ಜೀವಶಕ್ತಿ ಎಲ್ಲ ಟಾಮನ ಮುಖಾಂತರವಾಗಿ ಸದ್ಯವೇ ಹುಟ್ಟಲಿರುವ ಮಗುವಿನಲ್ಲಿ ಚಿರಂತನ ವಾಗಿ ಮುಂದೆ ಸಾಗುವುದರಿಂದ ವ್ಯಥೆ ಏತಕ್ಕೆ? ಅದೊಂದು ಜೀವನ ಚಕ್ರ. ಹಳ್ಳದ ಜೀವನದಲ್ಲಿದ್ದಂಥ ನಿಯಮಿತ ಜೀವನ ಚಕ್ರ. ಅದರ ವಿನ್ಯಾಸ, ಲಯ ವಿಶ್ವದ ಛಂದಸ್ಸಿಗೆ ಅನುಗುಣವಾಗಿತ್ತು.

ಮುದಿ ಕಾರು ಹೆನ್ರಿಕ್ ಭವನ, ಅಯೋನಿಂಗ್ಸ್, ಲಾಕ್ಜೀ ಮುಂತಾದ ಪರಿಚಿತ ಸ್ಥಳಗಳಲ್ಲಿ ಗಡಗಡನೆಂದು ಮುಂದೆ ಸಾಗುತ್ತಿತ್ತು. ಇನ್ನೊಂದು ಕ್ಷಣದಲ್ಲಿ ಹಳ್ಳದ ದಂಡೆಯ ಕಾರ್ಪಾಸ ಮರದ ತಲೆ ಕಣ್ಣಿಗೆ ಕಾಣಿಸಬೇಕು. ಸರಿ ಗಟ್ನರ್ ತಿರುವೂ ಬಂದಿತು. ಇನ್ನೇನು ಆ ಕಾರ್ಪಾಸದ ಹಸುರು ಶಿರೋಭಾಗ ದಿಗಂತದಲ್ಲಿ ಗೋಚರಿಸಬೇಕು— ಒಂದು ಕ್ಷಣ ಕಳೆದರೆ.

ಆ ಒಂದು ಕ್ಷಣವೂ ಕಳೆದು ಹೋಯಿತು. ಸೆಲ್ಲಿಯು ತಾಯಿಗೆ ಅಯೋವಾ ರಾಜ್ಯದ ನಿಸರ್ಗದ ಚೆಲುವನ್ನು ಬಣ್ಣಿಸುತ್ತಿದ್ದಳು. ಇನ್ನೊಂದು ಕ್ಷಣ ಕಳೆಯಿತು, ಮತ್ತೊಂದು ಕ್ಷಣ, ಆ ಮೇಲೊಂದು ಕ್ಷಣ—ಅದರೂ ಮರಗಳ ಛಾಯೆಯೇ ಇಲ್ಲ. ಆ್ಯನಿ ಮುಂದೆ ಬಗ್ಗಿ ನೋಡಿದಳು, ಕಣ್ಣು ತಿಕ್ಕಿಕೊಂಡು ನೋಡಿದಳು. 'ಹೌದು ನನಗಿನ್ನು ಕನ್ನಡಕ ಬೇಕೇನೋ, ಸರಿಯಾಗಿ ಕಾಣಿಸುವುದೇ ಇಲ್ಲ' ಎಂದು ಕೊಂಡಳು.

ಮತ್ತಷ್ಟು ಆಸಕ್ತಿಯಿಂದ ನೋಡಿದರೂ ಮರಗಳ ಸುಳಿವಿಲ್ಲ. ಮುಂದೆ ಬಗ್ಗಿ ಸೆಲ್ಲಿಯ ಹತ್ತಿರ ನಿನಗೆ ಕಾಣಿಸುವುದೆ? ಎಂದು ಕೇಳೋಣ ಎಂದು ಮನಸ್ಸಿನಲ್ಲಿ ಯೋಚನೆ ಬಂದರೂ ಆದನ್ನು ಅದುಮಿ ಹಿಡಿ

ದಳು—ಭೀತಿಯಿಂದ. ಆಗಲೇ ಮರಗಳಿಗೇನಾಯಿತೆಂದು ಅವಳಿಗೆ ನಿಶ್ಚಯ ಜ್ಞಾನ ಮೂಡಿತ್ತು.

ಆಕೆ ಮೌನವಾಗಿ ತನ್ನ ಕೈಗಳಿಂದ ಮೋರೆಯನ್ನು ಮುಚ್ಚಿಕೊಂಡಳು. ಕಪೋಲಗಳ ಮೇಲೆರಗಿದ್ದ ಡಕೋಟಾ ಧೂಳಿನ ಮೇಲೆ ಕಣ್ಣೀರು ಧಾರೆಧಾರೆಯಾಗಿ ಸದ್ದಿಲ್ಲದೆ ಹರಿಯ ತೊಡಗಿತು. ಸೆಲ್ಲಿ ಚಿಕ್ಕಂದಿನಿಂದಲೂ ಕಾಡಿ ಬೇಡಿ ನೋಡಲು ಬರುತ್ತಿದ್ದ ಜೀವಮಾನವೆಲ್ಲ ಪ್ರೀತಿಸುತ್ತಿದ್ದ ಮರಗಳ ಗುಂಪನ್ನು ನೋಡಲು ಉಪಕ್ರಮಿಸುವ ಕ್ಷಣವನ್ನುಹೇಗೆ ಇದಿರಿಸಲಿ ಎಂದು ಯೋಚಿಸುತ್ತಿದ್ದಂತೆ ಆ್ಯನಿಯ ಮುಖ ನಾಚುಗೆಯಿಂದ ಕೆಂಪೇರಿತು.

ಆ್ಯನಿ ಪೀಟರ್ಸನಳನ್ನು ಅವಳ ಮನೆಯ ಬಳಿ ಬಿಡಲೆಂದು ಕಾರು ಮನೆಯ ಮುಂದುಗಡೆ ಬರುವಲ್ಲಿಯವರೆಗೆ ಸೆಲ್ಲಿಯಾಗಲಿ ಅವಳ ತಾಯಿಯಾಗಲಿ ಮರದ ವಿಷಯ ತುಟಿ ಪಿಟ್ಟೆನ್ನಲಿಲ್ಲ. ಮರಗಳನ್ನು ಕಡಿದು, ಬತ್ತಿ ಹೋದ ಹಳ್ಳದ ಮೇಲೆ ಕ್ಯಾಟರ್ಪಿಲ್ಲರ್ ಟ್ರ್ಯಾಕ್ಟರುಗಳು ಉಳುವ ಗೆರೆಯುನ್ನೆಳೆದ ದಾರುಣ ದೃಶ್ಯವನ್ನು ಅವರು ಕಂಡೂ ಕಾಣದವರಾಗಿದ್ದರು. ಆ್ಯನಿ ಪೀಟರ್ಸನ್ ಇಳಿದು ತನ್ನ ಸೂಟಕೇಸನ್ನು ತೆಗೆದಾಗ ಅದರ ಭಾರವು ಹೆಚ್ಚಿದಂತೆನಿಸಿತು ಆಕೆಗೆ. ಸೊಸೆ ಬೀಳ್ಕೊಡುವಾಗ 'ಏನಾದರೂ ಆದರೆ ಕೂಡಲೇ ಹೇಳಿ ಕಳಿಸುತ್ತೇನೆ' ಎಂದು ಬಗ್ಗಿ ಅತ್ತೆಯನ್ನು ಚುಂಬಿಸಿದಳು. ಆದರೂ ಆಕೆಯ ಬಾಯಿಯಿಂದ ಹಳ್ಳದ ಮಾತು ಹೊರಡಲಿಲ್ಲ. ಕಣ್ಣು ಮಾತ್ರ ಕಂಬನಿಯಿಂದ ತುಂಬಿ ತುಳುಕುತಿತ್ತು. ಆ್ಯನಿ ವಾಲಿಕೊಂಡು ಮನೆ ಸೇರಿದಳು. ಆ ರಾತ್ರಿ ಕಪ್ಪೆಗಳ ವಟವಟವೂ ಇಲ್ಲ, ಹಕ್ಕಿಗಳ ಚೀರಾಟವೂ ಇಲ್ಲ. ಅನಂತವಾದ ಆ ಸಪಾಟು ಸಾಮ್ರಾಜ್ಯದಲ್ಲಿ ರುದ್ರಮೌನ ನೆಲಸಿತ್ತು.

* * * *

ಕ್ಯಾರಿಯರ್ (ವಿಮಾನಗಳನ್ನು ಸಾಗಿಸುವ ಯುದ್ಧನೌಕೆ) ನೌಕೆಗೆ ಹಿಂದಿರುಗಿದ ಟಾಮುನಿಗೆ ಮನಸ್ಸು ಸ್ವಲ್ಪ ಪ್ರಫುಲ್ಲವಾಯಿತು. ದ್ವೀಪಗಳ ನಡುವೆ ಬಹಳ ದಿನ ಸೋಮಾರಿ ಜೀವನವನ್ನು ನಡೆಸಿ ಬೇಸರ

ತುಂಬಿದ ಜೀವನವು ಕಡಲಿನ ವಿವಿಧ ವರ್ಣರಂಜಿತ ಬೆಡಗಿನ ಮಧ್ಯದಲ್ಲಿ ಮತ್ತೆ ಅರಳಲು ಅವಕಾಶ ಒದಗಿ ಬಂದಿತು. ಉಪ್ಪು ಮತ್ತು ನೀರ ತುಂತುರಿನ ವಾಸನೆಯನ್ನು ಹೊತ್ತ ಸಾಗರದ ಮೇಲಿನ ಗಾಳಿ ದಿನ ರಾತ್ರಿ ಕ್ಯಾರಿಯರ ನೌಕೆಯ ಮೇಲೆ ಸಂಚರಿಸುತಿತ್ತು.

ಕಡಲ ನಡುವಿನ ಶಿಲಾಸ್ತೋಮಗಳ ಸಂದಿನಲ್ಲಿಯೂ ದ್ವೀಪಗಳ ಇರುಕಿನಲ್ಲಿಯೂ ನೌಕೆ ಉತ್ತರಾಭಿಮುಖವಾಗಿ ಸಾಗುತಿತ್ತು. ಅದರ ಜತೆಗೆ ಸಣ್ಣ ದೊಡ್ಡ ಎಷ್ಟೋ ಹಡಗುಗಳು, ಕ್ರುಯಿಸರುಗಳು, ಡಿಸ್ಟ್ರಾಯರುಗಳು, ಟೆಂಡರುಗಳು ಹೀಗೆ ನಾನಾ ಬಗೆಯ ಸಮರ ನೌಕೆಗಳು ಗುಂಪುಗೂಡಿ ಹೊರಟಿದ್ದುವು ನೀಲ ಸಾಗರದಲ್ಲಿ ಅವು ಬಡಗಲಿಗೆ ಚಲಿಸುವಾಗ ವಿಮಾನದ ಎತ್ತರದಲ್ಲಿ ನೋಡಿದರೆ ಟಾಮ್ ಚಿಕ್ಕಂದಿನಲ್ಲಿ ಹಳ್ಳದಲ್ಲಿ ತೇಲಬಿಡುತ್ತಿದ್ದ ಕಾಗದದ ದೋಣಿಗಳಂತೆಯೇ ಅವು ಕಾಣಿಸುವುವು. ಎರಡು ದಿನಗಳ ತರುವಾಯ ತೆಂಕಲ ಮುಗಿಲ ಮರೆಯಿಂದ ಬಂದ ಒಂದು ಬೃಹತ್ ಬಾಂಬರ ವಿಮಾನವು ಕ್ಯಾರಿಯರ್ ನೌಕೆಯ ಮೇಲೆ ಅಂಚೆಯ ಚೀಲಗಳನ್ನು ಎಸೆದು ಹೋಯಿತು. ಟಾಮ್, ಜಿಮ್ಮಿ ಇವರಂತೆ ಇತರ ತರುಣರೂ ಮನೆಯ ಸುದ್ದಿಗೋಸ್ಕರ ಕಾದು ನಿಂತರು.

ಟಾಮನಿಗೆ ಎರಡು ಕಾಗದಗಳಿದ್ದುವು—ಒಂದು ತಾಯಿಯಿಂದ, ಇನ್ನೊಂದು ಸೆಲ್ಲಿಯಿಂದ. ಸೆಲ್ಲಿಯ ಪತ್ರ ಅಯೋವಾ ರಾಜ್ಯದ ಪ್ರವಾಸದ ವರ್ಣನೆಯಿಂದ ತುಂಬಿ ದೀರ್ಘವಾಗಿತ್ತು. ಅಲ್ಲಿನ ಮರ, ಗುಡ್ಡ, ಹಸುರಿನ ಸಾಕಷ್ಟು ಸವಿಸ್ತಾರವಾದ ವಿವರ ಅದರಲ್ಲಿತ್ತು. ಕೊನೆಯಲ್ಲಿ, ತಾನು ಚೆನ್ನಾಗಿರುವುದಾಗಿಯೂ, ವೈದ್ಯರ ಅಭಿಪ್ರಾಯದಂತೆ ಹೆರಿಗೆ ಏನೂ ಕಷ್ಟವಾಗಲಾರದೆಂದೂ, ಚಿಂತಿಸುವುದಕ್ಕೆ ಯಾವ ಕಾರಣವೂ ಇಲ್ಲವೆಂದೂ, ಮಗು ಹುಟ್ಟಿದ ಸಮಾಚಾರವನ್ನೂ ಆಕಾಶವಾಣಿಯ ಮುಖಾಂತರ ತಿಳಿಸುವುದಾಗಿಯೂ, ಮಗು ಹುಟ್ಟಿದ ಕೂಡಲೆ ಟಾಮ್ ಅದನ್ನು ನೋಡಲು ಸಾಧ್ಯವಿದ್ದರೆ ಚೆನ್ನಾಗಿತ್ತೆಂದೂ ತಾನು ಗಂಡನನ್ನು ಪ್ರೀತಿಸುವುದಾಗಿಯೂ ಬರೆದಿದ್ದಳು. ಜತೆಗೆ ಅಯೋವದಲ್ಲಿ ತಾನು ಅತ್ತೆಯೊಡನೆ ತೆಗೆಸಿದ ಫೋಟೋವನ್ನು ಇರಿಸಿದ್ದಳು.

ತಾಯಿಯ ಕಾಗದ ಚುಟುಕಾಗಿಯೂ, ಜಡವಾಗಿಯೂ ಇತ್ತು. ಪ್ರತಿಯೊಂದು ಶಬ್ದಕ್ಕೂ ಏನೋ ಪ್ರಯಾಸ ಪಟ್ಟಂತೆ, ಜೀವನದ ಉಲ್ಲಾಸವೇ ಹೊರಟುಹೋದಂತೆ ಅದರಲ್ಲಿ ವ್ಯಕ್ತವಾಗುತ್ತಿತ್ತು. ಅದನ್ನು ಓದುತ್ತ ಹೋದ ಹಾಗೆ ಟಾಮನ ನರನಾಡಿಗಳಲ್ಲಿ ನಿರುತ್ಸಾಹ ಸಂಚರಿಸುವಂತಾಯಿತು. ಕಾಗದದ ಕೊನೆಯಲ್ಲಿ ಅದಕ್ಕೆ ಕಾರಣವೂ ಗೊತ್ತಾಯಿತು. 'ನಾನು ಆಯೋವಾಕ್ಕೆ ಹೋಗಿದ್ದಾಗ ನಿನ್ನ ತಂದೆ ಹಳ್ಳವನ್ನು ಬತ್ತಿಸಿ ಬಿಟ್ಟಿದ್ದಾರೆ' ಎಂಬ ಸಮಾಚಾರವನ್ನು ಆಕೆ ಸಾದಾ ಸರಳ ರೀತಿಯಲ್ಲಿ ಬರೆದಿದ್ದಳು. ಸಹಿ ಮಾಡಿದ ಮೇಲೆ ಉಳಿದ ಜಾಗದಲ್ಲಿ 'ನೀನು ಹಳ್ಳದ ವಿಷಯ ಹೆಚ್ಚು ಚಿಂತೆ ಮಾಡಬೇಡ. ಅದಿಲ್ಲದಿದ್ದರೆ ನಾವೆಣಿಸಿದಷ್ಟು ವ್ಯಥೆ ಏನೂ ಆಗುವುದಿಲ್ಲ' ಎಂದು ಆಕೆ ಸಮಾಧಾನವನ್ನೂ ಬರೆದಿದ್ದಳು.

ಅದು ಸುಳ್ಳೆಂದು ಅವನಿಗೆ ತಿಳಿಯದೆ? ಜೀವನದ ಕೊನೆಯ ಆಧಾರವನ್ನೂ ಅವಳಿಂದ ಕಸುಗೊಂಡಂತಾಯಿತು. ಹೌದು ಸೆಲ್ಲಿ ಮತ್ತು ಮಗು ಹಳ್ಳದ ಕೊರತೆಯನ್ನು ತುಂಬಿಕೊಟ್ಟರೂ ಕೊಡಬಹುದು. ಹಳ್ಳದ ಸ್ಥಾನದಲ್ಲಿ ಮಗು ಬಂದು ನಿಂತರೂ ಅಡ್ಡಿಯಿಲ್ಲ. ಕಡಲಿನ ಗಾಳಿಗೆ ಮೋರೆಯೊಡ್ಡಿ ಕೂತ ಟಾಮನಿಗೆ ಫಕ್ಕನೆ ಅದೇಕೋ ದೇವರನ್ನು ಪ್ರಾರ್ಥಿಸಬೇಕೆಂಬ ಹಂಬಲ ಮೂಡಿತು. 'ದೇವರೆ, ಆ ಮಗುವಿಗೆ ಏನೂ ಆಗದಿರಲಿ. ಅದೀಗ ನಮಗೆ ಅಗತ್ಯವಾಗಿ ಬೇಕಾಗಿದೆ—ನನಗಿಂತ ಹೆಚ್ಚಾಗಿ ನನ್ನ ತಾಯಿಗೂ, ಹೆಂಡತಿಗೂ ಬೇಕಾಗಿದೆ ದೇವರೇ, ಎಲ್ಲವೂ ಶುಭವಾಗಲಿ!' ಎಂದು ಆತ ಬೇಡಿಕೊಂಡನು ಮರುಕ್ಷಣ, ಆ ಮಗು ಹಳ್ಳವಿಲ್ಲದೆ ಆ ಬೋಳು ಭೂಮಿಯಲ್ಲಿ ಬೆಳೆಯಬೇಕಾಗುವುದಲ್ಲಾ ಎನಿಸಿತು.

ಒಮ್ಮಿಂದೊಮ್ಮೆ ತಂದೆಯ ಮೇಲೆ ಆತನಿಗೆ ಉಗ್ರ ಕ್ರೋಧವು ಉಕ್ಕೇರಿ ಬಂತು; ಆದರೆ ಅಷ್ಟೇ ಶೀಘ್ರವಾಗಿ ಹಾರಿ ಬಂದ ಕಡಲ ಗಾಳಿಯ ಅಲೆಯೊಂದು ಅದನ್ನು ಬಳಿದುಕೊಂಡು ಹೋಯಿತು. ಕತ್ತಲು ಕವಿಯತೊಡಗಿತು. ಕ್ಯಾರಿಯರ್ ನೌಕೆಯ ಮೇಲುಮುಹಡಿಯ ಹಿಂದುಗಡೆ ಇದ್ದ ಕಡಲಿನಲ್ಲಿ ದೀಪಮಾಲೆ ಪ್ರಜ್ವಲಿಸತೊಡಗಿತು.

ಜಿಮ್ಮಿ ಅವನ ಹಿಂದೆಯೇ ನಿಂತಿದ್ದನು. 'ಏನು ವಿಷಯ, ಏನೂ ಕೆಟ್ಟ ಸುದ್ದಿ ಇಲ್ಲವಲ್ಲಾ' ಎಂದು ಆತ ಕೇಳಿದನು. ಟಾಮ್ 'ಇಲ್ಲ, ಅಂಥ ದೇನೂ ಇಲ್ಲ, ಮನೆಯ ನೆನಪಾಗುತ್ತದೆ, ಅಷ್ಟೆ.' ಎಂದನು. ಜಿಮ್ಮಿ 'ನೋಡು, ಕಾಗದ ಯಾರಾದರೂ ಬರೆದರೆ ಒಮ್ಮೆ ಮನಸ್ಸಿಗೆಸಂತೋಷ ವಾಗುತ್ತದೆ, ಆ ಮೇಲೆ ಮನೆಯ ನೆನಪಾದರೆ ದುಃಖ.'

ಟಾಮ್ ತನ್ನ ಕಾಗದಗಳನ್ನು ಜೇಬಿಗೆ ತುರುಕಿ ಎದ್ದನು.

'ಬಹುಶಃ ನಾಳೆ ನಮಗೆ ಕೆಲಸ ಇರುವ ಹಾಗೆ ತೋರುತ್ತದೆ' ಎಂದು ಜಿಮ್ಮಿ ನುಡಿದನು.

'ಅದು ನಿನಗೆ ಹೇಗೆ ತಿಳಿಯಿತು?' ಎಂದು ಟಾಮ್ ಪ್ರಶ್ನಿಸಿದನು.

'ಮತ್ತೆ ನಾವೇನು ಇಲ್ಲಿ ಗಾಳಿ ತಿನ್ನಲು ಬಂದಿವೆ?' ಎಂದು ಜಿಮ್ಮಿ ಹಲ್ಲು ಕಿರಿದನು.

ಜಿಮ್ಮಿ ಹೇಳಿದ ಮಾತು ಸತ್ಯವಾಯಿತು, ಮರುದಿನ ಅಪರಾಹ್ನ ಸ್ವಲ್ಪ ದೂರದಲ್ಲಿರುವ ಒಂದು ದ್ವೀಪದ ದಾಳಿಗೆ ಹೊರಡುವ ಬಾಂಬರ ವಿಮಾನಗಳಿಗೆ ಸಂರಕ್ಷಣೆ ನೀಡುವುದಕ್ಕೋಸ್ಕರ ಟಾಮ್ ಮತ್ತು ಅವನ ಸಂಗಾತಿಗಳು ಹೊರಡಬೇಕೆಂದು ಆಜ್ಞೆ ಹೊರಟಿತು. ಅಂತೂ ಬೇಸರ ವನ್ನು ಕಳೆಯಲು ಒಂದು ಉದ್ಯೋಗವಾದರೂ ಸಿಕ್ಕಿತಲ್ಲಾ ಎಂದು ಟಾಮ್ ಉಸುರ್ಗರೆದನು. ಹಳ್ಳದ ದೆಸೆಯಿಂದ ಅವನ ಹೃದಯದಲ್ಲಿ ನಿನ್ನೆಯಿಂದ ಕಳವಳವು ತುಂಬಿದ್ದಿತು. ಒಮ್ಮೆ ಸಿಟ್ಟಿನಲ್ಲಿ ತಂದೆಗೆ ಪತ್ರ ವನ್ನು ಬರೆದು, ಮರುಕ್ಷಣ ಅದರಿಂದ ಒಳ್ಳೆಯದರ ಬದಲು ಪರಿಸ್ಥಿತಿ ಕಠಿನವಾಗಬಹುದೆಂಬ ಅಂಜಿಕೆಯಿಂದ ಹರಿದೊಗೆದನು. ಆ ಮೇಲೆ ತಾಯಿಗೊಂದು ಪತ್ರವನ್ನು ಬರೆದು ಯುದ್ಧವು ಮುಗಿದು ಮರಳಿ ಬಂದ ಮೇಲೆ ನಿನ್ನನ್ನು, ಸೆಲ್ಲಿ ಮತ್ತು ಮಗುವನ್ನು ಕರೆದುಕೊಂಡು ಅಯೋವಾ ರಾಜ್ಯದಲ್ಲಿ ಮನೆ ಮಾಡುತ್ತೇನೆಂದು ಆಶ್ವಾಸನೆ ನೀಡಿದನು. ಅವಳಿಗೆ ಏನಾದರೂ ಒಂದು ಆಸೆ ತೋರಿಸಿ ಬಂಜರು ನೆಲದ ಬಾಳುವೆ ಯನ್ನು ಸಹನೀಯವಾಗಿ ಮಾಡಬೇಕೆಂಬುದು ಅವನ ಉದ್ದೇಶವಾಗಿತ್ತು.

ಆ ರಾತ್ರಿ ಅವನಿಗೆ ಹಳ್ಳದ ಕನಸು ಬಿದ್ದಿತು.

*   *   *   *

ಮೂರುಗಂಟೆಗೆ ದಾಳಿ ಆರಂಭವಾಯಿತು. ಹಡಗಿನ ಡೆಕ್ಕಿನ ಮೇಲೆ ಚಟುವಟಿಕೆ, ಜನಸಂಚಾರ ಅಧಿಕವಾಯಿತು. ಹಡಗನ್ನು ವೇಗವಾಗಿ ಚಲಿಸುವ ಮೋಟರುಗಳ ಸದ್ದು ಅತಿಶಯವಾಯಿತು. ಒಂದೊಂದಾಗಿ ವಿಮಾನಗಳು ಹಡಗಿನಿಂದ ಹೊರಟು ಹಾರತೊಡಗಿದುವು. ಟಾಮುನ ಸಂರಕ್ಷಕ ಫೈಟರ್ ವಿಮಾನವು ಸಾಲಿಗೆ ಬರುವವರೆಗೆ ಆತ ಕಾದು ನಿಲ್ಲಬೇಕಾಗಿತ್ತು. ಆಗ ಅವನ ಧಮನಿಗಳಲ್ಲಿ ವಿಲಕ್ಷಣವಾದ ಉತ್ಸಾಹ ತುಂಬಿಕೊಳ್ಳುವುದು ರೂಢಿ. ಅದನ್ನು ನೋಡಿದರೆ ವೈಮಾನಿಕನಾಗಲೆಂದೇ ಆತ ಹುಟ್ಟಿದನೋ ಎನಿಸಬೇಕು. ವಿಮಾನವು ಚಲನೆಯನ್ನು ಆರಂಭಿಸಿದ ಕ್ಷಣದಿಂದ ಟಾಮುನಿಗೆ ಮರ್ತ್ಯಲೋಕದ ಬಂಧನಗಳೆಲ್ಲ ಕಳಚಿಹೋದಂತೆಯೂ, ಬದುಕಿನ ಯಾವುದೋ ಒಂದು ಬೇರೆ ಹಂತದಲ್ಲಿ ತಾನು ಜೀವನವನ್ನು ಆರಂಭಿಸಿದಂತೆಯೂ ಅನುಭವವಾಗುತಿತ್ತು. ನೆಲಬಿಟ್ಟು ಮೇಲಕ್ಕೆ ಹಾರುವಾಗಲೂ, ಆಕಾಶದಿಂದ ನೆಲಕ್ಕಿಳಿಯುವಾಗಲೂ ಟಾಮುನಿಗೆ ವಿಸ್ಮಯಕಾರಿ ರೋಮಾಂಚನವುಂಟಾಗುವುದು. ಮೇಲಕ್ಕೆ ಹೋಗುವಾಗ ಪ್ರಪಂಚದ ಬಂಧನದಿಂದ ಸ್ವತಂತ್ರನಾಗುವ ಅನುಭವ, ಕೆಳಗಿಳಿಯುವಾಗ ದೇವತೆಯೊಬ್ಬ ಮನುಷ್ಯರ ನಡುವೆ ಇಳಿದುಬರುವಾಗ ಉಂಟಾಗಬಹುದಾದ ಉಲ್ಲಾಸ. ವಿಮಾನ ಸಂಚಾರವು ಅವನಿಗೆ ಕೇವಲ ಇಂಜಿನು, ತೈಲ, ನರಶಕ್ತಿ ಮತ್ತು ಚಾಕಚಕ್ಯತೆಯ ಯಾಂತ್ರಿಕ ವ್ಯವಸಾಯವಾಗಿರಲಿಲ್ಲ. ಹಾರಾಡುವಾಗ ಅವನು ವಿಮಾನದೊಡನೆ ತಾದಾತ್ಮ್ಯವನ್ನು ಪಡೆಯಬಲ್ಲನು. ವಿಮಾನಕ್ಕೆ ಅಥವಾ ಅವನಿಗೆ ಏನಾದರೂ ಆಗಿ ತಾನು ಬೇರೆ ಅದು ಬೇರೆ ಎಂದು ಅನಿಸಬೇಕಲ್ಲದೆ ಬೇರೆ ಯಾವ ಕಾಲಕ್ಕೂ ಅವನಿಗೆ ಹಾಗನಿಸುತ್ತಿರಲಿಲ್ಲ.

ಜಿಮ್ಮಿಯ ಸ್ವಭಾವ ಇದಕ್ಕೆ ವಿರುದ್ಧವಾಗಿತ್ತು. ಅವನಿಗೆ ನೆಲದ ಮೇಲೆ ಮೋಟಾರು ಹೊಡೆಯುವುದೂ ಗಾಳಿಯಲ್ಲಿ ವಿಮಾನ ಹೊಡೆಯುವುದೂ ಬೇರೆ ಬೇರೆಂದು ಅನಿಸಿದ್ದೇ ಇಲ್ಲ. ಎಲ್ಲಾ ಯಂತ್ರಗಳನ್ನು ಹೊಡೆದಾಗ ಹೇಗೋ ಹಾಗೆ ಅದು ಯಂತ್ರ, ತಾನು ಚಾಲಕನೆಂಬ ವಾಸ್ತವಾಂಶ ಅವನಿಗೆ ಚೆನ್ನಾಗಿ ಅರಿತಿತ್ತು. ತನ್ನ ವಿಮಾನದ ಸರದಿ

ಬರುವತನಕ ಅವನು ಟಾಮುನ ಪಕ್ಕದಲ್ಲಿ ಕಾದು ನಿಂತಿದ್ದನು. ಟಾಮುನ ಕಡೆಗೆ ನೋಡಿದಾಗ ಆತನ ಮುಖದ ವಿಲಕ್ಷಣ ಕಾಂತಿಯನ್ನು ನೋಡಿ 'ಅದೇನಯ್ಯಾ ಹಾಗೆ ನೋಡುತ್ತಿದ್ದೀ?' ಎಂದು ಕೇಳಿದನು. ಆದಕ್ಕೆ ಟಾಮ್ 'ಏನೂ ಇಲ್ಲ, ಸುಮ್ಮಗೆ ಯೋಚನೆ ಮಾಡುತ್ತಿದ್ದೆ' ಎಂದನು. 'ಹೌದು, ಇವನಿಗೆ ಪ್ರತಿಯೊಂದರಲ್ಲಿಯೂ ಏನಾದರೂ ಹೊಸದು ಹೊಳೆಯುತ್ತಲೇ ಇರುತ್ತದೆ ಎಂದು ಜಿಮ್ಮಿ ಗೊಣಗಿ ತನ್ನ ವಿಮಾನದ ಬಳಿಗೆ ಮುಂದಾದನು.

ಅಷ್ಟರಲ್ಲಿ ಸ್ಕಿಪ್ಪೀ ಎಂಬ ಹೆಸರಿನ ರೇಡಿಯೋ ಆಪರೇಟರನು ಟಾಮುನ ಹತ್ತಿರಕ್ಕೆ ಧಾವಿಸಿ ಟಾಮುನ ಕೈಯೊಳಗೆ ಒಂದು ತುಂಡು ಕಾಗದವನ್ನು ತುರುಕಿ 'ಪರವಾ ಇಲ್ಲಯ್ಯಾ, ಹುಷಾರಾಗಿದ್ದಾಳೆ, ತೆಗೊ' ಎಂದನು ಟಾಮ್ ತನ್ನ ವಿಮಾನದ ಬಳಿಗೆ ಓಡುತ್ತಿರುವಾಗಲೇ ಕಾಗದವನ್ನು ಬಿಡಿಸಿ 'ಹುಡುಗ—ಎಲ್ಲರೂ ಆರೋಗ್ಯ—ಪ್ರೀತಿ—ಸೆಲ್ಲಿ' ಎಂಬ ಸಂದೇಶವನ್ನು ಅದರಲ್ಲಿ ಬರೆದಿತ್ತು. ವಿಮಾನವನ್ನು ಹೊಕ್ಕವನೇ ಟಾಮ್ ಅದನ್ನು ಅಮುಕಿ ನೀಲಸಾಗರದ ಮೇಲ್ಗಡೆ ಏರಿಸಿದನು. ರೇಡಿಯೋ ಅಪರೇಟರ್ ಸ್ಕಿಪ್ಪಿ ಡೆಕ್ಕಿನ ಮೇಲೆ ತನ್ನ ಪಕ್ಕದ ತರುಣನ ಹತ್ತಿರ 'ಹಾಗೆಲ್ಲ ಯುದ್ಧಕ್ಕೆ ಹೊರಡುವ ಮೊದಲು ಸಂದೇಶಗಳನ್ನು ಕೊಡುವುದು ನಿಯಮಕ್ಕೆ ವಿರುದ್ಧ. ಆದರೆ ಹೇಗೆ ಗೊತ್ತು? ತಂದೆಯಾಗುವವನಿಗೆ ಈ ಸಮಾಚಾರ ತಿಳಿಸಬೇಡವೆ? ಹೋದವನು ಹಿಂದೆ ಬಾರದೇ ಇದ್ದರೋ ಎಂದು ತಿಳಿಸಿಯೇ ಬಿಟ್ಟೆ' ಎಂದನು.

ಟಾಮ್ ವಿಮಾನವನ್ನು ಎತ್ತರ, ಇನ್ನೂ ಎತ್ತರ ಹಾರಿಸಿ ಕೊನೆಗೆ ತನಗಿಂತ ಮುಂದೆ ಹೋದ ವಿಮಾನಗಳ ಪಂಕ್ತಿಗೆ ಸೇರಿಕೊಂಡನು. ಸೇರಿದವನೇ ಹಿಂದಿರುಗಿ ಆಗಲೇ ಡೆಕ್ ಬಿಡುತ್ತಿದ್ದ ಕೆಲ ವಿಮಾನಗಳನ್ನು ನೋಡಿದನು. ದೃಶ್ಯ ಸುಂದರವಾಗಿತ್ತು. ಗಬ್ಬಿಲಗಳು ನಸುಕಿನ ವೇಳೆ ಹಳ್ಳದ ಸುತ್ತಲಿನ ಕೀಟಗಳನ್ನು ಬೇಟೆಯಾಡಲು ಸಾಲುಗಟ್ಟಿ ಹೊರಡುವಷ್ಟೇ ಸುಂದರವಾಗಿತ್ತು. ದೊಡ್ಡ ಹಡಗದ ಗಾತ್ರ ಕಿರಿದಾಗುತ್ತ ಹೋಯಿತು. ದೂರವು ಹಿರಿದಾಯಿತು.

ಹಟಾತ್ತನೆ ವಿಮಾನದ ರೇಡಿಯೋದಲ್ಲಿ

'ಜಿಮ್ಮಿ, ಇದು ಜಿಮ್ಮಿ. ಏನು ಕೆಟ್ಟ ಸುದ್ದಿ ಅಲ್ಲವಲ್ಲಾ?' ಎಂದು ಸ್ವರ ಒಂದು ಮಾತನಾಡಿತು.
'ಇಲ್ಲ, ಒಳ್ಳೆಯ ಸುದ್ದಿ. ಗಂಡಂತೆ. ಎಲ್ಲರೂ ಆರೋಗ್ಯ' ಸರಿ, ಜಿಮ್ಮಿ ಈ ಸುದ್ದಿಯನ್ನು ಇತರ ಮಿತ್ರರಿಗೆ ದಾಟಿಸಲು ಆರಂಭಿಸಿದನು. ಆದರೆ ಇನ್ನೊಂದು ಸ್ವರ, ವೈಮಾನಿಕ ದಳದ ಸೇನಾನಿಯ ಸ್ವರ 'ನನ್ನ ಅಭಿವಂದನೆಗಳು, ಪೀಟರ್ಸನ್.......ಆದರೆ ಇಷ್ಟಕ್ಕೆ ಹರಟೆ ನಿಲ್ಲಿಸೋಣ. ಆಗದೆ?' — ಎಂದು ಕೇಳಿಸಿತು.

ಆದರೆ ಟಾಮ್ ನೀಲ ಸಾಗರಕ್ಕೆ ಅತಿ ಎತ್ತರದಲ್ಲಿ ಹಾರುತ್ತ ಆ ಪತ್ರವನ್ನಿನ್ನೊಮ್ಮೆ ಬಿಡಿಸಿ ನೋಡಿದನು. ನೋಡಿ ನಂಬಲಾರನು. ಉಲ್ಲಾಸದಿಂದ ನೆತ್ತರು ವೇಗವಾಗಿ ಹರಿಯ ತೊಡಗಿತು. 'ಇದರಲ್ಲಿ ಇಂಥದೇನು ಉತ್ಸಾಹ? ಈ ಪ್ರಪಂಚದಲ್ಲಿ ತಂದೆ ಎಂಬವ ನಾನೊಬ್ಬನೇ ಅಲ್ಲವಲ್ಲಾ' ಎಂಬ ಯೋಚನೆಯ ಬೆನ್ನಿಗೆ ಈ ಪ್ರಪಂಚದಲ್ಲಿರುವ ಇನ್ನೊಂದು ಜೀವಕ್ಕೆ ತಾನು ಹೊಣೆಗಾರನೆಂಬ ಜ್ಞಾನವು ಮೂಡಿ ಒಂದು ರೀತಿಯ ಭಯವೂ ಉಂಟಾಯಿತು.

ವಿಮಾನವು ಇನ್ನಷ್ಟು ಎತ್ತರಕ್ಕೆ ಹಾರಿತು. ಹಾರಿ ಶಾಂತ ಸಾಗರದ ನಭೋಮಂಡಲದಲ್ಲಿ ದಿನನಿಶಿ ತೇಲುತ್ತಿರುವ ಮೋಡಗಳ ನಡುವೆ ಹರಿಯತೊಡಗಿತು. ಒಂದಾದ ಮೇಲೊಂದು ವಿಮಾನಗಳು ಈ ಮೋಡದ ಬಸಿರಲ್ಲಿ ಮರೆಯಾಗಿ ಅನಂತದಲ್ಲಿ ವಿಲೀನವಾದಂತೆ ತೋರಿ ಆ ಮೇಲೆ ಮರಳಿ ಆಚೆ ಕಡೆಯಿಂದ ಸೂರ್ಯ ಲೋಕವನ್ನು ಪ್ರವೇಶಿಸುವುವು.

ಟಾಮನ ಹೃದಯ ಮತ್ತು ದೇಹದಲ್ಲಿ ಸಂಗೀತವು ಹೊರಹೊಮ್ಮುತಿತ್ತು.

* * * *

ಒಂದು ತಾಸಿನಲ್ಲಿ ಅವರು ತಮ್ಮ ಗುರಿಯನ್ನು ತಲಪಿದರು. ದೊಡ್ಡ ದ್ವೀಪದ ಸುತ್ತಲೂ ಇರುವ ಸಣ್ಣ ಸಣ್ಣ ನಡುಗುಡ್ಡೆಗಳು ಒಂದು ಕಡೆ, ಸಣ್ಣದೊಂದು ಆಖಾತ ಒಂದು ಕಡೆ. ವಿಮಾನ ಇಳಿಯಲು ಹವಳದ ಚಿಪ್ಪಿನಿಂದ ಒಂದು 'ರನವೇ' ಕೂಡ ನಿರ್ಮಾಣ

ಮಾಡಿದ್ದರು. ಆ ಖಾತದಲ್ಲಿ ಒಂದು ದೊಡ್ಡ ಹಡಗವೂ, ಒಂದು ಡಿಸ್ಟ್ರಾಯರೂ, ಹಲವು ದೋಣಿಗಳೂ ನಿಂತಿದ್ದುವು.

ಗಾಳಿಯಲ್ಲಿ ವೈಮಾನಿಕರಿಗೆ ಆಜ್ಞೆ ಹೊರಡಲು ಆರಂಭವಾಯಿತು. ದಟ್ಟವಾದ ಬಿಳಿ ಮೋಡಗಳ ಗೋಡೆ ಅಡ್ಡಪಾಗಿ ಕೆಲವು ಕ್ಷಣಗಳಲ್ಲೆ ಜಪಾನಿಯುವರ ಮೂರು 'ಜೀರೋ' ವಿಮಾನಗಳು ಬಾಣದಂತೆ ಬಾಂಬರ ವಿಮಾನಗಳಕಡೆಗೆ ಧಾವಿಸಿದುವು. ಕೂಡಲೆ ಎರಡು ಅಮೇರಿಕನ್ ವಿಮಾನಗಳು ಪಂಕ್ತಿಯನ್ನು ಬಿಟ್ಟು ಮುನ್ನುಗಿ ಆ ವಿಮಾನಗಳನ್ನು ಓಡಿಸಿದುವು. ಈಗ ಟಾಮನ ಸರದಿ ಬಂದಿತು. ಅವನೂ ತನ್ನ ವಿಮಾನವನ್ನು ನೇರವಾಗಿ ಕೆಳಗಿಳಿಯುಗೊಟ್ಟು ಜಪಾನಿ ವಿಮಾನ ಒಂದನ್ನು ಸಂಧಿಸಿ ಅದರ ಬೆನ್ನನ್ನೇ ಮುರಿದು ಅದು ಚೂರು ಚೂರಾಗಿ ಕಡಲಿಗೆ ಬೀಳುವುದನ್ನು ಕಂಡನು.

ಆ ಮೇಲೆ ನಾಯಿಗಳ ಜಗಳವೇ ತೊಡಗಿತೆನ್ನಬೇಕು. ಫೈಟರ್ ವಿಮಾನಗಳು ಒಮ್ಮೆ ಗುರಿಯತ್ತ ನೇರವಾಗಿ ಹೊರಟರೆ ಮತ್ತೊಮ್ಮೆ ಜಪಾನಿಯರ ವಿಮಾನದಿಂದ ತಲೆತಪ್ಪಿಸಿಕೊಳ್ಳಲು ಕಂಡಬಟ್ಟೆಯಲ್ಲಿ ಓಡುವುವು. ಈ ಮಧ್ಯೆ ಬಾಂಬರ ವಿಮಾನಗಳು ದ್ವೀಪದ ಮೇಲೂ ಕೆಳಗಡೆ ನಿಂತ ಹಡಗಿನ ಮೇಲೂ ಅಗ್ನಿವರ್ಷವನ್ನು ಕರೆಯುತ್ತಿದ್ದುವು. ಹಡಗು ಸ್ವಲ್ಪ ಹೊತ್ತಿನಲ್ಲಿ ಧಗಧಗನೆ ಉರಿಯತೊಡಗಿತು. "ರನವೇ"ಗೆ ಬಿದ್ದ ಬಾಂಬುಗಳು ಒಡೆದು ಬಾಣ ಬಿರುಸಿನಂತೆ ಹೂವನ್ನು ಚೆಲ್ಲಿ ಅರೆಚಣದಲ್ಲಿ ಹೊಗೆಯಲ್ಲಿ ಲೀನವಾಗುವುವು. ಈ ನಡುವೆ ವಿಮಾನಗಳನ್ನು ಹೊಡೆಯಲು ನೆಲದ ಮೇಲೆ ಇರಿಸಿದ್ದ ತೋಫುಗಳಿಂದ ಗುಂಡು ಹಾರಿ ಮೇಲೆ ಬರುತಿತ್ತು.

ವಿಮಾನದಲ್ಲಿ ತಾದಾತ್ಮ್ಯವನ್ನು ಪಡೆದ ಟಾಮ್ ವಿಮಾನವನ್ನು ತಿರುಗಿಸುತ್ತಲೂ, ಕೆಳಗಡೆ ಇಳಿಸುತ್ತಲೂ, ಮೇಲೇರುತ್ತಲೂ ಒಂದೇ ಸವನೆ ಕಾರ್ಯದಲ್ಲಿ ತಲ್ಲೀನನಾಗಿದ್ದನು. ಉಲ್ಲಾಸದಿಂದ ನಗುತ್ತ ಕೂಸಿನ ಕುರಿತು ಯೋಚಿಸಿದನು: 'ನೋಡು ಮಗೂ, ನಿನ್ನ ತಂದೆ ಆಕಾಶದಲ್ಲಿ ಸಂತೋಷದಿಂದ ಉಡ್ಡಾಣ ಮಾಡುವುದನ್ನು! ಎಂದು ಮನಸ್ಸಿನಲ್ಲೇ

ಅಂದುಕೊಂಡನು. ಕಾಲಜ್ಞಾನವೇ ಇರಲಿಲ್ಲ ಅವನಿಗೆ. ಎಲ್ಲವೂ ಏಕಕಾಲದಲ್ಲಿ ಘಟಿಸುವಂತೆ ಅನಿಸುತಿತ್ತು.

ಫಕ್ಕನೆ ಅವನಿಗೆ ಇನ್ನೊಂದು ಜಪಾನಿ ವಿಮಾನದ ಬಾಲ ಹಿಡಿದು ಹಿಂಬಾಲಿಸುವ ಅವಕಾಶ ಒದಗಿತು. ಓಡುತ್ತಿರುವ ಜಪಾನಿ ವಿಮಾನವು ಮೋಡಗಳ ನಡುವೆ ಮರೆಯಾಯಿತು. ಅಲ್ಲಿಗೂ ಅದನ್ನು ಹಿಂಬಾಲಿಸಿದರೆ ಟಾಮನ ವಿಮಾನವು ಮೋಡ ಮುಸುಕಿದ ಮಂಜಿನಲ್ಲಿ ಸಿಕ್ಕಿಕೊಂಡಿತು. ಆ ಕೆಲವು ಕ್ಷಣಗಳೆಂದರೆ ತಾಸುಗಳಂತೆ ಭಾಸವಾಯಿತು ಟಾಮ್‌ಗೆ. ಕೊನೆಗೊಮ್ಮೆ ಸೂರ್ಯನ ಬಿಸಿಲಿನ ಸ್ಪರ್ಶವಾದಾಗ ಆತ ದ್ವೀಪಭೂಮಿಗೆ ಅತಿ ಹತ್ತಿರದಲ್ಲಿದ್ದನು; ಅದೇ ಕ್ಷಣ ಅವನ ಪಕ್ಕದಲ್ಲೇ ಒಂದು ಬಾಂಬು ಸಿಡಿದು ವಿಮಾನವು ಒಂದು ಮಗ್ಗುಲಿಗೆ ಹೊರಳಿತು. ಎರಡನೆಯ ಬಾಂಬು ವಿಮಾನದ ಮುಂದುಗಡೆಯ ಉಪಕರಣಫಲಕವನ್ನು ಭಗ್ನಗೊಳಿಸಿತು. ವಿಮಾನವು ಜಾರುವಂತೆ ತೋರಿತು. ಟಾಮ್ ಅದನ್ನು ಹಿಂದಕ್ಕೆಳೆಯಲು ಯತ್ನಿಸಿದಾಗ ಕಣ್ಣಿಗೆ ಏನೋ ಅಡ್ಡ ಬರುವಂತಾಯಿತು. ತೋಳಿನಿಂದ ಕಣ್ಣನ್ನು ಒರಸಿಕೊಂಡಾಗ ಹಣೆಯಲ್ಲಿ ನೆತ್ತರು ಹರಿಯುತ್ತಿತ್ತು. ವಿಮಾನದಿಂದ ಸಂದೇಶ ಕಳಿಸೋಣ ಎಂದರೆ ರೇಡಿಯೋ ನಿಷ್ಕ್ರಿಯವಾಗಿತ್ತು. ವಿಮಾನದ ಎಡಗಡೆಯ ರೆಕ್ಕೆ ಟಾಮನ ನಿಯಂತ್ರಣಕ್ಕೆ ಸಿಗುತ್ತಿರಲಿಲ್ಲ.

ಆತ 'ಕತೆ ಮುಗಿಯಿತೆಂದು ತೋರುತ್ತದೆ. ಆದರೆ ಮನಸ್ಸಿಗೆ ಹಚ್ಚಿಕೊಳ್ಳದಿದ್ದರೆ ನೋವೆಲ್ಲಿ?' ಎಂದುಕೊಂಡನು. ಮರುಕ್ಷಣ 'ಛೂ, ಹೇಗಾದರೂ ಮಾಡಿ ಇಲ್ಲಿಂದ ಕೀಳಬೇಕು. ನನ್ನ ಈ ದುರ್ಗತಿಯಲ್ಲಿ ಯುದ್ಧ ಕೊಡುವುದು ಸಾಧ್ಯವೆ?' ಎಂದು ಗೊಣಗಿದನು. ಹಿಂದೆ ನೋಡಿದರೆ ಒಂದು ಜಪಾನಿ 'ಜೀರೋ' ಅವನನ್ನು ಬೆಂಬತ್ತಿ ಬರುತ್ತಿತ್ತು.

ಟಾಮ್ ಕೂಡಲೆ ಕಾರ್ಯತತ್ಪರನಾದನು. 'ಬಾ ಮಗುವೇ ಬಾ' ಎಂದು ವಿಮಾನವನ್ನು ಮುಂದಿರುವ ಬಿಳಿ ಮೋಡಗಳ ಕಡೆಗೆ ಓಡಿಸಿದನು. ದಪ್ಪವಾಗಿಯೂ, ಹತ್ತಿಯಂತೆ ಹಗುರಾಗಿಯೂ ಬಿಳಿದಾಗಿಯೂ ಇರುವ ಆ ಮೇಘಮಾಲೆಯು ಅವನ ಜೀವವನ್ನು ಉಳಿಸಬಹುದು.

ವಿಮಾನವು ಅವನು ಹೇಳಿದಂತೆ ಕೇಳಿದ್ದೇ ದೊಡ್ಡದು. ಜಪಾನಿ ವಿಮಾನ ಬಲುವೇಗದಿಂದ ಧಾವಿಸಿ ಬರುತಿತ್ತು. ಅದು ಹಾರಿಸಿದ ಗುಂಡು ಗುರಿತಪ್ಪಿ ಬಿದ್ದುದರಿಂದ ನೇರವಾಗಿ ಟಾಮನ ವಿಮಾನಕ್ಕೆ ತಾಗದೆ ಸಮೀಪದಲ್ಲಿ ಬಿದ್ದು ವಿಮಾನವನ್ನು ನಡುಗಿಸಿತು ಮಾತ್ರ.

ಹೌದು, ಟಾಮ್ ಮೇಘದ ಮಡಿಲಲ್ಲಿ ರಕ್ಷೆಗಾಗಿ ಸೇರಿ ಕೊಂಡನು. ಶೀಘ್ರವಾಗಿ ಆ ಮಂಜಿನೊಳಗೆ ವಿಮಾನವನ್ನು ತೂರಿಸಿ ದನು. ಪೆಟ್ಟು ತಿಂದ ವಿಮಾನವನ್ನು ಹಿಡಿದುಕೊಂಡು ಯುದ್ಧ ಮಾಡುವುದಂತೂ ಶಕ್ಯವಿರಲಿಲ್ಲ. ನೇರಕ್ಕೆ ಹಾರಿ ಶತ್ರುಗಳಿಂದ ತಪ್ಪಿಸಿಕೊಂಡು ಆ ಮೇಲೆ ನಿಧಾನವಾಗಿ ಹಿಂದಿರುಗಿ ಇತರ ಸಂಗಾತಿ ಗಳನ್ನೋ, ಕ್ಯಾರಿಯರ್ ಹಡಗವನ್ನೋ ಸೇರುವ ಒಂದೇ ಮಾರ್ಗ ಅವನಿಗೆ ಉಳಿದಿತ್ತು. ಫಕ್ಕನೆ ಅವನಿಗೆ ಉಪಕರಣಗಳು ಒಡೆದು ನಿಷ್ಕ್ರಿಯವಾದ ಬಗೆ ನೆನಪಿಗೆ ಬಂದಿತು. ಹಾಗಾದರೆ ಸಂಗಾತಿ ಗಳೊಡನೆ ಸಂಪರ್ಕವೂ ಸಾಧ್ಯವಿಲ್ಲ, ತಾನು ಎಲ್ಲಿಗೆ ಹೋಗುತ್ತಿರುವೆ ನೆಂದು ದಿಕ್ಕಿನ ಕಲ್ಪನೆಯೂ ಇಲ್ಲ. ಹೌದು, ಅವನೀಗ ಒಬ್ಬಂಟಿಗ.

ಸ್ವಲ್ಪ ಎಡಗಡೆಗೆ ತಿರುಗಿದಾಗ ವಿಮಾನಕ್ಕೆ ಸೂರ್ಯಪ್ರಕಾಶವು ಕಂಡಿತು. ಮುಂದುಗಡೆಯಲ್ಲಿ ಕೆಂಬಣ್ಣದ ಒಂದು ಮುಗಿಲ ಗುಂಪು ಅವನ ಸ್ವಾಗತಕ್ಕೆ ನಿಂತಿತ್ತು. 'ನನ್ನ ಕತೆ ಇನ್ನೇನು ಮುಗಿಯುತ್ತದೆ. ಸೂರ್ಯನೂ ಕಂತುತ್ತಿದ್ದಾನೆ' ಎಂದುಕೊಂಡನಾತ. ಕೆಳಗೆ ನೋಡಿ ದರೆ ಅಪಾರವಾದ ಸಾಗರದ ಜಲರಾಶಿಯ ಹೊರತು ಬೇರೇನೂ ಇರ ಲಿಲ್ಲ ವಿಮಾನವನ್ನು ತಗ್ಗಿಸಿ ನೋಡುತ್ತೇನೆ ಎಂದು ಅವನು ನಿಧಾನ ವಾಗಿ ಮೋಡದ ಕೆಳಗೆ ಕವಿಯುವ ಅಂಧಕಾರವನ್ನು ಸೇರಿದನು. ಎಷ್ಟು ದೂರ ಕಣ್ಣು ಹಾರಿಸಿದರೂ ಕ್ಯಾರಿಯರಿನ ಸುಳಿವೂ ಇಲ್ಲ, ಬೇರೆ ವಿಮಾನಗಳೂ ಇಲ್ಲ, ನೆಲವೂ ಕಾಣಿಸದು. ತಾನೆಲ್ಲಿಗೆ ಬಂದೆನೆನ್ನು ವುದೂ ತಿಳಿಯದು. ಕಂತುವ ಸೂರ್ಯನ ದೆಸೆಯಿಂದ ಮಾತ್ರ ಅವನಿಗೆ ದಿಕ್ಕು ಗೊತ್ತಾಗಬೇಕು. 'ನಾವು ಬಂದುದು ಸೂರ್ಯನಿರುವ ದಿಶೆ ಯಿಂದ. ಅಂದರೆ ಸೂರ್ಯನ ಕಡೆ ಹಿಂದಿರುಗಿದರೆ ಆಯಿತು" ಎಂದು ಕೊಂಡನು.

ನೆತ್ತರು ಈಗ ಕಣ್ಣಿಗೆ ಹರಿಯುತ್ತಿರಲಿಲ್ಲ. ಕತ್ತಲು ಕವಿಯು ತ್ತಿರುವ ಸಾಗರದ ಮೇಲ್ಗಡೆ ಇರುವ ಅಖಂಡ ವಿಶ್ವದಲ್ಲಿ ಅವನೊಬ್ಬನೇ ಒಬ್ಬ. ಮುಂದುಗಡೆ ಸೂರ್ಯನು ವೇಗವಾಗಿ ಇಳಿಯುತ್ತಲೇ ಇದ್ದನು. ಟಾಮ್ .'ಹಿಂದಿರುಗಬೇಕು, ನನ್ನ ಮಗುವಿನ ಸಲುವಾಗಿಯಾದರೂ, ಹಿಂದೆ ಹೋಗಲೇಬೇಕು" ಎಂದು ಪಣತೊಟ್ಟನು.

ಕಡಲಿನ ನೀರು ಓಕುಳಿ ಬಣ್ಣದಿಂದ ಕರಿನೆತ್ತರಿನ ಬಣ್ಣಕ್ಕೆ ತಿರುಗಿ ಕಟ್ಟಕೊನೆಗೆ ಸೂರ್ಯಾಸ್ತದ ಪರಿಣಾಮವಾಗಿ ಕರಿದಾದ ಛಾಯೆಗೆ ತಿರುಗಿತು. ಒಮ್ಮಿಂದೊಮ್ಮೆ ಆಕಾಶವು ನಕ್ಷತ್ರಪುಂಜರಂಜಿತವಾಯಿತು.

ಅವನಿಗೆ ಒಂದು ಕ್ಷಣ ತಾನು ಸತ್ತುಹೋಗಿ, ಕೇವಲ ತನ್ನ ಮತ್ತು ವಿಮಾನದ ಪ್ರೇತಗಳು ಸೂರ್ಯನಿಗಭಿಮುಖವಾಗಿ ಪಯಣಿಸು ತ್ತಿದ್ದೇವೇನೋ ಎಂಬ ಭಾವನೆ ಅಂಕುರಿಸಿತು. ಆಗಲೆ ದ್ವೀಪದ ಕರಾವಳಿಯಲ್ಲಿ ಹವಳದ ಹುಡಿಯ ಮೇಲೆ ನಿಂತಿದ್ದಾಗ ತಾನು ವಿಶ್ವದ ಅಣೋರಣೀಯವಾದ ಒಂದು ಕ್ಷುದ್ರ ಭಾಗವೆಂಬ ಅನುಭವವೂ ಮರುಕಳಿಸಿತು.

ಸ್ವಲ್ಪ ಹೊತ್ತಿನಲ್ಲಿ ಅವನ ವಿಮಾನದ ಮೋಟರು ತೊಂದರೆ ಕೊಡಲು ಆರಂಭಿಸಿತು. ಸರಿ ಇನ್ನೇನು, ತೈಲದ ಭಾಗವು ಕೆಟ್ಟು ಹೋಗಿ ತೈಲವು ಸೋರುತ್ತಿರಬೇಕು ಎಂದುಕೊಂಡನವ. ಅಪೂರ್ವ ಶಾಂತಿಯಿಂದ "ಒಂದು ಅಧ್ಯಾಯ ಮುಗಿಯಿತು" ಎಂದು ಆತ ಯೋಚಿಸಿದನು.

ಅವನು ಅಂಜಲಿಲ್ಲ. ತಲೆನೋವು ಒಂದನ್ನು ಬಿಟ್ಟರೆ ಆತ ಶಾಂತನಾಗಿಯೇ ಇದ್ದನು. ವಿಮಾನವು ಕೆಳಗೆ ವಾಲಿಕೊಂಡು ಸರಿಯು ತಿತ್ತು. 'ತಾಯಿ, ಸೆಲ್ಲಿ ಮತ್ತು ಮಗುವನ್ನು ಅಯೋವಾಕ್ಕೆ ಇನ್ನು ಒಯ್ಯಲು ಸಾಧ್ಯವಿಲ್ಲದಾಯಿತು' ಎಂಬ ಯೋಚನೆ ಹೊಳೆಯಿತು. ಫಕ್ಕನೆ ಅವನಿಗೆ ಕಾರ್ಪಾಸ ವೃಕ್ಷದ ನಡುವೆ, ಕಡುಬೇಸಗೆಯ ಮೆಲು ಗಾಳಿಗೆ ಅಲೆಎಬ್ಬಿಸುತ್ತ, ಹೊಳೆಯುತ್ತಿರುವ ಹಳ್ಳದ ದರ್ಶನವಾಯಿತು. ತಂದೆ ಹಳ್ಳವನ್ನು ಬತ್ತಿಸಿಬಿಟ್ಟನೆಂಬುದು ನೆನಪಾದುದು ಆ ಮೇಲೆ.

ವಿವಶತೆಯಿಂದ ಆತನು 'ಮಗುವಿಗೆ ಹಳ್ಳ ಬೇಕೇ ಬೇಕು. ತಾಯಿಗೂ ಮಗುವಿಗೂ ಹಳ್ಳವಿಲ್ಲದೆ ಸಾಧ್ಯವೇ ಇಲ್ಲ ಎಂದು ಶೋಕಿಸಿದನು.

ಮೊದಲೇ ವಿದೀರ್ಣವಾದ ಉಪಕರಣಫಲಕದ ತಗಡಿಗೆ ಅವನ ತಲೆ ಬಡಿದಾಗ ಈ ಪ್ರಪಂಚವು ಅವನ ಪಾಲಿಗೆ ಭಗ್ನವಾಯಿತು.

ನಕ್ಷತ್ರಲೋಕದ ಕೆಳಗಿನ ಸಾಗರದ ಜಲರಾಶಿ ಉಲ್ಲಾಸದಿಂದ ವಿಮಾನವನ್ನೂ ಅದರ ಸಂಚಾಲಕನನ್ನೂ ಅಪ್ಪಿಕೊಳ್ಳಲು ಕುಣಿದಾಡುತ್ತಿತ್ತು. ರಂಜಕಮಯವಾದ ಜಲರಾಶಿ ಅಗ್ನಿಜ್ವಾಲೆಯಂತೆ ಪುಟನೆಗೆದು ಸಾಗರದ ಮೈಮೇಲೆ ವಜ್ರದ ಹರಳುಗಳನ್ನು ಚೆಲ್ಲಿ ಒಮ್ಮೆಲೆ ನರ್ತನವನ್ನು ನಿಲ್ಲಿಸಿತು. ಎಲ್ಲವೂ ಶಾಂತವಾದುದಕ್ಕೆ ನಕ್ಷತ್ರಲೋಕವು ಸಾಕ್ಷಿಯನ್ನು ಹೇಳಿತು. ದಿಗಂತದ ಆಚೆಗೆ ಚಂದ್ರಬಿಂಬವು ಏಕಾಕಿಯಂತೆ ಸ್ಥಿರವಾಗಿತ್ತು.

೦ ೦ ೦ ೦

ಆ್ಯನಿ ಪೀಟರ್ಸನ್ ಮತ್ತು ಸೆಲ್ಲಿ ಅಯೋವದಿಂದ ಮರಳಿದ ಮೇಲೆ ಒಂದು ವಾರದ ಅನಂತರ ಸೆಲ್ಲಿ ಗಂಡುಮಗುವನ್ನು ಹೆತ್ತಳು.

ಮಗುವಿನ ಜನನವು ಆಕೆಗೆ ಹಳ್ಳದ ಅಭಾವವನ್ನು ಸ್ವಲ್ಪಮಟ್ಟಿಗೆ ತುಂಬಿಕೊಟ್ಟಿತು. ಆ ಒಂದು ವಾರವೂ ಆಕೆ ಹಳ್ಳದ ಬದಿಗೆ ಇರಿಸಿದ್ದ ಮನೆಯ ಕಿಟಕಿಯ ಹತ್ತಿರ ನಿಂತುದೇ ಇಲ್ಲ. ರಾತ್ರಿ ನಿದ್ದೆ ಬಾರದಿರುವಾಗ ಎಲೆಗಳ ಮರ್ಮರವನ್ನೂ ಹಕ್ಕಿಗಳ ಇಂಚರವನ್ನೂ ಕೇಳೋಣವೆಂದರೆ ಒಂದು ಸರಿಯಾದ ಜಾಗವೇ ಇರಲಿಲ್ಲ ಹೊರಗೆ ಕಿವಿಗೊಟ್ಟರೆ ಯಾವ ಸದ್ದೂ ಕೇಳಿಸದು. ಹೀಗೆ ಅವಳಿಗೆ ಪ್ರಪಂಚವೇ ಜಡವಾಯಿತು, ಶೂನ್ಯವಾಯಿತು.

ಕೂಸು ಹುಟ್ಟುವುದಕ್ಕೆ ಹಿಂದಿನ ಮೂರು ದಿನವೂ ಆ್ಯನಿ ಸೆಲ್ಲಿಯನ್ನು ನೋಡುವುದಕ್ಕೆ ಹೋದವಳು ಕತ್ತಲಾದ ಮೇಲೆಯೇ ಹಿಂದಿರುಗಿದಳು. ಬತ್ತಿಹೋದ ಹಳ್ಳವನ್ನು ನೋಡುವುದು ಆಕೆಗೆ ಬೇಡವಾಗಿತ್ತು: ಬೇಸಗೆಯ ಉರಿಗೆ ಕೆಸರು ಬೇಗನೆ ಒಣಗಿದುದರಿಂದ ಪೀಟರ್ಸನ್ ಚಳಿಗಾಲದ ಗೋಧಿಯ ಬಿತ್ತನೆಗೆ ಆ ನೆಲವನ್ನು ಅಣಿಗೊಳಿಸುತ್ತಿದ್ದನು.

ಮಗು ಹುಟ್ಟಿದುದು ಗುರುವಾರ ಪ್ರಾತಃಕಾಲ. ಕೂಡಲೆ ಆ್ಯನಿ ಟಾಮನಿಗೆ ರೇಡಿಯೋ ಸಂದೇಶವನ್ನು ಕಳಿಸಿದಳು. ಅವಳು ಹೋದಾಗ ತಂತಿ ಕಚೇರಿ ಇನ್ನೂ ತೆರೆದಿರಲಿಲ್ಲ. ಅರ್ಧ ತಾಸಿನ ಮೇಲೆ ಆಪರೇಟರನು ಬಂದು ವಾರ್ತೆಯನ್ನು ತೆಗೆದುಕೊಳ್ಳುವಾಗ ಇದು ಯಾವಾಗ ಮುಟ್ಟೀತು ಎಂದು ಕೇಳಿದಳು. 'ಹೇಳಲು ಬಾರದು. ಒಂದು ವಾರ ಹಿಡಿದರೂ ಹಿಡಿಯಿತೆ. ಎರಡೇ ದಿನಗಳಲ್ಲಿ ಸಿಗುವುದೂ ಇದೆ' ಎಂದು ಆತ ಉತ್ತರಿಸಿದನು.

ಅಲ್ಲಿಂದ ಆ್ಯನಿ ಡ್ರಗ್‌ಸ್ಟೋರಿಗೆ ಹೋಗಿ ಒಂದು ಸುರುಳಿ ಫಿಲ್ಮನ್ನು ಕೊಂಡಳು. ಸೆಲ್ಲಿ ಎದ್ದು ಕೂರುವಷ್ಟು ಹುಷಾರಿಯಾದೊಡನೆ ಬತ್ತಲೆ ಶಿಶುವನ್ನು ತಾಯಿ ಹಿಡಿದುಕೊಂಡಂತೆ ಮೂರು ಚಿತ್ರಗಳನ್ನು ತೆಗೆದಳು. ಮಗು ಉರುಟುರುಟಾಗಿದ್ದು ಕೆಂಗೂದಲಿನಿಂದ ಸುಂದರವಾಗಿ ತೋರುತಿತ್ತು. ಟಾಮನಂತೆಯೇ ಎಂದು ಸೆಲ್ಲಿಗೆ ಆಗಲೇ ಅದು ಕಾಣತೊಡಗಿದರೆ ಈಗಲೇ ಏನೂ ಹೇಳುವಂತಿಲ್ಲವೆಂದು ತಿಳಿದಿದ್ದರೂ ಆ್ಯನಿ ಕೂಡ ಸೊಸೆಯ ಸಮಾಧಾನಕ್ಕೋಸ್ಕರ ಆ ಮಾತಿಗೆ ಒಪ್ಪಿಗೆ ಇತ್ತಳು: ತಮ್ಮ ಆಕಾಶವಾಣಿ ವಾರ್ತೆ ಯಾವಾಗ ಟಾಮನಿಗೆ ತಲಪುವುದೋ, ಅವನಿಂದ ಏನುತ್ತರ ಬರುವುದೋ ಎಂದು ಅವರು ದಿನಂಪ್ರತಿ ನಿರೀಕ್ಷೆಯಲ್ಲಿರುತ್ತಿದ್ದರು.

ಆ ಘಟನೆ ನಡೆದುದು ಮಗು ಹುಟ್ಟಿ ಐದು ದಿನಗಳ ತರುವಾಯ. ಕಡು ಬೇಸಗೆಯ ಇಳಿರಾತ್ರಿಯ ಸಮಯ ಆ್ಯನಿ ಪಿಟರ್ಸನ್‌ಗೆ ಆದೇಕೋ ಎಚ್ಚರವಾಯಿತು. ಹೊರಗೆ ಚಂದ್ರನ ನಸುಬೆಳಕು ಚೆಲ್ಲಿತ್ತು. ಮತ್ತೆ ನಿದ್ರಿಸಬೇಕೆಂದು ಎಷ್ಟು ಪ್ರಯತ್ನಿಸಿದರೂ ಆ್ಯನಿಗೆ ಟಾಮ್, ಮಗು, ಅದರ ಭವಿಷ್ಯದ ಚಿಂತೆಗಳೇ ಕಾಡುತ್ತಿದ್ದುವು. ಯೋಚಿಸಿ ಯೋಚಿಸಿ ಮಂಪರು ಹಿಡಿಯುತ್ತಿದ್ದ ಹಾಗೆ ಎಲ್ಲಿಂದಲೋ ನೀರಿನ ಗುಳು ಗುಳು ಶಬ್ದ ಆಕೆಗೆ ಕೇಳಿಸಿತು. ಬಲವಂತದಿಂದ ಎಚ್ಚರವಾಡಿಕೊಂಡು ಆಕೆ 'ಎಲ್ಲಿನ ಸದ್ದು? ನನಗೆ ಭ್ರಮೆ' ಎಂದು ನೀರಿನ ಯೋಚನೆಯನ್ನು ಮರೆಯಲು ಪ್ರಯತ್ನಿಸಿದಳು. ಕಡೆಗೆ 'ಹಳ್ಳವನ್ನು ಬತ್ತಿಸಿದ್ದು ಸುಳ್ಳಿರಬಹುದೆ?' ಎಂದೊಮ್ಮೆ ಯೋಚಿಸಿದಳು. ಆದರೆ ತಾನು ಒಣಗಿದ ಹಳ್ಳವನ್ನು

ನೋಡುವ ಇಚ್ಛೆಯಿಲ್ಲದೆ ಕತ್ತಲಾದ ಮೇಲೆ ಸೆಲ್ಲಿಯು ಮನೆಯಿಂದ ಹೊರಡುತ್ತಿದ್ದುದು ಜ್ಞಾಪಕಕ್ಕೆ ಬಂದು ಹಳ್ಳ ಬತ್ತಿಸಿದುದು ಸುಳ್ಳಲ್ಲ ಎಂದುಕೊಂಡಳು. ಆದರೂ ನೀರಿನ ಅಲೆಗಳು ಮಿದುವಾಗಿ ಹೊರಡಿಸುವ ಶಬ್ದವು ಆಕೆಗೆ ಕೇಳಿಸುವುದು ನಿಲ್ಲಲೇ ಇಲ್ಲ:

ಯಾವಾಗ ಈ ಅನುಭವವು ಅಸಹನೀಯವಾದ ವೇದನೆಯನ್ನುಂಟು ಮಾಡಲು ತೊಡಗಿತೋ ಆಗ ಆಕೆ ತೊಟ್ಟ ಉಡುಪಿನಲ್ಲಿಯೇ ಮನೆಯ ಇನ್ನೊಂದು ಪಾರ್ಶ್ವಕ್ಕೆ ತೆರಳಿ ಹಳ್ಳದ ಕಡೆಗಿರುವ ಕಿಟಕಿಯನ್ನು ತೆರೆದು ನೋಡಿದಳು.

ಅಗೋ, ಬೆಳುದಿಂಗಳಿನಲ್ಲಿ ಬೆಳ್ಳಿಯ ಹಾಳೆಯಂತೆ ಹೊಳೆಯುತ್ತ, ನಗು ನಗುತ್ತ ಹಳ್ಳವು ಹಿಂದಿದ್ದಲ್ಲೇ ಈಗಲೂ ಇತ್ತು. ಕಾರ್ಪಾಸದ ಮರ, ಪೊದೆಗಿಡಗಳನ್ನು ಬಿಟ್ಟರೆ ಹಿಂದಿನ ಹಳ್ಳಕ್ಕೂ ಇದಕ್ಕೂ ಯಾವ ವ್ಯತ್ಯಾಸವೂ ಇರಲಿಲ್ಲ. ಮಂತ್ರ ಮುಗ್ಧಳಾದವಳಂತೆ ಆ್ಯನಿ ಪೀಟರ್ಸನ್ ಮೆಟ್ಟಲಿಳಿದು, ಸುಟ್ಟು ಹಾಕಿದ ಗಿಡಗಂಟಿಗಳನ್ನು ತುಳಿದುಕೊಂಡು ನೀರಿನ ಅಂಚನ್ನು ಮುಟ್ಟಿದಳು. ಕಣ್ಣು ಬಿಟ್ಟು ನೋಡಿದರೂ ಆಕೆಗೆ ನಂಬಿಕೆ ಬರಲೊಲ್ಲದು, ಬದಲು ಕಣ್ಣಿನಲ್ಲಿ ನೀರು ತುಂಬಿತು. ನೀರಿನಲ್ಲಿ ಕಾಲು ಹಾಕಿ ನಿಂತ ಕೂಡಲೆ ಗಳಗಳನೆ ಅತ್ತು ಬಿಟ್ಟು ಆಕೆ ಸೊಂಟದುದ್ದ ನೀರಿನವರೆಗೂ ಮುಂದುವರಿದಳು. 'ಟಾಮನಿಗೆಷ್ಟು ಸಂತೋಷವಾದೀತು ಈ ಸುದ್ದಿ ಕೇಳಿದರೆ? ರೇಡಿಯೊಗ್ರಾಮ್ ಕಳಿಸಬೇಕು. ಮಗು ಹುಟ್ಟಿದಷ್ಟೇ ಸಂತೋಷವಾಗಬಹುದಲ್ಲಾ' ಎಂದು ಕೊಂಡಳು.

* * * *

ಈ ವಿಸ್ಮಯಕಾರಕ ವಾರ್ತೆ ಜಿಲ್ಲೆಯಲ್ಲೆಲ್ಲ ಹಬ್ಬಿತು ಪೀಟರ್ಸನ್ ಹಳ್ಳದಲ್ಲಿ ಮರಳಿ ನೀರು ತುಂಬಿದೆಯಂತೆ ಎನ್ನುವ ವಾರ್ತೆ ಬಾಯಿಯಿಂದ ಬಾಯಿಗೆ ಹರಡಿ ಮುಂಜಾನೆ ಒಂಭತ್ತು ಗಂಟೆ ಆಗುವಷ್ಟರಲ್ಲಿ ಜನರು ತಮ್ಮ ಮೋಟಾರುಗಳಲ್ಲಿ ಸಾಲು ಸಾಲಾಗಿ ಪೀಟರ್ಸನನ ಹೊಲದ ಕಡೆಗೆ ಬರುತ್ತಿದ್ದರು. ಹಾಗೆ ನೋಡಿದರೆ ಹಳ್ಳದ ಪುನರ್ಜೀವನವು ಆ್ಯನಿ ಯೋಚನೆ ಮಾಡಿದ್ದಕ್ಕಿಂತಲೂ ದೊಡ್ಡ ವಿಸ್ಮಯದ ಘಟನೆಯಾಗಿತ್ತು. ಏಕೆಂದರೆ ಈ ಸಲ ಹಳ್ಳದ ಬುಡದಲ್ಲಿ ಜೀವಸ್ರೋತವಿದ್ದು

ದರಿಂದ ಹಳ್ಳವು ಜೀವಂತ ಹಳ್ಳವಾಗಿತ್ತು, ಬರೇ ನೀರು ತುಂಬಿದ ಕೊಳ್ಳವಾಗಿರಲಿಲ್ಲ. ಎಲ್ಲಿಯೋ ಹಳ್ಳದ ತಳದಲ್ಲಿ ಒಂದು ಊಟೆಯು ಉದ್ಭವವಾಗಿರಬೇಕು; ಇಲ್ಲವಾದರೆ. ಅಷ್ಟು ಹೊತ್ತಿಗೆ ಹಳ್ಳ ಹಿಂದಿಗಿಂತಲೂ ದೊಡ್ಡ ಪ್ರಮಾಣಕ್ಕೆ ಬೆಳೆದು ಉಕ್ಕೇರುವುದೆ? ಪೀಟರ್ಸನನ ಕೆಸರು ಹಳ್ಳದ ಹೊರತು ಬೇರೆ ನೀರಿನ ಆಸರೆಯೇ ಇಲ್ಲದ ಆ ಪ್ರದೇಶದಲ್ಲಿ ಜೀವಂತ ಊಟೆಗಳಿರುವ ಸಂಗತಿ ಜನರಿಗೆ ಪರಮ ಸೋಜಿಗವೂ ಆಗಿತ್ತು.

ನೋಟಕರಲ್ಲಿ ನಾನಾತರದ ಮಾತುಗಳು ಕೇಳಬರುತ್ತಿದ್ದುವು. ಆ್ಯನಿಗಂತೂ ತಾನು ಮುಂಜಾವಿನಲ್ಲಿ ಸದ್ದುಕೇಳಿ ಎದ್ದು ನೋಡಿದಾಗ ಹಳ್ಳಕ್ಕೆ ಹಳ್ಳವೇ ಮರುಸೃಷ್ಟಿಯಾದ ಕತೆಯನ್ನು ಹೇಳಿದಷ್ಟೂ ಆಯಾಸವಿಲ್ಲ. ಇನ್ನೂ ಸರಿಯಾಗಿ ನಡೆಯಲಾರದ ಸೆಲ್ಲಿ ಕೂಡ ಅತ್ತೆಯು ಹೋಗಿ ಹೇಳಿದ ಕೂಡಲೇ ಹಳ್ಳವನ್ನು ನೋಡಲು ಓಡಿ ಬಂದಿದ್ದಳು.

ಹಳ್ಳದ ಕೆಳಗೆ ಜಲಾಂತರ್ಗಾಮಿಯಾಗಿ ಈ ಊಟೆ ಇದ್ದಿರಬೇಕೆಂದೂ ಹಿರಿಯ ಪೀಟರ್ಸನ್ ಮರಗಳ ಬೇರನ್ನು ಸಿಡಿಮದ್ದು ಹಾಕಿ ಅಗೆದಾಗ ತಳದ ಮಣ್ಣು ಸಡಿಲವಾಗಿ ಊಟೆ ಮೇಲಕ್ಕೆ ಪುಟಿದಿರಬೇಕೆಂದೂ ಜಿಲ್ಲಾ ಇಂಜಿನಿಯರನು ಶಾಸ್ತ್ರೀಯ ಕಾರಣವನ್ನು ಕೊಟ್ಟರೆ ಅವನನ್ನು ನಂಬುವವರು ಅಲ್ಲಿ ಯಾರೂ ಇರಲಿಲ್ಲ. ಎಲ್ಲರೂ 'ಟಾಮನಿಗೆ ಈ ಹಳ್ಳವೆಂದರೆ ಪ್ರೀತಿ. ಅವನಿಗಿದನ್ನು ನೋಡಿದರೆ ಸಂತೋಷವಾಗುತ್ತದೆ' ಎಂದಿಷ್ಟೇ ಅನ್ನುತ್ತಿದ್ದರು.

ನೀರು ಸಕಲ ಜೀವರಾಶಿಗಳ ಮೂಲ. ಜೀವಿ ಜೀವಿಗಳನ್ನು ಒಡವೆರಸುವ ಸಂಬಂಧ ಸೂತ್ರ. ಅಂಥ ನೀರನ್ನು ಕಂಡ ಒಣಕಲು ಡಕೋಟ ರಾಜ್ಯದ ಪ್ರಜೆಗಳ ಮನಸ್ಸಿನಲ್ಲಿ ಭೀತಿಸಹಿತವಾದ ಉತ್ಸಾಹ ತುಳುಕುತಿತ್ತು. ಆ ಪೈಕಿ ಅಸಂತುಷ್ಟ ವ್ಯಕ್ತಿ ಕೇವಲ ಒಬ್ಬನೇ ಒಬ್ಬ- ಪೀಟರ್ಸನ್. ಅವನಿಗೆ ತನ್ನ ಯತ್ನವೆಲ್ಲವೂ ನೀರುಪಾಲಾದಂತೆ ಅನಿಸಿತು. ಇನ್ನು ಹಠಹಿಡಿದೂ ಉಪಯೋಗವಿಲ್ಲ; ಜೀವಂತ ಊಟೆಯ ವಿರುದ್ಧ ಹೋರಾಡುವುದು ಅವನಿಗೆ ಬೇಕಾಗಿರಲಿಲ್ಲ.

'ಒಂದು ವಾರದಲ್ಲಿ ನಿಮ್ಮನ್ನೆಲ್ಲ ಅಯೋವಾ ರಾಜ್ಯಕ್ಕೆ ಕರೆದು ಕೊಂಡು ಹೋಗುತ್ತೇನೆಂ'ಬುದಾಗಿ ಟಾಮ್ ತಾಯಿಗೆ ಬರೆದ ಪತ್ರವು ಅವರಿಗೆ ತಲಪಿತು. 'ಹಾಗಾದರೆ ಮಗುವಿನ ಚಿತ್ರ ಮತ್ತು ನಮ್ಮ ಎರಡನೆಯ ರೇಡಿಯೋಗ್ರಾಮ್ ಅವನಿಗೆ ಮುಟ್ಟಲಿಲ್ಲವೆಂದು ಇದರಿಂದ ಅರ್ಥವಾಗುತ್ತದೆ' ಎಂದು ಕೊಂಡರು ಅವರು.

ಕೂಸು ಆರೋಗ್ಯವಾಗಿ ಬಳೆಯುತ್ತಿತ್ತು. ಸೆಲ್ಲಿ ಒಂದು ವಾರ ಅತ್ತೆಯ ಮನೆಯಲ್ಲಿ ಬಂದು ಇದ್ದಳು. ಹಳ್ಳದ ಕುರಿತು ಯೋಜನೆ ಯಲ್ಲಿಯೇ ಅತ್ತೆ—ಸೊಸೆ ಕಾಲಹರಣ ಮಾಡುತ್ತಿದ್ದರು. ಅಂಥ ಕಾರ್ಪಾಸದ ಮರ ಇನ್ನು ಬರುವ ಹಾಗಿಲ್ಲ; ದೇವರಿಗೇ ಅಷ್ಟು ಮರ ಬೆಳಸಲು ನೂರು ವರ್ಷ ಹಿಡಿದಿರಬಹುದು ಅದರ ಬದಲು— ಕಾಡಿನ ಮರಗಳ ಬದಲು— ಊರಿನ ಮರ—ಸಸಿ ನೆಡಬಹುದಲ್ಲ? ಅವರು ನೀರಿನ ಸುತ್ತಲೂ ಬೆಳಿಸಬಹುದಾದ ಗಿಡಮರಗಳ ನರ್ಸರಿ ಕೆಟಲಾಗಿಗೆ ಬರೆದು ಹಾಕಿದರು. ಹಳ್ಳದ ಅಂಚಿನಲ್ಲಿ ಒಂದು ಉದ್ಯಾನವನವನ್ನೇ ನಿರ್ಮಿಸಿ ತಮ್ಮ ಒಣ ರಾಜ್ಯದ ಎಲ್ಲ ಕಡೆಯಿಂದಲೂ ಜನರು ವಿಹಾರಕ್ಕಾಗಿ ಬರು ವಂತೆ ಸ್ಥಳದ ಆಕರ್ಷಣೆಯನ್ನು ಹೆಚ್ಚಿಸಬೇಕೆಂದು ಅವರು ಯೋಜನೆ ಹೂಡಿದರು. ಟಾಮ್ ಬರುವಾಗ ವನದ ಕೆಲಸ ಆದಷ್ಟು ಮುಂದೆ ಸಾಗಬೇಕು. ಮನೆಯ ಹಿರಿಯ ಇನ್ನು ಹಳ್ಳದ ವಿಷಯ ಹಸ್ತಕ್ಷೇಪ ಮಾಡುವಂತಿಲ್ಲ, ಏಕೆಂದರೆ ಇವರಿಗೆ ದೇವರ ಸಹಾಯವಿತ್ತು.

ಈ ಭಾಗಕ್ಕೆ ಹೆನ್ರಿ ಓರ್ ಎಂಬುವನು ಪೋಸ್ಟ್‌ಮೇನ್ ಆಗಿದ್ದನು. ಹುರಿ ಮೀಸೆಯ ಮುದುಕ ಓರ್ ಅಂಚೆ ಬಟವಾಡೆಯ ಜತೆಗೆ ಊರಿನ ಸುದ್ದಿ ಸಂಗ್ರಹವನ್ನೂ ಮಾಡುತ್ತಿದ್ದುದರಿಂದ ಜನರಿಗೆ ಅಂಚೆ ತಡವಾ ಗಿಯೇ ದೊರೆಯುವುದು ರೂಢಿ. ಅವನಿಗೆ ಜಿಲ್ಲೆಯಲ್ಲಿ ತಿಳಿಯದ ವಿಷಯ ಯಾವುದೂ ಇರಲಿಲ್ಲ. ಯಾರ ಆಕಳು ಯಾವಾಗ ಸತ್ತು ಹೋದ್ದು, ಊರಿನ ಮುದುಕ ಮುದುಕಿಯರ ವಾತ ರೋಗ ಯಾವ ಸ್ಥಿತಿಯಲ್ಲಿದೆ - ಹೀಗೆ ಎಲ್ಲ ಸುದ್ದಿಯೂ ಅವನಿಗೆ ಬೇಕು. ಪೋಸ್ಟ್ ಕಾರ್ಡುಗಳನ್ನು ಓದುವುದಂತೂ ಅವನ ಹಕ್ಕೇ ಆಗಿತ್ತು. ಆದರೆ ಲಕ್ಕೋಟೆ ಹರಿಯದೆಯೂ ಒಳಗಿನ ಕಾಗದದ ವಿಷಯವನ್ನು ಅರಿಯುವ

ಮಂತ್ರ ವಿದ್ಯೆಯು ಅವನಿಗೆ ಸಾಧಿಸಿತ್ತಂತೆ. ಆದುದರಿಂದ ಟಾಮ್ ಪೀಟರ್ಸನ್ ಸತ್ತ ಸಮಾಚಾರ ಮೊತ್ತ ಮೊದಲು ತಿಳಿದುದು ಪೋಸ್ಟ್ ಮ್ಯಾನ ಓರ್ರನಿಗೆ. ಲಕ್ಕೋಟಿ ನೋಡಿಯೇ ಅವನಿಗೆ ಈ ವಿಷಯ ಗೊತ್ತಾಯಿತಂತೆ. ಆ ಮೇಲಂತೂ ಹಾದಿಯುದ್ದಕ್ಕೂ ಆ್ಯನಿ ಮತ್ತು ಸೆಲ್ಲಿ ಪೀಟರ್ಸನ್ ಅವರಿಗೆ ಅಶುಭವಾರ್ತೆ ಕಾದಿದೆ ಎಂದು ಕಂಡವರಿಗೆಲ್ಲ ತಿಳಿಸಿ ಆತ ತನ್ನ ಕರ್ತವ್ಯವನ್ನು ಪೂರಯಿಸಿದನು.

ಮುದುಕ ಹೆನ್ರಿ ಪೀಟರ್ಸನ್ ಅವರ ಬಾಗಿಲನ್ನು ಮುಟ್ಟುವಾಗ ನಡುಮಧ್ಯಾಹ್ನವಾಗಿತ್ತು. ಆ್ಯನಿ ಮತ್ತು ಸೆಲ್ಲಿ ಹಳ್ಳದ ದಂಡೆಯಲ್ಲಿ ಏನನ್ನೋ ನೆಡುತ್ತಿದ್ದರು. ಮಗು ಗಾಡಿಯಲ್ಲಿ ಕೂತಿತ್ತು.

ಅವರನ್ನು ಕಂಡ ತಕ್ಷಣ ಹೆನ್ರಿಯ ಧೈರ್ಯವೆಲ್ಲ ಕುಂದಿಹೋಯಿತು. ಅವರು 'ಗುಡ್‌ಮಾರ್ನಿಂಗ್' ಎಂದು ಕೂಗಿದರೆ ಈತ ಕೈಯಲ್ಲಿನ ಕಾಗದಗಳನ್ನೆಲ್ಲ ಸರಿಮಾಡಿಕೊಂಡನು. ಎರಡು ನರ್ಸರಿ ಕೆಟಲಾಗು, ಅಯೋವಾದಿಂದ ಬಂದ ಕಾಗದ, ನಡುವೆ ಭಯಂಕರ ವಾರ್ತೆಯಿರುವ ಆ ಪತ್ರವನ್ನು ಇಟ್ಟು ನೂಲಿನಿಂದ ಗಟ್ಟಿಯಾಗಿ ಕಟ್ಟಿ ಅವರದನ್ನು ಬಿಚ್ಚಿ ಮುಖ್ಯವಾದ ಕಾಗದಕ್ಕೆ ಕೈ ಇಡುವ ಮೊದಲೇ ಪರಾರಿಯಾಗ ಬೇಕೆಂದು ಆತ ಬಯಸಿದನು. 'ಹಳ್ಳ ಮರಳಿ ಬಂದದ್ದು ಒಳ್ಳೆಯ ದಾಯಿತು, ನೋಡಿದರೆ ಆನಂದವಾಗುತ್ತದೆ" ಎಂದು ಹೇಳಿ ಅಂಚೆಯ ಕಟ್ಟನ್ನು ಆ್ಯನಿ ಕೈಯಲ್ಲಿ ಕೊಟ್ಟು ಬೇಗಬೇಗನೆ ತನ್ನ ಮುರಕಲು ಕಾರನ್ನು ಹತ್ತಿ ಯಾವುದೋ ಭೂತವು ಬೆನ್ನಟ್ಟಿ ಬರುತ್ತಿರುವ ರೀತಿ ಯಲ್ಲಿ ಕಾರನ್ನು ಓಡಿಸಿಬಿಟ್ಟನು.

ಹಳ್ಳದ ಅಂಚಿನಲ್ಲಿ ಇಬ್ಬರು ಹೆಂಗಸರೂ ನೆಲದ ಮೇಲೆ ಕೂತರು. ಆ್ಯನಿಗೆ ಹೆನ್ರಿ ಕಟ್ಟಿದ ನೂಲನ್ನು ಬಿಡಿಸಲು ಸ್ವಲ್ಪ ಹೊತ್ತು ತಗಲಿತು. ಅವಳು ನೂಲಿನ ಕಟ್ಟನ್ನು ಸಡಿಲಿಸಿ ಪತ್ರಗಳನ್ನು ಕೈಗೆ ತೆಗೆಯುವುದರೊಳಗೆ ಹೆನ್ರಿಯ ಕಾರು ಧೂಳಿನ ನಡುವೆ ಕಾಣ ದಾಗಿತ್ತು.

ಆ್ಯನಿಗೆ ಲಕ್ಕೋಟಿ ಕೂಡಲೆ ಕಣ್ಣಿಗೆ ಬಿದ್ದಿತು—ಸಮಾಚಾರವೂ ಕೂಡಲೆ ಅರ್ಥವಾಯಿತು. ಆ ಕಾಗದವು ಮಾಯವಾಗುವ

ಉಪಾಯ ಏನಾದರೂ ಇದ್ದರೆ ಅದಕ್ಕೆ ಆಕೆ ಸಿದ್ಧಳು. ಆದರೆ ಸೆಲ್ಲಿ ಟಾಮನ ಪತ್ರನಿರೀಕ್ಷೆಯಲ್ಲಿ ಅತ್ತೆಯ ಚಲನವಲನಗಳನ್ನು ದಿಟ್ಟಿಸಿ ನೋಡುತ್ತಿದ್ದಳಲ್ಲ? ಕಾಗದವನ್ನು ಕಂಡೊಡನೆ ಸೆಲ್ಲಿಗೂ ಅರ್ಥವಾಯಿತು.

ಆ್ಯನಿ ನಿಧಾನವಾಗಿ ಕಾಗದವನ್ನೊಡೆದು ಯಾವುದನ್ನು ಅದರಲ್ಲಿ ಕಾಣುವೆನೆಂದು ನಿರೀಕ್ಷಿಸಿದ್ದಳೋ ಅದನ್ನು ಓದಿದಳು.

ಆವಳಾಗಲಿ ಸೆಲ್ಲಿಯಾಗಲಿ ಯಾವ ಮಾತನ್ನೂ ಆಡಲಿಲ್ಲ. ಅವರು ಒಬ್ಬರನ್ನೊಬ್ಬರು ನೋಡಿಕೊಳ್ಳಲೂ ಇಲ್ಲ. ಶರತ್ಕಾಲದ ನೇಸರಲ್ಲಿ ಹುಮ್ಮಸದಿಂದ ನರ್ತಿಸುವ ಹಳ್ಳದ ಅಲೆಗಳನ್ನು ನೋಡುತ್ತ ಸುಮ್ಮಗೆ ಕೂತಿದ್ದರು.

ನಂಬಲಾರದವಳಂತೆ ಆ್ಯನಿ ಮತ್ತೊಮ್ಮೆ ಆ ಕಾಗದವನ್ನು ಬಿಡಿಸಿ ನೋಡಿದಳು. ಆವಳ ಮುಖದಲ್ಲಿ ವಿಲಕ್ಷಣವಾದ ವಿಸ್ಮಯವೊಂದು ಮಿಂಚಿತು, ಕಣ್ಣು ಹೊಳಪೇರಿತು. ಆಕೆ ಮೊದಲ ಬಾರಿ ಸೆಲ್ಲಿಯ ಕಡೆಗೆ ತಿರುಗಿ 'ಸೆಲ್ಲೀ, ಇದು ನಡೆದದ್ದು ಸಪ್ಟಂಬರ ಹದಿನಾರನೇ ತಾರೀಕು, ಹಳ್ಳದಲ್ಲಿ ಮರಳಿ ನೀರು ತುಂಬಿದ್ದೂ ಅದೇ ರಾತ್ರಿ' ಎಂದು ಅಪೂರ್ವ ಶಾಂತತೆಯಿಂದ ನುಡಿದಳು.

ಇಬ್ಬರು ಸೈನಿಕರು

ವಿಲ್ಲಿಯಂ ಫಾಕ್‌ನೇರ್

ಲೇಖಕ ಮತ್ತು ಹೆರಲ್ಡ್ ಒಬರ್ ಅವರ ಅಪ್ಪಣೆಯಿಂದ ಪುನರ್ಮುದ್ರಿತ.

ಸೆಪ್ಟಂಬರ 25, 1897ರಲ್ಲಿ ಮಿಸ್ಸಿಸಿಪಿ ವಿಶ್ವವಿದ್ಯಾನಿಲಯದ ಕೇಂದ್ರವಾಗಿರುವ ಓಕ್ಸ್‌ಫರ್ಡ್ ಬಳಿ, ಮಿಸ್ಸಿಸಿಪಿ ರಾಜ್ಯದ ನ್ಯೂ ಆಲ್ಬೆನಿ ಜಿಲ್ಲೆಯಲ್ಲಿ ವಿಲಿಯಮ್ ಫಾಕ್‌ನೇರ್ ಜನ್ಮವೆತ್ತಿದರು. ಚಿಕ್ಕಂದಿನಿಂದಲೂ ಅವರ ಮನೆ ಅಲ್ಲೇ ಇದೆ. ತಾರುಣ್ಯದಲ್ಲೇ ಕೆನೆಡಿಯನ್ ವೈಮಾನಿಕ ದಳವನ್ನು ಸೇರಲೆಂದು ಅವರು ಮಿಸ್ಸಿಸಿಪಿ ವಿಶ್ವವಿದ್ಯಾನಿಲಯದಿಂದ ಹೊರಬಿದ್ದರು. ವಿಮಾನ ಅಪಘಾತದಲ್ಲಿ ಗಾಯ ಹೊಂದಿ ಯುನೈಟೆಡ್ ಸ್ಟೇಟ್ಸಿಗೆ ಮರಳಿ ನ್ಯೂ ಓರ್ಲಿಯನ್ಸ್ ನಗರದಲ್ಲಿ ಶರ್ವುಡ್ ಆ್ಯಂಡರ್ಸನ ಒಡನೆ ಒಂದೇ ಕೊಠಡಿಯಲ್ಲಿ ವಾಸ ಮಾಡುತ್ತಾ ಮೊದ ಮೊದಲು ವೃತ್ತ ಪತ್ರಗಳಿಗೆ ಚಿತ್ರ ಬರೆದು ಕೊಡುತ್ತಿದ್ದರು. ಆ ಮೇಲೆ ಬರವಣಿಗೆಯನ್ನು ಸ್ಥಿರ ಮಾಡಿದರು.

ನ್ಯೂಯಾರ್ಕ್ ಮತ್ತು ಯೂರೋಪಿನಲ್ಲಿ ಪ್ರವಾಸ ಮಾಡಿ ಬಂದ ಬಳಿಕ ಓಕ್ಸ್‌ಫರ್ಡ್ ಹತ್ತಿರ ಒಂದು ವಿದ್ಯುತ್ತಿನ ಆಗರದಲ್ಲಿ ಕಲ್ಲಿದ್ದಲಿ ತೆಗೆಯುವ ಕೆಲಸಕ್ಕೆ ಸೇರಿದರು. ಅವರ ಅತ್ಯುತ್ತಮ ಕಾದಂಬರಿಗಳನ್ನು ಅವರು ಮರಳಿ ಬರೆದದ್ದು ಇಲ್ಲ. 1931ರ ಅನಂತರ ಬರವಣಿಗೆಯಿಂದ ಅವರು ಜೀವಿಸುವುದು ಸಾಧ್ಯವಾಯಿತು. 1939ರಲ್ಲಿ ಓ ಹೆನ್ರಿ ಸ್ಮಾರಕ ಪ್ರಶಸ್ತಿ ದೊರೆಯಿತು. ಅಮೇರಿಕನ್ ಕಾದಂಬರಿ ಲೋಕಕ್ಕೆ ಅವರ 'ಶಕ್ತಿಪೂರ್ಣ ಕೊಡುಗೆಯನ್ನು' ಮನ್ನಿಸಿ 1949ರಲ್ಲಿ ಅವರಿಗೆ ನೋಬೆಲ್ ಪಾರಿತೋಷಕವೂ ದೊರೆಯಿತು.

ನಾನು ಮತ್ತು ಪೀಟ್ ಮುದುಕ ಕಿಲ್ಲಿಗ್ರೂ ಅವನ ಅಂಗಡಿಗೆ ಹೋಗಿ ರೇಡಿಯೋ ಕೇಳುತ್ತಿದ್ದೆವು. ರಾತ್ರಿಯ ಊಟವನ್ನು ಮುಗಿಸಿ ನಾವು ಅಲ್ಲಿಗೆ ಹೋದರೆ ಅವನ ಅಂಗಡಿಯ ಮುಂದಿನ ಕಿಟಕಿಯ ಕದ ಮುಚ್ಚಿದ್ದರೂ ನಮಗೆ ರೇಡಿಯೋದ ಶಬ್ದ ಕೇಳಿಸುತ್ತಿತ್ತು. ಇದಕ್ಕೆ ಕಾರಣವೇನೆಂದರೆ ಕಿಲಿಗ್ರೂ ಹೆಂಡತಿ. ಆಕೆಗೆ ಕಿವಿ ಕಿವು ಡಾದುದರಿಂದ ಆತ ರೇಡಿಯೋವನ್ನು ಗಟ್ಟಿಯಾಗಿಯೇ ಅರಚಿಸುತ್ತಿದ್ದನು. ಹೀಗಾಗಿ ನನಗೂ ಪೀಟ್‌ಗೂ ಸರಿಯಾಗಿಯೇ ಕೇಳಿಸುವುದು ರೇಡಿಯೊ.

ಆವತ್ತು ರಾತ್ರಿ 'ಇದೇನೋ, ಜಪಾನರಂತೆ, ಪರ್ಲ್-ಹಾರ್ಬರಂತೆ, ಏನು ಹಾಗಂದರೆ?' ಎಂದು ನಾನು ಅಣ್ಣನನ್ನು ಕೇಳಿದೆ. ಆತ 'ಷೂ' ಎಂದ.

ಅಲ್ಲೇ ನಿಂತಿದ್ದೆವು, ಚಳಿ ವಿಪರೀತ. ರೇಡಿಯೋದಲ್ಲಿ ಮಾತು ಮುಂದೆ ಮುಂದೆ ಸಾಗುತಿತ್ತು. ನನಗೆ ಅದರ ತಲೆಯೂ ಅರ್ಥವಾಗುತ್ತಿರಲಿಲ್ಲ, ಬಾಲವೂ ತಿಳಿಯದು. ಆ ಮೇಲೆ ಇಲ್ಲಿಗೆ ಮುಗಿಯಿತು ಎಂದು ರೇಡಿಯೋ ಬಾಯಿ ಮುಚ್ಚಿಕೊಂಡಿತು. ನಾನು ಮತ್ತು ಪೀಟ್ ಮನೆಗೆ ಹೊರಟೆವು. ಆಗ ಪೀಟ್ ನನಗೆ ಮಾತಿನ ಅರ್ಥ ಹೇಳಿದ. ಅವನಿಗೆ ಇಪ್ಪತ್ತು ವರ್ಷ ಆಗ, ಅಲ್ಲದೆ ಸಾಕಷ್ಟು ಶಿಕ್ಷಣವೂ ಆಗಿದೆ. ಆದುದರಿಂದ ಅವನಿಗೆ ರಾಶಿರಾಶಿ ಜ್ಞಾನವಿದೆ. ಜಪಾನರು ಪರ್ಲ್ ಹಾರ್ಬರಿನ ಮೇಲೆ ಬಾಂಬು ಎಸೆಯುತ್ತಿರುವ

ರಂತೆ, ಪರ್ಲ್ ಹಾರ್ಬರ್ ಇರುವುದು ನೀರಿನ ಆಚೆಗಂತೆ—ಹೀಗೆ ಅವನಿಗೆ ಎಲ್ಲವೂ ಗೊತ್ತು.

'ಏನು, ನೀರಿನ ಆಚೆಗೋ, ಅಂದರೆ ನಮ್ಮ ಆಕ್ಸ್‌ಫರ್ಡಿನ ಸರ್ಕಾರಿ ರಿಸರ್ವಿನ ಆಚೆಗಲ್ಲವೆ?' ಎಂದು ನಾನು ಅರ್ಥವಾದವನಂತೆ ಕೇಳಿದೆ.

ಅದಕ್ಕೆ ಪೀಟ್ 'ಊಂ ಹೂಂ, ಕಡಲು ನೀರಿನ ಆಚೆಗೆ. ಕಡಲೆಂದರೆ ಶಾಂತಸಾಗರ' ಎಂದ.

ನಾವು ಮನೆಗೆ ಹೋದೆವು. ತಂದೆ ಮತ್ತು ತಾಯಿ ಆಗಲೇ ನಿದ್ದೆಹೋಗಿದ್ದರು. ನಾನು ಮತ್ತು ಪೀಟ್ ಹಾಸಿಗೆ ಸೇರಿಕೊಂಡೆವು. ನನಗಿನ್ನೂ ಅದು ಎಲ್ಲೆಂದು ತಿಳಿಯಲಿಲ್ಲ. ಪೀಟ್ ಮತ್ತೊಮ್ಮೆ ಹೇಳಿದ—ಶಾಂತ ಸಾಗರ, ಶಾಂತ ಸಾಗರ.

'ನಿನಗೇನಾಗಿದೆಯೋ, ಒಂಭತ್ತು ವರ್ಷಕ್ಕೆ ಹತ್ತಿರವಾಯಿತು, ಸಪ್ಟಂಬರದಿಂದ ಶಾಲೆಗೆ ಬೇರೆ ಹೋಗುತ್ತೀ, ಇನ್ನೂ ಏನೂ ಕಲಿತಿಲ್ಲ ವಲ್ಲಾ ನೀನು?' ಎಂದು ಪೀಟ್ ಕೇಳಿದ.

'ಇಲ್ಲ ನಾವು ಶಾಂತ ಸಾಗರದ ವರೆಗೆ ಇನ್ನೂ ಬಂದಿಲ್ಲ' ಎಂದು ನಾನು ಹೇಳಿದೆ.

ನವಂಬರ ಹದಿನೈದರ ಒಳಗೆ ಮುಗಿಯಬೇಕಾಗಿದ್ದ ನಮ್ಮ ಹೊಲದ ಕೆಲಸ ಇನ್ನೂ ಮುಗಿದಿರಲಿಲ್ಲ. ತಂದೆ ಯಾವಾಗಲೂ ಕೆಲಸದಲ್ಲಿ ನಿಧಾನ. ನಮಗೆ ತಿಳಿದಾಗಿನಿಂದ ನಮ್ಮ ಬಿತ್ತನೆ ಸರಿಯಾದ ಕಾಲಕ್ಕೆ ಆದದ್ದಿಲ್ಲ. ಉರುವಲನ್ನು ಒಳಗೆ ತಂದು ಹಾಕುವ ಕೆಲಸ ಬೇರೆ ಇತ್ತು. ಆದರೂ ನಾನು ಮತ್ತು ಪೀಟ್ ಮುದುಕ ಕಿಲ್ಲಿಗ್ರ್ಯೂ ಅಂಗಡಿಗೆ ಹೋಗಿ ರೇಡಿಯೋ ಕೇಳುವುದನ್ನು ನಿಲ್ಲಿಸಲಿಲ್ಲ. ಆ ಚಳಿಯಲ್ಲಿ ಅಲ್ಲಿಯ ತನಕ ನಡೆದು ಹಿಂದಿರುಗಿ ಹಾಸುಗೆಯಲ್ಲಿ ಬಿದ್ದುಕೊಂಡರೆ ಪೀಟ್ ನನಗೆ ಒಂದೆರಡು ವಿಷಯ ತಿಳಿಸುವ. ಸ್ವಲ್ಪ ಹೊತ್ತು. ಅದರ ಮೇಲೆ ಮಾತಿಲ್ಲ. ನನ್ನ ಹತ್ತಿರ ಮಾತೇ ಬಿಟ್ಟ ಹಾಗೆ ಸುಮ್ಮನಿರುತ್ತಿದ್ದ. ನಿದ್ದೆ ಬರುತ್ತದೆ ಬಾಗಿಲು ಮುಚ್ಚಿ ಮಲಕೋ

ಎಂದು ನನ್ನನ್ನು ಗದರಿಸಿದರೂ ಅವನಿಗೆ ನಿದ್ದೆ ಬರುತ್ತಿರಲಿಲ್ಲವೆಂದು ನನಗೆ ಗೊತ್ತಾಗುತಿತ್ತು.

ಯಾಕಂದರೆ ಅವನು ನಿದ್ದೆ ಮಾಡುವವರಿಗಿಂತಲೂ ಹೆಚ್ಚು ಸ್ತಬ್ಧನಾಗಿರುತ್ತಿದ್ದ, ಏನೋ ನನ್ನ ಮೇಲಿನ ಸಿಟ್ಟೋ, ಯಾತರ ಚಿಂತೆಯೋ, ಅಂತೂ ನನ್ನ ವಿಷಯದ ಚಿಂತೆಯಲ್ಲ, ಚಿಂತೆ ಆದರೆ ಯಾತಕ್ಕಾಗಿ? ಸಮಯ ತಪ್ಪಿ ಅವನು ಯಾವ ಕೆಲಸವನ್ನು ಮಾಡುವವನೇ ಅಲ್ಲ, ಹಿಂದೆ ಬೀಳುವುದಂತೂ ಅವನಿಗೆ ಸಾಧ್ಯವೇ ಇಲ್ಲ. ಶಾಲೆಯ ಓದು ಮುಗಿಸಿ ಬಂದ ಪೀಟ್‌ಗೆ ತಂದೆ ಹತ್ತಿಕರೆ ಜಮೀನು ಕೊಟ್ಟುಬಿಟ್ಟು ಅಷ್ಟು ಜಾಗದ ಚಿಂತೆಯನ್ನೇ ಕಳೆದುಕೊಂಡರು. ಪೀಟ್ ಅಷ್ಟರಲ್ಲೊ ಬೇಸಾಯ ಮಾಡಿದ್ದಾನೆ. ಚಳಿಗಾಲದ ಬಿತ್ತನೆಗೆ ಪೂರ್ತಿ ಅಣಿಯಾಗಿದ್ದಾನೆ. ಎಂದ ಮೇಲೆ ಅದರ ಚಿಂತೆಯಲ್ಲ. ಬೇರಾವ ಚಿಂತೆ? ಚಳಿಯಲ್ಲಿ ನಾವು ಪ್ರತಿ ರಾತ್ರಿ ಕಿಲ್ಲಿಗ್ರೂ ಅಂಗಡಿಗೆ ಹೋಗುವುದನ್ನು ನಿಲ್ಲಿಸಲಿಲ್ಲ. ಈಗ ಜಪಾನರು ಫಿಲಿಪ್ಪಾಯ್ನ್ಸ ದ್ವೀಪದಲ್ಲಿ ಮೆಕಾರ್ಥರನ ಭೇಟಿ ಮಾಡುತ್ತಿದ್ದರು. ಈಗೀಗ ಹಿಂದೆ ಬಂದ ಮೇಲೆ ಹಾಸುಗೆಯಲ್ಲಿ ನನಗೆ ಯಾವ ವರ್ತಮಾನವೂ ಸಿಗುತ್ತಿರಲಲ್ಲ. ಪೀಟ್ ಬಾಯಿ ತೆರೆಯುತ್ತಿರಲಿಲ್ಲ. ಸುಮ್ಮಗೆ ಆತ ಬಿದ್ದುಕೊಂಡಿರುವಾಗ ಅವನ ಕೈಕಾಲನ್ನು ಮುಟ್ಟಿದರೆ ಅದು ಕಬ್ಬಿಣದಂತೆ ಕಠಿನವಾಗಿರುತ್ತಿತ್ತು. ಅಷ್ಟರಲ್ಲಿ ನನಗೆ ನಿದ್ದೆಯೂ ಬರುತಿತ್ತು.

ಒಂದು ರಾತ್ರಿ ಅವನು 'ನಾನು ಹೋಗಲೇ ಬೇಕಾಗಿದೆ' ಎಂದ.

'ಎಲ್ಲಿಗೆ?' ಎಂದು ನಾನು ಕೇಳಿದೆ.

'ಅದೇ ಯುದ್ಧಕ್ಕೆ' ಎಂದು ಪೀಟ್ ಉತ್ತರ ಕೊಟ್ಟ.

'ಕಟ್ಟಿಗೆ ಎಲ್ಲಾ ಒಳಗೆ ಹಾಕುವುದಕ್ಕೆ ಮೊದಲೇ ಹೋಗಬೇಕೆನ್ನುತ್ತೀಯಾ?'

'ಕಟ್ಟಿಗೆ? ಹುಂ!'

'ಸರಿ, ಹೋಗುವುದೇ ಆದರೆ ಹೋಗಿಯೇ ಬಿಡುವಾ. ಹೊರಡುವುದು ಯಾವಾಗಲೋ?'

ಅವನು ನನ್ನ ಮಾತಿಗೆ ಕಿವಿಕೊಡಲಿಲ್ಲ. ಕತ್ತಲಿನಲ್ಲಿ ಕಬ್ಬಿಣವು ಬಿದ್ದಿರುವಂತೆ ಅವನು ಬಿದ್ದಿದ್ದ. ಮತ್ತೆ ಕೊಂಚ ಹೊತ್ತಿನಲ್ಲಿ 'ಹೋಗಿಯೇ ಬಿಡಬೇಕು. ನಮ್ಮ ಯುನಿಟೆ ಸ್ಟೇಟ್ಸನ್ನು ಹೀಗೆ ಅವಮಾನಿಸುವ ಜನಕ್ಕೆ ತಕ್ಕ ಶಿಕ್ಷೆ ಮಾಡಲೇಬೇಕು.' ಎಂದ.

'ಹೌದು, ಹೌದು. ಕಟ್ಟಿಗೆಯೋ ಇಟ್ಟಿಗೆಯೋ, ನಾವಂತೂ ಹೋಗುವುದು ಖಂಡಿತ' ಎಂದು ನಾನು ದನಿಗೂಡಿಸಿದೆ.

ನನ್ನ ಈ ಮಾತು ಈಗ ಅವನಿಗೆ ಕಿವಿಗೆ ಬಿದ್ದಿತು. ಅವನು ಮರಳಿ ಸ್ತಬ್ಧನಾದ. ಆದರೆ ಈಗಿನದು ಬೇರೆ ತೆರ.

'ಏನು, ನೀನು ಯುದ್ಧಕ್ಕೆ ಹೋಗುತ್ತೀಯಾ?'

'ಹೌದು.ನೀನು ದೊಡ್ಡವರನ್ನು ಕತ್ತರಿಸು, ನಾನು ಚಿಕ್ಕವರನ್ನು ನೋಡಿಕೊಳ್ಳುತ್ತೇನೆ.'

ನೀನು ಬರಬಾರದು ಎಂದು ಅವನು ಆಗ ನನಗೆ ತಿಳಿಸಿದ. ಮೊದಲು ನಾನು ಯೋಚಿಸಿದೆ ಹೌದು ಆಚೆಮನೆ ಹುಡುಗಿಯರ ಬೆನ್ನು ಹಿಡಿಯಬೇಕಾದಾಗ ನೀನು ಬರಬೇಡಾಂತ ನನಗನ್ನುತ್ತಾನಲ್ಲಾ ಹಾಗೆಯೇ ನನಗೆ ಅಂಟಿಕೊಳ್ಳಬೇಡ ಎಂದು ನನಗನ್ನುತ್ತಾನೇನೋ ಎಂದು ಕೊಂಡೆ. ಸೈನ್ಯಕ್ಕೆ ನಾನು ತೀರ ಚಿಕ್ಕವನಾದುದರಿಂದ ನನ್ನನ್ನವರು ಸೇರಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಅವನು ಹೇಳಿದ ಮೇಲೆ ನನಗೆ ಹೌದೆನಿಸಿತು. ಆದರೆ ಅವನು ಹೋಗುವುದನ್ನು ಗಟ್ಟಿ ಮಾಡಿದನೆಂಬುದು ನನಗೆ ಆಗ ಖಚಿತವಾಯಿತು.

'ನಿಮಗೆ ಕಟ್ಟಿಗೆ ಒಡೆಯುವುದಕ್ಕೆ, ನೀರು ಸೇದಿಕೊಡುವುದಕ್ಕೆ ಜನರು ಬೇಡವೆ? ನಾನು ಆ ಕೆಲಸವನ್ನಾದರೂ ಮಾಡುತ್ತೇನೆ' ಎಂದೆ ನಾನು.

ಅವನು ಈಗ ಕಬ್ಬಿಣವಾಗಿರಲಿಲ್ಲ. ನನ್ನ ಮಾತನ್ನು ಆಲಿಸುತ್ತಿದ್ದ. ಅವನು ಮಗ್ಗುಲಿಗೆ ಹೊರಳಿ ನನ್ನ ಎದೆಯ ಮೇಲೆ ಕೈ ಇರಿಸಿ 'ಊಂ ಹೂ, ನೀನು ಇಲ್ಲಿ ನಿಂತು ಪಪ್ಪನಿಗೆ ಸಹಾಯವಾಗಬೇಕು' ಎಂದ.

'ಎಂಥ ಸಹಾಯ! ಅವನೇನು ಮಾಡಿದರೂ ಈ ಸರ್ತಿ ಮೇಲೆ ಬರುವಂತಿಲ್ಲ. ಇದಕ್ಕಿಂತ ಹಿಂದೆ ಬೀಳುವ ಹಾಗೆಯೂ ಇಲ್ಲ. ನಾವು ಜಪಾನಿಯರ ಕತ್ತು ಮುರಿಯುವಾಗ ಈತನಿಗೆ ಈ ತುಂಡು ಜಾಗ ನೋಡಿಕೊಳ್ಳುವುದೊಂದು ಕಷ್ಟವೇ? ಇಲ್ಲ. ನಾನೂ ಯುದ್ಧಕ್ಕೆ ಹೋಗಬೇಕು. ನಿನಗೆ ಹೋಗಲೇ ಬೇಕಂತೆ, ನನಗೆ ಬೇಡವೋ?'

'ಬೇಡ ಬೇಡ ಬೇಡ. ಷೂ'

'ಹಾಗಾದರೆ ನಾನು ಬರಲೇ ಬಾರದೋ?'

'ಇಲ್ಲ, ಕೂಡದೇ ಕೂಡದು. ನೀನಿನ್ನೂ ಚಿಕ್ಕವ ಅದೊಂದು. ಇನ್ನೊಂದು........'

'ಸಾಕು, ಬಾಯಿ ಮುಚ್ಚಿ ಮಲಕೋ' ಎಂದು ನಾನೇ ಅವನನ್ನು ಗದರಿಸಿದೆ.

ಮರುದಿನ ಬೆಳಗ್ಗೆ ಅವನು ತಂದೆಗೂ ತಾಯಿಗೂ ಈ ವಿಷಯ ಹೇಳಿದ. ಅಮ್ಮ ಅಳಲಿಕ್ಕೇ ಸುರುಮಾಡಿದಳು.

ಬೇಡ, ಇವನು ಹೋಗುವುದು ಬೇಡ. ಬೇಕಾದರೆ ಬದಲಿಗೆ ನನ್ನನ್ನು ಒಯ್ಯಲಿ. ದೇಶವನ್ನು ಉಳಿಸಬೇಕಂತೆ. ನನ್ನ ಮತ್ತು ಮಕ್ಕಳ ತಂಟೆಗೆ ಬಾರದೆ ಜಪಾನರು ಬಂದು ಈ ದೇಶವನ್ನು ಗೆದ್ದು ಆಳಿದರೂ ನನಗೆ ಯೋಚನೆ ಇಲ್ಲ ನನ್ನ ಅಣ್ಣ ಮಾರ್ಷ್ ಕಳೆದ ಯುದ್ಧಕ್ಕೆ ಹೋದ ಕತೆ ನನಗೆ ನೆನಪಿದೆ. ಆಗಲೂ ಹಾಗೆಯೇ —ನಮ್ಮ ಅಮ್ಮನಿಗೆ ಯುದ್ಧಕ್ಕೆ ಏಕೆ ಹೋಗಬೇಕೆನ್ನುವುದು ಅರ್ಥವಾಗಲಿಲ್ಲ. ನನಗೆ ಈಗಲೂ ಅರ್ಥವಾಗುವುದಿಲ್ಲ ಆದರೆ ಅವಳು ಹೇಳಿದ ಹಾಗೆ ನಾನೂ ಎನ್ನುತ್ತೇನೆ. ನಿನಗೆ ಹೋಗಲೇಬೇಕೆಂದು ಕಂಡರೆ ಹೋಗಪ್ಪಾ. ಅದಕ್ಕಾಗಿ ಯುದ್ಧಮಾಡಬೇಕು, ಇದಕ್ಕಾಗಿ ಎಂದು ನನ್ನ ತಲೆ ಕೆಡಿಸದಿದ್ದರೆ ಸಾಕು' ಎಂದು ಅತ್ತಳು.

ಪಪ್ಪ ಅಂದರೆ ನಮ್ಮ ಪಪ್ಪ. 'ಯುದ್ಧವೋ, ಆದರಿಂದ ನನಗೆ ಎಳ್ಳಷ್ಟೂ ಉಪಯೋಗ ತೋರುವುದಿಲ್ಲ. ನಿನಗೆ ವಯಸ್ಸಾಗಲ್ಲಿಲ್ಲ ಒಂದು, ದೇಶವನ್ನು ಯಾರೂ ಮುತ್ತಿಗೆ ಹಾಕಿಲ್ಲ ಎರಡು. ಅದೇ ಆ ಕಳೆದ ಯುದ್ಧದಲ್ಲಿ, ನಿಮ್ಮ ಮಾವ ಮಾರ್ಷ್ ಗಾಯ ಮಾಡಿ

ಕೊಂಡು ಫ್ರಾನ್ಸಿನಿಂದ ಹಿಂದೆ ಬಂದನಲ್ಲಾ ಆ ಯುದ್ಧದಲ್ಲಿ ನನ್ನನ್ನೆ ಎಂಟು ತಿಂಗಳು ಟೆಕ್ಸಾಸ ರಾಜ್ಯದ ಶಿಬಿರದಲ್ಲಿ ಇರಹೇಳಿ ಅಷ್ಟರಲ್ಲಿ ಅವರೊಳಗೆ ಸಮಜಾಯಿಷಿ ಮಾಡಿಕೊಂಡು ಯುದ್ಧ ಮುಗಿಸಿದರು. ದೇಶದ ರಕ್ಷಣೆಗೆ ನಮ್ಮ ಕುಟುಂಬದವರು ಇಷ್ಟು ಮಾಡಿದ್ದು ನನ್ನ ಜೀವಮಾನಕ್ಕೆ ಸಾಕು ಅಷ್ಟೇನು, ನೀನು ಹೋದರೆ ನನ್ನ ಹೊಲದ ಕೆಲಸಕ್ಕೆ ಯಾರಿದ್ದಾರೆ. ಅದನ್ನೊಂದು ಬೇಗನೇ ಮುಗಿಸಬೇಕಲ್ಲಾ?'

'ಹೌದು, ನನಗೆ ಬುದ್ಧಿ ಬಂದ ಲಾಗಾಯಿತು ನೀನು ಬೇಗ ಯಾವಾಗ ಮುಗಿಸಿದ್ದೀ? ನಾನಂತೂ ಹೊರಟೆ' ಎಂದು ಪೀಟ್ ಹೇಳಿದ.

'ಹೌದಪ್ಪಾ, ಅವನು ಹೋಗಬೇಕು, ಜಪಾನಿಯುವರನ್ನು....'... ಎಂದು ನಾನು ಅವನಿಗೆ ನೆರವಾದೆ.

'ನೀನು ಬಾಯಿ ಮುಚ್ಕೋ ಕಳ್ಳಾ. ನಿನ್ನ ಹತ್ತಿರ ಯಾರು ಮಾತಾಡಿದರು? ಒಂದು ಹೊರೆ ಕಟ್ಟಿಗೆ ತಾ, ಹೋಗು' ಎಂದು ಅಮ್ಮ ನಡುವೆ ಬಾಯಿ ಹಾಕಿದಳು.

ನಾನು ಕಟ್ಟಿಗೆ ತರಲು ಹೋದೆ. ಒಲೆಯಲ್ಲಿ ಉರಿಸದೆ ಇರುವ ಒಂದು ತುಂಡು ಕಟ್ಟಿಗೆ ಇದ್ದರೂ ನನ್ನ ಪಪ್ಪನಿಗೆ ಭಾರೀ ಕಟ್ಟಿಗೆ ಸಂಗ್ರಹ ವಾದಂತೆ ಅನಿಸುತಿತ್ತು. ಆ ದಿನವಿಡೀ ನಾನು, ಪೀಟ್ ಮತ್ತು ಪಪ್ಪ ಆದಷ್ಟು ಕಟ್ಟಿಗೆಯನ್ನು ಒಳಗೆ ತಂದು ಹಾಕಿದೆವು. ಅಮ್ಮ ಪೀಟನಿಗೆ ಹೊರಡುವ ತಯಾರಿ ಮಾಡುತ್ತಿದ್ದಳು. ಅವನ ಅಂಗಿ ತೊಳೆದಳು, ಹರಿದಲ್ಲಿ ಹೊಲಿದಳು. ರಾತ್ರಿ ನಾವು ಮಲಗಿದಾಗ ಅಳುತ್ತ ಅವನ ಪೆಟ್ಟಿಗೆಯನ್ನು ತುಂಬಿಸುವ ಸದ್ದು ನಮಗೆ ಕೇಳಿಸುತಿತ್ತು. ಸ್ವಲ್ಪ ಹೊತ್ತಿನಲ್ಲಿ ಪೀಟ್ ಎದ್ದು ಅವಳ ಹತ್ತಿರ ಹೋಗಿ ಏನೋ ಮಾತನಾಡಿದ. ಆಕೆ 'ನನಗದು ಒಂದೂ ಗೊತ್ತಿಲ್ಲ, ಗೊತ್ತಾಗುವುದೂ ಬೇಡ. ನಿನಗೆ ಹೋಗುವ ಮನಸ್ಸಾಗಿದೆ. ಹೋಗುವಿಯಂತೆ' ಎನ್ನುತ್ತಿದ್ದಳು. ಪೀಟ್ ಹಿಂದೆ ಬಂದು ಹಾಸುಗೆಯ ಮೇಲೆ ಮಲಗಿ 'ಹೋಗಬೇಕು, ಹೋಗಲೇ ಬೇಕು' ಎಂದು ಗೊಣಗಿದ.

'ಹೌದು, ಅಗತ್ಯ ಹೋಗು' ಎಂದು ನಾನು ಮಲಗಿಕೊಂಡೆ ಹೇಳಿದೆ. ಪೀಟ್ ನನ್ನ ಕಡೆ ತಿರುಗಿ 'ನನಗೆ ನಿನ್ನದೇ ಯೋಚನೆ ಇತ್ತು—ಎಲ್ಲಿಗೋ ಅಂತ ಅಳುತ್ತಿ ಏನೋ ಅಂತ. ನೀನು ಪರವಾಯಿಲ್ಲ' ಎಂದ.

'ಯುದ್ಧ ಬೇಗನೆ ಮುಗಿಯಲಾರದೆಂದು ತೋರುತ್ತದೆ. ನಾನು ಇಷ್ಟರಲ್ಲೇ ಬಂದು ನಿನ್ನನ್ನು ಸೇರಿಕೊಂಡು ಬಿಡುತ್ತೇನೆ, ನೋಡು.'

'ಛೆ, ಯಾರೂ ತಮಾಷೆಗೆ ಯುದ್ಧಕ್ಕೆ ಹೋಗುವುದಿಲ್ಲ, ತಮಾಷೆಗೆ ಅಮ್ಮನಿಗೆ ಕಣ್ಣೀರನ್ನು ಬರಿಸುವುದಿಲ್ಲ.'

'ನೀನು ಹೋಗುವುದಿಲ್ಲವೆ? ಅಮ್ಮ ಅಳುವಂತೆ ಮಾಡುವುದಿಲ್ಲವೆ?

'ನನಗೆ ಹೋಗಲೇ ಬೇಕಾಗಿದೆ. ಇಕೋ ಮಲಗು. ನನಗೆ ನಸುಕಿಗೇ ಬಸ್ಸು ಹಿಡಿಯಲು ಹೋಗಬೇಕಾಗಿದೆ.

'ಸರಿ, ಸರಿ. ಆದರೆ ಮೆಂಫಿಸ್ ದೊಡ್ಡ ಊರು ಎಂದೆಯಲ್ಲಾ. ಅಂಥ ಊರಲ್ಲಿ ಸೈನ್ಯ ಇರುವ ಸ್ಥಳ ಹೇಗೆ ಗೊತ್ತು ಹಿಡಿಯುತ್ತೀಯಾ?'

'ಯಾರನ್ನಾದರೂ ಕೇಳುತ್ತೇನೆ ಇಕೋ ಇನ್ನಾದರೂ ಸುಮ್ಮಗೆ ಬಿದ್ದುಕೋ' ಎಂದು ಪೀಟ್ ಆವತ್ತಿನ ಮಾತಿಗೆ ಮುಕ್ತಾಯವೆಂದನು.

ಮುಂಜಾನೆ ನಾವು ದೀಪದ ಬೆಳಕಿಗೇ ತಿಂಡಿತಿನಬೇಕಾಯಿತು. ಏತಕ್ಕೆಂದರೆ ಬಸ್ಸು ಆರು ಗಂಟೆಗೇ ಬಂದು ಬಿಡುವುದು. ಅಮ್ಮ ಆಚೆ ಈಚೆ ಒಂದಲ್ಲ ಒಂದು ಕೆಲಸ ಮಾಡುತ್ತಾ ಅಳುವುದನ್ನು ಮರೆತಿದ್ದಳು. ಪೀಟ್‌ಗೆ ಆ ಪೆಟ್ಟಿಗೆ ಹೊರುವುದು ಬೇಕಾಗಿರಲಿಲ್ಲ ಆದರೆ ಅಮ್ಮ ಬಿಡುವವಳಲ್ಲ, ಮರ್ಯಾದಸ್ತ ಜನ ಯುದ್ಧಕ್ಕೆ ಹೋಗಲಿ ಇನ್ನೆಲ್ಲಿಗೆ ಹೋಗಲಿ ಪೆಟ್ಟಿಗೆ ಇಲ್ಲದೆ ಹೊರಡಬಾರದೆಂದು ಅವಳ ವಾದ. ಬಿಸ್ಕಿಟು ಮತ್ತು ಹುರಿದ ಕೋಳಿಯ ತಿಂಡಿಯನ್ನು ಒಂದು ಡಬ್ಬಿಯಲ್ಲಿ ಹಾಕಿ ಅದನ್ನೂ ಪೆಟ್ಟಿಗೆಯೊಳಗೆ ಸೇರಿಸಿದಳು. ಕೊನೆಯದಾಗಿ ಬೈಬಲನ್ನೂ ಇಟ್ಟು ಸರಿ ಹೊರಡಿ ಇನ್ನು ಎಂದಳು. ಆಗಲೇ ನಮಗೆ ಗೊತ್ತು ಅಮ್ಮ ಬಸ್ಸಿನ ಹತ್ತಿರ ಬರುವುದಿಲ್ಲ ಎಂದು. ಪೀಟನ ಟೊಪ್ಪಿಯನ್ನೂ ಓವರ್‌ಕೋಟನ್ನೂ ತರುವಾಗಲೂ ಆಕೆ ಅಳಲಿಲ್ಲ. ಪೀಟನ ಭುಜದ ಮೇಲೆ ಕೈಯಿಟ್ಟು ಅವನನ್ನೇ ನೇರ

ವಾಗಿ ದಿಟ್ಟಿಸಿ 'ದೇಶವನ್ನು ಅವರು ಇಡಲಿ, ತೆಗೆಯಲಿ ನನ್ನ ಮಕ್ಕಳು ಮರಿ ಸುಖವಾಗಿದ್ದರೆ ನನಗಷ್ಟೇ ಸಾಕು.' ಎಂದು ನುಡಿದು 'ನೀನು ಯಾರೆಂಬುದನ್ನು ಯಾವಾಗಲೂ ಯೋಚಿಸಿಕೊಂಡಿರಪ್ಪ ನಿನ್ನ ಹತ್ತಿರ ಸಂಪತ್ತಿಲ್ಲ, ನಿನ್ನ ಹೆಸರನ್ನೂ ಬಹಳ ಜನ ಕೇಳಿಲ್ಲ. ಆದರೆ ನಿನ್ನಲ್ಲಿ ಹರಿಯುವ ನೆತ್ತರು ಯಾರಿಗೂ ಯಾವ ಕಾಲಕ್ಕೂ ಕಡಿಮೆಯಲ್ಲ ಎಂಬುದನ್ನು ನೆನಪಿನಲ್ಲಿಡು.' ಎಂದಳು.

ಅಷ್ಟು ಹೇಳಿ ಅವನನ್ನು ಚುಂಬಿಸಿದ ಮೇಲೆ ಪೀಟ್ ಹೊರಗೆ ಹೊರಟನು. ಪಪ್ಪ ಅವನ ಪೆಟ್ಟಿಗೆಯನ್ನು ಹಿಡಿದು ಅವನ ಹಿಂದೆ ನಡೆದನು. ನಾವು ರಸ್ತೆಯನ್ನು ಮುಟ್ಟಿ ಮೆಯಿಲ್ ಬಾಕ್ಸ್ ಹತ್ತಿರ ನಿಲ್ಲುವವರೆಗೂ ಸೂರ್ಯೋದಯದ ಸುಳಿವಿಲ್ಲ. ಬಸ್ಸಿನ ದೀಪ ಹಾದಿಯ ಮೇಲೆ ಬಿತ್ತು. ಪೀಟ್ ಕೈ ಎತ್ತಿ ಅದನ್ನು ನಿಲ್ಲಿಸಿದನು. ಅಷ್ಟು ಹೊತ್ತಿಗೆ ಬೆಳಕೂ ಸರಿಯಾಗಿ ಹರಡಿತ್ತು. ಇನ್ನೇನು ಪಪ್ಪ ಏನಾದರೂ ನಾಲ್ಕು ದಡ್ಡ ಮಾತುಗಳನ್ನು ಅನ್ನುವನೆಂದು ನಾವು ಎಣಿಸಿದೆವು. ಆದರೆ ಆತ 'ಗುಡ್ ಬೈ, ಮಗೂ. ಅಮ್ಮ ಹೇಳಿದ್ದನ್ನು ನೆನಪಿನಲ್ಲಿಡು. ಪುರುಸೊತ್ತು ಸಿಕ್ಕಿದಾಗ ಎಲ್ಲ ಅವಳಿಗೆ ಕಾಗದ ಬರೆ' ಎಂದಷ್ಟೇ ಹೇಳಿ ಪೀಟನ ಕೈಯನ್ನು ಕುಲುಕಿದನು. ಪೀಟ ನನ್ನ ಕಿವಿಗಳ ಹತ್ತಿರ ಕೈಯಿಟ್ಟು ತಲೆಯನ್ನು ಗಟ್ಟಿಯಾಗಿ ಉಜ್ಜಿ ಬಸ್ಸಿನ ಮೇಲೆ ಏರಿದನು. ಬಾಗಿಲಿನ ಹತ್ತಿರ ನಿಂತಿದ್ದ ಮನುಷ್ಯನು ಬಾಗಿಲನ್ನು ಧಡಾರನೆ ಹಾಕಿದ ಕೂಡಲೆ ಬಸ್ಸು ಗುರ್ರನೆ ಹೊರಟಿತು. ನಾನು ಹಿಂದಿನ ಕೆಂಪು ದೀಪವನ್ನೇ ನೋಡುತ್ತಿದ್ದೆ. ಎರಡು ದೀಪಗಳೂ ದೂರದಲ್ಲಿ ಒಂದಾಗಬಹುದೆಂಬ ನಿರೀಕ್ಷೆಯಿಂದ ನಾನು ಬಸ್ಸನ್ನೇ ದಿಟ್ಟಿಸುತ್ತಿದ್ದೆ. ಆದರೆ ಅಷ್ಟರೊಳಗೆ ಬಸ್ಸೇ ಕಾಣದಾಯಿತು. ನನಗೆ ಅಳು ಬರುವ ಹಾಗಾಯಿತು. ಆದರೂ ಒಂಭತ್ತು ವರ್ಷ ದೊಡ್ಡವನಾದ ನಾನು ಅಳುವುದೇ ಎಂದುಕೊಂಡು ಅಳುವನ್ನು ಒತ್ತಿಹಿಡಿದೆ.

ಪಪ್ಪ ಮತ್ತು ನಾನು ಮನೆಗೆ ಮರಳಿದೆವು. ನಾವು ಇಡಿ ದಿವಸ ಕಟ್ಟಿಗೆ ಒಟ್ಟುಮಾಡುವುದರಲ್ಲೇ ಕಳೆದದ್ದರಿಂದ ನನಗೆ ಸಂದರ್ಭವೇ ಸಿಗಲಿಲ್ಲ—ಸಂಜೆಯ ವರೆಗೂ. ಸಮಯ ಸಿಕ್ಕಿದ ಕೂಡಲೇ ನನ್ನ

ಕವಣೆಕೋಲನ್ನು ತೆಗೆದಿರಿಸಿದೆ. ಪೀಟ್ ಹೋಗುವಾಗ ನನಗೆ ತನ್ನ ಮೊಟ್ಟೆಗಳ ಸಂಗ್ರಹದ ಪೆಟ್ಟಿಗೆಯನ್ನು ಬಿಟ್ಟು ಹೋಗಿದ್ದ. ಅವನ್ನೆಲ್ಲಾ ಒಯ್ಯಬಹುದಾಗಿತ್ತು. ಆದರೆ ಪೆಟ್ಟಿಗೆ ಅಷ್ಟು ದೂರ ಹೊರಲು ಭಾರ ವಾಗಬಹುದೆಂದು ತೋರಿದುದರಿಂದ ಅದರಿಂದ ಒಂದು ಒಳ್ಳೆಯ ಶಿಕ್‌ಪೋಕ್ ಮೊಟ್ಟೆಯನ್ನು ತೆಗೆದು ಕವಣೆಕೋಲನ್ನೂ ಅದನ್ನೂ ಕೊಟ್ಟಿಗೆಯಲ್ಲಿ ಬಚ್ಚಿಟ್ಟು ಬಂದೆ. ರಾತ್ರಿಯ ಊಟ ಮಾಡಿ ನಾವೆಲ್ಲ ಮಲಗಿದೆವು. ನನಗೇನೋ ಆ ಕೋಣೆಯಲ್ಲಿ ಒಂದು ರಾತ್ರಿ ಕಳೆಯು ವುದೂ ಅಸಹ್ಯವಾಗಿತ್ತು. ಪಪ್ಪನು ಗೊರಕೆಹೊಡೆಯುತ್ತಿದ್ದನು. ತಾಯಿ ಏನು ಮಾಡುತ್ತಿದ್ದಳೆಂದು ನನಗೆ ಗೊತ್ತಾಗಲಿಲ್ಲ. ಅವಳಿಗೆ ನಿದ್ದೆ ಬಂದಿರಲಾರದೇನೋ ಅನಿಸಿತು. ಆದ್ದರಿಂದ ನಾನು ನನ್ನ ಬೂಟು ಗಳನ್ನು ಕಳಚಿ ಕಿಂಡಿಯಿಂದ ಹೊರಗೆ ಬಿಸಾಟೆನು. ಆ ಮೇಲೆ ಪೀಟ್ ಹದಿನೇಳನೆಯ ವಯಸ್ಸಿನಲ್ಲಿ ಹುಡುಗಿಯರ ಜೆನ್ನು ಹಿಡಿಯಲು ಹೊರಕ್ಕೆ ಹೋಗುತ್ತಿದ್ದ ರೀತಿಯಲ್ಲಿ ಕಿಟಕಿಯಿಂದಲೇ ಇಳಿದು, ಬೂಟು ಗಳನ್ನು ಹಾಕಿ ಕೊಟ್ಟಿಗೆಯಿಂದ ನನ್ನ ಸಾಮಾನುಗಳನ್ನು ಹಿಡಿದು ಕೊಂಡು ರಾಜಮಾರ್ಗಕ್ಕೆ ನಡೆದೇ ಬಿಟ್ಟೆ

ಚಳಿ ಅಷ್ಟೇನೂ ಇರಲಿಲ್ಲವಾದರೂ ಕತ್ತಲೆ ಭಯಂಕರವಾಗಿತ್ತು. ರಾಜಮಾರ್ಗ ನಿರ್ಜನವಾಗಿತ್ತು. ಇಪ್ಪತ್ತೆರಡು ಮೈಲು ನಡೆದು ನಾನು ಜೆಫರ್ಸನ್ ಸೇರುವಷ್ಟು ಹೊತ್ತಿಗೆ ಸೂರ್ಯನ ಬಿಸಿಲು ಸರಿಯಾಗಿ ಬೀಳ ಬಹುದೆಂದು ಒಮ್ಮೆ ಯೋಚನೆಯಾಯಿತು. ಗುಡ್ಡವನ್ನು ದಾಟಿ ನಾನು ಜೆಫರ್ಸನ್ ಪಟ್ಟಣವನ್ನು ಸೇರಿದಾಗ ನಸುಕು ಹರಿಯುತ್ತಿತ್ತು, ಅಷ್ಟೆ. ಪ್ರತಿ ಮನೆಯಲ್ಲಿಯೂ ಬೆಳಗ್ಗಿನ ತಿಂಡಿ ಕರಿಯುತ್ತಿ ರುವ ವಾಸನೆ ಮೂಗಿಗೆ ಬಡಿಯುತ್ತಿತ್ತು. ಅದರ ವಾಸನೆಗೆ ಅಯ್ಯೋ, ನಾನು ಬಿಸ್ಕತ್ತು ತರಬೇಕಾಗಿತ್ತು ಎನಿಸಿತು. ಪೀಟ್ ಮೆಂಫಿಸ್ ನಗರವು ಜೆಫರ್ಸನ್ ಆಚೆಗಿದೆ ಎಂದರೂ ಅಲ್ಲಿಗೆ ಎಂಭತ್ತು ಮೈಲೆಂಬ ಕಲ್ಪನೆ ನನಗಿರಲಿಲ್ಲ. ನಿರ್ಜನವಾದ ಚೌಕದಲ್ಲಿ ಬೆಳಕು ಹರಿದರೂ ಬೀದಿಯ ದೀಪಗಳು ಉರಿಯುತ್ತಲೇ ಇರುವುದನ್ನು ನಾನು ನೋಡುತ್ತಾ ನಿಂತೆ. ನನ್ನನ್ನು ನೋಡುತ್ತಾ ಒಬ್ಬ ಪೋಲೀಸನೂ

ನಿಂತಿದ್ದ ಇಪ್ಪತ್ತೆರಡು ಮೈಲಿಗೆ ನನಗೆ ಒಂದು ರಾತ್ರಿ ತಗಲಿದರೆ ಇನ್ನು ಎಂಭತ್ತು ಮೈಲು ಹೋಗುವಷ್ಟರಲ್ಲಿ ಪೀಟ್ ಪರ್ಲ್ ಹಾರ್ಬರ್ ಹಾದಿ ಹಿಡಿಯಬಹುದೇನೋ ಎಂದು ನನಗೆ ನಿರಾಸೆ ಆಯಿತು.

'ಎಲ್ಲಿಂದ ಬಂದಿಯೋ?' ಎಂದು ಪೋಲೀಸ ಕೇಳಿದ. ನಾನು 'ನನಗೆ ಮೆಂಫಿಸ್‌ಗೆ ಹೋಗ ಬೇಕಾಗಿದೆ. ಅಲ್ಲಿ ನನ್ನ ಅಣ್ಣ ನಿದ್ದಾನೆ' ಎಂದೆ.

'ನಿನಗೆ ಬೇಕಾದವರು ಯಾರೂ ಈ ಊರಲ್ಲಿಲ್ಲವೋ? ನಿನ್ನ ಅಣ್ಣ ಮೆಂಫಿಸ್‌ನಲ್ಲಿದ್ದಾನೋ? ನೀನು ಮನೆಬಿಟ್ಟು ಇಲ್ಲಿ ಏನು ಮಾಡುತ್ತಿದ್ದೀಯಾ?'

'ನಾನು ಮೆಂಫಿಸ್‌ಗೆ ಹೋಗಬೇಕು. ನನಗೆ ವ್ಯರ್ಥ ಮಾತನಾಡಲು ಸಮಯವಿಲ್ಲ. ಸಮಯಕ್ಕೆ ಸರಿಯಾಗಿ ಅಲ್ಲಿಗೆ ಮುಟ್ಟುತ್ತೇನೋ ಇಲ್ಲವೋ? ಇವತ್ತೇ ನಾನು ಅಲ್ಲಿರಬೇಕಾಗಿತ್ತು' ಎಂದು ನಾನು ಪುನಃ ಹೇಳಿದೆ.

ನಾವು ಇನ್ನೊಂದು ಬೀದಿಯನ್ನು ಹಿಡಿದು ಮುಂದೆ ಸಾಗಿದೆವು. ಅಗೋ ಅಲ್ಲಿ ಒಂದು ಬಸ್ ನಿಂತಿದೆ. ಪೀಟ್ ಹೋದ ಬಸ್ಸಿನ ಹಾಗೆಯೇ ಇದೆ. ಆದರೆ ಅದರೊಳಗೆ ಜನ ಮಾತ್ರ ಇರಲಿಲ್ಲ. ಅಲ್ಲೇ ಒಂದು ಬಸ್ ಸ್ಟೇಶನ್ ಕೂಡ ಇತ್ತು. ಟಿಕೆಟ್ ಕೊಡುವ ಕಿಟಕಿಯ ಹಿಂದೆ ಒಬ್ಬನು ಕೂತಿದ್ದ. ಪೋಲೀಸ ನನ್ನನ್ನು ಅಲ್ಲೇ ಒಂದು ಬೆಂಚಿನ ಮೇಲೆ ಕೂರ ಹೇಳಿದ. ನಾನು ಕೂತೆ. ಅವನು ಯಾರಿಗೋ ಟೆಲಿಫೋನ್ ಮಾಡಿದ 'ನೋಡಯ್ಯಾ ಈತನ ಮೇಲೆ ಒಂದು ಕಣ್ಣಿಟ್ಟಿರು. ಮಿಸೆಸ್ ಹ್ಯಾಬರ್‌ಶಾಮ್ ಸಿದ್ಧಳಾಗಿ ಬರುವ ವರೆಗೆ ಇವನನ್ನು ನೋಡಿಕೋ. ನಾನೂ ಅಷ್ಟು ಹೊತ್ತಿಗೆ ಸರಿಯಾಗಿ ಇಲ್ಲಿರುತ್ತೇನೆ' ಎಂದು ಕಿಟಕಿಯ ಹಿಂದಿನವನಿಗೆ ಹೇಳಿ ಕೆಲಸದ ಮೇಲೆ ಹೊರಟು ಹೋದ. ನಾನು ಕೂಡಲೆ ಎದ್ದು ಟಿಕೆಟ್‌ವಾಲನ ಹತ್ತಿರ 'ನನಗೆ ಮೆಂಫಿಸ್‌ಗೆ ಹೋಗ ಬೇಕು.' ಎಂದೆ.

'ಯಾಕಾಗಬಾರದು ಮರಿ, ಆದರೆ ನೋಡು ಈಗ ಮಾತ್ರ ಆ

ಬೆಂಚಿನ ಮೇಲೆ ಮಿಸ್ಟರ್ ಫೂಟ್ ಬರುವ ತನಕ ಒಂದು ಗಳಿಗೆ ಕುಕ್ಕರಿಸು.' ಎಂದನಾತ.

'ಯಾರವ ಮಿಸ್ಟರ್ ಫೂಟ್? ನನಗೆ ಗೊತ್ತಿಲ್ಲ ನನಗೆ ಮೆಂಫಿಸ್‌ಗೆ ಹೋಗಬೇಕು.'

'ದುಡ್ಡಿದೆಯಾ? ಎಪ್ಪತ್ತೆರಡು ಸೆಂಟ್?'

ನಾನು ಪಿಕ್‌ಪೋಕ್ ಪೊಟ್ಟೆಯನ್ನು ತೆಗೆದು 'ಇಕೋ, ಅದರ ಬದಲು ಈ ಪೊಟ್ಟೆ. ಇದಕ್ಕೆ ಒಂದು ಡಾಲರ್ (ನೂರು ಸೆಂಟ್) ಇದೆ. ನನಗೆ ಎಪ್ಪತ್ತೆರಡೇ ಸಾಕು. ಕೊಡು ಟಿಕೆಟ್' ಎಂದೆ.

'ಊಂ ಹೂಂ. ನನಗೆ ದುಡ್ಡೇ ಆಗಬೇಕು. ನಾನು ಪೊಟ್ಟೆ, ಕೋಳಿ ಹಂದಿ ಎಲ್ಲಾ ತೆಗೆದುಕೊಂಡು ಟಿಕೆಟ್ಟ್ ಕೊಟ್ಟರೆ ಕಂಪೆನಿಯವರು ನನ್ನನ್ನು ಕೆಲಸದಿಂದ ವಜಾ ಮಾಡಿಯಾರು ಇಕೋ, ಆ ಬೆಂಚಿನಲ್ಲಿ ನೀನು ಸ್ವಲ್ಪ ಸುಮ್ಮಗೆ ಕೂತುಕೊ....'

ನಾನು ಬಾಗಿಲಿನ ಬಳಿಗೆ ಓಡಲು ಆರಂಭಿಸಿದ್ದನ್ನು ನೋಡಿ ಆತ ಮೇಜಿಗೆ ಒಂದು ಕೈಯೂರಿ ಕಿಟಕಿಯ ಮೂಲಕ ಹಾರಿ ಬಂದು ನನ್ನ ಶರ್ಟಿನ ತುದಿಯನ್ನು ಹಿಡಿದು ನನ್ನನ್ನು ನಿಲ್ಲಿಸಿಯೇ ಬಿಟ್ಟ ನಾನು ಕೂಡಲೆ ನನ್ನ ಕಿಸೆಯೊಳಗಿಂದ ಚೂರಿಯನ್ನು ತೆಗೆದು ಅದನ್ನು ಬಿಡಿಸಿದೆ. ಆದರೂ ನಾನು ಅವನ ಕೈಯಿಂದ ತಪ್ಪಿಸಿಕೊಂಡು ಬಾಗಿಲಿನಿಂದಾಚೆ ಓಡಲು ಯತ್ನಿಸಿದರೆ ಆವನು ನನಗಿಂತಲೂ ಮುಂಚೆ ಹೋಗಿ ಬಾಗಿಲಿಗೆ ಬೆನ್ನು ಹಾಕಿ ಒಂದು ಕಾಲನ್ನು ಅಗಲ ಮಾಡಿ ಕುಕ್ಕರಿಸೋ ಆ ಬೆಂಚಿನಲ್ಲಿ' ಎಂದು ಕೂಗಿದ.

ನನಗೆ ಆ ಬಾಗಿಲಿನ ಹೊರತು ಬೇರೆ ದಾರಿಯೇ ಇರಲಿಲ್ಲ. ನಾನು ಮರಳಿ ಬೆಂಚಿನ ಮೇಲೆ ಕುಕ್ಕರಿಸಿದೆ. ಅಷ್ಟರಲ್ಲಿ ಸ್ಟೇಶನ್ ತುಂಬ ಜನರು ತುಂಬಿದ ಹಾಗೆ ತೋರಿತು. ಅದರ ನಡುವೆ ಆ ಪೋಲೀಸನೂ ಇದ್ದ. ಅವನ ಜತೆಗೆ ಒಬ್ಬ ಹಿರಿಯ, ಇನ್ನೊಬ್ಬ ಕಿರಿಯ ಮಹಿಳೆಯರು ಅವಸರವಾಗಿ ಬಣ್ಣ ಬಳಿದುಕೊಂಡು ಬಂದಂತೆ ಬಂದಿದ್ದರು.

'ಅಬ್ಬಾ, ಅವನ ಮೈಮೇಲೊಂದು ಓವರ್‌ಕೋಟೂ ಇಲ್ಲವಲ್ಲಾ,

ಈ ಚಳಿಯಲ್ಲಿ ಹೇಗೆ ಬಂತೋ ಇಷ್ಟು ದೂರ, ಪಾಪ!' ಎಂದು ಹಿರಿಯಾಕೆ ಹೇಳಿದಳು.

'ನನಗೂ ಅದೇ ಯೋಚನೆ. ಕೇಳಿದರೆ ನನ್ನಣ್ಣ ಮೆಂಫಿಸ್‌ನಲ್ಲಿದ್ದಾನೆ ಎನ್ನುವುದರ ಹೊರತು ಬೇರೆ ಮಾತೇ ಇಲ್ಲ' ಎಂದು ಪೋಲೀಸ ಹೇಳಿದ.

'ಹೌದು, ನಾನು ಮೆಂಫಿಸ್‌ಗೆ ಹೋಗಬೇಕಾಗಿದೆ.' ಎಂದು ನಾನು ಸೈಗುಟ್ಟಿದೆ.

ಅದಕ್ಕೆ ಕಿರಿಯುವಳು 'ಹೌದಪ್ಪಾ ಹೌದು. ಹೋಗುವಿಯಂತೆ. ಅಲ್ಲಿ ನಿನ್ನ ಅಣ್ಣನನ್ನು ನಿನಗೆ ಪತ್ತೆ ಹಿಡಿಯಲು ಸಾಧ್ಯವಾದೀತೆ?' ಎಂದು ಕೇಳಿದಳು.

'ಯಾಕೆ ಸಾಧ್ಯವಿಲ್ಲ. ಇಷ್ಟು ವರ್ಷವೂ ನೋಡಿರುವ ನನಗೆ ಅವನನ್ನು ಗುರುತು ಹಿಡಿಯುವುದು ಕಷ್ಟವೇನು? ನೋಡಿದ ತಕ್ಷಣ ಕಂಡುಹಿಡಿದೇನು'

ಮುದುಕಿ ನನ್ನನ್ನು ನೋಡಿ 'ಈತ ಮೆಂಫಿಸಿನವನ ಹಾಗೆ ತೋರುವುದಿಲ್ಲ' ಎಂದಳು.

'ಅದು ನಿಜ. ಆದರೂ ಹೇಗೆ ಹೇಳೋಣ? ಈತ ಎಲ್ಲಿಯವನೋ ಏನೋ? ಇತ್ತಿತ್ತಲಾಗೆ ಯಾವ ಯಾವ ರಾಜ್ಯದ ಜನ ಊರೆಲ್ಲ ಅಡ್ಡಾಡುತ್ತಿದ್ದಾರೆ. ಈತ ನಿನ್ನೆ ಟೆಕ್ಸಾಸ್‌ನಲ್ಲಿದ್ದನೋ, ಮಿಸ್ಸೂರಿಯಲ್ಲಿದ್ದನೋ ಯಾರು ಬಲ್ಲ? ಇವನಣ್ಣ ಮೆಂಫಿಸ್‌ನಲ್ಲಿರುವುದಷ್ಟೇ ಈಗ ನಿಶ್ಚಯವಾಗಿರುವುದು. ಆದುದರಿಂದ ಇವನನ್ನು ಅಲ್ಲಿಗೇ ಕಳಿಸಬೇಕು.' ಎಂದು ಪೋಲೀಸರವನು ನುಡಿದ.

'ಹೌದು' ಎಂದು ಮುದುಕಿ ಗೋಣಲುಗಿಸಿದಳು.

ಕಿರಿಯುವಳು ನನ್ನ ಪಕ್ಕದಲ್ಲಿ ಕೂತು ಲೆಕ್ಕ ಬರೆಯುವ ಪೆನ್ನನ್ನೂ ಕಾಗದವನ್ನೂ ತೆಗೆದು 'ನೋಡು ಮರಿ, ನಿನ್ನಣ್ಣನನ್ನು ನಿನಗೆ ಹುಡುಕಿಸಿ ಕೊಡುತ್ತೇವೆ. ಈಗ ನಿನ್ನ ಹೆಸರು, ಅಣ್ಣನ ಹೆಸರು, ನಿನ್ನ ವಯಸ್ಸು, ಮತ್ತು ನಿನ್ನ ತಂದೆ-ತಾಯಿ ಸತ್ತದ್ದು ಯಾವಾಗ ತಿಳಿಸು ನೋಡೋಣ' ಎಂದಳು.

'ಅದೆಲ್ಲಾ ಅಗತ್ಯವಿಲ್ಲ. ನನಗೆ ಇವತ್ತೇ ಮೆಂಫಿಸ್‌ಗೆ ಹೋಗ ಬೇಕು.'

'ನೋಡಿದಿರಾ?' ಎಂದು ಪೋಲೀಸ ಸಂತೋಷಪಟ್ಟವನಂತೆ ಹೇಳಿದ.

"ಮಿಸೆಸ್ ಹ್ಯಾಬರ್‌ಶಾಮ್, ನಿಮಗೆ ಅವನು ಅಷ್ಟು ಹೇಳಿದ್ದೇ ದೊಡ್ಡದು. ಅವನ ಹತ್ತಿರ ರೈಫಲ್ ಇದೆಯೋ ಇಲ್ಲವೋ, ಚೂರಿ ಯಂತೂ ಇದೆ ಎನ್ನವುದನ್ನು ನಾನು ನೋಡಿದೆ. ಒಬ್ಬನಿಗೆ ಸಾಕು" ಎಂದು ಟಿಕೇಟ್‌ವಾಲ ಹೇಳಿದ.

ಮುದುಕಿ ನನ್ನನ್ನೇ ದಿಟ್ಟಿಸಿ 'ಏನೋಪ್ಪಾ, ಈಗೇನು ಮಾಡುವಾ" ಎಂದು ಕೇಳಿದಳು.

'ನಾನು ಹೇಳುತ್ತೇನೆ. ನನ್ನ ಖರ್ಚಿನಲ್ಲಿಯೆ ಇವನಿಗೊಂದು ಟಿಕೆಟ್ ತೆಗೆಸಿ ಕೊಟ್ಟರೆ ನಮ್ಮ ಕಂಪೆನಿಯನ್ನು ರಕ್ತಪಾತದ ಗೊಂದಲ ದಿಂದ ತಪ್ಪಿಸಿದ ಹಾಗೂ ಆಯಿತು. ಮಿಸ್ಟರ್ ಫೂಟ್ ಸಾಹೇಬರು ಈ ಸುದ್ದಿಯನ್ನು ನಮ್ಮ ನಗರ ಪಿತಾಮಹರಿಗೆ ಮುಟ್ಟಿಸಿದರೆ ಅವರು ನನ್ನ ಶಾಂತಿಸ್ಥಾಪನೆಯ ಪ್ರಯತ್ನಕ್ಕೋಸ್ಕರ ನನಗೆ ಒಂದು ಪದಕವನ್ನು ಕೊಟ್ಟರೂ ಕೊಡಬಹುದು. ಅಲ್ಲವೋ ಫೂಟ್ ಸಾಹೇಬರೇ?' ಎಂದು ಟಿಕೇಟ್‌ವಾಲನು ಹೇಳಿದ.

ಆದರೆ ಅವನ ಮಾತಿಗೆ ಯಾರೂ ಕಿವಿ ಕೊಡಲಿಲ್ಲ. ಮುದುಕಿ ತನ್ನ ಕೈಚೀಲದಿಂದ ಒಂದು ಡಾಲರ್ ತೆಗೆದು ಬಸ್ಸಿನವನಿಗೆ ಕೊಟ್ಟು "ಇವ ನಿಗೆ ಅರ್ಧ ಟಿಕೇಟು ಸಾಕಲ್ಲವೆ?" ಎಂದು ಕೇಳಿದಳು ಅದಕ್ಕೆ ಅವನು "ಸರಿ ಅರ್ಧವೇ ಸರಿ ಇವನನ್ನು ಬುಟ್ಟಿಯಲ್ಲಿ ಹಾಕಿ ಮೇಲೆ "ಇದ ರಲ್ಲಿ ವಿಷವಿದೆ" ಎಂದು ಬರೆದು ಕಳಿಸಲಿಲ್ಲ ಎಂದು ಕಂಪೆನಿಯವರು ನನ್ನ ಮೇಲೆ ರೇಗಿದರೆ ದೇವರೇ ಗತಿ. ಪರವಾಯಿಲ್ಲ, ನೋಡೋಣ" ಎಂದು ಹೇಳಿದನು.

ಆ ಮೇಲೆ ಅವರೆಲ್ಲ ಹೊರ ನಡೆದರು. ಪೋಲೀಸರವನು ಒಂದು ಸ್ಯಾಂಡವಿಚ್ ತಂದು ಕೊಟ್ಟು 'ನಿನಗೆ ಅಣ್ಣನ ಪತ್ತೆ ಗೊತ್ತಿಲ್ಲ?" ಎಂದು ಮರುವಿಚಾರಿಸಿದ.

'ಯಾಕೆ ಸಂದೇಹ? ಪೀಟ್ ನನ್ನ ಕಣ್ಣಿಗೆ ಬೀಳದಿದ್ದರೆ ಹೋಗಲಿ, ನನ್ನನ್ನು ನೋಡಿದ ಕೂಡಲೆ ಅವನಿಗೆ ಗುರುತಾಗದೆ ಹೋದೀತೆ?' ಎಂದು ನಾನು ಧೈರ್ಯವಾಗಿ ನುಡಿದೆ.

ಪೋಲೀಸಸವನು ಅಷ್ಟಕ್ಕೆ ಅಲ್ಲಿಂದ ಹೊರಟ. ಆ ಮೇಲೆ ಯಾರು ಯಾರೋ ಬಂದರು, ಟಿಕೆಟ್ ಕೊಂಡರು. ಬಸ್ಸಿನವನು ಟೈಮ್ ಆಯಿತು ಎಂದಾಗ ನಾನು ಬಸ್ಸಿನ ಹತ್ತಿರ ಹೋಗಿ ಪೀಟ್‌ನ ಹಾಗೇ ಅದನ್ನು ಏರಿ ಕೂತೆ. ಬಸ್ಸು ಹೊರಟಿತು.

ಎಲ್ಲಾ ಪಟ್ಟಣಗಳನ್ನೂ ನಾನು ನೋಡಿದೆ, ಹೌದು ಎಲ್ಲಾ ಪಟ್ಟಣಗಳನ್ನು. ಬಸ್ಸು ಹೊರಟು ಸ್ವಲ್ಪ ಸಮಯದೊಳಗೆ ನನಗೆ ತೂಕಡಿಕೆ ಬಂದರೂ ಅದನ್ನು ಒತ್ತಿಹಿಡಿದು, ಹೊಲ, ಗುಡ್ಡ, ರೈಲ್ವೇ ಹಳಿ, ಸಿಗ್ನಲ್ ಕೈ ದಾಟಿ ಒಂದಾದ ಮೇಲೊಂದು ಪಟ್ಟಣವನ್ನು ಹಾದು ಕೊನೆಯಲ್ಲಿ ಒಂದು ದೊಡ್ಡ ಊರಿನೊಳಕ್ಕೆ ಪ್ರವೇಶಮಾಡಿದೆವು. ಇದೇ ಮೆಂಫಿಸ್ ಎಂದು ನಾನು ಯೋಚಿಸುವಷ್ಟರಲ್ಲಿ ಆ ಪಟ್ಟಣವೂ ಹಿಂದಾಗಿ ಮತ್ತೆ ಗುಡ್ಡ—ಹೊಲ—ನೀರಿನ ಟ್ಯಾಂಕು—ಗಿರಣಿ, ಅದರ ಹೊಗೆ ನಳಿಗೆ ಕಂಡು ಮರುಕ್ಷಣ ನಾವು ಬಯಲುಭೂಮಿಯಲ್ಲಿ ಓಡುತ್ತಿದ್ದೆವು. ದೂರದಲ್ಲಿ ನನಗೆ ಮತ್ತೊಂದು ನಗರವು ಕಂಡಿತು. ಈ ಸಾರಿ ನಾನು ಇದು ಮೆಂಫಿಸ್ ಅಂದುಕೊಂಡುದು ಸರಿ ಹೋಯಿತು. ಅದು ಒಂದು ಡಜನ್ ಪಟ್ಟಣಗಳನ್ನು ಒಳಗೊಂಡ ಹಾಗೆ ತೋರುತಿತ್ತು. ಜೆಫರ್ಸನ್‌ಗಿಂತಲೂ ದೊಡ್ಡದಾಗಿತ್ತು. ಅಷ್ಟರಲ್ಲಿ ನಾವು ನಗರವನ್ನೇ ಪ್ರವೇಶಿಸಿದೆವು. ಈಗ ಬಸ್ಸು ನಾಲ್ಕು ಹೆಜ್ಜೆಗೊಮ್ಮೆ ನಿಲ್ಲುತಿತ್ತು. ಅದರ ಇಕ್ಕೆಲದಲ್ಲಿ ಕಾರುಗಳು ಓಡಾಡುತ್ತಿದ್ದುವು. ಬೀದಿಗಳಲ್ಲಿ ಜನರಿಗೆ ಲೆಕ್ಕಮಿತಿ ಇರಲಿಲ್ಲ. ರಾಜ್ಯದ ಜನರೆಲ್ಲರೂ ಮನೆಬಿಟ್ಟು ಇವತ್ತು ಇಲ್ಲಿಗೇ ಬಂದಹಾಗಿತ್ತು. ನನಗೆ ಬಸ್ ಟಿಕೆಟ್ ಕೊಡಲಿಕ್ಕೂ, ನನ್ನ ಚರಿತ್ರೆ ಬರೆದುಕೊಳ್ಳಲಿಕ್ಕೂ ಜನ ಸಿಕ್ಕಿದ್ದೇ ದೊಡ್ಡದೆನಿಸಿತು. ಬಸ್ಸಿನ ನಿಲ್ದಾಣ ಬಂತು. ಜೆಫರ್ಸನ್ ನಿಲ್ದಾಣಕ್ಕಿಂತಲೂ ಇದು ದೊಡ್ಡದು. ನಾನು ಸೀದಾ 'ಸರಿ. ಏನಯ್ಯಾ, ಸೈನ್ಯಕ್ಕೆ ಜನ ಭರ್ತಿಯಾಗುವ ಸ್ಥಾನ ಯಾವುದು?' ಎಂದು ಬಸ್ಸಿನವನನ್ನು ಕೇಳಿದೆ. 'ಏನು?' ಎಂದು ಅರ್ಥ

ವಾಗದವನಂತೆ ಅವನು ಮರುಸವಾಲು ಹಾಕಿದ. ನಾನು ಮತ್ತೊಮ್ಮೆ 'ಜನ ಸೈನ್ಯಕ್ಕೆ ಭರ್ತಿಯಾಗುವ ಸ್ಥಳ?" ಎಂದೆ.

ಅವನು ಸ್ಥಳದ ಗುರುತು ಹೇಳಿದ. ಮೆಂಫಿಸಿನಷ್ಟು ದೊಡ್ಡ ನಗರದಲ್ಲಿ ಗುರುತು ಹಿಡಿಯುವುದು ಕಷ್ಟ ಎಂದಿದ್ದೆ. ಇನ್ನೂ ಎರಡು ಕಡೆ ಹೀಗೆ ವಿಳಾಸ ವಿಚಾರಿಸಿದ ಮೇಲೆ ಸೈನ್ಯಕ್ಕೆ ಸೇರುವ ಜಾಗ ನನಗೆ ಸಿಕ್ಕಿ ಬಿಟ್ಟಿತು. ಸುತ್ತಮುತ್ತಲೂ ಏನೋ ಭಾರೀ ಗದ್ದಲ ಇದ್ದ ಹಾಗಿತ್ತು. ಜನ ಸಂದಣಿಯಲ್ಲಿ ಪೀಟ್‌ಗೆ ನನ್ನ ಗುರುತು ಹಿಡಿಯುವುದು ಸುಲಭವಲ್ಲವೆ? ಪೀಟ್ ಈ ಕೋಣೆಯಲ್ಲಿರಬಹುದು ಎಂದು ಒಂದು ಕೋಣೆಯೊಳಗೆ ನುಗ್ಗಿದೆ. ಪೀಟ್ ಅಲ್ಲಿರಲಿಲ್ಲ.

ಅಲ್ಲಿಯೂ ಇರಲಿಲ್ಲ. ಅಂಗಿಯ ತೋಳಿನಲ್ಲಿ ಬಣ್ಣಗಳ ಚಿತ್ರ ಬಿಡಿಸಿದ ಒಬ್ಬ ಸೈನಿಕನು ಮೇಜಿನ ಮೇಲೆ ಏನೋ ಬರೆಯುತ್ತಿದ್ದ. ಅವನ ಇದಿರು ಇಬ್ಬರು ನಿಂತಿದ್ದರು. ಇನ್ನು ಯಾರ್ಯಾರೋ ಇದ್ದರು. ನಾನು ಮೇಜಿನ ಬಳಿ ಹೋಗಿ "ಪೀಟ್ ಎಲ್ಲಿ? ನನ್ನ ಅಣ್ಣ—ಪೀಟ್ ಗ್ರೆಯರ್—ಎಲ್ಲಿ?" ಎಂದು ಕೇಳಿದೆ. ಆ ಸೈನಿಕ 'ಯಾರು? ಯಾರು?" ಎಂದ. ನಾನು ಮತ್ತೊಮ್ಮೆ "ನಿನ್ನೆ ಪೀಟ್ ಸೈನ್ಯಕ್ಕೆ ಸೇರಿದ್ದಾನೆ. ಪರ್ಲ್ ಹಾರ್ಬರಿಗೆ ಹೊರಟಿದ್ದಾನೆ. ನನಗೆ ಅವನನ್ನು ನೋಡಬೇಕಾಗಿತ್ತು. ಎಲ್ಲಿ ಹಾಕಿದ್ದೀರಿ ಅವನನ್ನು?" ಎಂದು ಕೇಳಿದೆ. ಸೈನಿಕ ಬರೆಯುವುದನ್ನು ಬಿಟ್ಟು ಎರಡು ಕೈಗಳನ್ನು ಮೇಜಿನ ಮೇಲೆ ಚಾಚಿ "ಓಹೋ, ನೀನೂ ಯುದ್ಧಕ್ಕೆ ಹೊರಡುವವನೋ?" ಎಂದು ಕೇಳಿದನು. "ಹೌದು, ಕಟ್ಟಿಗೆ ತರುವುದು, ನೀರು ಸೇದುವುದು—ಈ ಕೆಲಸ ನನಗೆ ಬರುತ್ತದೆ. ಇರಲಿ, ಪೀಟ್ ಎಲ್ಲಿದ್ದಾನೆ?"

ಸೈನಿಕನು ಎದ್ದು ನಿಂತು "ನಿನ್ನನ್ನು ಒಳಕ್ಕೆ ಬರಲು ಬಿಟ್ಟವರು ಯಾರು? ಹೋಗು ಹೋಗಾಚೆ" ಎಂದ.

ನಾನು "ಅದೆಲ್ಲಾ ಕಟ್ಟಿಡು. ಪೀಟ್ ಎಲ್ಲಿದ್ದಾನೆ ಹೇಳು" ಎಂದು ಹೇಳಿದೆ.

ಅಷ್ಟು ಹೇಳಿದ್ದೇ ತಡ ಆತ ಬಸ್ಸಿನವನಿಗಿಂತಲೂ ಬೇಗ ನನ್ನನ್ನು ಹಿಡಿಯಲು ಮುಂದಾದನು. ನನಗೆ ಚೂರಿಯನ್ನು ಬಿಡಿಸಿ ಒಂದು ಸಲ

ಕುಕ್ಕುವುದಕ್ಕೆ ಮಾತ್ರ ಸಮಯವಿತ್ತು. ಚೂರಿ ನಾಟಿದ ಕೂಡಲೇ ಕುರ್ರ್ರೋ ಎಂದು ಕೂಗುತ್ತ ಆ ಕೈಯನ್ನು ಇನ್ನೊಂದು ಕೈಯಿಂದ ಒತ್ತಿ ಹಿಡಿದು ಕುಣಿಯುವುದಕ್ಕೂ ಬೈಯುವುದಕ್ಕೂ ತೊಡಗಿದನು. ಇನ್ನೊಬ್ಬ ನನ್ನನ್ನು ಹಿಂದಿನಿಂದ ಹಿಡಿಯ ಬಂದನು. ನಾನು ಅವನಿಗೂ ಚೂರಿ ಯನ್ನೆಳೆದೆ; ಆದರೆ ಅವನು ತಪ್ಪಿಸಿಕೊಂಡನು. ಇಬ್ಬರೂ ಸೇರಿ ಅದು ಹೇಗೋ ನನ್ನನ್ನು ಹಿಡಿದೇಬಿಟ್ಟರು. ಅಷ್ಟರಲ್ಲಿ ಇನ್ನೊಬ್ಬ ಬೆಲ್ಟ್ ಧರಿಸಿದ ಸಿಪಾಯಿ ಹೊರಗಿನಿಂದ 'ಎಲ ಎಲಾ ಇದೇನು ತಂಟೆ!' ಎಂದು ಕೊಂಡು ಒಳನುಗ್ಗಿದ. 'ಈ ತುಂಟ ನನಗೆ ಚೂರಿ ಹಾಕಲು ಬಂದಿದ್ದಾನೆ' ಎಂದು ಮೊದಲನೆಯ ಸೈನಿಕ ಹೇಳಿದ. ಅವನ ಮಾತು ಕೇಳಿದೊಡನೆ ನಾನು ಅವನ ಕಡೆಗೆ ಹಾರಿದೆ. ಆದರೆ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು. ಬೆಲ್ಟ್ ಧರಿಸಿದ ಸಿಪಾಯಿ 'ಏಯ್, ಚೂರಿ ಮಡಿಸಿ ಜೇಬಿನಲ್ಲಿಟ್ಟುಕೋ. ನೋಡು ನಮ್ಮಲ್ಲಿ ಯಾರ ಹತ್ತಿರವೂ ಆಯುಧ ಇಲ್ಲ. ಬರಿಕೈಯಲ್ಲಿರುವವರ ಸಂಗಡ ಯಾರಾದರೂ ಜಗಳಾಡುವುದುಂಟೆ?' ಎಂದ. ನನಗೆ ಅವನ ಮಾತು ಪೀಟನ ಮಾತುಗಳಂತೆಯೇ ಕೇಳಿಸಿತು. 'ಬಿಡಿ ಅವನನ್ನು' ಎಂದ ಬಳಿಕ ಅವರು ನನ್ನನ್ನು ಬಿಡುಗಡೆ ಮಾಡಿದರು. 'ಏನು, ಏನಾಯಿತು?' ಎಂದು ಅವನು ನನ್ನನ್ನು ಕೇಳಿದರೆ ನಾನು ಹೇಳಬೇಕಾದ್ದನ್ನು ಹೇಳಿದೆ. 'ಹ್ಹೋ, ಅವನು ಹೊರಡುವಾಗ ಆರೋಗ್ಯವಾಗಿದ್ದನೇ ಇಲ್ಲವೇ ಎಂಬುದನ್ನು ನೋಡಲು ಬಂದೆಯಾ!' ಎಂದು ಆತ ಕೇಳಿದ. 'ಅಲ್ಲ.... ನಾನು....' ಎಂದು ನಾನು ಹೇಳುವನಿತರಲ್ಲಿ ಅವನು ಮೊದಲಿನ ಸೈನಿಕನ ಕಡೆ ತಿರುಗಿದನು. ಆತ ಗಾಯಕ್ಕೆ ಕರವಸ್ತ್ರ ಸುತ್ತಿಕೊಳ್ಳುತ್ತಿದ್ದ. ಮೇಜಿನ ಹತ್ತಿರ ಹೋಗಿ ಒಂದು ಪುಸ್ತಕದ ಹಾಳೆ ತೆಗೆದು 'ಹಾಂ, ಇಲ್ಲಿದೆ. ನಿನ್ನೆ ಸೇರಿದ್ದಾನೆ. ಲಿಟಲ್‌ರಾಕ್ಕಿಗೆ ಇವತ್ತು ಮುಂಜಾನೆ ಹೋಗುವ ದಳದ ಜತೆಗೆ ಇದ್ದಾನೆ. ಟ್ರೈನು ಇನ್ನೈವತ್ತು ಮಿನಿಟುಗಳಲ್ಲಿ ಬಿಡುತ್ತದೆ. ಹಳ್ಳಿಯ ಹುಡುಗರಾದ್ದರಿಂದ ಅವರೆಲ್ಲಾ ಇಷ್ಟು ಹೊತ್ತಿಗೆ ಸ್ಟೇಶನ್ನಿನಲ್ಲಿರುತ್ತಾರೆ" ಎಂದು ಹೇಳಿದ. ಬೆಲ್ಟಿನ ಸಿಪಾಯಿ 'ಸ್ಟೇಷನ್ನಿಗೆ ಫೋನ್ ಮಾಡಿ ಪೀಟನನ್ನು ಇಲ್ಲಿಗೆ ಕರೆಸಿ. ಒಂದು ಬಂಡಿಯನ್ನು ಬರ

ಹೇಳಿ" ಎಂದು ನನ್ನನ್ನು ಇನ್ನೊಂದು ಕೋಣೆಗೆ ಕರೆದುಕೊಂಡು ಹೋದನು.

ಸ್ವಲ್ಪ ಹೊತ್ತಿನಲ್ಲಿ ಹೊರಗೆ ಕಾಲ ಸಪ್ಪಳ ಕೇಳಿಸಿದಾಗ ನನಗೆ ಅದು ಪೀಟ್ ಎಂಬುದರಲ್ಲಿ ಸಂದೇಹವೇ ಇರಲಿಲ್ಲ. ಬಸ್ಸು ಹತ್ತುವಾಗ ಹೇಗಿದ್ದನೋ ಹಾಗೆಯೇ ಇದ್ದ ಪೀಟ್. ಆದರೆ ನನಗಂತೂ ಅಷ್ಟೆಲ್ಲಾ ನಡೆದು, ಅಷ್ಟು ದೂರ ಪ್ರಯಾಣ ಮಾಡಿದ್ದರಿಂದ ಅವನನ್ನು ನೋಡದೆ ಸಾಧಾರಣ ಒಂದು ವಾರವಾದರೂ ಆದಂತೆ ತೋರಿತು. ಮೆಂಫಿಸ್ ನಲ್ಲಿ—ಪರ್ಲ್ ಹಾರ್ಬರಿಗೆ ಹೋಗುವ ಹಾದಿಯಲ್ಲಿದ್ದರೂ—ಅವನು ಎಂದಿನಂತೆಯೇ ಇದ್ದ.

'ಇಲ್ಲಿ ಏನು ಕೆಲಸವೋ ನಿನಗೆ?' ಎಂದು ಆತ ಕೇಳಿದ.

'ನಿಮಗೆ ಕಟ್ಟಿಗೆ ತರುವುದು, ಅಡಿಗೆಗೆ ನೀರು ಸೇದಿಕೊಡುವುದು'

'ಸೀದಾ ಮನೆಗೆ ಹೋಗು'

'ಪೀಟ್, ನಾನೂ ಬರುತ್ತೇನೆ ಪೀಟ್. ಯಾಕೆ ಬರಬಾರದು? ಹೋಗದಿದ್ದರೆ ನನಗೆ ದುಃಖವಾಗುತ್ತದೆ ಪೀಟ್'

'ಅದೆಲ್ಲಾ ಇರಲಿ.' ಎಂದು ಪೀಟ್ ಸಿಪಾಯಿ ಕಡೆಗೆ ತಿರುಗಿ 'ಅವನಿಗೇನಾಯಿತೋ ಲೆಫ್ಟಿನೆಂಟ್, ಮನೆಯಲ್ಲಿ ಅವನು ಯಾರ ಮೇಲೂ ಹೀಗೆ ಹಾಯ್ದುದಿಲ್ಲ' ಎಂದ. ಆ ಮೇಲೆ ನನ್ನ ಕಡೆಗೆ ಹೊರಳಿ 'ಯಾಕೋ ಚೂರಿ ತೆಗೆದೆ?' ಎಂದ.

'ಗೊತ್ತಿಲ್ಲ. ತೆಗೆಯಬೇಕಾಗಿತ್ತು, ತೆಗೆದೆ. ಇಲ್ಲಿಯವರೆಗೆ ಬರಬೇಕಾಗಿದ್ದರೆ ಹಾಗೆಲ್ಲಾ ಮಾಡದೆ ಸಾಧ್ಯವಿರಲಿಲ್ಲ.'

'ಸರಿ, ಇನ್ನೊಮ್ಮೆ ಹಾಗೆಲ್ಲಾ ಮಾಡಿದರೆ ಜೋಕೆ. ಚೂರಿಯನ್ನು ಕಿಸೆಯೊಳಗೆ ತುರುಕು. ಇನ್ನು ನೀನು ಹೀಗೆಲ್ಲಾದರೂ ಪೋಲಿಮಾಡುವ ಸುದ್ದಿ ಕೇಳಿದರೆ ನಾನು ಎಲ್ಲಿದ್ದರೂ ಅಲ್ಲಿಂದ ಹಿಂದೆ ಬಂದು ನಿನಗೆ ನಾಲ್ಕು ಥಳಿಸುತ್ತೇನೆ. ತಿಳಿಯಿತೆ?'

'ಪೀಟ್, ಆಗಲಿ ಪೀಟ್!' ಎಂದು ನಾನು ಬೇಡಿದೆ.

'ಬೇಡ, ಮನೆಗೆ ಹೋಗಿ ಅಮ್ಮನನ್ನು ನೋಡಿಕೊ. ನನ್ನ ಹತ್ತಿರದ ಜಮೀನನ್ನೂ ನೀನೇ ನೋಡಿಕೊಳ್ಳಬೇಕು. ಇವತ್ತೇ ನೀನು

ಮನೆಗೆ ಹಿಂದಿರುಗಬೇಕು. ತಿಳಿಯಿತೆ?' ಎಂದು ಆತ ದನಿತಗ್ಗಿಸಿ ವಿದುವಾಗಿ ಹೇಳಿದ.

'ಅವನಿಗೆ ಒಬ್ಬನೇ ಹೋಗಲು ಸಾಧ್ಯವೆ?' ಎಂದು ದೊಡ್ಡ ಸಿಪಾಯಿ ಕೇಳಿದ.

'ಒಬ್ಬನೇ ಬಂದವನಿಗೆ ಒಬ್ಬನೇ ಹೋಗಲು ತಿಳಿಯದೆ?'

'ಓಹೋ, ತಿಳಿಯುತ್ತದೆ.'

ಪೀಟ್ ನನಗೆ ಒಂದು ಡಾಲರ್ ಜೇಬಿನಿಂದ ತೆಗೆದುಕೊಟ್ಟ. 'ಅದರಲ್ಲಿ ನಿನಗೆ ನಮ್ಮ ಊರಿನ ಮೆಯಿಲ್ ಬಾಕ್ಸ್ ತನಕ ತಿಕೆಟ್ ಸಿಗುತ್ತದೆ. ಲೆಫ್ಟಿನೆಂಟ್ ಸಾಹೇಬರು ನಿನ್ನನ್ನು ಬಸ್ಸಿನವರೆಗೆ ಬಿಟ್ಟು ಬರುತ್ತಾರೆ. ಅಮ್ಮನನ್ನೂ, ನನ್ನ ಜಮೀನನ್ನು ನೋಡಿಕೊ. ಅಗೋ ಆ ಚೂರಿ ಜೇಬಿನೊಳಗಿಡು.

'ಆಯಿತು ಪೀಟ್'.

'ಸರಿ, ನಾನಿನ್ನು ಹೊರಟೆ' ಎಂದು ಹೇಳಿ ಪೀಟ್ ನನ್ನ ತಲೆಯ ಮೇಲೆ ಒಂದು ಕ್ಷಣ ಕೈಯಾಡಿಸಿದ. ಒಮ್ಮೆಲೆ ನನ್ನನ್ನು ಚುಂಬಿಸಿ ಹೊರಟೇ ಹೋದ. ನಾನು ಅವನ ಕಡೆಗೆ ನೋಡಲೇ ಇಲ್ಲ, ಅವನು ಚುಂಬಿಸಿ ಒದ್ದೆಯಾದ ಸ್ಥಳವನ್ನು ನಾನು ಒರಸಿಕೊಳ್ಳುತ್ತಿರುವಾಗ ಲೆಫ್ಟಿನೆಂಟ್ ಸಾಹೇಬರು ಕಿಟಕಿಯಿಂದ ಹೊರಗೆ ನೋಡುತ್ತ ಗಂಟಲು ಕೆರೆಯುತ್ತಿದ್ದರು. ಜೇಬಿನೊಳಗೆ ಕೈಹಾಕಿ ಉರುಟಾದ ಒಂದು ಬಿಲ್ಲೆ ಚೂಯಿಂಗ್‌ಗಮ್ ನನಗೆ ದಾಟಿಸಿದರು.

'ಉಪಕಾರವಾಯಿತು. ಇನ್ನು ಹೊರಡೋಣವೆ?' ಎಂದೆ.

'ನಿಲ್ಲು' ಎಂದು ಅವರು ಮತ್ತೊಮ್ಮೆ ಫೋನ್ ಮಾಡಿದರು. 'ನೋಡು, ಪೀಟ್ ಹೇಳಿದ ಮಾತನ್ನು ಜ್ಞಾಪಕದಲ್ಲಿಡು' ಎಂದರು.

ನಾನು ಕಾಯುತ್ತ ಕೂತೆ. ಸ್ವಲ್ಪ ಸಮಯದ ಮೇಲೆ ಫರ್ ಕೋಟನ್ನು ಧರಿಸಿದ ಒಬ್ಬಳು ವಯಸ್ಸಾದ ಹೆಂಗಸು ಕೋಣೆಯೊಳಕ್ಕೆ ಬಂದು ನನ್ನ ಹೆಗಲ ಮೇಲೆ ಕೈಯನ್ನಿರಿಸಿ 'ನಡೆ, ಊಟಕ್ಕೆ ಏಳು.' ಎಂದು ನನ್ನಮ್ಮ ಹೇಳುವ ಹಾಗೆಯೇ ಹೇಳಿದಳು.

'ಬೇಡ. ನನಗೆ ಜೆಫರ್ಸನ್ ಬಸ್ಸನ್ನು ಹಿಡಿಯಬೇಕು' ಎಂದೆ ನಾನು.

ಆಕೆ 'ಚಿಂತಿಲ್ಲ. ಅದಕ್ಕಿನ್ನೂ ತಡವಿದೆ. ಅಷ್ಟರೊಳಗೆ ಊಟ ಮುಗಿಸಿ ಬರಬಹುದು' ಎಂದಳು.

ಅವಳಿಗೆ ಒಂದು ಕಾರೂ ಇತ್ತು. ನಾವು ಹೊರಟು ಬೇರೆ ಕಾರುಗಳ ನಡುವೆ ಸಿಕ್ಕಿಕೊಂಡೆವು. ಒಮ್ಮೊಮ್ಮೆ ನಾವು ಬಸ್ಸಿನ ಅಡಿಯಲ್ಲಿಯೂ ಹೋಗುತ್ತಿದ್ದೆವು. ಜನ ನಮ್ಮ ಕಾರನ್ನು ಮುಟ್ಟಿಕೊಂಡೇ ನಡೆಯುತ್ತಿದ್ದರು. ಅವರ ಪರಿಚಯವಾದರೂ ಇದ್ದರೆ ಕಾರಿನೊಳಗೆ ಕೂತಲ್ಲಿಂದಲೇ ಅವರನ್ನು ಮಾತನಾಡಿಸಬಹುದಾಗಿತ್ತು. ಕಾರು ಒಂದು ದೊಡ್ಡ ಮನೆಯ ಮುಂದೆ ನಿಂತಿತು. ಇಷ್ಟು ದೊಡ್ಡ ಮನೆ ಇರಬೇಕಾದರೆ ಈಕೆಗೆ ಮಕ್ಕಳು ಮರಿ ಬಹಳ ಜನ ಇರಬಹುದು ಎಂದು ನಾನು ಯೋಚಿಸಿದೆ. ಮನೆಯೊಳಕ್ಕೆ ಹೋದ ಕೂಡಲೇ ಒಂದು ಉದ್ಯಾನವಿತ್ತು. ಅದನ್ನು ದಾಟಿ ನಾವು ಒಂದು ಸಣ್ಣ ಕೋಣೆಗೆ ಹೋದರೆ ಅಲ್ಲಿ ಒಬ್ಬ ಸಮವಸ್ತ್ರ ಧರಿಸಿದ ಆಳು ನಾವು ಹೋದ ಕೂಡಲೆ ಬಾಗಿಲು ಹಾಕಿದ. 'ಎಲಾ ಇದೇನು' ಎಂದು ನಾನು ನನ್ನ ನಡುಗುವ ಕಾಲನ್ನು ಗಟ್ಟಿಯಾಗಿರಿಸಿದೆ. ಆ ವೇಲೆ ಎಲ್ಲವೂ ಸರಿ ಹೋಯಿತು. ಇಡಿ ಕೋಣೆಯೇ ಮೇಲಕ್ಕೆ ಸರಿಯುತಿತ್ತು. ಕೊನೆಗೊಮ್ಮೆ ಒಂದು ಕಡೆ ಗಡಕ್ಕನೆ ನಿಂತಿತು. ಬಾಗಿಲು ತೆರೆಯಿತು. ನಾವು ಇನ್ನೊಂದು ಬಾಗಿಲನ್ನು ತೆರೆದು ಕೊಂಡು ಒಳಗೆ ಹೋದರೆ ಅಲ್ಲಿ ಇನ್ನೊಬ್ಬರು ಲೆಫ್ಟಿನೆಂಟ ನಿಂತಿದ್ದರು. ಅವರ ಅಂಗಿಯ ಎರಡೂ ತೋಳುಗಳಲ್ಲಿ ಬೆಳ್ಳಿಯ ಬಣ್ಣದ ಹಕ್ಕಿಯ ಚಿತ್ರವಿತ್ತು.

'ಇಕೋ ಬಂದಾಯಿತು. ಇವರೇ ಕರ್ನಲ್ ಮೆಕ್ಕೆಲೋಗ್. ನಿನಗೆ ಊಟಕ್ಕೆ ಏನು ಬೇಕು? ಹೇಳು' ಎಂದು ಆಕೆ ನನ್ನನ್ನು ಕೇಳಿದಳು.

'ಹ್ಯಾಮ್, ರೊಟ್ಟಿ, ಕಾಫಿ—ಅಷ್ಟೇ ಸಾಕು' ಎಂದೆ.

'ಕಾಫಿಯೋ, ನೀನು ಕಾಫಿ ಕುಡಿಯಲು ಯಾವಾಗ ಕಲಿತೆ?

'ನನಗೆ ನೆನಪಾಗುವುದಿಲ್ಲ.'

'ನಿನಗೀಗ ಎಂಟು ವರ್ಷ ವಯಸ್ಸಿರಬಹುದಲ್ಲಾ?'

'ಅಲ್ಲ, ಎಂಟು ವರ್ಷ ಹತ್ತು ತಿಂಗಳು. ಹನ್ನೊಂದು ನಡೀತಿದೆ.'

ಆಕೆ ಟೆಲಿಫೋನಿನಲ್ಲಿ ಏನೋ ಹೇಳಿದಳು. ನಾನು ಅವಳಿಗೆ ನನ್ನ ಕತೆಯನ್ನೆಲ್ಲ ಹೇಳಿದೆ. ಅವಳಿಗೂ ನನ್ನಷ್ಟೇ ದೊಡ್ಡ ಒಬ್ಬ ಮಗನಿದ್ದಾನಂತೆ. ಎಲ್ಲೋ ಶಾಲೆ ಕಲಿಯುತ್ತಿರುವನಂತೆ. ಅಷ್ಟರಲ್ಲಿ ವಿಚಿತ್ರವಾದ ಉಡುಗೆ ಧರಿಸಿದ ಒಬ್ಬನು ಒಂದು ಗಾಡಿಯಲ್ಲಿ, ಹ್ಯಾಮ್, ರೊಟ್ಟಿ, ಒಂದು ಗ್ಲಾಸ್ ಹಾಲು ಮತ್ತು ಒಂದು ತುಂಡು ಸಿಹಿ ತಿಂಡಿ ಇರಿಸಿಕೊಂಡು ನನ್ನ ಮುಂದೆ ಇಟ್ಟನು. ನನಗೆ ಹಸಿವೆ ಏನೋ ಇದ್ದಿತಾದರೂ, ಒಂದು ತುತ್ತು ಬಾಯಿಗೆ ಹಾಕಿದರೆ ಅದು ಗಂಟಲಿನೊಳಗೆ ಇಳಿಯುವಂತೆ ತೋರಲಿಲ್ಲ. ನಾನು ಹಠಾತ್ತನೆ ಎದ್ದು ನಿಂತು 'ನಾನಿನ್ನು ಹೋಗುತ್ತೇನೆ' ಎಂದೆ. 'ನಿಲ್ಲು ನಿಲ್ಲು' ಎಂದು ಆಕೆ ಹೇಳಿದಳು. 'ಇಲ್ಲ, ಹೊರಟೆ' ಎಂದು ನಾನು ಹೇಳಿದೆ. 'ಒಂದು ಮಿನಿಟು ನಿಲ್ಲು. ನಾನು ಕಾರಿಗೆ ಫೋನ್‌ಮಾಡಿದ್ದೇನೆ. ಇಷ್ಟರಲ್ಲೇ ಬರುತ್ತದೆ. ಆವರೆಗೆ ನಿನ್ನ ಕಾಫಿಯನ್ನಾದರೂ ಕುಡಿ.' ಎಂದಳು ಆ ಹೆಂಗಸು. 'ನನಗೆ ಹಸಿವೆಯೇ ಇಲ್ಲ. ಮನೆಗೆ ಹೋಗಿ ನೋಡುತ್ತೇನೆ' ಎಂದೆ. ಟೆಲಿಫೋನ್ ಬಾರಿಸಿತು. ಆಕೆ ಅದಕ್ಕೆ ಉತ್ತರವನ್ನು ಕೊಡಲಿಲ್ಲ. ನನ್ನ ಕಡೆಗೆ ನೋಡಿ 'ಅಗೋ, ಕಾರು ಬಂತು' ಎಂದಳು. ನಾವಿಬ್ಬರೂ ಯಥಾಪ್ರಕಾರ ಆ ಸರಿಯುವ ಕೋಣೆಯೊಳಗೆ ಹೋಗಿ ಹೊರಬಾಗಿಲಿಗೆ ಬಂದರೆ ಒಂದು ದೊಡ್ಡ ಕಾರು ನಿಂತಿತ್ತು. ಒಬ್ಬ ಸೈನಿಕ ಅದರ ಡ್ರೈವರನಾಗಿದ್ದನು. ಆ ಹೆಂಗಸು 'ಅವನ ಕೈಯಲ್ಲಿ ಒಂದು ಡಾಲರ್ ಕೊಟ್ಟು, ಇವನಿಗೆ ಹಾದಿಯಲ್ಲಿ ಹಸಿವಾದರೆ ಒಂದು ಒಳ್ಳೆಯ ಹೋಟೆಲಿನಲ್ಲಿ ತಿಂಡಿ ಕೊಡಿಸು' ಎಂದಳು.

ನಾನು ಮುಂದಿನ ಸೀಟಿನಲ್ಲಿ ಹೋಗಿ ಕೂತೆ. ಕಾರು ಹೊರಟಿತು. ಎಷ್ಟು ಮೈಲು ಹೋದರೂ ಮೆಂಫಿಸ್ ನಗರವೇ ಮುಗಿದ ಹಾಗೆ ತೋರಲಿಲ್ಲ. ಅಪರಾಹ್ನದ ಬಿಸಿಲು ನಗರದ ಮೇಲೆ ಸರಿಯಾಗಿ ಬಿದ್ದಿತ್ತು. ಅಂತೂ ಮೆಂಫಿಸ್ ಹಿಂದಾಗಿ ಹೊಲ, ಗುಡ್ಡದ ಸರದಿ ಬಂತು. ನಾವು ಭಾರೀ ವೇಗವಾಗಿ ಹೋಗುತ್ತಿರಬೇಕು. ಇದೇ ರೀತಿ

ಹೋದರೆ ಇನ್ನೇನು ಮನೆ ಈಗಲೇ ಬಂದುಬಿಡುತ್ತದೆ ಎಂದುಕೊಂಡೆ. ಹೀಗೆ ಸೈನಿಕನ ಜತೆ ಮನೆಗೆ ಹಿಂದಿರುಗುವುದನ್ನು ಯೋಚಿಸಿ ನನಗೆ ಅಳು ಬಂತು. ಅಳುವನ್ನು ನಿಲ್ಲಿಸಲಿಕ್ಕೂ ಆಗಲಿಲ್ಲ. ನಾನು ಆ ಸೈನಿಕನ ಪಕ್ಕದಲ್ಲಿ ಅಳುತ್ತಿದ್ದ ಹಾಗೆ ಅವನು ಕಾರನ್ನು ಮತ್ತಷ್ಟು ಜೋರಾಗಿ ಓಡಿಸುತ್ತಿದ್ದ.

ರೈತ

ಎಡ್ನಾ ಫರ್ಬರ್

ಲೇಖಕರ ಅನುಮತಿಯಿಂದ ಪುನರ್ಮುದ್ರಿತವಾದುದು.
1919ರ ಕಾಪೀರೈಟ್; ಕ್ರೋವೆಲ್ ಪಬ್ಲಿಷಿಂಗ್ ಕಂಪೆನಿ.

ಎಡ್ನಾ ಫರ್ಬರ್ ಮಿಚಿಗನ್ ರಾಜ್ಯದ ಕಾಲಮಜೂ ಎಂಬಲ್ಲಿ 1887ರಲ್ಲಿ ಜನಿಸಿದರು. ಅವರ ತಂದೆ-ತಾಯಿ ಇಬ್ಬರೂ ಯಹೂದ್ಯರು. ತಂದೆ ಹಂಗೆರಿಯಲ್ಲಿ ಹುಟ್ಟಿದರೆ ತಾಯಿ ಮಿಲ್ವೊಕೀಯವಳಾಗಿದ್ದಳು. ಚಿಕ್ಕವರಾಗಿದ್ದಾಗ ಅವರು ವಿಸ್‌ಕೊನ್ಸಿನ್ ರಾಜ್ಯದ ಆ್ಯಪಲ್‌ಟನ್‌ಗೆ ಬಿಡಾರವನ್ನು ಒಯ್ದರು. ಅವರ ಬಾಲ್ಯ ಆ್ಯಪಲ್‌ಟನ್ನಿನಲ್ಲೆ ಕಳೆಯಿತು.

ತಂದೆ ಕುರುಡನಾದ ಮೇಲೆ ಆಕೆ ರಂಗಭೂಮಿಯ ಶಿಕ್ಷಣವನ್ನು ತ್ಯಾಗಮಾಡಿ ಆ್ಯಪಲ್‌ಟನ್ ಡೇಲಿ ಕ್ರಿಸೆಂಟ್ ಎಂಬ ಪತ್ರಿಕೆಯಲ್ಲಿ ವಾರಕ್ಕೆ ಮೂರು ಡಾಲರು (ಸುಮಾರು 12 ರೂಪಾಯಿ) ಸಂಬಳಕ್ಕೆ ನೌಕರಿ ಮಾಡಬೇಕಾಯಿತು.

ಅವರು ಬರೆದ ಪ್ರಥಮ ಕಾದಂಬರಿಯ ಮೇಲೆ ಅವರಿಗೆ ಸಿಟ್ಟುಬಂದು ಅವರು ಅದನ್ನು ಒಗೆದು ಬಿಟ್ಟರು. ತಾಯಿ ಅದನ್ನೆ ಕಾಪಾಡಿ ಒಬ್ಬ ಪ್ರಕಾಶಕರಿಗೆ ಕಳಿಸಲಾಗಿ ಅದು "ಡಾನ್ ಓ' ಹಾರಾ" ಎಂಬ ಶೀರ್ಷಿಕೆಯೊಂದಿಗೆ ಪ್ರಸಿದ್ಧಿಸಲ್ಪಟ್ಟಿತು. 1924ರಲ್ಲಿ ಪ್ರಕಟಿತವಾದ 'ಸೋಬಿಗ್', ಆ ಮೇಲಿನ ಶೋಬೋಟ್ ಮತ್ತು ಸಿಮರ್ರೊನ್ ಕಾದಂಬರಿಗಳ ಅಸಂಖ್ಯಾತ ಪ್ರತಿಗಳು ಮಾರಾಟವಾದುವು. ಶೋಬೋಟ್ ಮತ್ತು ಸಿಮರ್ರೊನ್ ಚಲಚಿತ್ರಗಳಾಗಿ ಹೆಸರು ಪಡೆದಿವೆ.

ಅವರು ನಾಟಕ ಕರ್ತರಾಗಿ ಖ್ಯಾತಿ ಪಡೆದಿರುವರು. ಜಾರ್ಜ್ ಎಸ್ ಕಾಫ್‌ಮೆನ್ ಅವರ ಸಂಗಡ ಇವರು ಬರೆದ ಡಿನ್ನರ್ ಎಟ್ ಎಯಿಟ್, ರಾಯಲ್ ಫ್ಯಾಮಿಲಿ, ಸ್ಟೇಜ್ ಡೋರ್, ದಿ ಲ್ಯಾಂಡ್ ಇಸ್ ಬ್ರಾಯಿಟ್ ರಂಗಭೂಮಿಯಲ್ಲಿ ಭಾರೀ ಯಶಸ್ಸನ್ನು ಪಡೆದಿವೆ. ಈ ಕೊನೆಯದನ್ನು ಬಿಟ್ಟು ಉಳಿದ ಮೂರು ಚಲಚಿತ್ರಗಳಾಗಿ ಜನರ ಮನಸ್ಸನ್ನು ಸೂರೆ ಮಾಡಿದ್ದುಂಟು.

ಮುದುಕ ಬೆನ್ ವೆಸ್ಟರ್‌ವೆಲ್ಡ್ ಆರಾಮವಾಗಿ ಬಿದ್ದಿದ್ದನು. ದೃಢವಾದ ಸ್ನಾಯುಗಳು, ಮೊಟೆ ಹಿಡಿದ ನರಮಂಡಲ, ಮಬ್ಬು ಹರಿದ ಕೊಠಡಿಯನ್ನು ಭೇದಿಸಲು ಯತ್ನಿಸುವ ಕಣ್ಣು— ಹೌದು, ಬೆನ್ ವೆಸ್ಟರ್‌ವೆಲ್ಡ್ ಆರಾಮವಾಗಿ ಪವಡಿಸಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೂ ಕಷ್ಟ, ಭಾರೀ ಕಷ್ಟ. ಏಳಬೇಕೆಂದು ಅವನಿಗೆ ಆಸೆ ಏನೋ ಇತ್ತು. ಈ ಅತ್ಯಾಸೆಯಿಂದಲೇ ಅವನಿಗೆ ಮೈಯೆಲ್ಲ ನೋವಾಗುತಿತ್ತೇನೊ. ಕಾಲ್ಬೆರಳು ಯತ್ನಪೂರ್ವಕವಾಗಿ ಮಡಿಸಿಕೊಂಡಿದ್ದುವು. ಕೈಬೆರಳು ಮುಷ್ಟಿಬಿಗಿದಿತ್ತು. ಉಸುರು ವೇಗವಾಗಿ ಬರುತಿತ್ತು. ತೊಡೆಯನ್ನು ಯಾರೋ ಹಿಂಡುವಂತೆ ನೋವಾಗುವುದು. ನರಗಳೋ? ಅದರ ಕತೆ ಬೆನ್ ವೆಸ್ಟರ್‌ವೆಲ್ಡ್‌ಗೆ ಏಕಂತೆ? ಐವತ್ತೆಂಟು ವರ್ಷ ವಯಸ್ಸಿನಲ್ಲಿ ಹಳ್ಳಿಯಿಂದ ನಗರಕ್ಕೆ ವರ್ಗಮಾಡಿಸಿಕೊಂಡ ಶ್ರೀಮಂತ ರೈತನಿಗೆ ನರಗಳ ಉಸಾಬರಿ ಯಾತಕ್ಕೆ?—ಆರಾಮವಾಗಿದ್ದರೆ ಸಾಲದೆ?

ಸಮಯವೆಷ್ಟೆಂದು ತಿಳಿದರೆ ಒಳಿತಾಗುತಿತ್ತು. ಈ ಚಿಕಾಗೋ ನಗರದಲ್ಲಿ ವಾಚು ನೋಡದೆ ಗಂಟೆ ನಾಲ್ಕೋ ಏಳೋ ಒಂದೂ ಗೊತ್ತಾಗುವುದಿಲ್ಲ. ವಾಚು ನೋಡಬೇಕಾದರೆ ದೀಪ ಹಚ್ಚಬೇಕು. ದೀಪ ಹಾಕಿದರೆ ಪಕ್ಕದಲ್ಲೇ ಮಲಗಿದ ಮಡದಿ ಬೆಲ್ಲ ಆತಂಕಿಸುವುದನ್ನು ಕೇಳಬೇಕು.

ಜೀವಮಾನದಲ್ಲಿ ನಲ್ವತ್ತೈದು ವರ್ಷ ಕಾಲ ದಿನಾ ಮುಂಜಾನೆ ನಾಲ್ಕೂವರೆ ಗಂಟೆಗೆ ಎದ್ದವರಿಗೆ ಬೆಳಗಿನ ತನಕ ಹಾಸುಗೆಯಲ್ಲಿ

ಹೊರಳಾಡುವುದು ಸುಲಭದ ಕೆಲಸವಲ್ಲ. ಹುಟ್ಟು ಸೋಮಾರಿಯಾದರೆ ಮಾತ್ರ ಹೊರಳಾಡುವುದು ಕಷ್ಟವಾಗದು. ಬೆಲ್ಲ ಅಂಥವಳು— ಹುಟ್ಟನಿಂದಲೇ ಸೋಮಾರಿತನವನ್ನು ಪಡೆದು ಬಂದ ಅವಳಿಗೆ ಅದು ಕಷ್ಟವಾಗಿರಲಿಲ್ಲ. ಮುದುಕ ಬೆನ್ ಎಂದೂ ಸೋಮಾರಿಯಾಗಿರಲಿಲ್ಲ. ಇನ್ನು ಆಗುವಂತೆಯೂ ಇರಲಿಲ್ಲ. ಆದುದರಿಂದ ಆತ ಸುಮ್ಮಗೆ ಬಿದ್ದಿದ್ದ— ಸುಮ್ಮಗೆ ಬಿದ್ದಿರುವಾಗಲೂ ಎದೆ ಹಾಗೇಕೆ ಬಡಿದುಕೊಳ್ಳ ಬೇಕೋ ಎಂದು ಅಚ್ಚರಿಪಡುತ್ತ ಬಿದ್ದಿದ್ದ. ಕೋಣೆಯಲ್ಲಿ ಬೆಳಕಿರು ತ್ತಿದ್ದರೆ ಅವನ ಮುಖದಲ್ಲಿನ ಸಂಯಮಪೂರ್ಣ ತ್ಯಾಗ ಚೆನ್ನಾಗಿ ಕಾಣಿಸಬಹುದಾಗಿತ್ತು.

ಅವರು ನಗರ ಜೀವನಕ್ಕೆ ಕಟ್ಟುಬಿದ್ದು ಈಗೊಂದು ವರ್ಷವೇ ಸಂದಿದೆಯಾದರೂ ದಿನಂಪ್ರತಿ ಒಂದೇ ಪಾಡು. ಕಣ್ಣು ತೆರೆಯು ವುದು, ಕುರ್ಚಿಯಲ್ಲಿ ರಾಶಿ ಹಾಕಿದ ಕಾರ್ಯಜೀರ್ಣವಾದ ಉಡು ಪಿಗೆ ಕೈ ಚಾಚುವುದು— ಅವನ ನಿತ್ಯದ ರೂಢಿ. ಆಗ ಅವನ ಮೇಲೆ ನಿರಾಸೆಯು ಒತ್ತರಿಸಿ ಬರುವುದು. ಏಳುವುದಾದರೂ ಯಾವ ಪುರುಷಾರ್ಥಕ್ಕೆ—ಮತ್ತೆ ರಾತ್ರಿ ಅಂಗಿ ಕಳಚಿ ಕುರ್ಚಿಯ ಮೇಲೆ ರಾಶಿ ಹಾಕುವುದಕ್ಕೆ ತಾನೇ? ಅಂತೂ ಆರಾಮವಾಗಿದ್ದರೆ ಆಯಿತಲ್ಲಾ?

ಇಲ್ಲಿನೋಯ್ಸ್ ರಾಜ್ಯದ ಅವರ ಹೊಲ ಮನೆಯಲ್ಲಿ ಅವನಿಗೆ ಎದ್ದ ಕೂಡಲೆ ಸಮಯ ಎಷ್ಟಾಯಿತೆಂದು ತಾನಾಗಿ ಗೊತ್ತು. ಇಲ್ಲಿ ನೆರ ಮನೆಯ ಮಹಡಿಯ ದೆಸೆಯಿಂದ ನಡುಹಗಲಿಗೂ ಕೋಣೆಯಲ್ಲಿ ಮಬ್ಬು ಕವಿಯುವುದು. ಹೊಲದಲ್ಲಿ ಸಮಯವನ್ನು ಕೇವಲ ಅಂದಾಜಿನಿಂದ, ಹೇವದಿಂದ ಒಂದು ನಿಮಿಷ ಆಚೆ ಈಚೆ ಇಲ್ಲದೆ ಹೇಳಲು ಬರುತಿತ್ತು. ಮುಂಜಾವಿಗಿಂತ ಮೊದಲು ಹಿರಿಯುವ ನಸುಬೆಳಕಿನ ಬಣ್ಣದ ವ್ಯತ್ಯಾಸ ದಿಂದಲೇ ಗಂಟೆ ಹೇಳಬಹುದು. ಅವನಿಗೆ ಕೋಳಿ ಕೂಗಬೇಕಾಗಿರಲಿಲ್ಲ, ದನಕರು ಮಲಗಿದಲ್ಲಿಂದ ಸದ್ದು ಮಾಡಿ ಏಳ ಬೇಕಾಗಿರಲಿಲ್ಲ; ಕಿಟ ಕಿಯ ಮುಂದಿನಎಲ್ಮ್ ವೃಕ್ಷದಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟಬೇಕಾಗಿಯೂ ಇರಲಿಲ್ಲ. ಆದರೆ ಚಿಕಾಗೋ ನಗರದ ದಟ್ಟವಾದ ಜನಸಂದಣಿಯುಳ್ಳ

ಈ ಎಂಗ್ಲ್‌ವುಡ್ ಎಂಬ ಬಡಾವಣೆಯಲ್ಲಿ ಕತ್ತಲೆಗೂ ಒಂದು ವಿಚಿತ್ರ ರೂಪವಿತ್ತು. ನೂರಾರು ಬಗೆಯ ಗದ್ದಲ, ಗೌಜಿ. ಕೋಳಿ, ದನಕರು, ಎಲ್ಮ್‌ವೃಕ್ಷಗಳ ವಾತಾವರಣ ಇಲ್ಲಿರಲಿಲ್ಲವಾಗಿ ಆವನ ಸಮಯದ ರೂಢ ಜ್ಞಾನಕ್ಕೆ ಅವಕಾಶವಿರಲಿಲ್ಲ. ನಗರಕ್ಕೆ ಬಂದ ಹೊಸದರಲ್ಲಿ ಆತ ಒಮ್ಮೆ ನಡುರಾತ್ರಿ ಹನ್ನೆರಡೂವರೆಗೆ ಎದ್ದು ಬೆಳಗಾಯಿತೆಂದು ಫ್ಲಾಟಿನಲ್ಲಿ ಆಡ್ಡಾಡುತ್ತ ಸಿಕ್ಕವರನ್ನೆಲ್ಲ ಎಬ್ಬಿಸುವುದನ್ನು ನೋಡಿ ಅವನಿಗೆ ಹೆಂಡತಿ ಬೈಗಳ ಮಾಲೆಯನ್ನೇ ಪೋಣಿಸಿದ್ದಳು: 'ರಾತ್ರಿ ಯಾವುದು, ಹಗಲು ಯಾವುದು ಎಂಬುದನ್ನರಿಯಲಾರದ ಶುದ್ಧ ಶುಂಠ! ಎಲ್ಲಾದರೂ ಮನೆಯಹಿಂದೆ ಕೊಟ್ಟಿಗೆಯಲ್ಲಿ ಹೋಗಿ ಮಲಗಿಕೊ— ಊರಿಗೆ ಉಪದ್ರವ ಮಾಡುವುದಕ್ಕಿಂತ' ಎಂದು ಆಕೆ ಕಿವಿ ಕೊರೆಯುವ ಹಾಗೆ ಹೇಳಿದುದು ನೆರೆಹೊರೆಯ ಫ್ಲಾಟಿನವರಿಗೂ ಕೇಳಿಸಿರಬಹುದು.

ಮೂವತ್ತಮೂರು ವರ್ಷದ ವೈವಾಹಿತ ಜೀವನದಲ್ಲಿ ಮದುವೆಯ ಸಮಯ ಸುಮಕೋಮಲೆಯಾಗಿದ್ದ ಅವಳು ಈ ರೀತಿ ಮಾತಿನಲ್ಲಿಯೂ, ಬುದ್ಧಿಯಲ್ಲಿಯೂ ಒರಟಳಾಗಿಯೇ ವರ್ತಿಸಿದ್ದನ್ನು ಕಂಡು ಅವನಿಗೆ ಸಾಕುಬೇಕಾಗಿತ್ತು. ನಾಚುಗೆಯಿಂದ ಅವನು ಪುನಃ ಹಾಸಿಗೆಯ ಮೇಲೆ ಒರಗಿದನು. ಎದುರುಗಡೆಯ ಫ್ಲ್ಯಾಟಿನ ಮಲಗುವ ಕೋಣೆಯಲ್ಲಿ ದಂಪತಿಗಳಿಬ್ಬರು ಕಿಲಕಿಲನೆಂದು ಕುಸುಮೇ ನಕ್ಕು ಹೆಂಡತಿಯನ್ನು ಸಮರ್ಥಿಸಿದುದು ಅವನಿಗೆ ಕೇಳಿಸಿತು. ಅದೇ ಆ ಮಲಗುವ ಕೋಣೆಯ ಸಾಮಿಪ್ಯ, ಅಂತರಂಗ ಜೀವನದ ಕಡ್ಡಾಯ ಸಾನ್ನಿಧ್ಯ, ಸ್ನಾನಗೃಹದ ನೀರಿನ ಹರಿದಾಟ, ಕಾಲುವೈಲು ದೂರವೆಂಬುದೇ ನೆರೆ ಎನ್ನಬೇಕಾಗಿದ್ದ ಗ್ರಾಮ ಜೀವನಕ್ಕೂ ಇದಕ್ಕೂ ಇರುವ ಅಂತರವನ್ನು ಸೂಚಿಸುವುದಲ್ಲದೆ ಅವನಿಗೆ ದಿನವಹಿ ಆಘಾತವನ್ನುಂಟು ಮಾಡುವ ಸನ್ನಿವೇಶವಾಗಿತ್ತು. ಹೊಲದ ಹೊಡೆಯಂತ್ರದ ಗರ್ಜನೆಯಲ್ಲಿಯೂ, ಟ್ರ್ಯಾಕ್ಟರ್ ಯಂತ್ರದ ಖಡಖಡಾಟದಲ್ಲಿಯೂ, ಉಗಿ ಹಡಗಿನ ಕರ್ಕಶ ಕೂಗಿನಲ್ಲಿಯೂ ಮಧುರ ಸಂಗೀತವನ್ನು ಅನುಭವಿಸುತ್ತಿದ್ದ ಅವನ ಕಿವಿಗಳಿಗೆ ಮರದ ಹಲಗೆ ಹಾಕಿದ ನೆಲದಲ್ಲಿ ಬಡಕ್ಕನೆ ಒಗೆಯಲಾದ ಬೂಟಿನ ಸಪ್ಪಳ, ಪ್ರೇಮಿಗಳ ರಾತ್ರಿಕಾಲದ ಸರಪಸಲ್ಲಾಪದ ಗುಂಜಾರವ, ಸ್ನಾನ

ಗೃಹದಲ್ಲಿ ನೀರು ಜರ್ರೆಂದು ಹರಿಯುವ ಶಬ್ದ, ನಡುರಾತ್ರಿಯಲ್ಲಿ ಮಗು ಒಂದು ಬೆಚ್ಚಿಬಿದ್ದು ಅರಚುವ ಧ್ವನಿ—ಕರ್ಣ ಕಠೋರವಾಗಿದ್ದುವು. ಆತನ ಹೊಲದ ಅಂಚಿನಲ್ಲಿ ಮಿಸ್ಸಿಸಿಪಿ ನದಿ ಗಂಭೀರವಾಗಿ ಪ್ರವಹಿಸುತಿದ್ದಿತು.

ನಗರದಲ್ಲಿ ಜೆನ್‌ವೆಸ್ಟರ್‌ವೆಲ್ಡ್ ಸ್ವಾಗತ ಮಾಡುವ ಸದ್ದೆಂದರೆ ಒಂದೇ ಒಂದು—ಬೆಳಗು ಮುಂಜಾನೆ ಹಾಲಿನವನು ಬರುವಾಗ ಉಂಟಾಗುವ ಬಾಟಲಿಗಳ ಕಿಣಿಕಿಣಿ ಸದ್ದು. ಜೆನ್‌ವೆಸ್ಟರ್‌ವೆಲ್ಡನನ್ನು ಬಂಧನದಿಂದ ವಿಮೋಚನೆಗೊಳಿಸುವ ಈ ದೇವಾಂಶ ಸಂಭೂತನು ಆರುಗಂಟೆಗೆ ಸರಿಯಾಗಿ ಬರುತ್ತಿದ್ದನು. ಆದರೆ ಚಳಿಗಾಲ ಬಂತೆಂದರೆ ಅವನ ಆಗಮನವು ತಡವಾಗುತ್ತ ಹೋಗಿ ಅವನು ಗಡಿಯಾರದಷ್ಟೇ ನಿರುಪಯೋಗಿ ಎಂದು ಜೆನ್‌ಗೆ ಅನಿಸುವುದು. ಈಗೇನೊ ಮಾರ್ಚ ಮಾಸ ಬಂದಿದೆ, ಇನ್ನು ಹಾಲಿನವನ ಸಮಯಕ್ಕಾದರೂ ಜೆನ್ ಏಳಬಹುದು. ಆರಾಮ ಜೀವನಕ್ಕೆ ದುಂಬಾಲು ಬೀಳುವುದಕ್ಕೆ ಮೊದಲು ಆರು ಗಂಟೆಗೆ ಅವನ ಬದುಕಿನ ಚಿತ್ರವು ವೇಗವಾಗಿ ತಿರುಗಲು ತೊಡಗುತ್ತಿತ್ತು. ಕೆಲಸದಿಂದ ಒರಟಾದ ಆ ಅಂಗೈಗಳ ಸನ್ನೆಗೆ ಹೊಲಕ್ಕೆ ಹೊಲವೇ ಸಜೀವವಾಗುತಿತ್ತು. ಈಗವನು ಆ ಅಂಗೈಗಳನ್ನು ನೋಡುವಾಗ ಅವನಿಗೆ ಇವು ನನ್ನವಲ್ಲವೇನೋ ಎಂದು ಸಂದೇಹಬರುವುದುಂಟು. ಅಷ್ಟು ಬಿಳಿದಾಗಿಯೂ, ಕೋಮಲವಾಗಿಯೂ, ಉದ್ದವಾದ ಉಗುರಿನಿಂದ ಒಡಗೂಡಿಯೂ ಇರುವ ಕೈಗಳನ್ನು ನೋಡಿದರೆ ಅವನಿಗೇ ಅಚ್ಚರಿಯಾಗುವುದು. ಈಚೆಗೆ ಕೈಯ ಹಿಂಬದಿಯಲ್ಲಿ ಕಂದು ಬಣ್ಣದ ಕಲೆಗಳು ಎದ್ದಿವೆ.

ಆ ಕಲೆಗಳನ್ನು ತಿಕ್ಕಿಕೊಳ್ಳುತ್ತಿರುವಾಗ ಅವನು 'ಇದು ಪಿತ್ಥದ ದೋಷ'ವೆಂಬ ತೀರ್ಮಾನಕ್ಕೆ ಬಂದನು. ಅದಕ್ಕೆ ಔಷಧವೂ ಅವನ ಹತ್ತಿರ ಇತ್ತು. ಸಮೀಪದಲ್ಲೆ ಕೆಂಪು-ಬೂದು ಬಣ್ಣದ ಒಂದು ದ್ರವ ಪದಾರ್ಥವಿತ್ತು. ಹಾಲ್ಸ್ಟೆಡ್ ಸ್ಟ್ರೀಟಿನ ಕೆಮಿಸ್ಟನಿಂದ ಕೊಂಡುಕೊಂಡ ಈ ದ್ರವವನ್ನು ಸೇವಿಸಿದರೆ ಸ್ವಲ್ಪಕಾಲ ಉತ್ಸಾಹ, ಉತ್ತೇಜನ ತುಂಬಿದಂತೆ ತೋರುವುದು. ಆದರೆ ಬಹಳ ಸ್ವಲ್ಪ ಕಾಲ, ಅದರ ತರುವಾಯ

ಮರಳಿ ಬೇಸರ ತುಂಬಿ ಬರುವುದು ಇಷ್ಟರ ತನಕ ಎರಡು ಸೀಸೆ ದ್ರವವನ್ನು ಕುಡಿದದ್ದಾಯಿತು. ಆದರೆ ಇನ್ನದನ್ನು ಬಿಡುವಂತಿಲ್ಲ, ಬಿಟ್ಟರೆ ಹುರುಪೇ ಇಲ್ಲ ಜೀವದಲ್ಲಿ. ಪೇಟೆಯ ಉಡಿಗೆ-ತೊಡಿಗೆಯಲ್ಲಿ, ನೀಲ ವರ್ಣದ ಶುಭ್ರವಾದ ಶರ್ಟನ್ನು ಧರಿಸಿ ಅದರ ಮೇಲೆ ಹೊಂದಿಕೆಯಿಲ್ಲದ ಹ್ಯಾಟನ್ನು ತೊಟ್ಟು, ಚಿಕಾಗೋದ ಲಕ್ಷಾಂತರ ಜನ ನಿಬಿಡ ಬೀದಿಗಳಲ್ಲಿ ಅಲೆದಾಡುತ್ತಿರುವ ಜೆನ್‌ವೆಸ್ಟರ್‌ವೆಲ್ಡ್ ದುರಂತದ ಒಂದು ಉತ್ಕೃಷ್ಟ ಚಿತ್ರವಾಗಿದ್ದನು. ಈಗ ಮೊಣಗಂಟಿನ ಮೇಲೆ ಅರೆತ್ರಾಣಿಗಳಂತೆ ಜೋಲುವ ಕ್ರಿಯಾಶಾಲಿ ಹಸ್ತಗಳು ಭೂಮಿಯಿಂದ ಬದುಕನ್ನು ಕಸಿದುಕೊಂಡ ವೀರ ಶೂರರು; ಇನ್ನೂ ಮಾಸಿ ಹೋಗದ ನೀಲಿ ಬಣ್ಣದ ನೇತ್ರಗಳಿಗೆ ಅನಂತ ದಿಗಂತದ ವರೆಗೆ ಕಣ್ಣು ಚಾಚಿ ಚಾಚಿ ಅಪೂರ್ವ ಸಾಮರ್ಥ್ಯ ದೊರಕೊಂಡಿತ್ತು; ಎತ್ತರವೂ ಸುದೃಢವೂ ಆದ ನೀಳ ಕಾಯದಲ್ಲಿ ಉಪಯೋಗಕ್ಕೆ ಹೂಡದ ಶಕ್ತಿಸಂಚಯವಿತ್ತು. ಎಲ್ಲವೂ ದುರಂತವನ್ನು ಪೋಷಿಸುವ ವಿಷಯಗಳು. ದುರಂತವೇ ಏನು, ಅದಕ್ಕಿಂತಲೂ ಹೆಚ್ಚಿನ ಅಪವ್ಯಯವೇ ಅವನ ಪ್ರಸ್ತುತ ಜೀವನದ ಸಾರಾಂಶವಾಗಿತ್ತೆಂದರೂ ಸಲ್ಲುವುದು.

ಅರ್ಧ ಶತಮಾನ ಕಾಲ ನಿಶ್ಚಲವಾದ ನೇತ್ರಗಳಿಂದಲೂ, ಶಕ್ತಿಶಾಲಿ ಭುಜಗಳಿಂದಲೂ, ಎದೆಗಾರಿಕೆಯಿಂದಲೂ ಈ ಮನುಷ್ಯನು ನಿಸರ್ಗದ ವಿರುದ್ಧ ಹೋರಾಟದ ಬದುಕು ಬಾಳಿದನು. ಗಾಳಿ ಬಿಸಿಲೆನ್ನದೆ, ಮಳೆ ಬೇಸಗೆ ಎನ್ನದೆ, ಬರಗಾಲ ಮಹಾಪೂರವೆನ್ನದೆ ಆತ ಹೋರಾಡಿದನು. ಹೊತ್ತಾರೆ ಎದ್ದು ಸೂರ್ಯ ಕಂತುವವರೆಗೂ ನಿದ್ದೆ ಹೋದನು. ಅವನು ಜೀತಮಾಡಿದ ಹೊಲ, ಗುಡ್ಡ ಮತ್ತು ಮರಗಳ ಒರಟು ಸ್ಥೈರ್ಯವೇ ಅವನ ವ್ಯಕ್ತಿತ್ವವನ್ನು ರೂಪುಗೊಳಿಸಿದ್ದಿತು. ಪಟ್ಟಣವಾಸಿಗಳಿಗೆ ಕಾಣಿಸದೆ ಹೋದರೂ ಒಂದು ರೀತಿಯ ನಿಸರ್ಗದತ್ತ ಗಾಂಭೀರ್ಯ, ಘನತೆ ಅವನಲ್ಲಿ ಪ್ರಕಟವಾಗುತ್ತಿದ್ದುವು. ನಾಗರಿಕರ ಒನಪು, ನವುರು ಅವನಲ್ಲಿಲ್ಲದೆ ಹೋದರೂ ಅವನ ನೈಸರ್ಗಿಕ ಸನ್ನಿವೇಶದೊಡನೆ ಆತ ಹೂ ಹಕ್ಕಿಗಳಂತೆ ಹಾಸುಹೊಕ್ಕಾಗಿ ಬಳೆದಿದ್ದನು. ನಿಸರ್ಗ ಸಹಜವಾದ ಒಂದು ಗುಡ್ಡಕ್ಕೂ, ಗೋಲ್ಫ್ ಆಟದ ಗುಡ್ಡಕ್ಕೂ-

ಆಕಾರ, ವಸ್ತು ಒಂದೇ ಆದರೂ—ಇರುವ ವ್ಯತ್ಯಾಸವೇ ಈ ರೈತನಿಗೂ, ನಾಗರಿಕನಿಗೂ ಇರುವ ಅಂತರವಾಗಿತ್ತು.

ತನ್ನದು ದುರಂತಜೀವನವೆಂದು ಬೆನ್ ವೆಸ್ಟರ್‌ವೆಲ್ಡ್ ಗೇನೂತಿಳಿದಿರಲಿಲ್ಲವೆನ್ನಿ. ರೈತಾಪಿ ಜನ ತಮ್ಮನ್ನು ತಾವೇ ಅಂತರ್ನಿರೀಕ್ಷಣೆ ಮಾಡಿಕೊಳ್ಳುವುದಿಲ್ಲವಲ್ಲಾ? ಮಾತ್ರವಲ್ಲ ನಗರಕ್ಕೆ ಬಂದ ರೈತನೆಂದರೆ ಎಲ್ಲರಿಗೂ ಮೋಜು ತಾನೇ. ಪ್ರಹಸನ, ನಾಟಕ, ಹಾಸ್ಯ, ಭಾನುವಾರದ ವಿಶೇಷ ಸಂಚಿಕೆ, ಕಾಮಿಕ್ ಪತ್ರಿಕೆಗಳಿಗೆಲ್ಲ ರೈತನೊಂದು ಪ್ರಿಯವಸ್ತು. ಮುಳ್ಳಿನಂಥ ಗಡ್ಡ ಬಿಟ್ಟುಕೊಂಡು, ಮಿಸ್ಸಿಸಿಪಿಯ ಕರಿಮಣ್ಣನ್ನು ಬೂಟಿಗೆ ಮೆತ್ತಿಕೊಂಡು, ಹೊಲದುಡುಗೆಯಲ್ಲಿ ನಿಂತಿರುವ ರೈತನ ಠೀವಿಯನ್ನು ಕಾಣಲು ನಾಗರಿಕರಿಗೆ ಕಣ್ಣೆಲ್ಲಿದೆ?

ಬೆನ್ ಇಪ್ಪತ್ತೈದು ವಯಸ್ಸಿನವನಿದ್ದಾಗ ನಾಗರಿಕರ ಪೋಷಾಕನ್ನು ತೊಡಿಸಿ, ಬಾಯಲ್ಲೊಂದು ಸಿಗಾರಿನ ನಳಿಕೆಯನ್ನಿರಿಸಿ ಬಿಟ್ಟರೆ ಆತನೂ ಫ್ರಾನ್ಸ್‌ಹಾಲ್ಸ್ ಚಿತ್ರಿಸಿದ ನಾಗರಿಕ ವ್ಯಕ್ತಿಯ ಪ್ರತಿಬಿಂಬವಾಗಬಲ್ಲನು. ಕಣ್ಣುಗಳಲ್ಲಿ ಆನಂದವು ನರ್ತಿಸುತಿತ್ತು. ಮೋರೆಯಲ್ಲಿ ತುಂಟತನ ಮಿನುಗುತಿತ್ತು, ದೇಹದಲ್ಲಿ ಲವಲವಿಕೆ ತುಳುಕುತಿತ್ತು. ವಯಸ್ಸು ಹಿಂದೆ ಸರಿದಂತೆ ಅವನಲ್ಲಿ ಗಾಂಭೀರ್ಯವು ಬೆಳೆಯಿತು. ಪೂರ್ತಿ ಬೆಳೆದು ನಿಂತ ಮೇಲೆ ಅವನ ಆ ಹಿಂದಿನ ತುಂಟತನ, ಲವಲವಿಕೆ ಮಾಯವಾದುವು. ಆರಾಮು ಜೀವನದ ಅಧ್ಯಾಯವು ತೊಡಗುವ ಕಾಲ ಬರುವ ವೇಳೆಗೆ ಅವನ ತಾರುಣ್ಯದ ಹುಮ್ಮಸವೆಲ್ಲ ಇಳಿದು ಹೋಗಿತ್ತು.

ವೆಸ್ಟರ್‌ವೆಲ್ಡ್ ಡಚ್ಚ ವಂಶಾವಳಿಗೆ ಸೇರಿದವನು. ಪ್ರಥಮ ವೆಸ್ಟರ್‌ವೆಲ್ಡ್ ಹಿರಿಯರು ಅಮೇರಿಕವನ್ನು ಪ್ರವೇಶಿಸಿ ನೂರಾರು ವರ್ಷಗಳಾದುದರಿಂದ ಅವರಲ್ಲೀಗ ಡಚ್ಚ ರಕ್ತದ ಪ್ರಮಾಣ ಇರಲೇ ಇಲ್ಲವೆಂದರೂ ಸಲ್ಲುವುದು. ಸಾವಕಾಶವಾಗಿ ಅಮೇರಿಕದ ತೆಂಕಣ ಪ್ರಾಂತವಾದ ಇಲ್ಲಿನೊಯ್ಸ್ ರಾಜ್ಯಕ್ಕೆ ವೆಸ್ಟರ್‌ವೆಲ್ಡ್ ಕುಟುಂಬ ವಲಸೆ ಹೋಯಿತು. ಕಡಲ ಅಲೆಗಳಂತೆ ಒಂದರಮೇಲೊಂದು ಉರುಳುತ್ತಿರುವ ಗುಡ್ಡ-ಬೆಟ್ಟಗಳು, ಗಂಭೀರವಾಗಿ ಹರಿಯುವ ಮಹಾನದಿಗಳು, ಹೊಂಬಣ್ಣ-ಕೆಂಬಣ್ಣಗಳಿಂದ ಕಂಗೊಳಿಸುವ ಅರಣ್ಯ ಪ್ರದೇಶಗಳು ವೆಸ್ಟರ್‌ವೆಲ್ಡ್ ಕುಟುಂಬ

ವನ್ನು ಈ ಪ್ರಾಂತಕ್ಕೆ ಆಕರ್ಷಿಸಿರಬೇಕು—ಅವರಿಗರಿಯದಂತೆ. ಏಕೆಂದರೆ ನಿಸರ್ಗದ ಚಿತ್ತಾರಗಳನ್ನು ಹವಾಮಾನಕ್ಕೂ, ಧಾನ್ಯದ ಫಸಲಿಗೂ ಹೊಂದಿಸಿಕೊಂಡರೆ ಮಾತ್ರ ಅವರು ಅದರ ಸೊಗಸನ್ನು ಸವಿಯಬಲ್ಲರು, ಇಲ್ಲವಾದರೆ ಇಲ್ಲ. ಬೆನ್ ನೇಗಿಲನ್ನು ಆಧರಿಸಿಕೊಂಡು ಮುಖವೆತ್ತಿ ಮೇಲೆ ಆಕಾಶವನ್ನು ನೋಡಿದರೆ ಅದೇ ಒಂದು ಠೀವಿ ಆದರೆ ಅದು ಆಕಾಶದ ಸೊಬಗಿನ ಆಸ್ವಾದನೆಯಾಗಿರಲಿಲ್ಲ. ಪ್ರಾಯಃ ಆತ ಕಾಡು ಪಾರಿವಗಳ ಒಂದು ಗುಂಪಿನ ಮೇಲೆ ಆಸಕ್ತನಾಗಿದ್ದಿರಬಹುದು. ಹೊಲಗೆಲಸವೆಂದರೆ ಬೆನ್‌ಗೆ ಬೇಸರವೇ ಇಲ್ಲ. ಅದರ ಕ್ಲಪ್ತತೆ, ಆವರ್ತಗಳಿಂದ ಅವನಿಗೆ ಉತ್ಸಾಹ ಕುಗ್ಗುತ್ತಿರಲಿಲ್ಲ. ಒಬ್ಬನು ಹುಟ್ಟು ಯಾಂತ್ರಿಕನಾಗಿರುವಂತೆ ಅಥವಾ ಇನ್ನೊಬ್ಬನು ಹುಟ್ಟು ಸಂಗೀತಗಾರನೋ, ವ್ಯಾಪಾರಿಯೋ ಆಗಿರುವಂತೆ ಬೆನ್ ಜನ್ಮಾಪಿ ರೈತನಾಗಿದ್ದ. ಗ್ರಂಥ ಮತ್ತು ಅನುಭವದಿಂದ ಬೇರೆಯವರು ಭೂಮಿ-ಬೀಜಗಳ ಸಂಬಂಧವನ್ನು ಕಲಿಯಬೇಕಾಗಿದ್ದರೆ ಬೆನ್‌ಗೆ ಆ ವಿದ್ಯೆ ವಾಸನಾರೂಪದ ವರದಾನವಾಗಿತ್ತು. ಆತನ ಪ್ರಾಂತದಲ್ಲಿ ಬೆನ್ ಕಲ್ಲಿನಲ್ಲಿ ಹೂವರಳಿಸುವಷ್ಟು ಹುಷಾರಿ ರೈತನೆಂದು ಪ್ರಸಿದ್ಧಿ.

ಹಳ್ಳಿಯ ಆಟ ವಿನೋದಗಳಲ್ಲಿಯೂ, ಓಟ—ವಿಹಾರಗಳಲ್ಲಿಯೂ ಬೆನ್ ಎತ್ತಿದ ಕೈ. ಹುಡುಗಿಯರನ್ನು ಒಂದೇ ಕೈಯಿಂದ ಎತ್ತಿ ಅಷ್ಟು ದೂರದಲ್ಲಿ ಹಿಡಿದು ಅವರು ಭಯಮಿಶ್ರಿತ ಆನಂದಾತಿರೇಕದಿಂದ ಕೂಗುವುದನ್ನು ನೋಡಬೇಕು. ಎಲ್ಲ ಹುಡುಗಿಯರಿಗೂ ಬೆನ್ ಸ್ನೇಹಿತ ಸ್ತ್ರೀ ಜಾತಿಯಲ್ಲಿ ಪಳಗದೆ ಉಳಿದ ಹಳಮೆಯು ಅವನಲ್ಲಿರುವ ಯಾವುದೋ ಆದಿ ಶಕ್ತಿಗೆ ಮಣಿಯುತಿದ್ದರೆ ಅವನ ಮೃದು ಸ್ವಭಾವವು ಸ್ತ್ರೀ ಸಹಜವಾದ ಲಜ್ಜೆಗೆ ಅನುಕೂಲವಾಗಿದ್ದಿತು. ಬೆನ್ ಅವರ ಪೈಕಿ ಯಾರನ್ನುಬೇಕಾದರೂ ಆರಿಸಬಹುದಾಗಿತ್ತು. ಆತ ಅವರೆಲ್ಲರನ್ನು ಚುಡಾಯಿಸುವನು, ಸಾರೋಟಿನಲ್ಲಿ ಕರೆದೊಯ್ಯುವನು. ಆದರೆ ಅವನಿಗೆ ಇಪ್ಪತ್ತೈದು ವಯಸ್ಸಾಗುವ ಹೊತ್ತಿಗೆ ನೆರೆಕರೆಯ ಬೈರ್ಸ್ ಕುಟುಂಬದ ಹುಡುಗಿಯೊಬ್ಬಳಲ್ಲಿ ಮಾತ್ರ ಅವನ ಆಸಕ್ತಿ ಕೇಂದ್ರಿತವಾವಾಗಿತ್ತು. ನೋಡಿದವರೆಲ್ಲ ಅವರೊಳಗೆ ಸಮ್ಮತಿ ಮೊದಲೇ ನಿಶ್ಚಯ

ವಾಗಿತ್ತು ಎನ್ನುತ್ತಿದ್ದರು. ಆದರೆ ಅವನು ಆಕೆಯನ್ನು ಬಾಯಿ ಬಿಟ್ಟು 'ನನ್ನ ಮದುವೆ ಆಗ್ತೀಯಾ?' ಎಂದು ಕೇಳಿದವನಲ್ಲ. ವಾರದಲ್ಲಿ ನಾಲ್ಕು ಸಲವಾದರೂ ಅವನು ಬೈರ್ಸ್ಸ್ ಮನೆಯ ಕಡೆಗೆ ವೇಗವಾಗಿ ಹೆಜ್ಜೆ ಇಡುತ್ತಾ ಹೋಗುವುದನ್ನು ಕಂಡವರಿದ್ದಾರೆ ಹಾಗೆ ಹೋಗುವಾಗ ಆವನ ಕೈಯಲ್ಲೊಂದು ಮರದ ಸಣ್ಣ ಟೊಂಗೆ ಇರುವುದು ವಾಡಿಕೆ. ಆದನ್ನು ತಿರುಗಿಸುತ್ತಾ ನಡೆದನೆಂದರೆ, ಆತ ಉಲ್ಲಾಸದಲ್ಲಿದ್ದಾನೆ ಎಂದರ್ಥ. ಆದರೆ ಆ ಟೊಂಗೆಯಿಂದ ಆತ ದಾರಿಯ ಬದಿಯ ಒಂದು ಹೂವನ್ನಾದರೂ ನೋಯಿಸಿದವನಲ್ಲ.

ಅವರ ಪ್ರಣಯವು ನಿಜವಾಗಿಯೂ ಒಂದು ಅನಿರ್ವಚನೀಯ, ಮೂಕ ದೃಶ್ಯವಾಗಿತ್ತು.

'ಹಲ್ಲೋ, ಎಮ್ಮಾ'.

'ಹೌಡೂ, ಬೆನ್'.

'ಕೂತು ಬೇಸರವಾಗಿರಬಹುದಲ್ಲಾ, ಸ್ವಲ್ಪ ದೂರ ನಡೆದು ಬರೋಣವೆ? ಟೇಟ್‌ಜೆನ್ ಮನೆಯಲ್ಲಿ ಐದು ಕಾಲಿನ ಒಂದು ಕರು ಹುಟ್ಟಿದೆಯಂತೆ'

'ನಾನೂ ಹಾಗೆಂತ ಕೇಳಿದೆ. ನನಗೂ ಕೆಲಸ ಮಾಡಿ ಸೋತು ಹೋಗಿದೆ. ಹೊರಗೆ ಹೋಗಿ ಬರೋಣ. ನಾಳೆ ನಮ್ಮಲ್ಲಿ ಧಾನ್ಯ ಹೊಡೆಯಬೇಕು. ಬೇಯಿಸಲಿಕ್ಕೆ ಆಗಲೇ ಸುರುವಾಗಿದೆ'.

ಬೆನ್ ಎಷ್ಟು ತುಂಟನಾದರೂ ಒಳಗಿಂದೊಳಗೆ ಬಹಳ ಲಜ್ಜಾ ಶೀಲನು. ಇಬ್ಬರೂ ಹಾದಿಗುಂಟ ಸಾಗುವಾಗ ಆನಂದೋಲ್ಲಾಸಗ ಳಷ್ಟೇ ನಾಚಿಗೆಯೂ ಅವರನ್ನು ಆವರಿಸಿರುತಿತ್ತು. ನೆರೆಕರೆಯವರಿಗೆ ಪ್ರಾಯಶಃ. ಈ ನಂಟಸ್ತಿಕೆ ಕೂಡಿ ಬರುವುದಿಲ್ಲವೇನೋ ಎಂದು ತೋರ ಬೇಕು. ಆದರೆ ಪ್ರಣಯಿಗಳ ಅಂತರಂಗದಲ್ಲಿ ನಂಟು ಕೂಡಿ ಆಗಿತ್ತು.

ಒಮ್ಮೆ ಬೆನ್ 'ಪಪ್ಪ ಹೇಳುತ್ತಾರೆ: ಬಡಗಲಿನ ಎಂಭತ್ತೆ ಕರೆ ಜಮೀನು ನನಗೆ ಸುಲಭದಲ್ಲಿ ಕಂತಿನ ಪ್ರಕಾರ........ನನಗೆ........ಹೂಂ ಹೂಂ........ಬೇಕಾದಾಗ ಕೊಡುತ್ತೇನೆ ಅನ್ನುತ್ತಾರೆ' ಎಂದ.

ಎಮ್ಮಾ ಬೈರ್ಸ್‌ಳ ಕಪೋಲಗಳು ಕೆಂಪಾದುವು 'ನಿನ್ನಪ್ಪ ಎಷ್ಟು ಒಳ್ಳೆಯವನು' ಎಂದಷ್ಟೇ ನುಡಿಯುವುದು ಅವಳಿಗೆ ಸಾಧ್ಯವಾಯಿತು.

ಅಂತರ್ಯದಲ್ಲಿ ಶಕ್ತಿಯುತ ಮತ್ತು ಉತ್ಕೃಷ್ಟವಾದ ನೈಸರ್ಗಿಕ ಗುಣಗಳನ್ನು ಪ್ರಕಟವಾಗಿ ತೋರ್ಪಡಿಸುವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ತಾಯಿ ಸತ್ತ ಬಳಿಕ ಎಮ್ಮಾ ಬೈರ್ಸೇ ಮನೆಗೆ ಯಜಮಾನಿ. 'ಒಳ್ಳೆ ಮಯಿನ ಹುಡುಗಿ' ಎಂದು ಊರೆಲ್ಲ ಅರಿತಿತ್ತು. ಅವಳು ತಯಾರಿಸಿದ ಬೆಣ್ಣೆ, ತತ್ತಿ, ಮತ್ತು ತೋಟದ ಸರಕಿಗೆ ಹನ್ನೆರಡು ಮೈಲು ದೂರದ ಪೇಟೆಯಲ್ಲಿ ಯಾರಿಗೂ ದೊರೆಯದ ಧಾರಣೆ ಬರುತಿದ್ದಿತು. ಆ ಊರಿನ ಮಾನದಂಡದಲ್ಲಿಯೂ ಆಕೆ ಚೆಲುವೆ ಎಂದು ಹೇಳಿಸಿಕೊಳ್ಳಲಾರಳು. ಆದರೆ ಅವಳ ಚುರುಕುತನ ಮತ್ತು ಅವಿಚಲ ಗಾಂಭೀರ್ಯದಲ್ಲಿ ಬೆನ್ ತನ್ನ ಭವಿಷ್ಯವನ್ನು ಲೀನಗೊಳಿಸಲು ಸಿದ್ಧನಾಗಿದ್ದನು.

ಆದರೆ ಎಮ್ಮಾ ಬೈರ್ಸ್ ಅವಳ ಚುರುಕು ಕೈಗಳಲ್ಲಿ ಬೆನ್ ತನ್ನ ಭವಿಷ್ಯದ ಕಡಿವಾಣವನ್ನು ಕೊಡಲಾರದೆ ಹೋದ. ಬೆಲ್ಲಾ ಹಕ್ಕಿನ್ಸಳನ್ನು ಕಂಡ ಮರುಕ್ಷಣವೇ ಅವನಿಗೆ ಈ ವಿಷಯವು ಸ್ಪಷ್ಟವಾಯಿತು. ಕಮರ್ಶಿಯಲ್ ಎಂಬ ಹೆಸರಿನ ಪೇಟೆಯಲ್ಲಿ ಅಂಗಡಿಯನ್ನಿಟ್ಟಿದ್ದ ಮುದಿಯ ಹಕ್ಕಿನ್ಸನ ಮಗಳಾದ ಬೆಲ್ಲಾ ಶಾಲಾ ಮಾಸ್ತರಿಕೆಗೆ ಮನಸೋತಿದ್ದಳು. ಅದರಲ್ಲಿ ಆಕೆಗೆ ಅಭಿರುಚಿ ಇತ್ತೆಂದು ಇದರರ್ಥವಲ್ಲ ಮಾಸ್ತರಿಕೆ ಒಂದು ಮರ್ಯಾದಸ್ತ ಉದ್ಯೋಗವೆಂದು ಆಕೆ ಅದನ್ನು ಆರಿಸಿದ್ದಳು. ಅವಳ ಕಣ್ಣಿದ್ದುದು ನಲ್ವತ್ತು ಮೈಲು ದೂರದ ಸೈಂಟ್ ಲೂಯಿ ನಗರದ ಮೇಲೆ. ಆದರೆ ಎರಡು ವರ್ಷವಾದರೂ ಹಳ್ಳಿಯ ಶಾಲೆಯಲ್ಲಿ ಕಲಿಸದೆ ಅಲ್ಲಿ ಉದ್ಯೋಗ ಸಿಗುವಂತಿಲ್ಲ. ಆದ್ದರಿಂದ ಅವಳು ಹಳ್ಳಿಯ ಶಾಲೆಗೆ ಬರಲೇಬೇಕಾಯಿತು.

ಬೆನ್ ವೆಸ್ಟರ್‌ವೆಲ್ಡ್ ಮೊದಲಸಾರಿ ಆಕೆಯನ್ನು ಕಂಡಾಗ ಆಕೆ ಮೈಗೆ ಹಿಡಿದು ನಿಲ್ಲುವಂಥ ಅಲ್ಪಾಕಾ ತೊಡಿಗೆಯನ್ನು ಧರಿಸಿ ಅವನ ಇದಿರು ರಸ್ತೆಯಲ್ಲಿ ಬರುತ್ತಿದ್ದಳು. ಸೂರ್ಯನ ಹೊಂಬಿಸಿಲು ಆಕೆಯ ಕೇಶರಾಶಿಯು ಮೇಲೆ ಬಿದ್ದು ಅದಕ್ಕೆ ಕೆಂಬಣ್ಣ ಬಳೆದಿತ್ತು. ಅವಳ ನಡುವು ಸಪೂರವಾಗಿದ್ದು ಬೆನ್‌ನ ಎರಡು ಕೈಗಳೊಳಗೆ ಹಿಡಿಸುವಷ್ಟು

ಇದ್ದೀತೆಂದು ಅವನಿಗೆನಿಸಿತು. ಆದರ ಸತ್ಯಾಂಶ ಅವನಿಗೆ ತಿಳಿದುದು ಆ ಮೇಲೆ. ಈಗಂತೂ ಅವನ ಕಣ್ಣಿಗೆ ಈ ಸುಮಕೋಮಲೆಯು ದೇವ ಲೋಕದ ಅಪ್ಸರೆಯಂತೆಯೇ ಕಂಡಳು. ಬೆನ್ನನ ಕಲ್ಪನೆಯು ಕಣ್ಣು ಅಷ್ಟು ಸೂಕ್ಷ್ಮವಾಗಿದ್ದಿತು.

ಜೆನ್‌ಗೆ ಆಕೆಯೇ ಶಾಲೆಯ ಮಾಸ್ತರನಿ ಎಂಬುದು ಕಂಡಿತವಾದಂತೆ ಆಕೆಗೂ ಈತ ಜೆನ್ ಎಂಬುದನ್ನು ಹೇಳಬೇಕಾಗಿರಲಿಲ್ಲ. ಆಕೆ ಒಂದು ಎರಡು ದಿನಗಳಲ್ಲಿಯೆ ಆ ಜಿಲ್ಲೆಯ ತರುಣರ ಒಂದು ಪಟ್ಟಿ ಯನ್ನು ಮಾಡಿದಳು. ಇದಕ್ಕೆ ಅವಳ ಕೌತುಕ ಬುದ್ಧಿ ಒಂದು ಕಾರಣ; ಅವಳು ಊಟ ಮಾಡುತ್ತಿದ್ದ ವಿಧವೆ ಬೆಕ್ಕರ್ ಮನೆಯ ಗ್ರಾಮಾಯಣ ವಾಚನ ಒಂದು ಕಾರಣ. ಅಂತೂ ಆಕೆಯ ಪಟ್ಟಿಯಲ್ಲಿ ಜೆನ್‌ಗೆ ಮೇಲಿನ ಸ್ಥಾನವೇ ದೊರಕಿತ್ತು.

ಆಕೆ ಸಮಿಾಪಿಸಿದಂತೆ ಬೆನ್ನನ ಮೋರೆ ಕೆಂಪಾಯಿತು. ಮನಸ್ಸಿನ ತಳಮಳವನ್ನು ಮರೆಯಲಿಕ್ಕೆಂದು ಆತ ಹತ್ತಿರದಲ್ಲಿ ನೆಲ ಮೂಸಿ ಕೊಂಡಿದ್ದ ನಾಯಿಯನ್ನು ಕರೆದನು. ಡಂಡರ್ (ನಾಯಿ) ಕೂಡಲೆ ಕುಣಿಯುತ್ತ ಬಂದು ಹೊಸಬಳನ್ನು ಕಂಡು ಆಕೆಗೆ ಸ್ವಾಗತದ ನೃತ್ಯವನ್ನು ತೋರಿಸಿತು. ಬೆಲ್ಲಾ ನಾಯಿಯನ್ನು ಕಂಡು ಚಿಟ್ಟೆಂದು ಕಿರಿಚಿ, ಜೆನ್‌ನನ್ನು ಗಟ್ಟಿಯಾಗಿ ಅವಚಿಕೊಂಡಳು. ಅದುವರೆಗೆ ಒಂದು ಗಿಡವನ್ನೂ ನೋಯಿಸದ ಜೆನ್ ಕೈಯಲ್ಲಿನ ಛಡಿಯಿಂದ ನಾಯಿಗೆ ಫಳೀರನೆ ಬೀಸಿದನು ಕುಯ್ಯೋ ಮುರ್ರೋ ಎಂದು ನಾಯಿ ದೇಹವನ್ನು ಕುಗ್ಗಿಸಿ ಕೊಂಡು ಅನಿರೀಕ್ಷಿತ ಆಘಾತದಿಂದ ತತ್ತರಿಸಿತು.

ಬೆಲ್ಲಾ ಇನ್ನೂ ಕಿರಿಚುತ್ತಲೇ ಇದ್ದಳು. ಜೆನ್ 'ಹೆದರ ಬೇಡ. ಅದು ನಿನಗೇನೂ ಮಾಡದು.' ಎಂದು ಆಕೆಯ ಭುಜವನ್ನು ನೇವರಿಸುತ್ತ ಆಶ್ವಾಸನೆಯಿತ್ತನು. ಆಕೆಯ ಬಿಳಿಚಿ ಹೋದ ಮುಖವನ್ನು ನೋಡಿದನು ಆಕೆಯ ತೆಳುವಾದ, ಬಾಲಿಶ ದೇಹವು ಆತ ಈ ಹಿಂದೆ ಕಂಡ ಗ್ರಾಮಿಣ ಯುವತಿಯರಿಗಿಂತ ಭಿನ್ನನಾಗಿತ್ತು. ಆಕೆಯ ನಿಸ್ಸಹಾಯತೆ ಮತ್ತು ಅತಿಶಯವಾದ ಸ್ತ್ರೀತ್ವವು ಅವನ ಗಂಡಸುತನವನ್ನು ಪೂರ್ತಿಯಾಗಿ ಆಕರ್ಷಿಸಿದುವು. ಬೆಲ್ಲಾಗಂತೂ ಅವನ ಸ್ಪರ್ಶದಿಂದ

ವಿದ್ಯುತ್ ಸಂಚಾರವಾದಂತಾಗಿತ್ತು. ಒಮ್ಮೆಲೆ ಅವಳು 'ಅಯ್ಯೋ, ನಾನೆಂಥ ಅಂಜುಬುರುಕಿ' ಎಂದು ಬೆನ್‌ನನ್ನು ಬಿಟ್ಟು ತುಸು ದೂರ ಸರಿದಳು—ದೂರ ತುಸುವೆ.

'ಅದು ನೊಣವನ್ನು ಕೂಡ ಕಚ್ಚುವುದಿಲ್ಲ.' ಎಂದ ಬೆನ್.

ಆದರೆ ಬೆಲ್ಲಾಗೆ ಈ ಮಾತಿನಲ್ಲಿ ನಂಬಿಕೆ ಇರಲಿಲ್ಲವೆಂದು ಆಕೆ ನಾಯಿಯ ಕಡೆ ನೋಡುವ ದೃಷ್ಟಿಯಿಂದ ಬೆನ್‌ಗೆ ವಿದಿತವಾಯಿತು. ಆತ ನಾಯಿಗೆ ಒಂದು ಕಲ್ಲನ್ನು ಬೀಸಿ ಎಸೆದು 'ನಡೆ ಮನೆಗೆ' ಎಂದು ಅಪರೂಪದಲ್ಲಿ, ಅಪವೇಳೆಯಲ್ಲಿ ಅದನ್ನು ಮನೆಗಟ್ಟಿದನು.

ಬೆಲ್ಲಾ ಆತನ ಕಡೆಗೆ ನೋಡಿದಳು. ಆತ ಅವಳ ಕಡೆ ನೋಡಿದನು.

'ನೀನು ಹೊಸ ಉಪಾಧ್ಯಾಯಿನಿ ಅಲ್ಲವೆ?'

'ನಾಯಿಯನ್ನು ನೋಡಿ ಹೆದರಿದ ನನ್ನ ಮಂಕುತನ ನಿನಗೆ ಅರ್ಥವಾಗಿರಬಹುದಲ್ಲಾ?'

'ಅದೇನೂ ಗಾತ್ರದಲ್ಲಿ ಚಿಕ್ಕದಲ್ಲ. ಯಾವ ಹುಡುಗಿಗೂ ಅದು ಕಚ್ಚುವುದಿಲ್ಲವೆನ್ನುವುದು ತಿಳಿಯುವ ವರೆಗೆ ಅಂಜಿಕೆ ಸಹಜ' ಎಂದು ಹೇಳಿ ಆ ಮೇಲೆ ತುಸು ತಡೆದು 'ನನ್ನ ಹೆಸರು ಬೆನ್‌ವೆಸ್ಟರ್‌ವೆಲ್ಡ್' ಎಂದನು.

'ಸಂತೋಷ' ಎಂದಳಾಕೆ.

'ನೀನೆಲ್ಲಿಗೆ ಹೊರಟೆ? ಟೀಟ್‌ಜೆನ್ಸ್‌ರ ಮನೆಯಲ್ಲಿ ಇದಕ್ಕೂ ದೊಡ್ಡ ನಾಯಿ ಒಂದಿದೆ. ನೋಡಲು ಸಾಮಾನ್ಯ ಕುದುರೆ ಮರಿಯಷ್ಟು ದೊಡ್ಡದು'.

'ನಾನು ಶಾಲೆಯಲ್ಲಿ ಏನೋ ಮರೆತು ಬಂದಿದ್ದೇನೆ. ಆ ಕಡೆಗೆ ಹೋಗಬೇಕಾಗಿತ್ತು' ಎಂದು ಆಕೆ ಸುಳ್ಳು ಹೇಳಿದಳು.

ಸರಿ, ಆ ಮೇಲೆ ಅವರು ನಿಸ್ಸಂಕೋಚವಾಗಿ ಮಾತನಾಡುತ್ತ ಹೊರಟು ಬಿಟ್ಟರು. ಹಲವು ವರ್ಷಗಳ ಗೆಳೆಯ – ಗೆಳತಿಯರಂತೆ ಅವರು ಆಡಿಕೊಳ್ಳುತ್ತಿದ್ದರು. ಈ ನಡುವೆ ಬೆನ್‌ಗೆ ತಾನು ಬೈರ್ಸ್

ಅವರ ಮನೆಗೆ ಹೊರಟದ್ದಾಗಲಿ, ಎಮ್ಮಾ ಬೈರ್ಸ್ ಆಗಲಿ ನೆನಪಿಗೆ ಬರಲೇ ಇಲ್ಲ.

ಬೆಲ್ಲಾ ಹಕ್ಕಿನ್ಸಳಿಗೆ ಹಳ್ಳಿಯ ಜೀವನ ಇಷ್ಟವಿರಲಿಲ್ಲ. ಅಡಿಗೆ ಮಾಡುವುದೆಂದರೆ ಆಕೆಗೆ ತಲೆ ಬೇಸರ. ರೈತ ಜನರೆಂದರೆ ತಾತ್ಸಾರ. ಹಕ್ಕಿನ್ಸ ಆವರ ಹೋಟಲಿನಲ್ಲಿ ಅಡಿಗೆಯನ್ನು ನೋಡಿ ನೋಡಿ ಆಕೆ ರೋಸಿ ಹೋಗಿದ್ದಳು. ಈ ಅಡಿಗೆ ಕೆಲಸ ತನಗಲ್ಲವೆಂದು ತೀರ್ಮಾನಿಸಿದ್ದಳು. ತಂದೆ ಹಕ್ಕಿನ್ಸ್ ಅವಳನ್ನು ಕೆಳಗಡೆ ಇರುವ ಶರಾಬಿನ ಕೋಣೆಗೆ ಬರಲು ಬಿಡುತ್ತಿರಲಿಲ್ಲ ಆದರೂ ಆಕೆ ಒಂದಲ್ಲ ಒಂದು ನೆಪವನ್ನು ಹಿಡಿದುಕೊಂಡು ಅಲ್ಲಿನ ಸುದ್ದಿ ಸಂಗ್ರಹ ಮಾಡಿಯೇ ಮಾಡುವಳು.

'ನಾನು ಬೆಲ್ಲಾಳನ್ನೇ ಮದುವೆಯಾಗುತ್ತೇನೆಂ'ದು ಬೆನ್ ಪ್ರತಿಜ್ಞೆಯನ್ನೇನೂ ಮಾಡಲಿಲ್ಲ. ನಿಜವಾಗಿ ಎಮ್ಮಾ ಬೈರ್ಸಳನ್ನೇ ಅವನು ಒಲಿದಿದ್ದ. ಆದರೆ ಬೆಲ್ಲಾಳ ಆಕರ್ಷಣೆಯನ್ನು ಆತ ತಡೆಯಲಾರ. ಅವಳೂ ಅಷ್ಟೇ ಸ್ವಾರ್ಥಕ್ಕಾಗಿ ಹೊರತು ಬೇರೆ ಯಾತಕ್ಕೂ ಆತನನ್ನು ಮದುವೆಯಾಗಳು: ಅವನ ಗಂಡಸುತನ ಅವಳ ಮನಸ್ಸನ್ನು ಸೂರೆ ಮಾಡಿತ್ತು. ಆತನಿಗೆ ಎಮ್ಮಾ ಬೈರ್ಸಳ ಶಾಂತವಾದ ಕಣ್ಣು, ವಿಶ್ವಾಸಾರ್ಹ ನಡೆನುಡಿ ಎದೆಯ ಮೇಲೆ ಕಲ್ಲಿನಂತೆ ಕೂತಿತ್ತು. ಆದರೂ ಕೊನೆಗೊಂದು ದಿನ ಬೆನ್ ಮತ್ತು ಬೆಲ್ಲಾ ಗಂಡ ಹೆಂಡತಿ ಆದಾಗ ಊರಿಗೆ ಊರೇ ಆಶ್ಚರ್ಯದಲ್ಲಿ ಮುಳುಗಿಹೋಯಿತು.

ತಾನು ಸ್ವಯಂವರಿಸಿದ ಕೋಮಲಾಂಗಿ, ಸುಂದರಿ ಎಂಥ ಹಠಮಾರಿ ಚಂಡಿ ಎಂದು ಬೆನ್‌ಗೆ ಮೊದಲಸಾರಿ ತಿಳಿದಾಗ ಆತ ಅದನ್ನು ನಂಬಲೊಲ್ಲ. ಅವನಿಗೆ ವೈಯಕ್ತಿಕ ನೈರ್ಮಲ್ಯ, ಸ್ನಾನ, ನಿತ್ಯಆಹ್ನಿಕಗಳಾದರೆ ಬೆಲ್ಲಾಗೆ ಸ್ನಾನಮಾಡುವ ಅಭ್ಯಾಸವೇ ಇರಲಿಲ್ಲ. ಅವಳ ಸೌಂದರ್ಯಕ್ಕೆ ಅವಳ ಕಣ್ಣಿನ ತೀಕ್ಷ್ಣತೆ ಮತ್ತು ಚರ್ಮದ ಸೌಷ್ಠವದ ಕಾರಣವಲ್ಲದೆ ಅವಳ ವರ್ತನೆ ಅಲ್ಲವೆಂಬುದು ಬೆನ್‌ಗೆ ಶೀಘ್ರವೇ ಗೊತ್ತಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಅವಳ ಬತ್ತಳಿಕೆಯಲ್ಲಿರುವ ವಾಗ್ಬಾಣಗಳ ಕಲ್ಪನೆಯೇ ಬೆನ್‌ಗಿರಲಿಲ್ಲ. ಶರಾಬು ಕುಡಿಯುವ ಹೋಟಲ್ ಗಿರಾಕಿಗಳ ನಿಘಂಟು ಆಕೆಗೆ ಕಂಠಪಾಠವಾಗಿತ್ತು.

ಬೆನ್‌ಗೆ ಒಂದು ಹೆಣ್ಣು, ಎರಡು ಗಂಡು—ಹೀಗೆ ಮೂರು ಮಕ್ಕಳಾದುವು. ಬೆನ್ ವರ್ಷ ವರ್ಷ ತನ್ನ ಜಮೀನನ್ನು ವಿಸ್ತರಿಸಿ ಕೊಂಡು ಶ್ರೀಮಂತನಾದ. ಅಲ್ಲಿ ಎಂಭತ್ತು ಎಕರೆ, ಇಲ್ಲಿ ಎಂಭತ್ತು ಎಂದು ಜೋಡಿಸಿಕೊಳ್ಳುತ್ತ ಒಟ್ಟಿನಲ್ಲಿ ಕೊನೆಗೆ ಮಿಸ್ಸಿಸಿಪಿ ನದಿಯ ದಂಡೆಯವರೆಗೂ ಬೆನ್‌ನದೇ ಜಮೀನಾಯಿತು. ಇಷ್ಟೆಲ್ಲವನ್ನು ಆತ ಹೆಂಡತಿ ಎಂಬ ಆತಂಕವಿರುತ್ತ ಮಾಡಿದನಲ್ಲಾ ಎಂಬುದರಲ್ಲಿ ಅಚ್ಚರಿ ಏನಿಲ್ಲ. ಬೆನ್‌ನ ಕೃಷಿ ಕೌಶಲವನ್ನು ಯಾರೂ ಹತ್ತಿಕ್ಕಲಾರರು. ಕೊಯ್ಲಿನ ಸಮಯ ಆಳುಗಳು ಬೆನ್ನನೊಡನೆ ಕೆಲಸಮಾಡಲು ಉತ್ಸಾಹ ದಿಂದ ಮುಂದಾದರೆ ಯಜಮಾನಿಯು ಕೆಟ್ಟ ಅಡಿಗೆಯ ಯೋಚನೆ ಬಂದೊಡನೆ ಶಪಿಸುತ್ತಿದ್ದರು. ಆಕೆಯೂ ಬೇಕಷ್ಟು ಶಾಪವಿಕ್ಕುತ್ತಿದ್ದಳು: 'ಇಡಿ ಜೀವಮಾನ ಈ ರೀತಿ ನಿಮಗೆ ಅನ್ನಹಾಕುವ ಗುಲಾಮಳಾಗಿ ಇರುವುದಕ್ಕಿಂತ ಸಾಯುವುದೇ ಮೇಲು. ಇಲ್ಲಿ ಹೀಗೆ ಕೊಳೆಯುವುದ ಕ್ಕಿಂತ ಮಣ್ಣು ತಿನ್ನುವುದು ಒಳ್ಳೆಯದು' ಎಂದು ಆಕೆ ಗಟ್ಟಿಯಾಗಿಯೇ ಬೈಯುವಳು.

ಆಕೆಗೆ ಉಪಾಧ್ಯಾಯಿನಿಯರ ಭಾಷೆ ಈಗ ಮರೆತೇ ಹೋಗಿದ್ದಿತು. ಉಡುಪಿನಲ್ಲಿ ಹೇಗೊ ಹಾಗೆ ಮಾತಿನಲ್ಲಿಯೂ ರಾಕ್ಷಸಿಯಾಗಿದ್ದಳು ಸಾಲದುದಕ್ಕೆ ಕಂಠಪೂರ್ತಿ ತಿಂದುಂಡು ಅಡ್ಡ ಬೆಳೆದು ನಿಂತಿದ್ದಳು. ಮಕ್ಕಳ ಕಿವಿಯಲ್ಲಿ ದಿನ ಬೆಳಗಾದರೆ ರೈತ ಜೀವನದ ಅಪಪ್ರಚಾರ ನಡೆ ಸುವಳು. 'ಅಪ್ಪನ ಹಾಗೆ ಹಳ್ಳಿಗಮಾರರಾಗಿರಬೇಡಿ' ಎಂದು ಪದೇ ಪದೇ ಹೇಳುತ್ತ ಅವನಿಗೆ ರೈತರ ಮೇಲೆ ದ್ವೇಷವನ್ನು ಹುಟ್ಟಿಸುವಳು. ಆಕೆಯ ಮಾತಿಗೆ ಮರುಳಾಗಿ ಹದಿನೇಳನೆಯ ವಯಸ್ಸಿನಲ್ಲೇ ಕಮರ್ಶಿಯಲ್ ಪಟ್ಟಣಕ್ಕೆ ನೌಕರಿ ಮಾಡಲು ತೆರಳಿದ ಮಗಳು ಮಿನ್ನೀ ವಿಲಾಸಿಯೂ, ಲಫಂಗನೂ ಆದೊಬ್ಬ ಕಾರ್ಮಿಕನನ್ನು ಮದುವೆಯಾದಳು. ಹಿರಿಯ ಮಗ ಜಾನ್ ತಾಯಿಯಂತೆಯೆ ಅಶಾಂತನೂ, ಬುದ್ಧಿ ಹೀನನೂ ಆಗಿದ್ದನು. ಹೊಲದ ಕುದುರೆಗಳನ್ನು ಜೂಜಿನ ಕುದುರೆಗಳಂತೆ ಪೀಡಿಸುವನು. ಒಮ್ಮೆ ರಾತ್ರಿಯ ಹೊತ್ತು ಆಳುಗಳಿಗೆ ತಿಳಿಯದಂತೆ ಕುದುರೆಗಳನ್ನು ಬಿಡಿಸಿಕೊಂಡು 'ಬಗ್ಗಿಗೆ' ಕಟ್ಟಿ ಕಮರ್ಶಿಯಲ್‌ಗೆ ತೆರಳಿದನು. ಅದು

ಮೋಟಾರಿನ ಯುಗವಲ್ಲವಾಗಿ ಅವನಿಗೆ ಆವರೆಗಾದರೂ ಆಯುಷ್ಯವಿತ್ತು ಎನ್ನಬೇಕು. ಅಂದು ಕಮರ್ಶಿಯಲಿನಿಂದ ಹೊಲಕ್ಕೆ ಕುದುರೆಗಳೂ, ಮುರಿದುಹೋದ ಬಗ್ಗಿಯೂ ಮಾತ್ರವೇ ಬಂದುವು. ಜಾನ್ ದಾರಿಯಲ್ಲಿ ಚಕ್ರಕ್ಕೆ ಸಿಲುಕಿ ಅಸುವನ್ನು ನೀಗಿದ್ದನು. ಬೆಲ್ಲಾ ಅಲ್ಲಿಗೂ ಗಂಡನನ್ನು ಬಿಡಲಿಲ್ಲ. 'ಆಯಿತಲ್ಲ ನಿನ್ನ ಆಸೆ? ಇನ್ನವನಿಗೆ ಹೊಲದ ಕೆಲಸ ಕಲಿಸುವುದು ಮುಗಿಯಿತಲ್ಲ. ಇನ್ನು 'ಡೈಕ'ನನ್ನು ಮುಟ್ಟಿದರೆ ನೋಡು.' ಎಂದಳು.

'ಡೈಕ್' ಬೆನ್ನನ ಕಿರಿಯ ಮಗ. ಅವನಿಗೆ ಬೆನ್ ಯಾವುದನ್ನೂ ಕಲಿಸಬೇಕಾಗಿರಲಿಲ್ಲ. ಆತ ಹುಟ್ಟು ರೈತ, ಹದಿನಾರರ ಆ ಹುಡುಗನನ್ನು ತರುಣ ಬೆನ್ ಎಂದೇ ಕರೆಯಬಹುದು. ಅವನ ರೂಪವೂ ಅವನ ಪೂರ್ವಜರಾದ ಹಾಲ್ಲೆಂಡಿನ ನಿವಾಸಿಗಳಂತೆಯೆ ಇತ್ತು. ಶಾಲೆಯಲ್ಲಿ ಡೈಕಿನ ತೂತಿಗೆ ತನ್ನ ಬೆರಳಿಟ್ಟು ಇಡೀ ರಾಷ್ಟ್ರವನ್ನು ರಕ್ಷಿಸಿದ--ಡಚ್ ವೀರನ ಕತೆ ಬಂದಾಗ, ಅವನ ಚಿತ್ರ ನೋಡಿ ಎಲ್ಲಾ ಹುಡುಗರೂ ಬೆನ್ನನ ಕಿರಿ ಹುಡುಗನ ಕಡೆ ತಿರುಗಿ ಅವನಿಗೆ ಡೈಕ್ ಎಂಬ ಹೆಸರನ್ನು ಸ್ಥಿರಗೊಳಿಸಿದ್ದರು.

ಡೈಕಿಗೂ ಅವನ ತಂದೆಗೂ ನಡುವೆ ಅನಿರ್ವಚನೀಯವಾದ ಐಕಮತ್ಯವಿತ್ತು. ಹುಡುಗನಿಗೆ ಬೇಸಾಯವೆಂದರೆ ಜೀವ– ಅವನ ತಂದೆಯಂತೆ. ಭಾನುವಾರ ಅವರಿಬ್ಬರೂ ಹೊಲದ ತನಿಖೆಗೆ ಹೊರಟರೆ ತಮ್ಮ ಹಂದಿಯ ಪೈರನ್ನು ಪರೀಕ್ಷಿಸುವರು; ಚಳಿಗಾಲದಲ್ಲಿ ಬಿತ್ತಿದ ಗೋಧಿಯ ಅಂದಾಜನ್ನು ಮಾಡುವರು. ಕಿರಿಯವ ಡೈಕ್ ಹೊಗೆ ಸೊಪ್ಪಿನ ಪೈಪನ್ನು ಠೀವಿಯಿಂದ ಸೇದುತ್ತ, ಆಗಾಗ ಅನುಭವಪೂರ್ಣವಾಗಿ ಉಗುಳುತ್ತ, ಗೋಧಿಯ ಬೆಳೆ ತಪ್ಪಲ್ಲ ಎಂದು ತಜ್ಞ ಅಭಿಪ್ರಾಯವನ್ನು ನೀಡುವನು. ಹುಡುಗನ ಆತ್ಮವಿಶ್ವಾಸಪೂರ್ಣ ಅಭಿಪ್ರಾಯವನ್ನು ಕೇಳಿದಾಗ ಬೆನ್ನನ ಅಂತರಂಗದಲ್ಲಿ ಆನಂದವು ಲಾಸ್ಯವಾಡುವುದು. ಅವನ ವೈವಾಹಿತ ಜೀವನದ ಸರ್ವ ಕೊರತೆಯನ್ನು ತುಂಬಿಸಿ ಕೊಡುವ ಜೀವನಾಧಾರವು ಅವನ ಮುಂದೆ ಸಾಕಾರವಾಗಿ ನಿಂತಿತ್ತು.

ಮದುವೆಯಾಗಿ ಮೂವತ್ತು ವರ್ಷಗಳೇ ಉರುಳಿದುವು. ಅವನ

ವಯಸ್ಸಿಗೆ ಅವನು ನಡೆಯುವ ಸ್ಥೈರ್ಯ, ವೇಗ ಹೆಚ್ಚೆಂದೇ ಹೇಳಬೇಕಾದರೂ, ಶರೀರವು ಸ್ವಲ್ಪ ಬಾಡಿದ ಲಕ್ಷಣವು ಈಗೀಗ ಗೋಚರವಾಗುವುದು. ವಯಸ್ಸು ಐವತ್ತೈದಾದರೂ ಆತ ಇಪ್ಪತ್ತೈದರ ನೈರ್ಮಲ್ಯವನ್ನು ಈಗಲೂ ಕಾಪಾಡಿಕೊಂಡು ಬಂದಿದ್ದಾನೆ. ಹಳ್ಳಿಯ ಸಮಾಜದಲ್ಲಿ ಅವನಿಗೆ ಒಂದು ದೊಡ್ಡ ಗೌರವ ಸ್ಥಾನವಿದೆ. ಅವನು ಆ ಪ್ರದೇಶದ ಒಂದು ಗಟ್ಟಿ ಕುಳವಲ್ಲವೆ? ಚಳಿಗಾಲದ ಮುಂಜಾವಿನ ಕಾಲಕ್ಕೆ ಗಾಡಿ ಹೊಡೆದುಕೊಂಡು, ಕುರಿದೊವಲಿನ ಕೋಟನ್ನು ಧರಿಸಿ ಆತ ಫಸ್ಟ್ ನ್ಯಾಶನಲ್ ಬ್ಯಾಂಕಿಗೆ ಪ್ರವೇಶ ಮಾಡಿದನೆಂದರೆ ಕ್ಯಾಷಿಯರ್ ಶರ್ಮ್‌ವೇ ಕೂಡ ತಲೆ ಎತ್ತಿ ನಮಸ್ಕರಿಸಿ 'ಹಲ್ಲೋ, ಬೆನ್ ವೆಲ್ಡ್, ಹೇಗಿದ್ದೀರಿ?' ಎಂದು ಸಾಮಾನ್ಯವಾಗಿ ಯಾರಿಗೂ ದೊರೆಯದ ಸೌಜನ್ಯವನ್ನು ತೋರಿಸುತ್ತಿದ್ದನು.

ಬೆನ್ ವೆಸ್ಟರ್‌ವೆಲ್ಡ್‌ನ ಸುತ್ತಲೂ ಹರಡಿತ್ತು ಆತನ ದುಡಿಮೆಯ ಫಲ, ಕೈಯ ಕೌಶಲ: ಹಣ್ಣಿನ ತೋಟ, ಧಾನ್ಯದ ಹೊಲ, ಹಟ್ಟಿಯ ಜಾನುವಾರು, ಕೊಟ್ಟಿಗೆ. ಅವನು ಮತ್ತು ಅವನ ಅನಂತರ ಡೈಕ್— ಇವುಗಳ ಮೇಲ್ವಿಚಾರಕ್ಕೆ ಬದ್ಧರು. ಇನ್ನೇನು ಅವನ ದಿವಸ ಸಂದಂತೆ. ಅಲ್ಲಿನ ಹೆಚ್ಚಿನ ಕೆಲಸ ಬೆನ್ನುಮುರಿಯುವ ದುಡಿಮೆ ಎಂಬುದು ನಿಜವಾದರೂ ಅವನಿಗೆ ಸ್ಥಾನ ಅಲ್ಲಿಯೇ. ಅವನ ಅಸ್ತಿತ್ವದ ಪರಮ ಕಾರಣವೇ ಅದು. ಇಷ್ಟು ಯೋಚನೆಯನ್ನು ಅವನು ಬಾಯಿಯಲ್ಲಿ ನುಡಿಸಲಾರನಾದರೂ ಅವನ ಜೀವಕ್ಕೆ ಅದು ತನ್ನಂತೆ ಅನಿಸುವುದು. 'ನನಗೆ ಇದು ಕೆಲಸ, ಈ ಕೆಲಸಕ್ಕೆ ನಾನು ಗಂಡು' ಎಂದಷ್ಟೇ ಅವನ ಬಾಯಿಂದ ಹೊರಟೀತು.

ಈಗ ಹೊಲಕ್ಕೆ ಟ್ರ್ಯಾಕ್ಟರು ಬಂದಿದೆ. ಒಂದು ಗಟ್ಟಿಮುಟ್ಟಾದ ಮೋಟಾರು ವಾಹನವೂ ಬಂದಿದೆ. ಅದರಲ್ಲಿ ಬೆಲ್ಲಾ ಕೂತು ಪುರಭ್ರಮಣಕ್ಕೆ ಹೊರಟಾಗ ಆಕೆಯ ಮುಖ ಗರ್ವದಿಂದ ಕೆಂಪಗಿರುತಿತ್ತು.

ಬೆನ್ ಶ್ರೀಮಂತನಾದಂತೆ ಆತನ ಚಂಡಿ ಹೆಂಡತಿಗೂ ಐಶ್ವರ್ಯ ಬಂದಿತ್ತು. ಆದರೆ ಬೆನ್ ಸ್ವಾರ್ಥಿಯಲ್ಲ. ಹೆಂಡತಿಯ ಅನುಕೂಲತೆಗಾಗಿ ಶಯನಗೃಹ, ಬೇಸಗೆಗೊಂದು ಬೇರೆ ತಂಪಿನ ಅಡಿಗೆ ಮನೆ,

ಐಸ್ ಹೌಸು, ವಿಶಾಲವಾದ ಮುಖಮಂಟಪ, ಸ್ನಾನಗೃಹ—ಎಲ್ಲವನ್ನೂ ಮಾಡಿಸಿದ್ದ. ಇಷ್ಟಾದರೂ ಆಕೆಗೆ ಸಮಾಧಾನವಿರಲಿಲ್ಲವೆಂದರೆ, ಆಕೆಯ ದೃಷ್ಟಿ ನಗರಾಭಿಮುಖವಾಗಿಯೇ ಇತ್ತೆಂದರೆ—ಆ ಮಾತು ಬೇರೆ. ಮೂವತ್ತು ವರ್ಷಗಳ ಕಾಲ ಕುಕ್ಕಿ ಕುಕ್ಕಿ ಕೊನೆಗೆ ಬೆಲ್ಲಾ ಯಶಸ್ವಿಯಾಗುವುದರಲ್ಲಿದ್ದಳು. ನಿಧಾನವಾಗಿ, ಬಲು ನಿಧಾನವಾಗಿ, ಬೆನ್ ಸೋಲುತ್ತಿದ್ದ. ಅವನು ಉತ್ತಮ ಲೋಹ; ಆಕೆ ನೀಚ, ಒರಟು ಲೋಹ. ಆಕೆ ಅವನನ್ನು ಬಡಿದು ಬಡಿದು ಬಗ್ಗಿಸಿದಳು-ಭಂಗಾರವನ್ನು ಕಬ್ಬಿಣವು ಬಗ್ಗಿಸಿದಂತೆ.

ಚಿಕಾಗೋ ನಗರದಲ್ಲಿ ವಾಸಮಾಡುವ ಮಗಳು ವಿನ್ನಿ ಕಳಿಸುತ್ತಿದ್ದ ಮನರಂಜಕವಾದ ಸಿನಿಮಾ, ಬೀದಿ, ಅಂಗಡಿ, ಗದ್ದಲದ ವರ್ಣನೆಯನ್ನು ಆಕೆಯು ಪತ್ರಗಳಲ್ಲಿ ಓದುತ್ತ ಹೋದಂತೆ ಶತಚಂಡಿ ರಣಚಂಡಿಯೇ ಆದಳು. ಹಂದಿ ಮತ್ತು ಗೋಧಿ ಎರಡರಲ್ಲೇ ಇನ್ನು ಪರಿಶ್ರಮ ಮಾಡುವುದೊಳಿತೆಂದು ಬೆನ್ ನಿರ್ಧಾರಕ್ಕೆ ಬರುವ ಸಮಯದಲ್ಲೇ ಆ ಎರಡಕ್ಕೂ ವಿಶೇಷ ಗಿರಾಕಿ ಇರುವ ಮಹಾ ಯುದ್ಧ ಆರಂಭವಾಯಿತು. ಬೆನ್‌ನ ಬೆಳೆಗೆ ಈ ಸಾರಿ ಭಯಂಕರ ಧಾರಣೆ ಬಂದಿತು. ಆದರೆ ಧಾರಣೆ ಹಂದಿ ಗೋಧಿ ಎಲ್ಲವೂ ಹಿಂದಾಗುವ ಒಂದು ಘಟನೆಯೂ ಆಗಲೇ ನಡೆಯಿತು. ಆವನ ಮಗ ಡೈಕ್ ಏಳು ಜನ ಬೇರೆ ರೈತ ಯುವಕರ ಜತೆ ಯುದ್ಧ ಭೂಮಿಗೆ ತೆರಳುವ ಸಿದ್ಧತೆ ಮಾಡಬೇಕಾಯಿತು. ಇದನ್ನು ಕೇಳಿದ ಕೂಡಲೆ ಬೆಲ್ಲಾ ಬಿದ್ದು ಬಿದ್ದು ಅತ್ತಳು. ಬೆನ್ ಕಲ್ಲುಮನಸ್ಸು ಮಾಡಿ ಹುಡುಗನನ್ನು ಪಟ್ಟಣದ ವರೆಗೆ ಬಿಟ್ಟು ಬಂದನು. ಉಗಿ ಬಂಡಿ ನಿಲ್ದಾಣದಿಂದ ಹೊರಟ ಮೇಲೆ ಬೆನ್ನನನ್ನು ಹತ್ತಿರದಿಂದ ನೋಡಿದರೆ ಅವನ ಕಂಠದ ಸೆರೆ ಉಬ್ಬಿ ಬಂದುದು ತಿಳಿಯಬಹುದಾಗಿತ್ತು. ವಾರಗಳು ಕಳೆದಂತೆ ಅವನ ಹೆಜ್ಜೆ ಮಂದವಾಯಿತು. ಮಗನು ಹೋದ ಮೇಲೆ ಅವನ ಬಲಗೈಯೇ ಮುರಿದ ಹಾಗಾಗಿತ್ತು. ಕೂಲಿಗೆ ಆಳುಗಳು ಸಿಗುತ್ತಿರಲಿಲ್ಲ, ಬೆನ್ ಒಬ್ಬನೇ ಎಲ್ಲವನ್ನು ಮಾಡುವ ಸ್ಥಿತಿಯಲ್ಲಿರಲಿಲ್ಲ. ಸಾಲದುದಕ್ಕೆ ಆ

ಚಳಿಯಲ್ಲಿ ಅವನಿಗೆ ವಾತ ರೋಗವೂ ಕಾಡಿಸಿತು. ಜೆಲ್ಲಳ ಅಸಮಾಧಾನ ಹೆಚ್ಚುತ್ತಲೇ ಇದ್ದಿತು.

'ಇಲ್ಲಾ ಇಲ್ಲಾ, ಸಾರಿ ಹೇಳಿದೆ. ನೀನೊಬ್ಬನಿಂದ ಸಾಧ್ಯವೇ ಇಲ್ಲ ಇನ್ನು. ಒಂದಲ್ಲ ಒಂದು ದಿನ ಇದನ್ನೆಲ್ಲ ನನ್ನ ಎದೆಯ ಮೇಲೆ ಹೇರಿ ಹೋಗುತ್ತೀ, ನನಗೆ ಗೊತ್ತಾಯಿತು' ಎಂದು ಆಕೆ ಬಡಬಡಿಸಿದಾಗ ಒಲೆಯ ಬಳಿ ಕೂತಿದ್ದ ಜೆನ್ ಮೂಕನಾಗಿ ಅವಳ ಕಡೆಗೆ ನೋಡಿದನು, ಅಷ್ಟೆ. ಅವನಲ್ಲಿ ಅವಳನ್ನು ವಿರೋಧಿಸುವ ಶಕ್ತಿ ಈಗ ಉಳಿದಿರಲಿಲ್ಲ ಅವನು ಇನ್ನೂ ಸತ್ತಿರಲಿಲ್ಲವಾದರೂ ಅವನಲ್ಲಿನ ಏನೋ ಒಂದಂಶ—ಎಲ್ಲ ತೊಂದರೆ, ಕೀಟಲೆ, ವಿರೋಧಗಳನ್ನು ಮೆಟ್ಟಿ ನಿಂತು ಸದಾ ವಿಜಯಿಯಾಗುತ್ತಿದ್ದ ಅವನ ಸ್ಥೈರ್ಯ—ಈಗ ಉಡುಗಿ ಹೋಗಿತ್ತೇನೋ ಎಂದೆನಿಸಿತು ಆತಗೆ.

ವಾತ ರೋಗದಿಂದ ನರಳುತ್ತಿರುವಾಗ ಆತನಿಗೆ ಎವ್ಮಾ ಬೈರ್ಸಳ ಸುಖಸ್ಮರಣೆ ಆಗಾಗ ಬರುವುದುಂಟು. ಇಪ್ಪತ್ತೆಂಟು ವರ್ಷದ ಕೆಳಗೆ ಆಕೆ ಯಾರನ್ನೋ ಮದುವೆಮಾಡಿಕೊಂಡು ಚಿಕಾಗೋ ನಗರಕ್ಕೆ ಹೋಗಿ ಒಳ್ಳೆಯ ಸ್ಥಿತಿಗೆ ಬಂದಿದ್ದಾಳೆಂದು ಯಾರೋ ಅವನಿಗೆ ಅಂದಿದ್ದರು. ಅವನಿಗೆ ಪಶ್ಚಾತ್ತಾಪಪಡುವ ಹವ್ಯಾಸವಿರಲಿಲ್ಲ. ಆತನೊಬ್ಬ ಮೂರ್ಖ, ಮೂರ್ಖತನದ ಬೆಲೆಯನ್ನು ಪ್ರಾಮಾಣಿಕವಾಗಿ ತೆರುತ್ತಿದ್ದನು. ಜೆಲ್ಲಾಳಿಗೆ ಈತ ಎರಡನೆಯವಳೊಬ್ಬಳ ಕುರಿತು ಚಿಂತಿಸುವನೆಂದು ಗೊತ್ತಾಗುವುದು ಶಕ್ಯವಿರಲಿಲ್ಲ.

"ಇನ್ನೂ ನಾಲ್ಕು ವರ್ಷ ಯುದ್ಧ ಮುಗಿಯುವುದಿಲ್ಲವೆಂದು ಎಲ್ಲರೂ ಹೇಳುತ್ತಾರೆ. ನಿನಗೆ ಇಲ್ಲಿ ಏಳಲಿಕ್ಕಾಗುವುದಿಲ್ಲ,ಎಲ್ಲಾ ಪಾಳು ಬೀಳುತ್ತಾ ಇದೆ. ಒಂದು ವರ್ಷದವರೆಗೆ ಹೊಲವನ್ನು ಗೇಣಿಗೆ ಹಾಕಿ ನೋಡುವಾ. ಬರ್ಡಿಕರ್ಸ್ ಮನೆಯವರಿಗೆ ಅದರ ಖಾಯಿಸವೂ ಇದೆ. ಅವರಲ್ಲಿ ಯುದ್ಧಕ್ಕೆ ಹೋಗಲಾರದ ಮೂವರು ಅಷ್ಟಾವಕ್ರ ಮಕ್ಕಳೂ ಇದ್ದಾರೆ—ದುಡಿಯುವುದಕ್ಕೆ ಜನ ಕಡಮೆ ಬೀಳಲಿಕ್ಕಿಲ್ಲ. ಆ ಮೇಲೆ ಖುಶಿ ಕಂಡರೆ ಅವರಿಗೆ ಹೊಲವನ್ನು ಮಾರ ಹಾಕಿಬಿಡೋಣ. ಯಾರಿಗೆ ಗೊತ್ತು ಡೈಕ್ ಹಿಂದೆ ಬರುತ್ತಾನೋ, ಇಲ್ಲವೋ?........"

ಇಷ್ಟನ್ನು—ಅದರಲ್ಲೂ ಕೊನೆಯ ಮಾತನ್ನು—ಕೇಳಿ ಬೆನ್‌ನ ಚಹರೆಯಲ್ಲಿ ಆಡರಿದ ಅಪರೂಪದ ಕೋಪಾವೇಶವನ್ನು ನೋಡಿ ಬೆಲ್ಲಾ ಕೂಡ ಬಾಯಿ ಮುಚ್ಚಿಕೊಂಡು ಅಲ್ಲಿಂದ ಹೊರಡಬೇಕಾಯಿತು.

ವಸಂತಕಾಲದ ಪ್ರಥಮ ಪಾದದಲ್ಲಿಯೇ ಅವರು ಚಿಕಾಗೋ ನಗರಕ್ಕೆ ಬಿಡಾರವನ್ನು ಹೊತ್ತರು. ಡೈಕನನ್ನು ಸ್ಟೇಶನ್ನಿನಲ್ಲಿ ಬಿಡುವಾಗ ಬೆನ್ನನ ಮುಖದಲ್ಲಿ ಕ್ಷಣಿಕವಾಗಿ ಪ್ರಕಟವಾದ ಮುಖಮುದ್ರೆಯು ಈಗ ಅವನಲ್ಲಿ ಶಾಶ್ವತವಾಗಿ ತಳವೂರಿತು. ಅವನ ಹೊಲವಿದ್ದ ಕಾಲ್ಹೂನ್ ಜಿಲ್ಲೆ ವಸಂತಕಾಲದಲ್ಲಿ ಕ್ಯಾಲಿಫೋರ್ನಿಯದಂತೆ ಸುಂದರವಾದ ಹೊಂಬಿಸಿಲಿನ ಸಾಮ್ರಾಜ್ಯವಾಗಿರುತಿತ್ತು. ಆ ಭಂಗಾರದ ಬಿಸಿಲಲ್ಲಿ ಮನೆಯ ಮುಂದಿನ ಕಿರುದಾರಿಯಲ್ಲಿ ಗೇಟಿನಕಡೆಗೆ ಬೆನ್ ನಡೆಯುತ್ತಿರುವ ದೃಶ್ಯವು ಯಾವ ನಾಟಕದಲ್ಲಿಯೂ ಕಾಣಲಾಗದಷ್ಟು ರಮಣೀಯವಾಗಿರುತಿತ್ತು. ಆದರೆ ನಾಟಕದ ನಾಯಕನಂತೆ ಬೆನ್ ಹಿಂತಿರುಗಿ ನೋಡಲಿಲ್ಲ. ನೋಡಲು ಅವನಿಗೆ ಧೈರ್ಯ ಸಾಲದು.

ಚಿಕಾಗೋ ನಗರದ ಎಂಗ್ಲ್‌ವುಡ್ ಬಡಾವಣೆಯಲ್ಲಿ ಮಿನ್ನಿಯ ಮನೆಗೆ ಸಮೀಪವೇ ಅವರು ಒಂದು ಫ್ಲ್ಯಾಟನ್ನು ಬಾಡಿಗೆ ಹಿಡಿದರು. ಬೆಲ್ಲಾ ತಕ್ಷಣವೆಂಬಂತೆ ನಗರ ಜೀವನದಲ್ಲಿ ಲೀನವಾದಳು. ಬಿಳಿಯ ಚಪ್ಪಲಿ, ತಿಂಡಿಯಂಗಡಿ, ಚಲನಚಿತ್ರ. ಪೇರಿ ವ್ಯಾಪಾರಿಗಳೊಡನೆ ಚೌಕಾಸಿ, ಜನಜಂಗುಳಿ, ಶಬ್ದಕೋಲಾಹಲ. ನಗರದ ಕೃತ್ರಿಮ ಜೀವನ, ನಾಲ್ಕು ಕೋಣೆಯುಳ್ಳ ಫ್ಲ್ಯಾಟಿನೊಳಗೆ ದಿಗ್ಬಂಧನ—ಎಲ್ಲವೂ ಅವಳಿಗೆ ಜನ್ಮದಾರಭ್ಯ ಪಾಠವಾದಂತೆ ತೋರುವುದು.

ಅವಳೂ ಮಿನ್ನಿಯೂ ದಿನವೆಲ್ಲ ಅಂಗಡಿ ಅಂಗಡಿ ಸುತ್ತುವುದರಲ್ಲಿ ಕಾಲಹರಣ ಮಾಡುತ್ತಿದ್ದರು. ಆ ವಾತಾವರಣದಲ್ಲಿರುವವರೆಲ್ಲರಿಗೂ ಮೈಮೇಲೆ ಧಾರಾಳ ಸಮಯವಿದ್ದ ಹಾಗಿತ್ತು. ಯಾವಾಗ ನೋಡಿದರೂ ಒಂದು ಮನೆಯ ಕಿಟಕಿಯಿಂದ ಒಂದು ತಲೆ. ಇನ್ನೊಂದು ನೆರೆಮನೆಯ ಕಿಟಕಿಯಿಂದ ಒಂದು ತಲೆ ಗಂಟೆಗಟ್ಟಲೆ ಸಲ್ಲಾಪ ನಡೆಸುವುದು ಅಲ್ಲಿನ ಸಾಮಾನ್ಯ ದೃಶ್ಯ. ದಾರಿಯಲ್ಲಿ ಪೇಟೆಯಿಂದ ಬರುವ ಹೆಂಗಸರು ಮಾತನಾಡಲು ತೊಡಗಿದರೆ ಅದಕ್ಕೆ ಅಂತ್ಯವೇ

ಇಲ್ಲ. 'ಈಗ ಅಮ್ಮನನ್ನು ಒಂದು ಮಿನಿಟು ನೋಡಿಬರುತ್ತೇನೆ' ಎಂದು ಹೊರಟ ಮಿನ್ನಿ ಗಂಟೆಗಳು ಕಳೆದರೂ ಮನೆಗೆ ಮರಳುತ್ತಿರಲಿಲ್ಲ. ತಾಯಿ ಮಗಳಿಗೆ ಯಾವಾಗಲೂ ಏನಾದರೊಂದು ಚಿಕ್ಕ ಜಗಳ ನಡೆಯುತ್ತಲೇ ಇರುವುದೂ ಇದಕ್ಕೆ ಅವಳ ಸಮಾನ ಸ್ವಭಾವವು ಕಾರಣವೆಂದೂ ಬೇರೆ ಹೇಳಬೇಕಾಗಿಲ್ಲ. ಆದರೆ ಸ್ವಲ್ಪ ಹೊತ್ತಿನ ಮೇಲೆ ಯಾವುದೋ ರಾಸಾಯನಿಕ ಕ್ರಿಯೆಯಿಂದ ಅವರ ಜಗಳವು ಸ್ನೇಹವಾಗಿ ಮಾರ್ಪಡುತಿತ್ತು.

'ಇವತ್ತು ನನಗೆ ಯಾಕೋ ಒಂದೆರಡು ಸಾಮಾನು ತರಲು ಅಂಗಡಿಗೆ ಹೋಗಬೇಕು, ಬರುತ್ತೀ ಏನಮ್ಮಾ?'

'ಅದೇನು ತರಬೇಕೋ?'

'ಪರ್ಲಿಗೆ ಒಂದೆರಡು ಅಂಗಿ ತಂದರೆ ಆಗುತಿತ್ತು.'

'ನಾನು ನಿನ್ನಷ್ಟು ದೊಡ್ಡವಳಿದ್ದಾಗ ಮಕ್ಕಳಿಗೆ ಬೇಕಾದ ಅಂಗಿ ನಾನೇ ಹೊಲಿಯುತ್ತಿದ್ದೆ, ಗೊತ್ತೆ?'

'ಹೌದು, ಹೌದು. ನೀನೇ ಹೊಲಿದದ್ದೆಂದು ಎಲ್ಲರಿಗೂ ಗೊತ್ತಾಗುತಿತ್ತು. ಇದು ಹಳ್ಳಿಯಲ್ಲ, ಚಿಕಾಗೋ. ಇಲ್ಲಿ ಮನೆ ಕೆಲಸವೇ ಬೇಕಾದಷ್ಟಿದೆ.'

'ನನಗೂ ಮನೆ ಕೆಲಸವೇನೂ ಕಡಮೆ ಇರಲಿಲ್ಲ. ಅದನ್ನು ಮಾಡಿ, ಅಡಿಗೆಯನ್ನು ತೀರಿಸಿ, ಹೊಲಿಗೆಗೆ ಕೂರುತ್ತಿದ್ದೆ. ಅಷ್ಟು ಮಾತ್ರವೇ ಏನು?........'

'ಬಿಡು ಬಿಡು ನನಗೆ ಗೊತ್ತಿಲ್ಲವೇ; ನೀನು ಎಷ್ಟು ಮನೆ ಕೆಲಸ ಮಾಡುತ್ತಾ ಇದ್ದೀಯಂತ. ಓ, ಹೋ, ಹೋ'

ಮಾತಿನ ತಿಕ್ಕಾಟ ಒಣ ಜಗಳದಲ್ಲಿ ಪರ್ಯವಸಾನವಾದರೂ ಕೆಲ ಹೊತ್ತಿನಲ್ಲಿ ಅವರು ಇಬ್ಬರೂ ಬಸ್ಸು ಹತ್ತಿ ನಗರದ ಕಡೆಗೆ ಪಯಣಿಸುವರು. ಪ್ರತಿ ಅಂಗಡಿಗೂ ಹೊಕ್ಕು ಸಾಮಾನುಗಳನ್ನು ಮುಟ್ಟಿ ನೋಡುವರು. ಮುಖ್ಯವಾಗಿ ಅಗ್ಗ ಧಾರಣೆಯ ಕೆಲವು ಅಂಗಡಿಗಳು ಅವರ ಮನಸ್ಸನ್ನು ಆಕರ್ಷಿಸುತ್ತಿದ್ದುವು. ಉಪ್ಪು ಹಾಕಿದ ಕಡಲೆಯ ಪೊಟ್ಟಣವನ್ನು ಹಿಡಿದುಕೊಂಡು ಮೆಲ್ಲುತ್ತ, ಐಸ್‌ಕ್ರೀಮ್‌ ಯನ್ನು

ಚೇಪುತ್ತ ಬೀದಿಯಲ್ಲಿ ಮೆಲುನಡೆಯಿಂದ ಸಾಗುವುದೆಂದರೆ ಅವರಿಗೆ ಸ್ವರ್ಗಸುಖವಾಗಿತ್ತು.

ಅವರು ತಡವಾಗಿಯೇ ಮನೆಗೆ ಮರಳುವರು. ಅವಸರವಾಗಿ ತಯಾರಿಸಿದ ಊಟದ ಕೊರತೆಯನ್ನು ಅಂಗಡಿಯ ತಿಂಡಿಯಿಂದ ತುಂಬಿ ಕೊಳ್ಳುವರು.

ಪಿಂಚಣಿಯಲ್ಲಿ ಆರಾಮವಾಗಿದ್ದ ರೈತ ಬೆನ್ನನ ಸುಖ ಜೀವನ ಎಂದರೆ ಇದು. ಹಾಸುಗೆಯಲ್ಲಿ ಎದ್ದು ಕೂತು, ಬೆರಳನ್ನು ಹೊದಿಕೆಯ ಮೇಲೆ ಆಡಿಸಿ ‹ಬಂತು ಇನ್ನೊಂದು ದಿನ ಎಂದು ಅವನು ಮನಸ್ಸಿನಲ್ಲಿ ಯೋಚಿಸಿದ. ಯಾವ ದಿನವೋ ಇದು? ನಿನ್ನೆ ಯಾವ ದಿನ?....... ಛೀ ಛೀ, ಬೆನ್‌ಗೆ ಭೀತಿಯುಂಟಾಯಿತು. ನಿನ್ನೆಯ ದಿನ ಯಾವು ದೆಂದು ಅವನಿಗೆ ಮರೆತಿತ್ತು. ಮೊನ್ನೆ, ಆಚೆಮೊನ್ನೆ—ಹಾಂ, ಸರಿ, ಇವತ್ತು ಗುರುವಾರ. ಗುರುವಾರವೋ ಬುಧವಾರವೋ ಯಾವ ದಿನ ವಾದರೇನು? ಅವನಿಗೆಲ್ಲವೂ ಈಗ ಒಂದೇ.

ಈ ನಗರ ಜೀವನವನ್ನು ತೊಡಗಿ ಸಾಧಾರಣ ಒಂದು ವರ್ಷವೇ ಕಳೆಯಿತು. ಆದರೂ ನಗರಕ್ಕೆ ಬೆನ್ನನನ್ನು ಜೀರ್ಣಿಸಿಕೊಳ್ಳುವುದಾಗ ಲಿಲ್ಲ. ಚಿಕಾಗೋ ನಗರದಿಂದ ಅವನು ಏನನ್ನೂ ಪಡೆಯುವಂತೆ ಇರಲಿಲ್ಲ, ಅದರ ಅಭಿವೃದ್ಧಿಗೆ ನೆರವಾಗುವಂತೆಯೂ ಇರಲಿಲ್ಲ. ವಿಚಿತ್ರ ವಾದ ಕಾಲರಿನ ಅಂಗಿಯನ್ನು ತೊಟ್ಟು ಹಾಲ್ಸ್‌ಟಡ್ ಬೀದಿ ಅಥವಾ ನಗರಾಭಿಮುಖವಾದ ಬಸ್ಸಿನಲ್ಲಿ ಹೋಗುವ ಅವನು ನಗರದ ಹಿನ್ನೆಲೆ ಯಲ್ಲಿ ಸಮಂಜಸವಾಗಿ ಬೆರೆಯುವಂತಿರಲಿಲ್ಲ. ಅವರ ಬಿಡಾರಗಳ ಗುಂಪಿಗೆ ಒಬ್ಬ ಸ್ವೀಡನ್ನಿನವನು ಕಾವಲು ಹಾಕುತ್ತಿದ್ದನು. ಅವನ ಹತ್ತಿರ ಮಾತಾಡುವುದೆಂದರೆ ಬೆನ್‌ಗೆ ಪ್ರಾಣ. ಅವನ ಹತ್ತಿರ ದೈನಂದಿನ ವಾರ್ತೆಯ ಚರ್ಚೆ ಮಾಡಲು ಆಸೆ. ಅವನೊಬ್ಬ, ಮಿನ್ನಿಯ ಲಫಂಗ ಗಂಡನೊಬ್ಬ— ಇವರನ್ನು ಬಿಟ್ಟರೆ ಬೆನ್‌ಗೆ ಅಲ್ಲಿ ಯಾರೂ ಪರಿಚಯಸ್ಥರೇ ಇಲ್ಲ. ಕಮರ್ಶಿಯಲ್ ಪೇಟೆಗೂ ಇಲ್ಲಿಗೂ ಎಂಥ ಅಂತರ? ಅಲ್ಲಿ ಬೆನ್ ಬೀದಿಗುಂಟ ಹೊರಟರೆ ಎಷ್ಟು ಜನ ಕೈಯೆತ್ತಿ

ವಂದಿಸುತ್ತಿದ್ದರು? ಎಷ್ಟು ಜನ ಅವನಿದ್ದಲ್ಲಿಗೇ ಸಲಹೆ ಕೇಳಲು ಬರುತ್ತಿದ್ದರು? ಇಲ್ಲಿ ಯಾವುದೂ ಇಲ್ಲ.

ಕೆಲವೊಮ್ಮೆ ಆ ಸ್ವೀಡಿಷ್ ಕಾವಲುಗಾರನ ದಯೆಯಿಂದ ಅವನಿರುತ್ತಿದ್ದ ಮನೆಯ ಹೊಗೆ ಚಿಮಣಿಯನ್ನು ಬೆನ್ ಒರಸಬಹುದಾಗಿತ್ತು. ಬೂದಿಯನ್ನು ಹೊರಗೆಳೆದು, ಕಲ್ಲಿದ್ದಲನ್ನೂ ಒಳಗೆ ನೂಕಿ, ಲೋಹದ ಉಪಕರಣಗಳನ್ನು ಸದ್ದುಮಾಡುತ್ತ ಕೆಲಸಕ್ಕಿಳಿದನೆಂದರೆ ಬೆನ್‌ಗೆ ಪರಮ ಸಂತೋಷವಾಗುವುದು. ಮೈಗೆಲ್ಲ ಕರಿಮಸಿಯನ್ನು ಬಳಿದುಕೊಂಡು ಬೆನ್ ಮನೆಗೆ ಹಿಂದಿರುಗುವಾಗ ಅವನ ಮನಸ್ಸು ಅರಳಿರುತಿತ್ತು.

'ನನಗೆ ಗೊತ್ತು. ಮತ್ತೆ ನೀನು ಆ ಚಿಮಣಿಗೆ ಕೈಹಾಕಲು ಹೋಗಿದ್ದೀ. ನಿನಗೆ ಕೈ ಅಷ್ಟೊ ತುರಿಸುವುದಾದರೆ ನಮ್ಮ ಮನೆಯ ಹಿಂದೆಯೇ ತರಕಾರಿ ಬೆಳೆಯಬಹುದಲ್ಲ? ಹಳ್ಳಿಯಲ್ಲಿದ್ದಾಗ ತರಕಾರಿ ಬೆಳೆಯುವ ಹೊಂಚು ಹಾಕುತ್ತಿರಲಿಲ್ಲವೇ? ಇಲ್ಲಿ ಯಾಕೆ ಮಾಡಬಾರದು?' ಎಂದು ಬೆಲ್ಲಾ ನಾನಾ ರೀತಿಯಲ್ಲಿ ಬೈಯುವುದನ್ನು ಕೇಳಲು ಅವನ ಕಿವಿ ಯಾವಾಗಲೂ ತೆರೆದಿರುತಿತ್ತು. ಆದರೆ ಅಂಥ ಸಮಯ ಅವನ ಮೋರೆ ಕೆಂಪೇರುವುದು. ಚಿಮಣಿಯ ಮಸಿಯನ್ನು ಒರಸಿದರೆ ನನ್ನ ಮರ್ಯಾದೆಗೆ ಕುಂದೇನೂ ಇಲ್ಲ. ಆದರೆ ಫಲವತ್ತಾದ ಆರ್ನೂರು ಎಕರೆ ಹೊಲದ ಮೇಲೆ ಕಾರುಭಾರು ನಡೆಸಿದವನಿಗೆ ತುಂಡು ಜಾಗದಲ್ಲಿ ತರಕಾರಿ ಬೆಳೆಯುವ ಕೆಲಸವು ಎಷ್ಟು ಹೀನಾಯವೆಂಬುದನ್ನು ಬೆಲ್ಲಾಗೆ ತಿಳಿಸಿದರೂ ಅರ್ಥವಾಗದು ಎಂದು ಆತ ಅಂಥ ಸಂದರ್ಭದಲ್ಲಿ ಸುಮ್ಮನಿರುವುದೇ ಲೇಸು ಎಂದುಕೊಳ್ಳುವ.

ಚಳಿಗಾಲದ ಅಪರಾಹ್ನ ಆತ ಚಲನ ಚಿತ್ರಮಂದಿರಗಳಿಗೆ ಭೇಟಿ ಕೊಡುವುದಿತ್ತು. ಟೋಕಿಯೋ, ರೋಮ್, ಗ್ಯಾಲ್ಲಿಪೋಲಿ ಮುಂತಾದ ನಗರಗಳೂ ಪರಸ್ಪರ ಅಪ್ರಾಮಾಣಿಕವಾಗಿ ಆಲಿಂಗಿಸಿಕೊಳ್ಳುವ ತರುಣ ತರುಣಿಯರೂ ಅವನಿಗೆ ಫರದೆಯ ಮೇಲೆ ಕಾಣಿಸುವರು. ಇದು ಯಾವುದರಲ್ಲೂ ಅವನಿಗೆ ಉತ್ಸಾಹವಿರಲಿಲ್ಲ. ಯಾರನ್ನೂ ಆತ ತಾನು ಮೊದಲಾಗಿ ಮಾತನಾಡಿಸನು. ಆದರೆ ಒಮ್ಮೆ ಅವರು ಮಾತಿಗೆ

ಹಚ್ಚಿದರೆ ಇವನು ಬಿಡಲಾರ. ಕ್ಷೌರಿಕ, ಕಿರಾಣಿಯಂಗಡಿ, ಟ್ರಾಮಿನ ಕಂಡಕ್ಟರ್, ಹಾಲಿನವನು, ಐಸ್ ತರುವವನು- ಯಾರೂ ಆಗಬಹುದು. ಇವರಲ್ಲಿ ಯಾರಿಗೂ ಗೋಧಿಯ ಧಾರಣೆಯ ವಿಷಯ ಅಭಿರುಚಿಯೇ ಇಲ್ಲದಿರುವುದನ್ನು ಕಂಡು ಬೆನ್‌ಗೆ ಆಚ್ಚರಿಯಾಗುವುದು. ಪ್ರಪಂಚದಲ್ಲಿ ಗೋಧಿಯ ಧಾರಣೆಯಷ್ಟು ಮುಖ್ಯವಾದ ವಿಷಯ ಬೇರಿಲ್ಲವೆಂಬುದು ಅವರಿಗೆ ಪ್ರಾಯಃ ಗೊತ್ತಿಲ್ಲ.

'ಈ ಯುದ್ಧವನ್ನು ಜಯಿಸುವವರು ಯಾರು ಗೊತ್ತೇನು? ನಿಮಗೆ ಗೊತ್ತಿಲ್ಲ. ಈ ವರ್ಷ ಬರುತ್ತದಲ್ಲಾ—917,000,000 ಬುಶೆಲ್ ಫಸಲು—ಗೋಧಿಯ ಫಸಲು—ಅದು ಯುದ್ಧವನ್ನು ಗೆಲ್ಲುವುದು, ನಮ್ಮನ್ನು ಗೆಲಿಸುವುದು. ಹೌದರಿ, ಗೋಧಿ ಇಲ್ಲದಿದ್ದರೆ ನಮಗೆ ಜಯವೇ ಇಲ್ಲ—ಇದು ನನ್ನ ಖಂಡತುಂಡ ಅಭಿಪ್ರಾಯ.'

'ಓಹ್ಹೊ, ಹಾಗೋ?' ಎಂದು ನಾಗರಿಕರು ತಮಾಷೆಯಾಗಿ ಗೋಣು ಹಾಕುವರು. ಆದರೇನು, ಬೆನ್‌ನ ಅಜ್ಞಾನವೇ ಪರಮ ಸತ್ಯವೆಂಬುದನ್ನು ಅವರರಿಯರು.

ಮಿನ್ನಿಗೆ ತಂದೆಯ ಕೈಯಲ್ಲಿ ಮಗುವನ್ನು ಕೊಟ್ಟು ನಗರದಲ್ಲಿ ಆಡ್ಡಾಡಲು ಹೋಗುವುದು ಒಂದು ಚಟವಾಗಿ ಬಿಟ್ಟಿದೆ ಈಗ. ಬೆನ್ ಅದಕ್ಕೂ ಒಪ್ಪಿಕೊಂಡು ಮಗುವಿನ ಹತ್ತಿರ ಆಡಲು ಆರಂಭಿಸುವ. ಪರ್ಲಿಯ ವೆಲ್ವೆಟಿನಂಥ ಕೋಮಲವಾದ ಪುಟ್ಟ ಕೈಗಳನ್ನು ತನ್ನ ಒರಟು ಕೈಯಲ್ಲಿ ಹಿಡಿದುಕೊಂಡು ಆಕೆಗೆ ಅಪ್ಪ-ಅಮ್ಮ ತಿನಿಸದ ತಿಂಡಿಗಳನ್ನು ಸಂದರ್ಭ ನೋಡಿ ತಿನಿಸುವುದೆಂದರೆ ಬೆನ್‌ಗೆ ಇಷ್ಟವಾಗಿತ್ತು. ಆ ಪುಟ್ಟ ಮಗುವಿನ ಅಂಗಿಗುಂಡಿಗಳನ್ನು ಹಾಕುವಾಗಲೂ ತೆಗೆಯುವಾಗಲೂ, ಕೋಮಲವಾದ ತುಟಿಗಳನ್ನು ಒರಸುವಾಗಲೂ ಅವನ ಗೆರಸೆ ಕೈಗಳಿಗೆ ಎಲ್ಲಿಲ್ಲದ ಚಾಕಚಕ್ಯತೆ ಬಂದು ಬಿಡುವುದು. ಡೈಕ್ ಮತ್ತೆ ಚಿಕ್ಕವನಿದ್ದಾಗಿನ ನೆನಪು ಮರುಕಳಿಸುವುದು. ಒಂದು ಸಲ ಅಜ್ಜನೂ, ಮೊಮ್ಮಗಳೂ ಲಿಂಕನ್ ಪಾರ್ಕಿನ ಮೃಗಾಲಯವನ್ನು ನೋಡಿ ಆನಂದವಾಗಿ ಮನೆಗೆ ಮರಳಿ ಎಲ್ಲರ ಕೈಯಲ್ಲಿಯೂ ಬೈಸಿಕೊಂಡರು.

ಬೆಲ್ಲಾ ತನಗೆ ಡೈಕನದೇ ಚಿಂತೆ ಎಂದು ತೋರಿಸಲು ಹಗಲೆಲ್ಲ ಪ್ರಯಾಸ ಪಡುವಳು. ಬೆನ್‌ನ ಸ್ಮೃತಿಯಲ್ಲಿ ಡೈಕ್ ಸದಾ ವಾಸವಾಡುತ್ತಿದ್ದರೂ ಆತ ಅವನ ಹೆಸರೆತ್ತುವುದೇ ಅಪೂರ್ವ. ತಾವು ನಗರಕ್ಕೆ ಬಂದ ಸಮಾಚಾರವನ್ನು ಅವನಿಗೆ ಬರೆದಿದ್ದರು; ಆದರೆ ಅವನಿಗೆ ಅದರ ಮುಖ್ಯಾರ್ಥವೇ ಆಗಿರಲಿಲ್ಲ. ಅವನು ತಂದೆ-ತಾಯಿ ಮಿನ್ನಿಯನ್ನು ನೋಡಿ ಬರಲು ನಗರಕ್ಕೆ ಹೋಗಿರಬೇಕು ಎಂದೇ ಬಗೆದಂತೆ ಅವನ ಪತ್ರಗಳಿಂದ ತೋರುವುದು. ಬೆನ್ ಡೈಕನ ಪತ್ರಗಳನ್ನು ಮೇಲಿಂದ ಮೇಲೆ ಓದಿ ಆನಂದಿಸುವನು. ಯುದ್ಧವು ಮುಗಿದ ಮೇಲೆ ಡೈಕ್ ಮನೆಗೆ ಮರಳುವನು. ಈ ನಾಗರಿಕ ಮನೆ ಅವನಿಗೆ ಹಿಡಿಸೀತೆ? ಇಲ್ಲಿನ ಕೃತ್ರಿಮ ಜೀವನ ಮೆಚ್ಚೀತೆ? ಸಾಧ್ಯವೇ ಇಲ್ಲ ಎಂದು ಬೆನ್ ತಲೆ ಅಲ್ಲಾಡಿಸುವನು. ಮುದ್ದಣ ಮುಖದ ಮವಾಲಿ ಹುಡುಗರು ಹಾಲ್ಸ್‌ಟೆಡ್ ಬೀದಿಯಲ್ಲಿ ಕಾಮಣ್ಣಗಳಂತೆ ವೇಷಮಾಡಿಕೊಂಡು, ಪದಗಳನ್ನು ವಿಚಿತ್ರವಾಗಿ ಎಳೆದು ಎಳೆದು ಮಾತನಾಡುತ್ತ ಬೀದಿಯಲ್ಲಿ ಹೋಗುವ ಹುಡುಗಿಯರನ್ನು ತಿನ್ನುವಂತೆ ನೋಡುತ್ತಿರುವ ದೃಶ್ಯವನ್ನು ಯೋಚಿಸಿ ನನ್ನ ಡೈಕ್ ಕೂಡ ಹೀಗಾದಾನೇ ಎಂದು ಬೆನ್ ಭೀತಿಯಿಂದ ಬೆಚ್ಚಿದನು.

ವ್ಯಾಯಾಮ ಅಥವಾ ದೈಹಿಕ ಪರಿಶ್ರಮವಿಲ್ಲದ್ದರಿಂದ ಬೆನ್ನನ ದೇಹದಮೇಲೆ ವಿಚಿತ್ರ ಪರಿಣಾಮವಾಯಿತು. ಸೋಮಾರಿತನದಲ್ಲಿ ದಪ್ಪವಾಗಿ ಬೆಳೆಯುವುದರ ಬದಲು ಅವನ ಚರ್ಮವು ಜೋಲುವುದಕ್ಕೆ ಆರಂಭಿಸಿತು. ಅವನು ಮೈಲು ಮೈಲು ನಡೆಯುತ್ತಿದ್ದನು, ಅದರಿಂದಲೊ ಏನೊ ಅಥವಾ ಒಬ್ಬಂಟಿಗನೆಂಬ ಭಾವ ಅವನಲ್ಲಿ ವ್ಯಾಪಿಸಿದುದರಿಂಲೋ— ಅಂತೂ ಒಬ್ಬನೇ ಒಬ್ಬನಾಗಿ ಅವನು ಬೀದಿಯನ್ನು ತುಳಿದ ದೂರ ಎಷ್ಟಾಯಿತೆಂದು ಯಾರು ಲೆಕ್ಕ ಹಿಡಿದಾರು? ಒಂದು ದಿನ ಅಕಸ್ಮಾತ್ತಾಗಿ ಅವನು ಸೌಥ್‌ವಾಟರ್ ಸ್ಟ್ರೀಟನ್ನು ನೋಡಿದನು! ನೋಡಿ ಅಲ್ಲಿಯೇ ನಿಂತನು. ನಿಂತು ಮರುಭೂಮಿಯಲ್ಲಿ ಜಲಾಶಯವನ್ನು ಕಂಡವನು ತುಟಿ ನೇವರಿಸುವಂತೆ, ಆ ದೃಶ್ಯವನ್ನು ತೃಷ್ಣಾತುರನಾಗಿಯೂ, ಕೃತಜ್ಞನಾಗಿಯೂ ಹೀರಿಕೊಂಡನು.

ಸೌಥ್‌ವಾಟರ್ ಸ್ಟ್ರೀಟ್ ಎಂದರೆ ಚಿಕಾಗೋ ನಗರದ ಅನ್ನದಾತ ನೆನ್ನಬಹುದು. ನಿಬಿಡವಾದ ಆ ಬೀದಿಯಿಂದ ನಗರದ ಲಕ್ಷಾಂತರ ನಿವಾಸಿಗಳ ಊಟದ ಸಾಮುಗ್ರಿ ಹೊರಡುವುದು. ಬೆನ್ ಈ ಬೀದಿಯ ಹೆಸರು ಕೇಳಿದ್ದ. ಆದರೆ ಆಕಸ್ಮಾತ್ತಾಗಿ ಬೀದಿಯನ್ನು ಕಂಡಾಗ ಚಿಕಾಗೋದಲ್ಲಿಯೂ ತನಗೆ ಹಿತವಾದ ಪ್ರದೇಶವೊಂದಿರುವುದು ಅವನಿಗೆ ವ್ಯಕ್ತವಾಯಿತು. ಗಾಡಿಯ ಬಾರಕೋಲನ್ನು — ನಿಜವಾದ ಬಾರಕೋಲನ್ನು — ಹಿಡಿದು ಅತ್ತಿಂದಿತ್ತ ಹೋಗುವ ಗಾಡಿಕಾರರನ್ನು ಹೊಲ ಬಿಟ್ಟ ಮೇಲೆ ಆತ ನೋಡಿದುದು ಇಲ್ಲಿಯೆ. ಅವನಿಗೆ ಮನೆಯ ನೆನಪಾಯಿತು. ಒಂದು ಪೀಪೆಯೊಳಗೆ ತುಂಬಿಸಿಟ್ಟ ಬಟಾಟೆಯ ಮೂಟೆಯಲ್ಲಿ ಮೇಲಿನ ಒಂದು ಬಟಾಟೆಯನ್ನಾರಿಸಿ ಅದರ ಮೇಲೆ ಪ್ರೀತಿಯಿಂದ ರೈತ ಬೆನ್ ಕೈಯಾಡಿಸಿದ. ಬೆರಳುಗಳು ಸಾವಧಾನವಾಗಿ ಬಟಾಟೆಯನ್ನು ಸವರಿ ಫಕ್ಕನೆ ಅದನ್ನು ಗಟ್ಟಿಯಾಗಿ ಮುಷ್ಟಿಯೊಳಗಿರಿಸಿಕೊಂಡುವು. ಆ ಮಧುರ ಸ್ಪರ್ಶದಿಂದ ಅವನ ವ್ಯಕ್ತಿತ್ವದಲ್ಲಿ ಅಡಗಿದ ಯಾವುದೋ ಹಸಿವು, ಬಿಗುವು ಕರಗಿ ಹೋಯಿತು ಇಂಥ ಸಣ್ಣ ಪುಟ್ಟ ವಿಷಯಗಳಿಗಾಗಿ ಕಾತರವಾಗಿದ್ದ ನರಮಂಡಲದ ತೃಷ್ಣೆ ಮೆಲ್ಲಮೆಲ್ಲಗೆ ಹಿಂಜರಿಯಿತು. ಮಾರ್ಕೆಟಿನ ಒಂದು ಬೀದಿಯನ್ನು ಸಂಚರಿಸಿದ ಬಳಿಕ ಬೆನ್ ಇನ್ನೊಂದರ ಬದಿಯಲ್ಲಿ ಸಾಗಿದನು. ಸೌತೆಕಾಯಿಯ ಬುಟ್ಟಿಗಳೋ, ನೀರುಳ್ಳಿಯ ಚೀಲಗಳೋ, ಸೇಬು ಹಣ್ಣಿನ ಪೀಪೆಗಳೋ — ಒಂದೇ ಎರಡೇ, ರಾಶಿ ರಾಶಿ ಬಿದ್ದಿದ್ದುವು. ಗುಂಡಾದ ಕೆಂಪು ಮೂಲಂಗಿ, ಅಚ್ಚ ಕಿತ್ತಳೆ ಬಣ್ಣದ ಕ್ಯಾರಟ್ — ಪರ್ವತಾಕಾರವಾಗಿ ಅಲ್ಲಿ ಹರಡಿದ್ದುವು. ಕಾಲಿಫ್ಲವರ್‌ಗೆ ಮದುವಣಗಿತ್ತಿಯ ಕೈಗೆ ಕೊಡುವ ಪುಷ್ಪಗುಚ್ಛದ ಸೊಬಗಿತ್ತು. ಕ್ಯಾಬೇಜ ವಜ್ರದಂತೆ ಹೊಳಹೊಳೆಯುತಿತ್ತು.

ಮತ್ತೆ ಜನರೋ? ಇಸ್ತ್ರಿ ಮಾಡಿದ ಸಮವಸ್ತ್ರಗಳನ್ನು ಧರಿಸಿದವರು ಮಾತ್ರ ಚಿಕಾಗೋದಲ್ಲಿರುವರೆಂದು ಬೆನ್ನನ ನಿಶ್ಚಿತ ಅಭಿಪ್ರಾಯವಾಗಿತ್ತು — ಇಲ್ಲಿನವರನ್ನು ನೋಡುವವರೆಗೆ. ಮಾಸಿ ಹೋದ ನೀಲ ಬಣ್ಣದ ಅಂಗಿ, ಹರಿದು ಹೋದ ಹ್ಯಾಟ್, ಕುರುಚಲು ಗಡ್ಡ, ಕೊಳ

ಕಾಗಿ ತೋರುವ ಹೊರರೂಪ-ಯಾವುದಕ್ಕೂ ಇಲ್ಲಿ ಕೊರತೆ ಇರಲಿಲ್ಲ. ಜನರ ಕಣ್ಣುಗಳಲ್ಲಿ ಮಾತ್ರ ನಿಷ್ಕಪಟ ಸರಳತೆ, ನಿರ್ವಂಚನೆಯ ಜೀವನದ ಪ್ರತಿರೂಪ ಕಣ್ಣಿರುವವರಿಗೆ ತೋರಬಹುದಾಗಿತ್ತು.

ಬೆನ್‌ವೆಸ್ಟರ್‌ವೆಲ್ಡ್ ಮಾರ್ಕೆಟ ವಾತಾವರಣದ ನೀರುಳ್ಳಿ ಬೆಳ್ಳುಳ್ಳಿಯ ಗಾಳಿಯನ್ನು ಬಲವಾಗಿ ಆಘ್ರಾಣಿಸಿದ. ಬೆಳ್ಳುಳ್ಳಿಯ ಮೂಲಕ ಅದು ಬೆಳೆದ ನೆಲದ ವಾಸನೆಯೂ ಬೆನ್ನನ ಮೂಗಿಗೆ ಬಡಿಯಿತು. ಮಣ್ಣನ್ನೆಲ್ಲ ತೊಳೆದು ತರಕಾರಿಗಳನ್ನು ಸ್ವಚ್ಛವಾಗಿರಿಸಿದ್ದರೂ ಬೆನ್ನನ ಅನುಭವಿಕ ಸೊಳ್ಳೆಗಳಿಗೆ ಅವುಗಳಿಗೆ ಜನನವಿತ್ತ ಕರಿಮಣ್ಣಿನ ವಾಸನೆ ಬರಲು ಸಾಧ್ಯವಿತ್ತು. ಬೆನ್ ಆ ಗಾಳಿಯನ್ನು ಸೇದುತ್ತಿರುವಂತೆ ಅವನ ಅಂತರಂಗದ ತುಮುಲವು ಸ್ತಬ್ಧವಾಯಿತು. ಚಿಕಾಗೋದಲ್ಲಿ ಅವನ ಬದುಕು ಸಾಮರಸ್ಯವನ್ನು ಕಂಡುದು ಇಂದು ಮಾತ್ರ.

ಬೀದಿಯಲ್ಲಿ ಬೇಕಾದಷ್ಟು ಜನಸಂದಣಿ ಇದ್ದರೂ ಹೋಗುತ್ತ ಬರುತ್ತ ಜನ ಬೆನ್ನನ ಕಡೆಗೆ ನೋಡಿ 'ಹಲೋ' ಎಂದು ನಮಸ್ಕರಿಸುವುದನ್ನು ಕಂಡು ಬೆನ್ನನ ಆತ್ಮಕ್ಕೆ ತಣ್ಣೀರೆರೆದಂತಾಯಿತು.

ಅಲ್ಲಿ ಗಂಡಸರೇ ಹೆಚ್ಚು. ಆದರೆ ಅವರ ನಡುವೆ ಜನದಟ್ಟಣೆ ವಿಪರೀತವಾಗಿದ್ದ ಒಂದು ಮೂಲೆಯಲ್ಲಿ ಒಬ್ಬ ಹೆಂಗಸು ವ್ಯಾಪಾರ ಮಾಡುತ್ತಿದ್ದಳು. ಹಲವಾರು ಜನ ತರಕಾರಿಯ ಪೆಟ್ಟಿಗೆಗಳನ್ನು ತಂದು ತೋರಿಸುವುದು ನಡೆದಿತ್ತು. ಹೆಂಗಸು ವ್ಯಾಪಾರ ಮಾಡುವುದು ಬೆನ್‌ಗೆ ಹೊಸದಾಗಿ ಕಂಡಿತು. ಕಾಲವೇ ಬದಲಾಗಿದೆ ಎಂದುಕೊಂಡ ಆತ. ಅಲ್ಲಿಯೇ ತಿರುವಿನಲ್ಲಿ ಬೇರೆ ಹಾದಿ ಹಿಡಿಯುವುದರಲ್ಲಿದ್ದನು. ಅಷ್ಟರಲ್ಲಿ ಒಬ್ಬನು 'ಹಲ್ಲೋ, ಎಮ್ಮಾ, ನಿನ್ನ ಹತ್ತಿರ ಚೌಕಾಸಿ ಮಾಡಿ ಗೆದ್ದವರು ಯಾರು? ಇಕೋ ನಾನು ಸೋತೆ, ನೀನು ಹೇಳಿದ ಹಾಗೇ ಆಗಲಿ' ಎಂದು ಕೂಗಿದನು.

ಅಷ್ಟಾಗಿಯೂ ಬೆನ್‌ಗೆ ಆಕೆಯ ಗುರುತು ಹಿಡಿಯುವುದಾಗಲಿಲ್ಲ. ಉದ್ದವಾಗಿ ಬೆಳೆದ, ಬಿಳಿಗೂದಲಿನ ಈ ಹೆಣ್ಣು ಅಂಗಡಿಗಾರ್ತಿ ಹಿಂದಿನ ಕಾಲದ ಎಮ್ಮಾ ಬೈರ್ನ್ಸೆಂದು ಯಾರೂ ಕಂಡುಹಿಡಿಯುವಂತಿರಲಿಲ್ಲ. ಆದರೂ ಕುತೂಹಲದಿಂದ ಅವನು ಬೀದಿ ತಿರುಗದೆ ಅಲ್ಲೇ ನಿಂತನು.

ಆಕೆ ಕಣ್ಣೆತ್ತಿ ಅವನ ಕಡೆಗೆ ನೋಡಿದಳು. ಆ ಕುಶಾಗ್ರ ಕಣ್ಣುಗಳನ್ನು ಬೆನ್ ಮರೆಯಲು ಸಾಧ್ಯವೇ ಇರಲಿಲ್ಲ. ಅವನ ಮನಸ್ಸಿನಲ್ಲಿ ಮೂಡಿದ ಆ ನೇತ್ರದ ಚಿತ್ರ ಒಂದಿಷ್ಟೂ ಮಸುಳಿರಲಿಲ್ಲ. ಆತ ಯಂತ್ರವತ್ ನೇರವಾಗಿ ಅವಳಿದ್ದಲ್ಲಿಗೆ ಹೋಗಿ 'ನೀನು ಎಮ್ಮಾ ಬೈರ್ಸ್ ಅಲ್ಲವೆ?' ಎಂದ.

ಅವಳಿಗೆ ಮೊದಲು ಅರ್ಥವಾಗಲಿಲ್ಲ. ಯಾಕೆಂದರೆ ಅವಳು ಕಂಡ ತರುಣನೆಲ್ಲಿ, ಈ ಜೋಲುಮೋರೆಯ ಮುದಿಯನೆಲ್ಲಿ? ಆದರೆ— ಸರಿ—'ಎಲಾ, ಬೆನ್!' ಎಂದು ಆಕೆ ಮರುಕ್ಷಣವೇ ಗುರುತುಹಿಡಿದಳು. ಅವಳ ಸ್ವರದಲ್ಲಿ ಕನಿಕರವಿತ್ತು. ಆಕೆ ತನ್ನ ವಿಶ್ವಾಸದ ಹಸ್ತಗಳಿಂದ ಅವನ ಕೈಯನ್ನು ಗಟ್ಟಿಯಾಗಿ ಅಮುಕಿದಳು. ಬೆನ್‌ಗೆ ಆ ಕುಲುಕಾಟ ಅರ್ಥಪೂರ್ಣವಾಗಿತ್ತು.

'ಇದೇನು ಎಮ್ಮಾ, ನಿನ್ನ ಕಾರುಭಾರು?' ಎಂದು ಬೆನ್ ಮನಸ್ಸಿನ ಗೊಂದಲವನ್ನಡಗಿಸಿ ಸಹಜ ಸಂಭಾಷಣೆಯನ್ನು ಆರಂಭಿಸುವ ಯತ್ನ ಮಾಡಿದನು.

ಆಕೆ ಪಕ್ಕದ ಮನುಷ್ಯನ ಕಡೆಗೆ ತಿರುಗಿ 'ಜೋ, ಹೇಳಲ್ಲಾ ನನ್ನ ಕಾರುಭಾರು ಏನೆಂತ?' ಜೋ ಬಾಲ ಅಲ್ಲಾಡಿಸುವ ನಾಯಿಯಂತೆ 'ಅಂಥದೇನು ಮಹಾ? ಎಲ್ಲಾ ಗಿರಾಕಿಗಳಿಗೂ ಚಳ್ಳೆ ಹಣ್ಣು ತಿನ್ನಿಸಿ ಬರೇ ದುಡ್ಡು ಗಂಟುಹಾಕುವುದು.....' ಎಂದು ಹೇಳಿದನು. ಅವಳು ಅವನಿಗೆ 'ಸಾಕು, ತೆಗೆ, ನಾನೇ ಹೇಳುತ್ತೇನೆ' ಎಂದು ಹೇಳಿ ಬೆನ್‌ಕಡೆ ತಿರುಗಿ 'ನೀನು ಹೇಗೆ ಬಂದಿಯಾ ಇಲ್ಲಿ?' ಎಂದು ಕೇಳಿದಳು. ಬೆನ್ ಕೈಯಿಂದ ಒಂದು ಸಾರಿ ಗಡ್ಡವನ್ನು ನೇವರಿಸಿ 'ನಾನು? ಹೇಗೆ ಬಂದೆ ಎಂದಿಯಾ? ಹೀಗೆ....ಹೀಗೇನು ನಾವೀಗ ಇರುವುದೇ ಒಂದು ರೀತಿಯಾಗಿ—ಇರುವುದೇ—ಇಲ್ಲಿ ಎನ್ನಬಹುದು' ಎಂದನು.

ಆಕೆ ಅವನನ್ನು ತೀಕ್ಷ್ಣವಾಗಿ ನೋಡಿ 'ಹೊಲ ಬಿಟ್ಟು ಬಿಟ್ಟಿಯಾ?' ಎಂದು ಕೇಳಿ 'ಸ್ವಲ್ಪ ತಡೆ' ಎಂದು ವ್ಯಾಪಾರವನ್ನು ಚೊಕ್ಕವಾಗಿ ಮುಗಿಸಿ ಮತ್ತೆ ಬೆನ್ ಬಳಿ ಬಂದಳು. ಅವಳ ಪ್ರಶ್ನೆ ಬೆನ್ನನನ್ನೂ ಬೆಕ್ಕಸ ಬೆರಗಾಗಿ ಮಾಡಿತು. 'ನಿನ್ನ ಊಟವಾಯಿತೆ?' ಎಂದಾಕೆ ಕೇಳಿದಳು.

'ಇಲ್ಲ, ಇಲ್ಲ....ನನಗೆ' ಎಂದು ಬೆನ್ ಏನೋ ತೊದಲುವ ಯತ್ನ ಮಾಡಿದ.

'ನಾನು ಏಳು ಗಂಟೆಗೆ ಇಲ್ಲಿಗೆ ಬಂದೆ. ಈ ವರೆಗೆ ಏನೂ ಬಾಯಿಗೆ ಹಾಕಿಲ್ಲ. ಬಾ, ಆ ಗ್ರೀಕ್ ರೆಸ್ಟೋರೆಂಟಿಗೆ ಹೋಗಿ ಕಾಫಿ—ತಿಂಡಿ ತಿಂದು ಬರೋಣ' ಎಂದಳು.

ಗ್ರೀಕ್ ರೆಸ್ಟೋರೆಂಟಿನ ಚಿಕ್ಕ, ಬೋಳು ಮೇಜಿನ ಇದಿರು ಅವರು ಕೂತರು. ಆಕೆ ಅವನನ್ನು ಪರಿಶೀಲಿಸಿದಳು. ಬೆನ್‌ಗೆ ಸಾವಧಾನವಾಗಿ ತನ್ನ ವಯಸ್ಸು ಜಾರಿದಂತೆ ಅನಿಸಿತು. ಈಗಾತ ತರುಣ ಬೆನ್, ಎಮ್ಮಾ ಬೈರ್ಸನ್ನು ಆಡ್ಡಾಡಲು ಒಯ್ಯುವ ಧೀರೋದಾತ್ತ ನಾಯಕ. ಆಕೆ ಮೆಲ್ಲನೆ ಅವನಿಗೆ ಸವಾಲು ಹಾಕಿದಳು. ಬೆನ್ ಮರಳಿ ಚೇತರಿಸಿದ. 'ಇಲ್ಲ, ನಿನ್ನ ಕತೆ ಮೊದಲು ಹೇಳು' ಎಂದ. ಆಕೆ ಚುಟುಕಿನಲ್ಲಿ ಮುಗಿಸಿದಳು. ವ್ಯಾಪಾರ ಚೆನ್ನಾಗಿದೆ—ಎಂದಿನಿಂದಲೂ. ಐಶ್ವರ್ಯಕ್ಕೆ ಕಡಮೆಯಿಲ್ಲ. ಊರಿನ ಎರಡು ದೊಡ್ಡ ಹೋಟೆಲುಗಳಿಗೆ ಅವಳೇ ತರಕಾರಿ ಸರಬರಾಜು ವಹಿಸಿದ್ದಳು. 'ಆದರೆ ಎಮ್ಮಾ ಇಷ್ಟು ದಿನವೂ, ಇಷ್ಟು ವಯಸ್ಸಾದರೂ—ಕ್ಷಮಿಸು ನಿನಗೆ ವಯಸ್ಸಾದ್ದೇ ತಿಳಿಯುವುದಿಲ್ಲವೆನ್ನು—ಇನ್ನೂ ನೀನು ಒದ್ದಾಡುತ್ತಿರುವಿಯಲ್ಲಾ ಈ ವ್ಯಾಪಾರವನ್ನು ವೈಗೆ ಹಚ್ಚಿಕೊಂಡು' ಎಂದು ಬೆನ್ ಆಕೆಯನ್ನು ಪ್ರಶಂಸಿಸಿದ. 'ಮತ್ತೇನು ಮಾಡಲಿ? ಈ ವೃತ್ತಿ ನನಗೆ ಪ್ರಿಯವಾದ್ದರಿಂದ ತಾನೇ ನಾನು ಈ ರೀತಿ ದುಡಿಯುತ್ತಿದ್ದೇನೆ? ಸಾಯುವ ವರೆಗೂ ಹೀಗೇ ದುಡಿಯಬೇಕೆಂದು ನನಗೆ ಆಸೆ. ತುಕ್ಕು ಹಿಡಿದು ನಾನು ಸಾಯಲೊಲ್ಲೆ, ತೇದು ತೇದು ಮುಗಿದರೆ ಕಾಳಜಿ ಇಲ್ಲ. ಮಕ್ಕಳೆಲ್ಲಾ ಇನ್ನೇಕೆ ನಿನಗೆ ವ್ಯಾಪಾರ ಎನ್ನುತ್ತಾರೆ. ಆದರೆ ನಾನು ಬಿಡಲಾರೆ' ಎಂದಳು. ಬೆನ್ನನ ಕಣ್ಣಲ್ಲಿ ಒಂದು ಮೂಕ ಪ್ರಶ್ನೆ ಸುಳಿದುದನ್ನು ಕಂಡು 'ಗಂಡ ತೀರಿ ಇಪ್ಪತ್ತು ವರ್ಷವಾಯಿತು. ಮಕ್ಕಳು ಚಿಕ್ಕವರಾಗಿದ್ದಾಗ ಇದರಿಂದ ಸ್ವಲ್ಪ ಒದ್ದಾಟವೇ ಆಯಿತು. ಆದರೆ ತರಕಾರಿ ವ್ಯಾಪಾರ ನನಗೆ ಸ್ವಾಭಾವಿಕವಾಗಿ ಬಂದಿರುವ ವ್ಯವಸಾಯ. ಅದನ್ನೇ ಮುಂದುವರಿಸಿದೆ'. ಎಂದಳು.

ಬೆನ್ನನ ಕತೆ ತಡವರಿಸಿ ತಡವರಿಸಿ ಹೊರಗೆ ಬಂತು. ಹೊಲ ಮತ್ತು ಡೈಕನ ವಿಚಾರ ಹೇಳುವಾಗ ಅವನ ಸ್ವರದಲ್ಲಿ ವಿಶ್ವಾಸ, ಗರ್ವ ಇದ್ದುವು. ಬೆಲ್ಲಾ, ಮಿನ್ನಿ ಮತ್ತು ತೀರಿ ಹೋದ ಮಗನ ವಿಚಾರ ಮಾತನಾಡುವಾಗ ನಿರುತ್ಸಾಹವು ಎದ್ದು ತೋರುತ್ತಿತ್ತು. ಅಂತೂ ಅವನು ತನ್ನ ಆತ್ಮಚರಿತ್ರೆ ಮುಗಿಸಿದಾಗ ಎಮ್ಮಾ 'ಬೆನ್, ನಾನೊಂದು ಹೇಳುವುದನ್ನು ಕೇಳು. ಸೀದಾ ಹೊಲಕ್ಕೆ ತಿರುಗು' ಎಂದು ದೃಢವಾಗಿ ನುಡಿದಳು. 'ಅದು ಹೇಗಾದೀತು? ....ಅವಳು........ಸಾಧ್ಯವಿಲ್ಲ' ಎಂದ ಬೆನ್. ಆಕೆ ಮತ್ತೂ ಬಿಡಲಿಲ್ಲ. 'ಹೋಗು, ಹೊಲಕ್ಕೆ ಮರಳು' ಎಂದಳು. 'ಸಾಧ್ಯವೇ ಇಲ್ಲ' ಎಂದ ಬೆನ್. ಅದಕ್ಕೆ ಆಕೆ 'ನೋಡು ಇಲ್ಲಿದ್ದರೆ ನೀನು ಬೇಗನೆ ಸಾಯುತ್ತೀ. ನಿನ್ನನ್ನು ನೋಡಿದರೆ ಹಾಗ ನಿಸುತ್ತದೆ. ಇಲ್ಲಿಯ ಗಾಳಿಯಲ್ಲಿ ನಿನ್ನ ಜೀವ ತಿನ್ನುವ ವಿಷ ಇದೆ. ಟಾಕ್ಸಿನ್ ಎಂದರೇನು ಗೊತ್ತೇ ನಿನಗೆ? ವಿಷ. ನೀನು ಇಲ್ಲಿರುವುದೂ ವಿಷ ತೆಗೆದು ಕೊಳ್ಳುವುದೂ ಒಂದೆ....ನಿನ್ನ ದೇಹದಲ್ಲಿ ಇನ್ನೂ ಇಪ್ಪತ್ತು ವರ್ಷ ದುಡಿಯುವಷ್ಟು ತ್ರಾಣವಿದೆ, ನಾನು ಬಲ್ಲೆ. ನಿನ್ನ ಗೋಧಿ, ಹಂದಿ, ಸೇಬು ಇವೇ ನಿನಗೆ ಹಿತ. ಗಂಡಸಿಗೆ ಅದಕ್ಕಿಂತ ದೊಡ್ಡ ಕೆಲಸ ಪ್ರಪಂಚದಲ್ಲೇ ಬೇರೆ ಇಲ್ಲ. ನಡೆ ಹೊಲಕ್ಕೆ' ಎಂದಳು.

ಅವಳ ಉತ್ತೇಜಕ ವ್ಯಕ್ತಿತ್ವದ ಸಾಮೀಪ್ಯದಲ್ಲಿ ಬೆನ್‌ನ ಉತ್ಸಾಹವು ಒಂದು ಕ್ಷಣ ಪುಟನೆಗೆಯಿತು. ಆದರೆ ಪಾಪ, ಮರುಕ್ಷಣ ಮಾಯವಾಯಿತು. ಬೆನ್ ಎದ್ದು ಹೊರಡುವಾಗ ಅವನ ಬೆನ್ನು ಬಗ್ಗಿತ್ತು, ಸ್ನಾಯು ಶಿಥಿಲವಾಗಿತ್ತು: ಬಾಗಿಲ ಬಳಿ ಹಿಂದೆ ತಿರುಗಿ ನೋಡುವಾಗ ಅವನಿಗೆ ಒಂದಿಷ್ಟು ನಾಚಿಕೆಯೂ ಆಯಿತು. ಆತ 'ಎಮ್ಮಾ, ನಿನ್ನನ್ನು ನೋಡಿದರೆ ಆದದ್ದೆಲ್ಲಾ ಒಳಿತೇ ಆಯಿತೆಂದು ಎನಿಸುತ್ತದೆ. ಇದನ್ನು ನಿನಗೆ ಹೇಳಬೇಕೆಂದು ಯಾವಾಗಿಂದಲೋ ಎಣಿಸುತ್ತಿದ್ದೆ. ಆದರೆ....' ಎಂದು ತೊದಲ್ನುಡಿದ. ಅದಕ್ಕೆ ಉತ್ತರವಾಗಿ ಆಕೆ ಸಮಾಧಾನದಿಂದ, 'ಇದರಲ್ಲಿ ನಿನ್ನ ದೋಷವೇನೂ ಇಲ್ಲ, ಬೆನ್. ನನಗೆ ಇದು ಅರ್ಥವಾಗಲು ಸ್ವಲ್ಪ ಸಮಯ ಹಿಡಿಯಿತು. ಆದರೂ ನಿನ್ನ ಮೇಲೆ ನನಗೆ ಕೋಪವಿಲ್ಲ. ಮಿಂಚಿಹೋದ ಕಾರ್ಯಕ್ಕೆ ಚಿಂತಿ

ಸುವುದೇಕೆ? ಆದರೆ ಈಗ ಮಾತ್ರ ನೀನು ನನ್ನ ಮಾತನ್ನು ಕೇಳಬೇಕು. ಹಳ್ಳಿಗೆ ಹಿಂದಿರುಗಿ ನಿನ್ನ ಕೆಲಸ ನೀನು ನೋಡಬೇಕು ಗಂಡಸಿಗೆ ಬೇಸಾಯ ಕಸುಬಿಗಿಂತ ದೊಡ್ಡದಿನ್ನಾವುದು? ಅದು ನಿನ್ನ ಕರ್ತವ್ಯ' ಎಂದಳು.

ಬೆನ್‌ಗೆ ಅರಿಯದೆಯೇ ಅವನ ಎದೆಯುಬ್ಬಿತು. ಉಬ್ಬಿದಷ್ಟೇ ವೇಗದಲ್ಲಿ ತಗ್ಗಿ ಹೋಯಿತು.

ಮನೆಗೆ ಹಿಂದಿರುಗುವಾಗ ಬೆನ್‌ಗೆ ದಾರಿ ತಪ್ಪಿ ಹೋಯಿತು. ಅಲ್ಲಿಂದ ಮನೆಯ ವರೆಗೂ ಅವನು ದಾರಿ ಕೇಳುತ್ತ ಕೇಳುತ್ತ ನಡೆದೇ ಬಿಟ್ಟ. ಅಂತೂ ಕಟ್ಟಕೊನೆಗೆ ಏಳು ಗಂಟೆ ಸಂಜೆಗೆ ಅವನು ತನ್ನ ಬಡಾವಣೆಗೆ ತಲುಪಿದನು ಮನೆ ಸಮೀಪಿಸಿದಂತೆ ಬೈಯ್ಗಳಿಗೆ ಕಿವಿಯನ್ನು ಸಿದ್ಧ ಮಾಡಿಟ್ಟನು. ಆದರೆ ಇದೇನು ಮನೆಯೊಳಗಿಂದ ಗಟ್ಟಿಯಾಗಿ ಸ್ವರ ಕೇಳಿಸುತ್ತಿದೆ. ಮಿನ್ನಿ, ಅವಳ ಗಂಡ ಗಸ್, ಬೆಲ್ಲಾ ಎಲ್ಲರ ಸ್ವರವೂ ಕೇಳುವುದು; ಅದರ ನಡುವೆ ಇನ್ನೊಂದು ಸ್ವರ ಯಾರದು? ಅದು ಯಾರದು?...., ಯಾರದೆಂದು ಅವನಿಗೆ ಖಚಿತವಾದ ಮೇಲೆ ಬಾಗಿಲಿನ ಕೀಲಿಯನ್ನು ತಿರುಗಿಸುವಾಗ ಕೈ ನಡುಗಿತು. ಅಂತೂ ಕೊನೆಗೆ ಕೀಲಿ ತಿರುಗಿಸಿ ಅವನು ಕೋಣೆಯೊಳಗೆ ಕಾಲಿಟ್ಟನು. ಹೌದು, ಡೈಕ್ ಬಂದಿದ್ದ.

ಆತ ಆಗಲೇ ಬಂದು ಬಹಳ ಹೊತ್ತಾಗಿರಲಾರದು. ಯುದ್ಧರಂಗಕ್ಕೆ ಹೋಗಿ ಅವನ ಚರ್ಮ ಕಂದು ಬಣ್ಣಕ್ಕೆ ತಿರುಗಿತ್ತು. ಅವನ ತಲೆಯಲ್ಲಿ ಉಕ್ಕಿನ ಕುಲಾವಿ, ಸೊಂಟದಲ್ಲಿ ಮಿಲಿಟರಿ ಚೀಲ ಎಲ್ಲ ಹಾಗೆಯೇ ಇದ್ದುವು. ಅವನು ಸ್ವಲ್ಪ ಬೆಳೆದೂ ಇದ್ದ. ಒಂದರೆಕ್ಷಣದೊಳಗೆ ಬೆನ್‌ನ ಹೆಗಲಮೇಲೆ ಮಗನ ಕೈ ಸುತ್ತಿಕೊಂಡಿತು 'ಪಪ್ಪಾ' ಎಂದ ಆತ.

ಆ ಕೋಣೆಯಲ್ಲಿ ಬೆನ್ ಮತ್ತು ಡೈಕ್ ಮಾತ್ರ ಮೌನವಾಗಿದ್ದರು. ಉಳಿದವರ ಗದ್ದಲವೇ ಗದ್ದಲ; ಪ್ರಶ್ನೆಗಳ ಸುರಿಮಳೆಯೇ ಸುರಿಮಳೆ.

'ಅವನು ಬಂದದ್ದು—ಎಲ್ಲಿಂದ ಬಂದದ್ದೋ ಡೈಕ್?............ ಹಾಂ, ಹಾಂ, ಹೊಬೊಕೆನ್‌ನಿಂದ ಬಂದದ್ದಂತೆ. ನಿನ್ನೆ ಅಲ್ಲಿದ್ದು ಇವತ್ತು ಇಲ್ಲಿರಬೇಕಾದರೆ........ನಮ್ಮ ಹಳ್ಳಿಗೆ ತಂತಿ ಕಳಿಸಿದನಂತೆ. ಯಾಕೋ

ಡೈಕ್? ನನ್ನ ಪತ್ರ ಸಿಗಲಿಲ್ಲವೆ? ನಾವು ಇಲ್ಲಿಗೆ ಬಂದ ವಿಷಯ ಬರೆದಿದ್ದೆವಲ್ಲಾ? ಇರಲಿ. ಇನ್ನು ಅವನಿಗೆ ಇರುವುದು ಒಂದೇ ಗಂಟೆ. ಕ್ಯಾಂಪ್ ಗ್ರ್ಯಾಂಟಿಗೆ ಹೋಗಿ ಅಲ್ಲಿ ಬರ್ಖಾಸ್ತು ಮಾಡಿಸಿ ಕೊಂಡು ಆ ಮೇಲೆ ಬರುತ್ತಾನಂತೆ. ಥಕ್ಕನೆ ಮಿನ್ನಿಯ ಮನೆಗೆ ಬಂದಾಗ ಅವನಿಗೆ ನಾವು ಇಲ್ಲಿರುವುದು ಗೊತ್ತಾಯಿತು' ಎಂದು ಅವರು ಒಬ್ಬೊಬ್ಬರು ಒಂದೊಂದು ಹೇಳುತ್ತಿದ್ದರು.

ಡೈಕ್ ಮತ್ತು ಅವನ ತಂದೆ ಮೂಕರು, ಈ ಗದ್ದಲದ ನಡುವೆ. ಕಡೆಗೆ ಡೈಕೇ ಮಾತಿಗೆ ಆರಂಭಿಸಿದ. ಅವನ ಮಾತುಗಾರಿಕೆ ಬಹಳ ತಿದ್ದಿದ ಹಾಗೆ ಕಾಣುತ್ತಿತ್ತು. 'ಪಪ್ಪಾ, ಫ್ರೆಂಚ ಜನ ಬೇಸಾಯ ಮಾಡುವುದನ್ನು ನೀನು ನೋಡಿದರೆ ನಿನಗೆ ನಗು ಬಂದೀತು. ಅವರಿಗೆ ಜಮೀನೆಂದರೆ ಒಬ್ಬನಿಗೆ ಒಂದೆಕರೆ. ಅದರಲ್ಲಿ ಒಂದಿಂಚು ಜಾಗವನ್ನೂ ಅವರು ಕೃಷಿ ಮಾಡದೆ ಬಿಡುವುದಿಲ್ಲ; ಮರದ ಪೊಟರೆಯೊಳಗೆ ಧೂಳು ಕೂತರೆ ಅಲ್ಲೇ ಏನಾದರೂ ಕೃಷಿ ಮಾಡುವಷ್ಟು ಹುಷಾರಿ ಜನ ಅವರು. ನಾವು ಇಲ್ಲಿ ಹಾಳು ಬಿಟ್ಟ ಭೂಮಿಯನ್ನು ಒಂದು ವರ್ಷ ಕೃಷಿ ಮಾಡಿ ದರೆ ಅವರ ದೇಶಕ್ಕೆ ನೂರು ವರ್ಷ ಆಹಾರ ಒದಗಿಸಬಹುದು. ಮತ್ತೆ ಅವರ ಬೇಸಾಯದ ಸಲಕರಣೆಗಳನ್ನು ನೋಡಬೇಕು. ಎಲ್ಲಾ ಯಾವುದೋ ಪ್ರಾಚೀನ ಕಾಲದವು. ನಮ್ಮ ಟ್ರ್ಯಾಕ್ಟರ್ ನೋಡಿದರೆ ಅವರು ಜರ್ಮನರು ಮತ್ತೆ ಬಂದರೆಂದು ಊರು ಬಿಟ್ಟು ಓಡಿಯಾರು. ಎಂಭತ್ತು ವರ್ಷದ ಹಣ್ಣು ಹಣ್ಣು ಮುದುಕಿಯರು ಮುದುಕರು ಎಲ್ಲರೂ ಹೊಲದಲ್ಲಿ ದುಡಿಯುತ್ತಾರೆ, ಗೊತ್ತೇನು?' ಎಂದು ಡೈಕ್ ಉತ್ಸಾಹದಿಂದ ವಿವರಿಸುತ್ತಿದ್ದನು.

'ಹೊಲದ ವಿಷಯ ಮರೆತು ಬಿಡು ಇನ್ನು' ಎಂದು ಮಿನ್ನಿ ತಮ್ಮನನ್ನು ಎಚ್ಚರಿಸಿದಳು. ಅವಳ ಗಂಡ, 'ನಿನಗೆ ಇಲ್ಲಿ ದಿನಕ್ಕೆ ನಾಲ್ಕುವರೆ ಡಾಲರಿನ ಕೆಲಸ ತೆಗೆಸಿ ಕೊಡುತ್ತೇನೆ' ಎಂದು ಡೈಕನಿಗೆ ಆಶ್ವಾಸನೆ ಇತ್ತನು. ಡೈಕನಿಗೆ ಇದಾವುದೂ ಅರ್ಥವಾಗಲಿಲ್ಲ. 'ಕೆಲಸ, ಎಂಥ ಕೆಲಸ? ಇದೇನು ನಿಮ್ಮ ತಮಾಷೆ?' ಎಂದು ಆತ ಗದರಿಸಿದ. ಆಗ ಜೆಲ್ಲಾ 'ಹೌದು ಮಗೂ, ನಿಮ್ಮಪ್ಪ ಈಗ ಹಳ್ಳಿಯನ್ನು ಬಿಟ್ಟಿದ್ದಾರೆ. ನಮ್ಮ ಬಿಡಾರವೇ ಈಗ ಇಲ್ಲಿ' ಎಂದಳು.

ಡೈಕ್ ತಂದೆಯ ಕಡೆಗೆ ತಿರುಗಿದಾಗ ಅವನ ಮುಖವು ನಿಸ್ತೇಜವಾಗಿದ್ದಿತು. ಅದನ್ನು ನೋಡಿದ ಕೂಡಲೇ ಬೆನ್‌ಗೆ ತಾಯಿಯ ಪೆಟ್ಟು ತಿಂದ ಮಗು ಪರ್ಲಿಯ ನೆನಪಾಯಿತು.

ಅವನು ಗದ್ಗದ ಕಂಠದಿಂದ ನುಡಿದನು 'ನಾನು ಹೊಲವನ್ನು ನಂಬಿಕೊಂಡು ಬಂದೆ. ಎಷ್ಟೋ ದಿವಸ ಅದರ ಕಲ್ಪನೆಯಲ್ಲಿ ಸುಖಪಟ್ಟಿದ್ದೇನೆ. ಛೀ—ಈ ನಗರದ ಬೀದಿಗಳೋ ಅವುಗಳ ಚಂದವೋ? ನಾನಂತೂ ಹಳ್ಳಿಗೇ ಹೋಗುವವನು ಹೋಗಿಯೇ ಬಿಡುತ್ತೇನೆ.'

ಬೆನ್‌ವೆಸ್ಟರ್‌ವೆಲ್ಡ್ ನಡುವೆ ಬಾಯಿ ತೆರೆದನು. ಹೊಸ ಬೆನ್‌ವೆಸ್ಟರ್‌ವೆಲ್ಡ್—ಅದೇ ಹಳೆಗಾಲದ ಬೆನ್‌ವೆಸ್ಟರ್‌ವೆಲ್ಡ್. ಆರ್‍ನೂರು ಎಕರೆ ಜಮೀನಿನ ಸಾಮ್ರಾಜ್ಯವನ್ನು ಆಳುವ ರೈತ ಬೆನ್‌ವೆಸ್ಟರ್‌ವೆಲ್ಡ್-ಮಗನ ಮಾತಿನ ನಡುವೆ ಬಾಯಿ ಹಾಕಿದನು.

'ಸರಿ, ನೀನು ಹೇಳಿದ ಹಾಗೇ ಆಗಲಿ, ಡೈಕ್. ನಾವಿಬ್ಬರೂ ಹೋಗೋಣ. ನನಗೆ ಇನ್ನೂ ಇಪ್ಪತ್ತು ವರ್ಷ ದುಡಿಯುವಷ್ಟು ತ್ರಾಣವಿದೆ. ಹೋಗೋಣ, ನಿನ್ನ ಜತೆಗೆ ನಾನೂ ಬಂದೆ' ಎಂದು ನಿರ್ಧಾರವಾಗಿ ನುಡಿದನು.

ಬೆಲ್ಲಾ 'ಇಲ್ಲಾ, ನಾವು ಹೋಗುವುದಿಲ್ಲ, ನಾನು ಬರುವುದಿಲ್ಲ, ನಾವು ಹೋಗುವುದಿಲ್ಲ, ಹೋಗುವುದಿಲ್ಲಾ ಹೋಗುವುದಿಲ್ಲ, ಎಂದು ಕರ್ಕಶವಾಗಿ ಕೂಗಿದಳು.

ಆದರೆ ಬೆನ್‌ವೆಸ್ಟರ್‌ವೆಲ್ಡ್ ಈಗ ಮರಳಿ ತನ್ನ ಮನೆಯ ಯಜಮಾನನಾಗಿದ್ದನು. 'ಬೆಲ್ಲಾ ನೀನೂ ನಮ್ಮ ಸಂಗಡ ಬರುತ್ತೀ, ಖಂಡಿತ. ಇನ್ನು ಎಲ್ಲವೂ ನಾನು ಹೇಳಿದ ಹಾಗೆ ನಡೆಯಬೇಕು. ಹೊಲದಲ್ಲಿಯೂ ನೀನು ನನ್ನ ಮಾತಿನ ಗೆರೆ ದಾಟಲು ಬಿಡಲಾರೆ, ತಿಳಿಯಿತೆ? ನಿನಗೆ ಇಷ್ಟವಿಲ್ಲದಿದ್ದರೆ ಹೇಳು, ನಾನು ಹೇಳುವಂತೆ ಕೇಳುವ ಜನರೂ ಈ ಪ್ರಪಂಚದಲ್ಲಿದ್ದಾರೆಂಬುದನ್ನು ಬೇಕಾದರೆ ನಿನಗೆ ತೋರಿಸಿಕೊಡಬಲ್ಲೆ. ನಾನು, ಡೈಕ್ ನಮ್ಮ ಗೋಧಿ, ಹಂದಿ, ಮತ್ತು ಸೇಬಿನ ವ್ಯವಸಾಯಕ್ಕೆ ಹೊರಟಾಯಿತು ಹಾದಮ್ಮಾ, ಮನುಷ್ಯನಿಗೆ ಬೇಸಾಯಕ್ಕಿಂತ ದೊಡ್ಡ ಕಸಬೇ ಪ್ರಪಂಚದಲ್ಲಿಲ್ಲ.' ಎಂದು ಬೆನ್ ಸಾವಕಾಶವಾಗಿ, ನಿರ್ದಾಕ್ಷಿಣ್ಯವಾಗಿ ನುಡಿದನು.

ನ್ಯೂ-ಇಂಗ್ಲೆಂಡ್ ಸನ್ಯಾಸಿನಿ

ಮೇರಿ ಇ. ವಿಲ್‌ಕಿನ್ಸ್ ಫ್ರೀ ಮ್ಯಾನ್

ಹಾರ್ಪರ್ ಬ್ರದರ್ಸ ಅವರ ಅಪ್ಪಣೆಯಿಂದ ಪುನರ್ಮುದ್ರಿತ

ಮೇರಿ ಇ. ವಿಲ್‌ಕಿನ್ಸ್ ಮೆಸ್ಸಚುಸೆಟ್ಸ್ ರಾಜ್ಯದ ರಾಂಡೊಲ್ಫ್‌ನಲ್ಲಿ 1852ರಲ್ಲಿ ಜನಿಸಿದರು 1902ರಲ್ಲಿ ಡಾ| ಸಿ. ಎಮ್. ಫ್ರೀಮ್ಯಾನ್ ಅವರನ್ನು ಮದುವೆಯಾದ ಮೇಲೆ ನ್ಯೂಜೆರ್ಸಿ ಅವರ ವಾಸ ಸ್ಥಳವಾಯಿತು.

ನ್ಯೂ ಇಂಗ್ಲೆಂಡಿನ ಸಾಮಾನ್ಯ ಜನರ ಜೀವನವನ್ನು ಚಿತ್ರಿಸುವುದರಲ್ಲಿ ನಿಷ್ಣಾತೆಯೆಂದು ಈಕೆ ಹೆಸರಾಗಿದ್ದಾರೆ.

1883ರಲ್ಲಿ ಈಕೆಯ ತಂದೆ ಮೃತರಾದ ಮೇಲೆ ಸಣ್ಣ ಕತೆಗಳನ್ನು ಬರೆದು ಸಂಪಾದನೆ ಮಾಡುವ ಪ್ರಸಂಗ ಒದಗಿತು. ಆದರೂ 1891ರಲ್ಲಿ 'ನ್ಯೂ ಇಂಗ್ಲೆಂಡ್ ಮಾದ್ರಿ ಮತ್ತು ಇತರ ಕಥೆಗಳು' ಪ್ರಕಟವಾದ ಮೇಲೆ ಮಾತ್ರವೇ ಆಕೆಯ ಬರವಣಿಗೆಗೆ ವಿಮರ್ಶಕರ ಮಾನ್ಯತೆ ದೊರೆಯಿತು. ಆಕೆ 1930ರಲ್ಲಿ ಸಾಯುವ ಮುನ್ನ ಹನ್ನೆರಡು ಕಾದಂಬರಿಗಳನ್ನೂ, ಒಂದು ನಾಟಕವನ್ನೂ, ಒಂದು ಕವಿತಾ ಸಂಗ್ರವನ್ನೂ ಬರೆದಿರುವರು.

ಅಪರಾಹ್ನದ ಇಳಿಹೊತ್ತು. ಅಂಗಳದ ಮರಗಳ ನೆರಳಿನಲ್ಲಿ ವ್ಯತ್ಯಾಸ ತನ್ನಿಂದ ತಾನೇ ಕಂಡುಬಂದಿತು. ಎಲ್ಲೋ ದೂರದಲ್ಲಿ ದನಗಳ ಕೊರಳಿನ ಕಿರುಗಂಟೆ ಬಾರಿಸುವುದೂ, ದನಗಳು 'ಅಂಬಾ' ಎನ್ನುವುದೂ ಕಿವಿಗೆ ಬೀಳುತಿತ್ತು. ಆಗಾಗ ಹೊಲದಿಂದ ಬರುವ ಗಾಡಿ ವಾಲಿಕೊಂಡು ದಾರಿಯಲ್ಲಿ ಹೋಗುವ ಸದ್ದಾಗುವುದು, ಧೂಳು ಹಾರುವುದು. ಹಾರೆ ಗುದ್ದಲಿ ಹಿಡಿದುಕೊಂಡ ನೀಲ ಅಂಗಿಯ ಹೊಲಗೆಲಸದ ಆಳುಗಳು ಬರುತ್ತಿದ್ದರು. ಮಿದುವಾದ ಗಾಳಿಗೆ ಹಾರುತ್ತಿರುವ ನುಸಿಗಳು ಜನರ ಮುಖದ ಮೇಲೆ ಕೂರಲು ಪ್ರಯತ್ನಿಸುವುವು. ಶಾಂತವಾಗಲೆಂದೇ ಎಲ್ಲ ಕಡೆ ಸಣ್ಣ ಗದ್ದಲವುಂಟಾಗುತ್ತಿರುವಂತೆನಿಸುವುದು. ವಿಶ್ರಾಂತಿ, ಮೌನ, ಮತ್ತು ರಾತ್ರಿ ಪಸರಿಸುವುದಕ್ಕೆ ಮೊದಲು ನಿಸರ್ಗದಲ್ಲಿ ಆವರಿಸುವ ಕಾರ್ಯಾತುರವು ಸ್ಪಷ್ಟವಾಗಿತ್ತು.

ಲೂಯಿಸಾ ಎಲ್ಲಿಸಳ ಹೃದಯದಲ್ಲಿ ಈ ಗದ್ದಲದ ಪ್ರತಿಧ್ವನಿ ಮೂಡಿತ್ತು. ಆಕೆ ಹಗಲೆಲ್ಲ ಹೊಲಿಗೆಯ ಕೆಲಸದಲ್ಲಿ ಶಾಂತವಾಗಿ ಕಾಲಹರಣ ಮಾಡಿದಳು. ಸೂಜಿಯನ್ನು ಅರಿವೆಗೆ ಚುಚ್ಚಿ ಕೆಲಸವನ್ನು ಮುಗಿಸಿ, ಅದನ್ನು ಪರಿಷ್ಕಾರವಾಗಿ ಮಡಿಸಿಟ್ಟು ಒಂದು ಬುಟ್ಟಿಯಲ್ಲಿ ನೂಲು, ಕತ್ತರಿ ಮುಂತಾದ ಎಲ್ಲಾ ಸಲಕರಣೆಗಳನ್ನೂ ಸಂಗ್ರಹಿಸಿ ಓರಣವಾಗಿರಿಸಿದಳು. ಜೀವಮಾನದಲ್ಲಿಯೇ ಅವಳು ಈ ಸಾಮಗ್ರಿಗಳನ್ನು ಚೆಲ್ಲಾಪಿಲ್ಲಿ ಹರಡಿದ್ದನ್ನರಿಯಳು. ಬಹುಕಾಲದ ಸಂಸರ್ಗದಿಂದ ಈ ಸ್ತ್ರೀಸಹಜ ಸಾಮಗ್ರಿಗಳು ಆಕೆಯ ವ್ಯಕ್ತಿತ್ವದಲ್ಲಿ ಕೂಡಿಹೋಗಿದ್ದುವು.

ಆ ಮೇಲೆ ಸೊಂಟಕ್ಕೆ ಒಂದು ಹಸುರು ವಸ್ತ್ರವನ್ನು ಸುತ್ತಿಕೊಂಡು, ಹಸುರು ರಿಬ್ಬನಿನ ಮರಿಗೆ ಹ್ಯಾಟನ್ನು ಧರಿಸಿ, ಗಾಜಿನ ಒಂದು ಬಟ್ಟಲನ್ನು ಹಿಡಿದು ಚಹದ ಸಂಗಡ ತಿನ್ನಲು ಬೇಕಾದಷ್ಟು ದ್ರಾಕ್ಷಿ ಹಣ್ಣನ್ನು ಕೊಯ್ಯಲು ತೋಟಕ್ಕೆ ಹೋದಳು. ಹಣ್ಣನ್ನು ತೆಗೆದ ಮೇಲೆ ಅದನ್ನು ಗೊಂಚಲಿನಿಂದ ಬೇರ್ಪಡಿಸಲು ಬಾಗಿಲಿನ ಮೆಟ್ಟಲಲ್ಲಿ ಕೂತಳು. ಪ್ರತಿಯೊಂದು ಹಣ್ಣನ್ನೂ ಶಾಸ್ತ್ರೀಯವಾಗಿ ತನ್ನ ಹಸುರು ಬಟ್ಟೆಯಲ್ಲಿ ಸೇರಿಸಿಕೊಂಡಳು. ದಂಟುಗಳನ್ನು ಹೇಟೆಗಳ ಗೂಡಿಗೆ ಚೆಲ್ಲಿದಳು. ಮೆಟ್ಟಲಿನ ಮೇಲೆ ಎಲ್ಲಾದರೂ ಕಡ್ಡಿ ಕಸ ಬಿದ್ದಿದೆಯೇ ಎಂದು ಜಾಗ್ರತೆಯಾಗಿ ಒಮ್ಮೆ ಪರಿಶೀಲಿಸಿದಳು.

ಲೂಯಿಸಳ ಚಲನೆ ಮಂದವಾಗಿಯೂ, ಶಾಂತವಾಗಿಯೂ ಇತ್ತು. ಚಹ ತಯಾರಿಸಲು ಅವಳಿಗೆಷ್ಟು ಹೊತ್ತು ತಗಲಿತೋ ಆಕೆಗೇ ಗೊತ್ತು. ಅಂತೂ ತಯಾರಾದ ಮೇಲೆ ಅದನ್ನು ಮೇಜಿನ ಮೇಲೆ ತಂದಿರಿಸುವ ಸಡಗರವನ್ನು ಕಂಡರೆ ಆಕೆ ತನ್ನನ್ನು ಯಾರೊ ಅತಿಥಿಯೆಂದು ಭಾವಿಸಿಕೊಂಡ ಹಾಗಿತ್ತು. ಚಚ್ಚೌಕದ ಆ ಮೇಜು ಕೋಣೆಯ ನಡುವೆ ಯಾವಾಗಲೂ, ಒಂದಿಂಚೂ ಕದಲದೆ ಇದ್ದಲ್ಲೇ ಇರುವುದು. ಅದರ ಮೇಲೆ ಇಸ್ತ್ರಿ ಹಾಕಿದ ಬಟ್ಟೆಯ ಅಂಚುಗಳಿಗೆ ಹೊಲಿದ ಕಸೂತಿ ಕೆಲಸ ಎದ್ದು ತೋರುವುದು. ಚಹದ ಟ್ರೇಯಲ್ಲಿ ಒಂದು ನ್ಯಾಪ್‌ಕಿನ್, ಚಮಚದ ಒಂದು ಬಟ್ಟಲು, ಬೆಳ್ಳಿಯ ಬಣ್ಣದ ಕೂಜೆ, ಸಕ್ಕರೆ ಹಾಕಿದ ಪಿಂಗಾಣಿ ಪಾತ್ರೆ ಮತ್ತು ಒಂದು ಗುಲಾಬಿ ಬಣ್ಣದ ಪಿಂಗಾಣಿಯ ಕಪ್ ಮತ್ತು ಸಾಸರ್—ಇಷ್ಟು ಇದ್ದುವು. ಲೂಯಿಸಾ ಯಾವಾಗಲೂ ಪಿಂಗಾಣಿಯಲ್ಲೇ ಚಹ ಕುಡಿಯುವುದು ಅವಳ ನೆರೆಹೊರೆಯವರಿಗೆ ಅಚ್ಚರಿ. ರಾತ್ರಿಯ ಊಟಕ್ಕೆ ಅವಳ ಇದಿರು ಸಕ್ಕರೆ ಹಾಕಿದ ದ್ರಾಕ್ಷಿ, 'ಕೇಕು'ಗಳ ಒಂದು ಬಟ್ಟಲು, ಬಿಳಿಯ ಬಿಸ್ಕತ್ತುಗಳ ಒಂದು ಬಟ್ಟಲು, ಸೌತೆಕಾಯಿಯ ಹೋಳು ಅವಳ ಇದಿರು ಬರುವುವು. ಲೂಯಿಸಳಿಗೆ ಸೌತೆಕಾಯಿಯೆಂದರೆ ಪ್ರಾಣ. ಅದನ್ನು ತನ್ನ ತೋಟದಲ್ಲೇ ಬೆಳೆಯುವ ಕಲೆ ಅವಳಿಗೆ ಹೊಂದಿತ್ತು. ಊಟ ಸೊಗಸಾಗಿ ಮಾಡಿದಳು

ಹಕ್ಕಿಗಳು ತಿನ್ನುವಂತೆ. ಒಂದೊಂದು ತುತ್ತಿನಲ್ಲಿ ಅದೆಷ್ಟು ಸಣ್ಣ ಪ್ರಮಾಣವೆಂದರೆ ಇದಿರಿನ ಬಟ್ಟಲುಗಳು ಮುಗಿದದ್ದೇ ಆಶ್ಚರ್ಯ.

ಚಹದ ಊಟ ಮುಗಿದ ತರುವಾಯ ಒಂದು ಬಟ್ಟಲಿನಲ್ಲಿ ಹಿಟ್ಟಿನ ದೋಸೆಯನ್ನು ಇರಿಸಿ ಮನೆಯ ಹಿಂದಿನ ತೋಟಕ್ಕೆ ಹೋದಳು. 'ಸೀಸರ್, ಸೀಸರ್' ಎಂದು ಕೂಗಿದಳು. ಒಂದು ಸ್ವಲ್ಪ ಗಡಿಬಿಡಿ, ಸಂಕಲೆಯನ್ನು ಎಳೆದ ಸದ್ದು, ಅದರ ಜತೆಗೆ ಹಳದಿ—ಬಿಳಿ ವರ್ಣದ ದೊಡ್ಡ ನಾಯಿ ತನ್ನ ಕುಟೀರದ ಬಾಗಿಲಲ್ಲಿ ಬಂದು ನಿಂತಿತು. ಲೂಯಿಸ ಅದರ ತಲೆಯನ್ನು ನೇವರಿಸಿ ದೋಸೆ ತಿನಿಸಿದಳು. ಆ ಮೇಲೆ ಮನೆಗೆ ಹಿಂದಿರುಗಿ ಚಹದ ಬಟ್ಟಲುಗಳನ್ನು ಜಾಗ್ರತೆಯಾಗಿ ತೊಳೆದು, ಪಿಂಗಾಣಿಯನ್ನು ಸಾವಕಾಶವಾಗಿ ಒರಸಿದಳು. ಕತ್ತಲೆ ಬೇಗ ಬೇಗನೆ ಕವಿಯುತಿತ್ತು. ತೆರೆದ ಕಿಟಕಿಯಿಂದ ಹೊರಗೆ ಕಪ್ಪೆಗಳ ಸಾಮೂಹಿಕ ಗಾನ ಒಳಗೆ ಪ್ರವಹಿಸುತಿತ್ತು. ಲೂಯಿಸಾ ಸೊಂಟಕ್ಕೆ ಸುತ್ತಿದ ಹಸುರು ಬಟ್ಟೆಯನ್ನು ತೆಗೆದಳು. ಅದರ ಅಡಿಯಲ್ಲಿ ಇನ್ನೊಂದು ಗುಲಾಬಿ-ಬಿಳಿ ವರ್ಣದ ಹೊದಿಕೆಯಿತ್ತು. ದೀಪವನ್ನು ಹಚ್ಚಿ, ಮತ್ತೆ ಹೊಲಿಗೆಗೆ ಕೂತಳು.

ಅರ್ಧ ಗಂಟೆ ಕಳೆದಿರಬಹುದು—ಜೋ ಡಗೆಟ್ ಅಲ್ಲಿಗೆ ಬಂದನು. ಅವನ ಭಾರವಾದ ಹೆಜ್ಜೆಯನ್ನು ಗುರುತಿಸಿ ಆಕೆ ಎದ್ದು ಗುಲಾಬಿ ಬಿಳಿ ಬಣ್ಣದ ಹೊದಿಕೆಯನ್ನು ತೆಗೆದರೆ ಒಳಗಿನ ಬಿಳೇ ಲಂಗವನ್ನು ನೋಡಬಹುದಾಗಿತ್ತು. ಗುಲಾಬಿ ಬಣ್ಣದ ವಸ್ತ್ರವನ್ನು ಅವಸರವಾಗಿಯಾದರೂ ಚೊಕ್ಕವಾಗಿಯೇ ಮಡಚಿ ಮೇಜಿನ ಡ್ರಾವರಿನಲ್ಲಿಸುವಷ್ಟರಲ್ಲಿ ಬಾಗಿಲು ತೆರೆದು ಜೋ ಡಗೆಟ್ ಕೋಣೆಯನ್ನು ಪ್ರವೇಶಿಸಿದನು. ಕೋಣೆಯ ಒಂದು ಮೂಲೆಯಲ್ಲಿ ಪಂಜರಬದ್ಧವಾಗಿದ್ದ ಪೀತವರ್ಣದ ಪಕ್ಷಿ ಸಡಗರದಿಂದ ರೆಕ್ಕೆ ಬಡಿದು, ಕೂಗಿ, ಆಗಂತುಕನನ್ನು ಸ್ವಾಗತಿಸಿತು—ಎಂದಿನಂತೆ.

'ಗುಡ್ ಇವ್‌ನಿಂಗ್' ಎಂದು ಲೂಯಿಸಾ ಕೈಯನ್ನು ಗಂಭೀರವಾಗಿ ಜೋ ಕಡೆಗೆ ಚಾಚಿದಳು. 'ಗುಡ್ ಇವ್‌ನಿಂಗ್' ಎಂದು ಗಟ್ಟಿಯಾಗಿ ಜೋ ಉತ್ತರಿಸಿದನು. ಆಕೆ ಅವನಿಗೆ ಒಂದು ಕುರ್ಚಿ ಎಳೆ

ದಿಟ್ಟಳು. ಮೇಜಿನ ಇಕ್ಕಡೆಗಳಲ್ಲಿ ಅವರಿಬ್ಬರು ಇದಿರುಬದರಾಗಿ ಕೂತರು. ಅವನು ಕೋಲಿನಂತೆ ನೆಟ್ಟಗೆ ಕೂತು ಸಶಂಕ ನೇತ್ರಗಳಿಂದ ಕೊಠಡಿಯನ್ನು ಪರಿಶೀಲಿಸಿದನು. ಆಕೆ ತನ್ನ ಕೋಮಲ ಹಸ್ತಗಳನ್ನು ತೊಡೆಯ ಮೇಲಿರಿಸಿ ಕೂತಳು.

'ಬಿಸಿಲು ಚೆನ್ನಾಗಿತ್ತು' ಎಂದ ಡಗೆಟ್.

'ಚೆನ್ನಾಗಿತ್ತು, ಏನು ಕೊಯ್ಯಲು ಹೋಗಿದ್ದಿಯಾ?' ಎಂದು ಬಹು ನಿಧಾನವಾಗಿ ಲೂಯಿಸಾ ಪ್ರಶ್ನೆ ಹಾಕಿದಳು.

'ಹೌದು. ಹತ್ತಿಕರೆ ತುಂಡಿದೆಯಲ್ಲಾ ಅಲ್ಲಿ ಬೆಳಗಿಂದ ಇದ್ದೆ. ಸೆಕೆ ವಿಪರೀತ.'

'ಇರಬೇಕಲ್ಲಾ'

'ಬಿಸಿಲಿನಲ್ಲಿ ಕೆಲಸ ಮಾಡುವುದು ಸುಲಭವಲ್ಲ'

'ತಾಯಿ ಇವತ್ತು ಆರಾಮವಾಗಿದ್ದಾಳೆಯೆ?'

'ಹೌದು, ಇವತ್ತು ಪರವಾ ಇಲ್ಲ.'

'ಅವಳ ಸಂಗಡ ಲಿಲ್ಲಿ ಡೈಯರ್ ಇರಬೇಕಲ್ಲಾ'

ಡಗೆಟ್‌ನ ಮುಖ ಕೆಂಪೇರಿತು. ಅವನು ಮೆಲ್ಲಗೆ 'ಹೌದು ಇದ್ದಾಳೆ' ಎಂದ.

ಆತ ತರುಣನೇನೂ ಅಲ್ಲವಾದರೂ ಅವನ ದೊಡ್ಡ ಮೋರೆಯಲ್ಲಿ ಎಳೆಮೆಯ ಕಳೆ ಮಾಸಿರಲಿಲ್ಲ. ಲೂಯಿಸಾ ಅವನಿಗಿಂತ ವಯಸ್ಸಿನಲ್ಲಿ ಕಿರಿಯಳಾದರೂ ಗಂಭೀರ ಮುಖಮುದ್ರೆಯಿಂದ ಅವನಿಗೂ ದೊಡ್ಡವಳಂತೆ ಕಾಣುತ್ತಿದ್ದಳು.

'ಅವಳಿಂದ ನಿನ್ನ ತಾಯಿಗೆ ತುಂಬಾ ಉಪಕಾರವಾಗುತ್ತಿರಬೇಕಲ್ಲಾ?' ಎಂದು ಲೂಯಿಸಾ ನುಡಿದಳು.

'ಅದು ನಿಜ. ಅವಳಿಲ್ಲದೆ ಹೋದರೆ ನಮ್ಮಮ್ಮನ ಪಾಡು ಕಠಿನವಾಗುತಿತ್ತು' ಎಂದ ಡಗೆಟ್.

'ಹೌದು ಅವಳನ್ನು ನೋಡಿದರೆಯೆ ಕಾರ್ಯಜಾಣೆಯು ಹಾಗೆ ತೋರುತ್ತಾಳೆ. ಏನು, ನೋಡುವುದಕ್ಕೂ ಚೆಲುವೆ.' ಎಂದಳು ಲೂಯಿಸಾ.

'ಹೌದು. ತಕ್ಕಮಟ್ಟಿಗೆ ಚೆಲುವೆಯೇ.'

ಸ್ವಲ್ಪ ಹೊತ್ತಿನಲ್ಲಿ ಡಗೆಟ್ ಮೇಜಿನ ಮೇಲಿರುವ ಪುಸ್ತಕಗಳಿಗೆ ಕೈ ಹಚ್ಚಿದನು. ಅಲ್ಲಿ ಒಂದು ಕೆಂಪು ಹೊದಿಕೆಯ ಆಟೋಗ್ರಾಫ್ ಪುಸ್ತಕವೂ, ಬೇರೊಂದು ಪುಸ್ತಕವೂ ಇದ್ದುವು. ಒಂದಾದ ಮೇಲೆ ಒಂದನ್ನು ಪುಟಮಗಚಿ ಆಟೋಗ್ರಾಫ್ ಪುಸ್ತಕವನ್ನು ಎರಡನೆಯ ಪುಸ್ತಕದ ಮೇಲಿರಿಸಿ ಡಗೆಟ್ ಸುಮ್ಮಗಾದನು. ಲೂಯಿಸಾ ಅವನ ಪುಸ್ತಕಾವಲೋಕನವನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದವಳು ಮೆಲ್ಲನೆ ಎದ್ದು ಆಟೋಗ್ರಾಫ್ ಪುಸ್ತಕವನ್ನು ಕೆಳಗಿಟ್ಟು ಅದರ ಮೇಲೆ ಇನ್ನೊಂದನ್ನಿರಿಸಿ ತನ್ನ ಕುರ್ಚಿಗೆ ಮರಳಿದಳು. 'ಯಾವುದು ಹೇಗಿದ್ದರೇನಂತೆ?' ಎಂದ ಡಗೆಟ್. ಲೂಯಿಸಾ ಖಂಡನೆಯ ನಸುನಗುವನ್ನು ನಕ್ಕು 'ನಾನು ಇಡುವುದೇ ಹಾಗೆ' ಎಂದಳು. 'ಹೌದಪ್ಪಾ, ನಿನ್ನ ಶಿಸ್ತೇ ಶಿಸ್ತು' ಎಂದು ಡಗೆಟ್ ನಗಲು ಯತ್ನಿಸಿದ. ಆದರೆ ಮುಖವು ಕೆಂಪಡರಿತ್ತು.

ಆತ ಒಂದು ಗಂಟೆಯ ಕಾಲ ಅಲ್ಲಿದ್ದು ಹೊರಡಲೆಂದು ಎದ್ದನು. ಎದ್ದು ಕಾಲು ಮುಂದಿಟ್ಟಾಗ ನೆಲಕ್ಕೆ ಹಾಸಿದ ರಗ್ಗಿಗೆ ಕಾಲು ತಗಲಿ ಎಡವಿದನು. ಲೂಯಿಸಾಳ ಕಸೂತಿ ಕೆಲಸದ ಬುಟ್ಟಿಯನ್ನು ರಗ್ಗಿನ ಮೇಲೆ ಉರುಳಿಸಿದನು. ನೂಲಿನ ಉಂಡೆ ಸುರುಳಿ ಬಿಡಿಸಿಕೊಳ್ಳುವುದನ್ನು ನೋಡಿ ಗಾಬರಿಯಾದನು. ಇನ್ನೇನು ಅದನ್ನು ಹೆಕ್ಕಬೇಕೆಂದು ಬಗ್ಗುವಾಗ ಆಕೆ 'ಬೇಡ, ನೀನು ಹೋದ ಮೇಲೆ ನಾನೇ ಸರಿಮಾಡುತ್ತೇನೆ' ಎಂದಳು.

ಅವಳ ಮಾತಿನಲ್ಲಿ ಗಡಸುತನವಿತ್ತು. ಪಿಂಗಾಣಿಯ ಅಂಗಡಿಯಿಂದ ಹೊರಬಂದ ಕರಡಿ ಸುಖವಾಗಿ ಉಸಿರೆಳೆಯುವಂತೆ ಆ ಮನೆಯಿಂದ ಹೊರಬಿದ್ದ ಜೋ ಡಗೆಟ್ ಸಾಯಂಕಾಲದ ಮೆಲುಗಾಳಿಯನ್ನು ಆನಂದದಿಂದ ಸವಿದನು. ಮನೆಯೊಳಗಿಂದ ಲೂಯಿಸಾ ಕೂಡ ಪಿಂಗಾಣಿಯ ಅಂಗಡಿಕಾರನು ಕರಡಿಯು ಹೋದ ಮೇಲೆ ಸಮಾಧಾನಪಡುವಂತೆ ಉಸುರ್ಗರೆದಳು.

ಚೆಲ್ಲಿ ಹೋದ ಬುಟ್ಟಿಯ ಸಾಮಾನುಗಳನ್ನು ಮರಳಿ ಬುಟ್ಟಿಯಲ್ಲಿ

ತುಂಬಿಸಿದಳು. ರಗ್ಗನ್ನೂ ಸರಿಮಾಡಿ ಎಳೆದಳು. ನೆಲದ ಮೇಲೆ ದೀಪವನ್ನಿರಿಸಿ ಕಂಬಳಿಯನ್ನು ಕೈಬೆರಳಿನಿಂದ ತಿಕ್ಕಿ ತಿಕ್ಕಿ ಪರೀಕ್ಷಿಸಿದಳು. 'ಅವನ ಕಾಲಿನ ಧೂಳೆಲ್ಲ ಇಲ್ಲೇ ಬಿಟ್ಟು ಹೋಗಿದ್ದಾನೆ' ಎಂದು ಕೊಂಡಳು. ಒಂದು ಕಸಬರಿಕೆಯನ್ನು ತೆಗೆದು ಜೋ ಬಂದು ಹೋದ ದಾರಿಯನ್ನು ಗುಡಿಸಿ ಒರಸಿದಳು.

ಹೀಗೆ ತನ್ನಿಂದಾಗಿ ಆಕೆಗೆ ಉಪದ್ರವವಾದೀತೆಂದು ಅವನು ಅರಿತಿದ್ದರೆ ಅವನಿಗೆ ಬೇಸರವಾಗುತ್ತಿತ್ತೇ ವಿನಾ ಅವನ ನಿಷ್ಠೆಯಲ್ಲಿ ಯಾವ ವ್ಯತ್ಯಾಸವೂ ಉಂಟಾಗುತ್ತಿರಲಿಲ್ಲ. ವಾರಕ್ಕೆರಡು ಸರ್ತಿ ಆತ ಲೂಯಿಸಳನ್ನು ನೋಡಲು ಬರುವನು. ಬಂದಾಗಲೆಲ್ಲ ಆ ನಾಜೂಕಾದ ಕೊಠಡಿಯಲ್ಲಿ ಬಹು ಜಾಗರೂಕತೆಯಿಂದ ಕೂತಿದ್ದು ಯಾವುದನ್ನೂ ಕೆಡವದೆ ಕೊಳಕು ಮಾಡದೆ ಹೋಗಬೇಕೆಂದು ಮುದ್ದಾಂ ಪ್ರಯತ್ನಿಸುವನು. ಕುರ್ಚಿಯಲ್ಲಿ ಕೂತಿರುವಾಗ ಅದು ಅಲ್ಲಾಡಿದರೆ ಕೋಣೆಯ ಶಿಸ್ತು ಭಂಗವಾಗುವುದೋ ಎಂದು ಕಲ್ಲಿನಂತೆ ಕೂತಿರುವುದೇ ಅವನಿಗೆ ವಾಸಿ ಎನಿಸುವುದು.

ಅಲ್ಲಿಯ ಶಿಸ್ತಿಗೂ, ಲೂಯಿಸಳ ಪ್ರೇಮಕ್ಕೂ ಆತ ಪರಿಪೂರ್ಣ ಗೌರವ, ಸಹನೆ ಮತ್ತು ನಿಷ್ಠೆಯನ್ನು ತೋರಿಸಬಲ್ಲನು. ಇನ್ನೊಂದು ತಿಂಗಳಲ್ಲಿ — ಹದಿನೈದು ವರ್ಷಗಳ ಪ್ರಣಯಾವಧಿ (courtship)ಯ ತದನಂತರ— ಅವರು ಗಂಡಹೆಂಡಿರಾಗತಕ್ಕವರು. ಈ ಹದಿನೈದು ವರ್ಷಗಳಲ್ಲಿ ಹದಿನಾಲ್ಕು ವರ್ಷ ಕಾಲ ಅವರು ಒಬ್ಬರನೊಬ್ಬರು ನೋಡಿದ್ದೂ ಇಲ್ಲ, ಪತ್ರವ್ಯವಹಾರ ಮಾಡಿದ್ದೂ ಇಲ್ಲ. ಜೋ ಅಷ್ಟು ವರ್ಷವೂ ತನ್ನ ಅದೃಷ್ಟ ಪರೀಕ್ಷೆ ಮಾಡುತ್ತ ಆಸ್ಟ್ರೇಲಿಯದಲ್ಲಿದ್ದು ಬಿಟ್ಟನು; ಅದರಲ್ಲಿ ತೇರ್ಗಡೆ ಹೊಂದಿದ ಮೇಲೆಯೇ ಆತ ಊರಿಗೆ ಮರಳಿದನು. ಅಷ್ಟೇ ಏನು, ಐವತ್ತು ವರ್ಷ ಕಾಲ ನಿಂತರೂ ಶ್ರೀಮಂತನಾಗಿ ಮರಳಿಯೇ ಊರಿಗೆ ಬರಬೇಕು, ಲೂಯಿಸಳ ಕೈಹಿಡಿಯಬೇಕು ಎಂಬ ನಿರ್ಧಾರದಿಂದ ಆತ ಭಾಗ್ಯಭೂಮಿಗೆ ತೆರಳಿದ್ದ. ಆದರೆ ಅಷ್ಟುಕಾಲ ಬೇಕಾಗಿರಲಿಲ್ಲ. ಹದಿನಾಲ್ಕು

ವರ್ಷಗಳ ಅಜ್ಞಾತ ವಾಸವನ್ನು ಆತ ಮುಗಿಸುವ ವರೆಗೂ ಅವನ ಹೆಣ್ಣು ನಿರೀಕ್ಷೆಯಲ್ಲಿ ಕಾಲಕಳೆಯುವಳೆಂದು ಅವನು ಅರಿತಿದ್ದ.

ಮದುವೆಯ ನಿಶ್ಚಿತಾರ್ಥವು ಅವರ ಮನದಲ್ಲಿ ಮೂಡಿದ ಕೂಡಲೇ ತನ್ನ ಸಂಪತ್ತನ್ನು ಬೆಳೆಸಿಕೊಳ್ಳುವವರೆಗೆ ಅವಕಾಶ ಕೊಡಬೇಕೆಂದು ಪ್ರೇಯಸಿಯನ್ನು ಬೇಡಲು ಆಕೆ ಸದಾ ರೂಢಗಾಂಭೀರ್ಯದಿಂದ ಸಮ್ಮತಿಸಿದ್ದಳು. ಈ ಕಠೋರ ನಿರ್ಧಾರವನ್ನು ಕೈಗೊಂಡು ಜೋ ಹೊರಡುವ ವೇಳೆ ಲೂಯಿಸಳ ಕೆನ್ನೆ ಕೆಂಪಾದುದನ್ನೆ ಮರೆಯಲಾರ. 'ಚಿಂತಿಸ ಬೇಡ, ಬೇಗನೆ ಬಂದು ಬಿಡುತ್ತೇನೆ' ಎಂದು ಅವಳನ್ನು ಬಿಟ್ಟು ಅಜ್ಞಾತ ಖಂಡಕ್ಕೆ ಪಯಣ ಬೆಳಸಿದನು. ಆ ಬೇಗನೆ ಎಂಬುದು ಬರಬೇಕಾದರೆ ಹದಿನಾಲ್ಕು ವರ್ಷ ಹಿಡಿಯಿತು

ಅಷ್ಟು ಕಾಲಾವಧಿಯಲ್ಲಿ ಅನೇಕ ಘಟನೆಗಳು ನಡೆದುವು ಲೂಯಿಸಳ ತಾಯಿ-ಅಣ್ಣ ಇಬ್ಬರೂ ತೀರಿಕೊಂಡು ಆಕೆ ಪ್ರಪಂಚದಲ್ಲಿ ಒಬ್ಬಂಟಿಗಳಾದಳು. ಅದಕ್ಕಿಂತ ಹೆಚ್ಚು ಸೂಕ್ಷ್ಮ ಪರಿವರ್ತನೆ ಅವಳಲ್ಲಿ ನಡೆದುದು ಆಕೆಗಾಗಲಿ, ಜೋಗಾಗಲಿ ಸಂಪೂರ್ಣ ಅರ್ಥವಾದಂತಿರಲಿಲ್ಲ. ಅವಳಿಟ್ಟ ಹೆಜ್ಜೆ ಒಂದು ಕಿರುದಾರಿಯಾಗಿ ತನ್ನ ನಿಷ್ಠುರ, ನಿಶ್ಚಿತ ಧ್ಯೇಯಕ್ಕೆ ಅಭಿಮುಖವಾಗಿ ನಿರ್ಮಿತವಾಯಿತು. ಆ ದಾರಿಯಲ್ಲಿ ತಿರವುಮುರವಿಲ್ಲ, ಇನ್ನೊಬ್ಬನಿಗೆ ಎಡೆಯೂ ಇರಲಿಲ್ಲ.

ಜೋ ಡಗೆಟ್ ಊರಿಗೆ ಬಂದನೆಂಬುದನ್ನು ಕೇಳಿದಾಗ ಲೂಯಿಸಳು ಮೊದಲಿಗೆ ತೀರಾ ಗಾಬರಿಪಟ್ಟಳು. ಅವನಿಗೆ ಈಕೆಗೆ ಹೀಗಾದೀತೆಂಬ ಕಲ್ಪನೆಯೂ ಇರಲಿಲ್ಲ. ಆಕೆ ಅವನನ್ನು ಪ್ರೀತಿಸಿದ್ದು ಹದಿನೈದು ವರ್ಷಗಳ ಪೂರ್ವ ಕಾಲದಲ್ಲಿ: ತರುಣಿಯರಿಗೆ ಸಹಜವಾದ ಉತ್ಸಾಹ ದಿಂದ ಅವಳೇನೋ ಅವನನ್ನು ಮದುವೆಯಾಗುತ್ತೇನೆಂದದ್ದು ನಿಜ. ತಾಯಿಯ ಮಾತನ್ನು ಕೇಳಿ, ಆಕೆಯ ಶಿಫಾರಸಿನಿಂದ ಪ್ರೇರಿತಳಾಗಿ ಆಕೆ ಜೋನನ್ನು ಒಪ್ಪಿಕೊಂಡಿದ್ದಳು

ಅಂದಿನಿಂದ ಇಂದಿನವರೆಗೆ ಅವಳ ಪ್ರೇಮ ಅವನಲ್ಲಿ ಸ್ಥಿರವಾಗಿತ್ತು. ಬೇರೊಬ್ಬನನ್ನು ಆಕೆ ಕನಸಿನಲ್ಲೂ ಎಣಿಸಿದವಳಲ್ಲ. ಅವಳ ಜೀವನ, ಅದರಲ್ಲೂ ಕಳೆದ ಏಳು ವರ್ಷ, ಪರಮ ಪ್ರಶಾಂತವಾಗಿತ್ತು. ನಲ್ಲನು

ದೂರವಾಗಿರುವನಲ್ಲಾ ಎಂಬ ಅತೃಪ್ತಿ ಆಕೆಗಿಲ್ಲ. ಅವನು ಬಂದ ಮೇಲೆ ಹೇಗೂ ಮದುವೆ ಇದ್ದೇ ಇದೆಯಲ್ಲಾ ಎಂದು ಆಕೆ ನಿಶ್ಚಿಂತಳಾಗಿದ್ದಳು. ಆದರೆ ಅವನ ಆಗಮನ ಬಲು ದೂರದಲ್ಲಿ—ಪ್ರಾಯಃ ಇನ್ನೊಂದು ಜನ್ಮದಲ್ಲಿ—ಇದೆ ಎಂದೇ ಅವಳ ಯೋಚನೆ.

ಅವನು ಮರಳಿದಾಗ ಮದುವೆಯು ಖಂಡಿತವೆಂದು ಬಗೆಯುತ್ತ ಹದಿನಾಲ್ಕು ವರ್ಷ ಕಾಲಹರಣ ಮಾಡಿದ ಆಕೆಗೂ ಈ ಪುನರಾಗಮನದಿಂದ ಆಶ್ಚರ್ಯವಾಯಿತು. ಆಶ್ಚರ್ಯಕ್ಕಿಂತ ಹೆಚ್ಚು ಗಾಬರಿ ಬೇರೆ.

ಜೋಗೆ ಗಾಬರಿಯಾಗಲು ಸ್ವಲ್ಪ ಸಮಯ ಹಿಡಿಯಿತು. ಅವನ ದೃಷ್ಟಿಯಲ್ಲಿ ನಲ್ಲೆ ಎಂದಿನಂತೆ ಆದರಣೀಯಳು, ಸುಂದರಿ. ಅವಳ ಆಕರ್ಷಣೆ ಒಂದಿನಿಸೂ ಕುಂದಿರಲಿಲ್ಲ. ತಮ್ಮ ಪ್ರಣಯ ಸಂಗೀತವು ಸದಾಕಾಲ ಲೂಯಿಸಳ ಹೆಸರನ್ನು ಉದ್ದರಿಸುವುದೆಂದು ಅವನು ಭ್ರಮಿಸಿದ್ದ. ಆದೃಷ್ಟ ಪರೀಕ್ಷೆಯ ಅವಧಿಯಲ್ಲಿ ಅದರಲ್ಲಿ ಬೇರೆ ಹೆಸರುಗಳಿಗೂ ಸ್ಥಳವಿರುವುದು ಅವನಿಗೆ ವ್ಯಕ್ತವಾಯಿತು. ಅವನು ಹೃದಯದ ಸಂಗೀತಕ್ಕೆ ಓಗೊಟ್ಟು ಅದರ ಬೆಂಬತ್ತಿಹೋದ—ಯಾವ ಹೆಸರಾದರೇನಂತೆ ಸಂಗೀತಸ್ವಾದನವು ಮುಖ್ಯವೆಂದು. ಲೂಯಿಸಾ ಹಾಗಲ್ಲ ಇನ್ನೂ ಅನಾಘ್ರಾತ ಕುಸುಮ. ಅವಳಲ್ಲಿಯೂ ಪ್ರಣಯ ಸಂಗೀತದ ಅಲೆಗಳು ಏಳದಿರಲಿಲ್ಲ. ಆದರೆ ಅವಳು ಅದಕ್ಕೆ ಉತ್ತರಕೊಡಲಿಲ್ಲ. ಬದಲಾಗಿ ತನ್ನ ವಿವಾಹದ ಉಡುಪನ್ನು ಹೊಲಿಯುವುದರಲ್ಲಿ ಮಗ್ನಳಾಗಿ ಎಲ್ಲವನ್ನೂ ಮರೆತುಬಿಟ್ಟಳು.

ಜೋ ಮದುವೆಯಾದ ಮೇಲೆ ಹೆಂಡತಿಯನ್ನು ಮನೆಗೆ ಕರೆತರಬೇಕೆಂದು ತಮ್ಮ ಹಳೆಮನೆಯಲ್ಲಿ ತುಂಬಾ ಬದಲಾವಣೆಗಳನ್ನು ಮಾಡಿದ್ದ. ಆತ ಲೂಯಿಸಳ ಮನೆಗೆ ಹೋಗುವಂತಿರಲಿಲ್ಲ. ಲೂಯಿಸಳೇ ಅವಳ ಪ್ರಿಯ ವಸ್ತುವನ್ನೂ, ಪರಿಸರವನ್ನೂ ತ್ಯಜಿಸಿ ಹೋಗಬೇಕಾಗಿತ್ತು. ಹೊಸ ಪರಿಸರದಲ್ಲಿ ಏನು ಕಾದಿರುವುದೆಂದು ಅವಳು ಅರಿಯದವಳಲ್ಲ. ನೋಡಿಕೊಳ್ಳಲು ದೊಡ್ಡ ಮನೆ ಇದೆ ನಿಶ್ಶಕ್ತಳಾದರೂ ನಿಷ್ಠುರೆಯಾದ ಜೋನ ತಾಯಿ ಇದ್ದಾಳೆ, ಹೋಗಿ ಬರುವ ಜನರೂ ಬಹಳ. ಅವರ ಆದರಾ

ತಿಥ್ಯದ ಕೆಲಸವಿದೆ, ಒಬ್ಬಳಿಗಿಂತ ಹೆಚ್ಚು ಸೇವಿಕೆಯರನ್ನಿಟ್ಟು ಅಭ್ಯಾಸ ವಿಲ್ಲದ ಲೂಯಿಸಳಿಗೆ ಇದೆಲ್ಲಾ ಒಗ್ಗಬೇಕಾದರೆ ಸ್ವಲ್ಪ ಕಷ್ಟವಾದೀತು. ಗ್ರೀಷ್ಮ ಋತುವಿನಲ್ಲಿ ಪೆಪ್ಪರ್‌ಮಿಂಟ್‌ಗೆ ಹಾಕಲು ಗುಲಾಬಿ ಹೂವಿನ ರಸವನ್ನು ಸಿದ್ಧಗೊಳಿಸುವುದೆಂದರೆ ಆಕೆಗೆ ಬಲು ಇಷ್ಟ. ಆದರೆ ಬೇಕಿರಲಿ, ಬೇಡವಿರಲಿ ಕೇವಲ ಮನಸ್ಸಂತೋಷಕ್ಕಾಗಿ ಗುಲಾಬಿ ರಸವನ್ನು ತೆಗೆಯಲು ಜೋನ ತಾಯಿ ಬಿಡದಿದ್ದರೋ? ಲಿನನ್ ಲೇಸನ್ನು ಹೊಲಿಯುವುದು ಅವಳಿಗೆ ಅಚ್ಚುಮೆಚ್ಚು. ಅದನ್ನು ಹೊಲಿಯಲು ಸಾಕಷ್ಟು ಸಮಯವು ಹೊಸಮನೆಯಲ್ಲಿ ದೊರೆಯಬಹುದೇ? ಸಿಕ್ಕಿದರೂ ಸುಮ್ಮಗೆ ಕಿಟಕಿಯ ಬಳಿ ಕೂತು ಹೊಲಿಯುವುದನ್ನು ಕಂಡರೆ ಅತ್ತೆ-ಗಂಡ ಇಬ್ಬರೂ ನಗರೆ?

ತನ್ನ ಮನೆಯ ಶಿಸ್ತು, ಓರಣ ಎಂದರೆ ಲೂಯಿಸಳಿಗೆ ಒಬ್ಬ ಕಲೆಗಾರನಿಗೆ ತನ್ನ ಕಲಾಕೃತಿಯ ಮೇಲಿರುವಷ್ಟೇ ಪಂಚಪ್ರಾಣ. ಕಿಟಕಿಯ ಗಾಜುಗಳನ್ನು ಸ್ವಚ್ಛಗೊಳಿಸಿ ಅವುಗಳು ಹೊಳೆಯುವುದನ್ನು ಕಂಡರೆ ಅವಳ ಜೀವಕ್ಕೆ ಉಲ್ಲಾಸವುಂಟಾಗುವುದು. ಕಪಾಟಿನ ಡ್ರಾವರುಗಳ ಒಳಗಿರುವ ಉಡುಗೆ ತೊಡುಗೆಗಳ ಓರಣವನ್ನು ಕಂಡರೆ ಅವಳ ಮನಸ್ಸು ಪ್ರಫುಲ್ಲವಾಗುವುದು. ಈ ಶಿಸ್ತಿನ ಬದಲು ಗಂಡಸಿನ ಬಟ್ಟೆಬರೆ ಚಲ್ಲಾಪಿಲ್ಲಿಯಾಗಿ ಕೋಣೆ ತುಂಬಾ ಹರವಿರುವ ದುಷ್ಕಾಲವನ್ನು ಆಕೆ ಎಣಿಸುವುದಕ್ಕೂ ಅಂಜುತ್ತಿದ್ದಳು.

ಸೀಸರನ ವಿಷಯದಲ್ಲಂತೂ ಅವಳಿಗೆ ಅಪಾರ ಚಿಂತೆ. ಸೀಸರ್ ಶ್ವಾನಜಾತಿಯಲ್ಲಿ ಸನ್ಯಾಸಿ ಎನಿಸಿಕೊಳ್ಳಲರ್ಹನಾಗಿದ್ದ. ಜೀವನದ ಹೆಚ್ಚಿನ ಕಾಲವನ್ನು ಆತ ಜನ ದೂರವಾದ, ಸಮಾಜ ಬಾಹಿರವಾದ ಆ ಕುಟೀರದಲ್ಲಿಯೇ ಕಳೆಯುತ್ತಿದ್ದನು. ಬಾಲ್ಯವು ಕಳೆದ ಮೇಲೆ ಅವನಿಗೆ ನೆರಮನೆಯಲ್ಲಿ ಸಿಗುವ ಮೂಳೆಯನ್ನು ಕಚ್ಚುವುದಾಗಲಿ, ದಾರಿ ಬದಿಯ ಪೊಟರೆಗಳನ್ನು ಪರೀಕ್ಷಿಸುವುದಾಗಲಿ ಲಭ್ಯವಾಗಲಿಲ್ಲ. ಅವನು ಕೇವಲ ಮರಿನಾಯಿಯಾಗಿದ್ದಾಗ ಮಾಡಿದ ಒಂದು ಪಾಪಕ್ಕೆ ಈ ಪರಿಯಾಗಿ ಪ್ರಾಯಶ್ಚಿತ್ತ ಮಾಡಬೇಕಾಗಿ ಬಂದುದು ಶೋಚನೀಯ. ಈ ರೀತಿಯ ಏಕಾಂತವಾಸದಿಂದ ಅವನಿಗೆ ಪಶ್ಚಾತ್ತಾಪವಾಯಿತೋ ಇಲ್ಲವೋ; ದಂಡನೆಯಂತೂ ಸಾಕಷ್ಟು ಆಯಿತು. ಇಷ್ಟು ವರ್ಷಗಳ

ಮೇಲೆ ಅವನಿಗೆ ಬೊಗಳುವುದೇ ಮರೆತು ಹೋಗಿತ್ತು. ತಿಂದು ಕೊಬ್ಬಿ ಬೆಳೆದು ಕಣ್ಣಿನ ಸುತ್ತಲೂ ಹಳದಿ ಬಣ್ಣದ ವೃತ್ತಗಳು ಉದ್ಭವವಾಗಿದ್ದವು. ಅವನು ಸದಾಕಾಲ ಅಮಲಿನಲ್ಲಿರುವ. ಆದರೆ ನೆರಮನೆಯ ಒಬ್ಬನ ಕೈಯಲ್ಲಿ ಒಂದು ನಾಯಿಮರಿಯು ಹರಿತವಾದ ಹಲ್ಲುಗಳ ಮುದ್ರೆ ಜನ್ಮಾವಧಿಗೆ ಅಳಿಯದಂತೆ ನೆಟ್ಟಿತ್ತು. ನೆರಮನೆಯಾತ ನಾಯಿಗೆ ಒಂದೋ ಮರಣ ದಂಡನೆ, ಇಲ್ಲವಾದರೆ ಜೀವಾವಧಿ ಟಾಪು ಶಿಕ್ಷೆವಿಧಿಸ ಬೇಕೆಂದು ಗರ್ಜಿಸಿದ ಪ್ರಕಾರ ಸೀಜರ್ ಜೀವಾವಧಿ ಸೆರೆಯಾಳಾಗಿ ಬಿಟ್ಟಿದ್ದ. ಲೂಯಿಸಳ ತಮ್ಮನಿರುವಾಗ ಎಲ್ಲಾದರೂ ಸಂಕಲೆ ಹಿಡಿದು ಕೊಂಡು ನಾಲ್ಕು ಸುತ್ತು ತಿರುಗಾಡಿಸಿಕೊಂಡು ಬರುತ್ತಿದ್ದ. ಲೂಯಿ ಸಳು ಹಾಗೆಯೇ ಅವನನ್ನು ಮುಕ್ತನಾಗಿ ಬಿಡುವಂತಿರಲಿಲ್ಲ. ಅವನ ಕುಪ್ರಸಿದ್ಧಿ ಎಲ್ಲಿಯ ವರೆಗೆ ಹರಡಿತ್ತೆಂದರೆ ಊರಿಗೆಲ್ಲ ಸೀಜರ್ ಒಬ್ಬ ಕ್ರೂರ ರಾಕ್ಷಸನಾಗಿ ಬಿಟ್ಟಿದ್ದ. ಊರಿನ ತಾಯದಿರು ಮಕ್ಕಳಿಗೆ ನಾಯಿಯ ಕಥೆ ಹೇಳಿ ಹೆದರಿಸುತ್ತಿದ್ದರು. ಹೆದರಿಕೆಗೆ, ಸಾಹಸಕ್ಕೆ ಯಾವಾಗಲೂ ತಯಾರಾಗಿರುವ ಮಕ್ಕಳು ಲೂಯಿಸಳ ಮನೆ ಬಂತೆಂ ದರೆ ಸದ್ದಿಲ್ಲದೆ ಮುನ್ನಡೆಯುವರು. ನಾಯಿಯ ಮೇಲೆ ಹಿನ್ನೋಟ ಬೀರುತ್ತ. ಎಲ್ಲಾದರೂ ಅಪ್ಪಿತಪ್ಪಿ ಸೀಜರ್ ಕೆಮ್ಮಿದರೆ ಸಾಕು, ದಾರಿ ಯಲ್ಲಿರುವವರೆಲ್ಲ ಕಂಬಿ ಕೀಳುವರು ಲೂಯಿಸಳ ಮನೆಯೊಳಗೆ ಬರುವ ವರೆಲ್ಲ, ನಾಯಿಯ ಸಂಕಲೆ ಗಟ್ಟಿಯಾಗಿರುವುದನ್ನು ಕೇಳಿ ಕೇಳಿ ಖಾತ್ರಿ ಪಡಿಸಿಕೊಂಡು ಹೆಜ್ಜೆ ಮುಂದಿಡುವರು. ಸೀಸರ್ ಎಲ್ಲಾ ನಾಯಿಗಳ ಹಾಗೆ ಅಂಡಲೆಯುತ್ತಿದ್ದರೆ ಅವನು ಎಲ್ಲ ನಾಯಿಗಳಂತಾಗುತಿದ್ದ. ಬಂಧನದಲ್ಲಿರುವ ಸೀಸರನ ಖ್ಯಾತಿ ಊರೆಲ್ಲ ಹರಡಿದೆ. ಜೋ ಡಗೆಟ್ ಒಬ್ಬನೇ ಆ ನಾಯಿಯ ಮೇಲೆ ಕರುಣೆ ಇರುವವನು. ಒಮ್ಮೆ ಅವನು ಅದರ ಸಂಕಲೆ ಕಳಚುವುದಕ್ಕೂ ಮುಂದಾಗಿದ್ದನು. ಆದರೆ ಲೂಯಿಸಳ ನೋಟಕ್ಕೆ ಹಿಂಜರಿಯಬೇಕಾಯಿತು. ಆದರೂ ಸಂದರ್ಭ ದೊರೆತಾಗ ಲೆಲ್ಲ 'ಇದರಷ್ಟು ಒಳ್ಳೆಯ ಸ್ವಭಾವದ ನಾಯಿ ಇಡಿ ಊರಲ್ಲೇ ಇಲ್ಲ. ನೋಡು, ಒಂದಲ್ಲ ಒಂದು ದಿನ ಇದನ್ನು ಸ್ವತಂತ್ರವಾಗಿ ನಾನು ಕರೆದು ಕೊಂಡು ಊರೊಳಗೆ ಹೋಗುವುದು ಖಂಡಿತ' ಎನ್ನುತ್ತಿದ್ದ.

ಲೂಯಿಸಳಿಗೆ ಅದು ಸಾಧ್ಯವೆಂದೂ ಅನಿಸುವುದು. ಮದುವೆ ಯಾದ ಮೇಲಂತೂ ಸಂಶಯವೇ ಇರಲಿಲ್ಲ. ನಾಯಿ ಶಾಂತವಾದ ಹಳ್ಳಿಯ ಜನರ ಮೇಲೆ ಹರಿಹಾಯ್ದು, ಮಕ್ಕಳನ್ನೆಲ್ಲ ಕಚ್ಚಿ ಕಚ್ಚಿ ಹರಿದು ಊರಲ್ಲಿ ಕೋಲಾಹಲವೆಬ್ಬಿಸುವ ಚಿತ್ರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡೇ ಆಕೆಗೆ ನಡುಕವುಂಟಾಯಿತು.

ಆ ಮುದಿ ನಾಯಿಯ ಮೇಲೆ ಅವಳಿಗೆ ತುಂಬಾ ಪ್ರೀತಿ. ಆದರ ರಾಕ್ಷಸ ವೇಷದ ಮೇಲೂ ಅಪಾರ ವಿಶ್ವಾಸ. ಹೀಗಾಗಿ ಅದಕ್ಕೆ ಸಸ್ಯಾ ಹಾರವೇ ಹೊರತು ರಕ್ತದಾಹವನ್ನು ಉಲ್ಬಣಗೊಳಿಸುವ ಮಾಂಸಾಹಾರ ಎಂದೂ ದಕ್ಕಿದುದಿಲ್ಲ ಇಷ್ಟಾದರೂ ಆಕೆ ಜೋ ಡಗೆಟನಿಗೆ—ತನಗೋ ಸ್ಕರ ಹದಿನಾಲ್ಕು ವರ್ಷ ದುಡಿದು ಬಂದ ಪ್ರಿಯತಮನಿಗೆ-ಮೋಸಮಾಡ ಲಾರಳು. ಏನೇ ಆದರೂ ಅವಳ ನಿರ್ಧಾರ ಅವಿಚಲವಾಗಿತ್ತು. ಮದು ವೆಯ ಉಡುಪಿಗೆ ಇನ್ನೇನು ಕೊನೆಯ ಹೊಲಿಗೆ ಇಕ್ಕಿದರಾಯಿತು. ಮದುವೆಗೆ ಇನ್ನೊಂದು ವಾರ ಮಾತ್ರ ಇರುವುದಲ್ಲವೆ? ಅಂದು ಮಂಗಳ ವಾರ ಸಾಯಂಕಾಲ, ನಾಳೆ ಬುಧವಾರ, ಇನ್ನೊಂದು ವಾರದೊಳಗೆ ಮದುವೆ.

ಮಂಗಳವಾರ ಪೂರ್ಣಿಮೆಯ ಇರುಳು. ಒಂಭತ್ತು ಗಂಟೆಗೆ ಲೂಯಿಸಾ ಹಳ್ಳಿಯ ರಸ್ತೆಯಲ್ಲಿ ಒಂದಷ್ಟು ದೂರ ನಡೆದಳು. ದಾರಿಯ ಇಕ್ಕೆಲದಲ್ಲಿರುವ ಹೊಲಗಳನ್ನು ದಾರಿಯಿಂದ ಪ್ರತ್ಯೇಕಿಸಲು ನಡುವೆ ಕಲ್ಲಿನ ಗೋಡೆ ಇತ್ತು. ಗೋಡೆಯ ಬಳಿ ಅಲ್ಲಲ್ಲಿ ಸುಂದರನಾದ ವೃಕ್ಷ ಗಳೂ, ಹೂವಿನ ಪೊದರುಗಳೂ ಚೆಲುವಾಗಿ ಕಂಗೊಳಿಸುತಿದ್ದುವು. ಸ್ವಲ್ಪ ದೂರ ನಡೆದು ಲೂಯಿಸಾ ಆ ಕಲ್ಲಿನ ಗೋಡೆಯ ಮೇಲೆ ಕೂತು ಅಂತರ್ಮುಖಿಯಾದಳು. ಬೇಲಿಯ ಹಣ್ಣುಗಳ ಪೊದೆಗಳಿಂದಲೂ, ಹೂವಿನ ಗಿಡಗಳಿಂದಲೂ ಆಚ್ಛಾದಿತವಾದರೂ ತೆರವಾದ ಒಂದು ಪ್ರದೇಶದಲ್ಲಿ ಕೂತ ಆಕೆಯನ್ನು ಕಂಡು ಹಿಡಿಯುವುದು ಕಷ್ಟ. ಅವಳ ಇದಿರು ದಾರಿಯ ಆಚೆ ಪಾರ್ಶ್ವದಲ್ಲಿ ಒಂದು ದೊಡ್ಡ ಮರದ ಗೆಲ್ಲುಗಳ ನಡುವೆ ತಿಂಗಳ ಬೆಳಕು ಸ್ವಚ್ಛವಾಗಿ ಹರಡಿತ್ತು. ದಾರಿಯ ಮೇಲೆಲ್ಲ ಟೊಂಗೆಯ ನೆರಳು ಬಿದ್ದಿತ್ತು. ವಾತಾವರಣವೆಲ್ಲ ರಹಸ್ಯವಾದ

ಯಾವುದೋ ಚೆಲುವಿನಲ್ಲಿ ಮಿಂದಿತ್ತು. ಸ್ವಲ್ಪ ಹೊತ್ತು ಹಾಗೆಯೇ ಕೂತು ಇನ್ನೇನು ಆಕೆ ಅಲ್ಲಿಂದ ಹೊರಡುವುದರಲ್ಲಿದ್ದಾಗ ಆಕೆಗೆ ಕಾಲ ಸಪ್ಪಳ ಕೇಳಿಸಿತು. ಅಂಥ ಏಕಾಂತ ಸ್ಥಳದಲ್ಲಿ ಇದರಿಂದ ಅವಳಿಗೆ ತುಸು ಅಂಜಿಕೆಯೂ ಆಯಿತು. ನೆರಳಿನಲ್ಲಿ ಸುಮ್ಮಗಿದ್ದರೆ ಹೋಗುವವರು ತಮ್ಮ ಪಾಡಿಗೆ ಹೋಗುತ್ತಾರೆ ಎಂದುಕೊಂಡಳು. ಆದರೆ ಕಾಲ ಸಪ್ಪಳ, ಮಾತಿನ ಸ್ವರ ಅವಳು ಕೂತಲ್ಲಿಗೆ ಸಮೀಪಿಸಿದೊಡನೆ ಫಕ್ಕನೆ ನಿಂತು ಹೋದುವು. ಅಂದರೆ ಅವರೂ ಕಲ್ಲ ಗೋಡೆಯ ಮೇಲೆ ಕೂತಿರಬೇಕಲ್ಲವೇ ಎನಿಸಿತು ಲೂಯಿಸಳಿಗೆ. ಕಾಣಿಸದ ಹಾಗೆ ಹೋಗಲು ಸಾಧ್ಯವಿಲ್ಲವೆ? ಎಂದು ಆಕೆ ಯೋಚಿಸುವ ನಿತರಲ್ಲಿ ಚಿರ ಪರಿಚಯದ ಸ್ವರವನ್ನು ಕೇಳಿ ಆಕೆ ಸ್ತಂಭಿತಳಾದಳು ಸ್ವರ ಜೋ ಡಗೆಟನ ಕಂಠದಿಂದ ಹೊರಟಿತ್ತು. ಆಕೆ ಕೂತಲ್ಲೇ ಮರಗಟ್ಟಿದಂತೆ ಕೂತು ಆಲಿಸಿದಳು.

'ಸರಿ, ನೀನು ಹಾಗಾದರೆ ಕೊನೆಯ ನಿರ್ಧಾರವಮಾಡಿ ಆಯಿತೆ?' ಎಂದು ಒಂದು ನಿಡುಸುಯಿಲ ಬೆನ್ನಲ್ಲಿ ಹೊರಟಿತು ಚಿರಪರಿಚಿತ ಸ್ವರ.

'ಹೌದು, ನಾಳಿದು ಹೊರಡುತ್ತೇನೆ' ಎಂದಿತು ಎರಡನೆಯ ಸ್ವರ.

'ಸರಿ, ಅದು ಲಿಲಿ ಡೈರ್ ಅಲ್ಲವೆ?" ಎಂದುಕೊಂಡಳು ಲೂಯಿಸಾ. ಚೆಲುವೆಯೂ ಊರಲ್ಲೆಲ್ಲ ಪ್ರಸಿದ್ಧಳೂ ಆದ ಲಿಲ್ಲಿಯು ಬೆಳದಿಂಗಳ ರಾತ್ರಿಯಲ್ಲಿ ಎಷ್ಟು ಸುಂದರಿಯಾಗಿ ಕಾಣಿಸಬಹುದೆಂಬ ಕಲ್ಪನಾ ಚಿತ್ರ ಆಕೆಯ ಕಣ್ಣಿಗೆ ಕಟ್ಟಿತು. ತಾರುಣ್ಯದ ಸೌಷ್ಠವಕ್ಕೂ, ಹೊಂಗೂದಲಿನ ವೈಭವಕ್ಕೂ ಮರುಳಾದ ಎಷ್ಟೋ ಜನ ಲಿಲಿಯನ್ನು ಬಾಯಿತುಂಬ ಹೊಗಳುವುದನ್ನು ಲೂಯಿಸಾ ಪ್ರತ್ಯಕ್ಷವಾಗಿ ಕೇಳಿದ್ದಳು.

'ಹಾಗಾದರೆ ಹಾಗೆ, ನನಗೇನೂ ಹೇಳಲಿಕ್ಕೆ ಉಳಿದಿಲ್ಲ.' ಎಂದ ಜೋ ಡಗೆಟ್.

'ಏನಿದೆಯೋ ಇನ್ನೂ ಹೇಳಲಿಕ್ಕೆ?' ಎಂದು ಆಕೆ ಕೇಳಿದಳು.

'ಯಾಕೆ ಒಂದು ಶಬ್ದವೂ ಉಳಿದಿಲ್ಲ ಎಂದೇನು?' ಎಂದು ಜೋ ಹೇಳಿದನು. ಆ ಮೇಲೆ ತುಸು ಹೊತ್ತು ಮೌನ. 'ನಿನ್ನೆ ನಮಗೆ

ಗೊತ್ತಾದ್ದು ಒಳ್ಳೆಯದೇ ಆಯಿತು. ನನಗೂ ಬೇರೆ ಮಾರ್ಗವಿಲ್ಲ. ಬರುವವಾರವೇ ಮದುವೆ ಮಾಡಿಕೊಂಡು ಬಿಡುತ್ತೇನೆಂಬ ನಿರ್ಧಾರಕ್ಕೆ ಬಂದಿದ್ದೇನೆ. ನನಗೋಸ್ಕರ ಹದಿನಾಲ್ಕು ವರ್ಷ ಕಾಲ ಕಾದು ನಿಂತ ಹೆಣ್ಣಿಗೆ ನಾನು ವಂಚನೆ ಮಾಡಲಾರೆ' ಎಂದು ಆತ ಮಾತು ಮುಂದು ವರಿಸಿದ.

'ಅದೇಕೆ, ನೀನು ನಾಳೆ ಆಕೆಯನ್ನು ತಿರಸ್ಕರಿಸಿ ನನ್ನ ಬಳಿ ಬಂದರೆ ನಾನು ನಿನ್ನನ್ನು ಬರಗೊಡಲಾರೆ.'

'ಆ ಸಂದರ್ಭವೇ ಬರುವುದಿಲ್ಲ. ಹಾಗೆ ಬಂದರೆ ನೀನು ಹೇಳಿದ್ದನ್ನೇ ಮಾಡುವಿ ಎಂದು ನನಗೆ ಗೊತ್ತಿದೆ.'

'ನಿನಗೆ ಆ ಕುರಿತು ಸಂದೇಹವೇ ಬೇಡ. ಕೊಟ್ಟ ಮಾತಿಗೆ ಯಾರಾದರೂ ತಪ್ಪಬಾರದು. ನನಗೋಸ್ಕರವಾಗಲಿ, ಇನ್ನು ಯಾರಿಗಾಗಿ ಆಗಲಿ, ಮಾತು ತಪ್ಪುವ ಗಂಡಸನ್ನು ನಾನೊಲ್ಲೆ. ಇದನ್ನು ಬೇಕಾದರೆ ನೀನೇ ಪರೀಕ್ಷಿಸಿ ನೋಡಬಹುದು.'

'ನಾನು ಅದನ್ನೇ ಹೇಳಿದೆ. ನಾನು ಮಾತಿಗೆ ತಪ್ಪುವಾತನಲ್ಲವೆಂದು ನಿನಗೆ ಸ್ವಲ್ಪ ದಿನದಲ್ಲೇ ತಿಳಿದೀತು.'

ಅವರ ಸ್ವರದ ಏರಿಕೆ ಕೇಳಿದರೆ ಇಬ್ಬರಿಗೂ ಸಿಟ್ಟು ಬಂದಂತೆ ಕಾಣುತಿತ್ತು. ಲೂಯಿಸ ಆಸಕ್ತಿಯಿಂದ ಆಲಿಸುತ್ತಿದ್ದಳು.

'ನಿನಗೆ ಇಲ್ಲಿಂದ ಹೋಗಬೇಕೆಂದು ಏಕೆ ಮನಸ್ಸಾಗಿದೆಯೋ ನಾನರಿಯೆ. ಇರಬಹುದು, ನಿನ್ನ ಯೋಚನೆಯೇ ಸರಿಯಾದದ್ದಿರಬಹುದು.'

'ಅದಕ್ಕಿಂತ ಸರಿಯಾದ ಬೇರೆ ಮಾರ್ಗವೇ ಇಲ್ಲ. ನನಗೂ ಕೊಂಚ ಬುದ್ಧಿ ಇದೆ ನೋಡು.'

'ಸರಿ, ಸರಿ. ಲಿಲಿ, ನಾನು ಹೇಗಾದರೂ ಸುಧಾರಿಸಿಕೊಂಡೇನು. ಆದರೆ ನಿನ್ನ ಪಾಡನ್ನು ಯೋಚಿಸಿದರೆ ನನಗೆ ದುಃಖವಾಗುವುದು. ನಿನಗೆ ಅಂಥ ನೋವೇನೂ ಆಗದಲ್ಲಾ?' ಎಂದು ಜೋ ಕೋಮಲವಾದ ದನಿಯಲ್ಲಿ ಪ್ರಶ್ನಿಸಿದನು.

'ಆದರ ಚಿಂತೆ ಬಿಡು. ಲಿಲಿ ಮದುವೆಯಾದ ಗಂಡಸರ ಚಿಂತೆ ಹಚ್ಚಿಕೊಳ್ಳುವಾಕೆಯಲ್ಲ.'

'ಬೇಡಪ್ಪಾ ಬೇಡ, ನೀನು ನನ್ನ ಮರೆತರೆಯೆ ನನಗೆ ಸಂತೋಷ. ಆದರೂ ಇನ್ನೊಬ್ಬ ಯಾರಾದರೂ ನಿನಗೆ ದೊರೆತಾಗ....ಆಗ....'

'ಹೌದು, ಯಾಕೆ ಅವನನ್ನು ಕಟ್ಟಿಕೊಳ್ಳಬಾರದು? ಯಾಕೆ, ಅಂದೆ. ಆದರೆ, ಜೋ, ನಾನು ಬದುಕಿರುವ ವರೆಗೆ ನನಗೆ ಮದುವೆಯೂ ಬೇಡ, ಇನ್ನೊಂದೂ ಬೇಡ. ನಿರಾಶೆಯಲ್ಲಿ ಎದೆ ಒಡೆದು ಕೊಳ್ಳುವವಳೂ ನಾನಲ್ಲ, ನಿಜ. ಆದರೆ ಮದುವೆಯ ಪ್ರಸ್ತಾಪ ಇನ್ನು ನನ್ನ ಮುಂದೆ ಸುಳಿಯದು.'

ಲೂಯಿಸಳಿಗೆ ಆಚೆ ಬದಿಯಿಂದ ಒಂದು ಆಶ್ಚರ್ಯಸೂಚಕ ಧ್ವನಿಯೂ, ಚಲನೆಯ ಸದ್ದೂ ಕೇಳಿಸಿದುವು. ಲಿಲಿ ಸ್ಪಷ್ಟವಾಗಿ ಸ್ವಲ್ಪ ಹೊತ್ತಿನ ಮೇಲೆ 'ಇಕೋ, ಹೀಗೆಲ್ಲಾ ನಿನ್ನ ಚೇಷ್ಟೆ ಸಾಕುಮಾಡು. ಹೊತ್ತಾಯಿತಲ್ಲಾ, ಇನ್ನು ಹೊರಡೋಣ" ಎಂದಳು.

ಲೂಯಿಸ ತಲೆತಿರುಗು ಬಂದವರಂತೆ ಅಲ್ಲಿಯೇ ಕೂತು ಅವರ ಪದ ಧ್ವನಿಯನ್ನು ಆಲಿಸಿದಳು. ಸ್ವಲ್ಪ ಹೊತ್ತಿನ ಮೇಲೆ ಅವಳೂ ಮೆಲ್ಲನೆ ಮನೆಗೆ ಹಿಂದಿರುಗಿದಳು. ಮರುದಿನ ಮನೆಗೆಲಸವನ್ನೇನೋ ಮೊದಲಿನ ಶಿಸ್ತಿನಂತೆಯೆ ಮಾಡಿದರೂ, ಹೊಲಿಗೆಯ ಬುಟ್ಟಿಗೆ ಕೈಹಾಕ ಲಿಲ್ಲ. ಕಿಟಕಿಯ ಸಮೀಪ ಕೂತು ನಿರ್ವಿಣ್ಣಳಾಗಿ ಹೊರಗೆ ನೋಡುತ್ತ ಕಾಲಯಾಪನೆ ಮಾಡಿದಳು. ಸಂಜೆ ಜೋ ಬಂದನು. ಲೂಯಿಸಳಿಗೆ ತನ್ನಲ್ಲಿ ಅಂಥ ಚಾತುರ್ಯವೇನೂ ಇದ್ದಂತೆ ಅನಿಸಿರಲಿಲ್ಲ. ಆದರೂ ಇಂದು ಅವಳು ಜೋನ ಮನಸ್ಸಿನ ಪರಿಚಯವಾಗದೆ ತನ್ನ ಭಾವಗಳನ್ನು ಅವನ ಮುಂದೆ ಸ್ಪಷ್ಟವಾಗಿ ಇರಿಸಬಾರದೆಂದು ನಿರ್ಧರಿಸಿದಳು. ತಾನು ಹಿಂದಿನ ರಾತ್ರಿ ಕೇಳಿದ್ದು ನಿಜವೋ ಕನಸೋ, ಯಾತಕ್ಕೆ ಜೋನ ಎದೆಯೊಡೆಯಬೇಕು ಎಂದುಕೊಂಡಳೊಮ್ಮೆ. ಆದರೆ ಮರುಕ್ಷಣ 'ನೋಡೋಣ, ಇವನೇನನ್ನುತ್ತಾನೆ ಎಂಬುದನ್ನು ತಿಳಿದು ಆ ಮೇಲೆ ನೋಡೋಣ' ಎಂದು ಪರೀಕ್ಷಿಸಲೆಳಸಿದಳು. ಜೋನಿಗೂ ಎಲ್ಲಿ ತನ್ನ

ನಿಜಸ್ವರೂಪವು ಬಂದುಲಾಗುವುದೋ ಎಂದು ಭೀತಿ ಇದ್ದದರಿಂದ ಮಾತಿನಲ್ಲಿ ಉತ್ಸಾಹವೇ ಇರಲಿಲ್ಲ.

ಲಿಲಿ ಡೈರಳ ಹೆಸರನ್ನೇ ಆಕೆ ಎತ್ತಲಿಲ್ಲ. ಆದರೆ ಇಷ್ಟೊಂದು ವರ್ಷ ಕಳೆದ ಮೇಲೆ, ಒಂದು ರೀತಿಯಾಗಿ ಜೀವನ ಮಾಡುವುದು ಅಭ್ಯಾಸವಾದ ಮೇಲೆ, ಅದನ್ನು ಬದಲಾಯಿಸುವುದು ತನಗೆ ಹಿತಕಾಣುವುದಿಲ್ಲವೆಂದು ಸರಳವಾಗಿ ಹೇಳಿದಳು.

'ಲೂಯಿಸ, ನನ್ನಿಂದ ಏನೂ ತಪ್ಪಿಲ್ಲವಲ್ಲಾ. ಸಾಯುವವರೆಗೂ ನಿನ್ನಲ್ಲಿ ಪ್ರೀತಿ ಇಟ್ಟುಕೊಂಡಿರುತ್ತಿದ್ದೆ—ನೀನು ನನ್ನ ಮದುವೆಯಾದರೆ. ಅದು ನಿನಗೆ ಗೊತ್ತಿಲ್ಲವೆ?' ಎಂದ.

'ಹೌದು, ಗೊತ್ತು' ಎಂದಳು ಲೂಯಿಸಾ.

ಆ ರಾತ್ರಿ ಅವರಿಬ್ಬರೂ ಒಬ್ಬರನ್ನೊಬ್ಬರು ಬೀಳ್ಕೊಡುವಾಗ ಅಪೂರ್ವ ಮಾರ್ದವವಿತ್ತು.

'ಈ ರೀತಿ ಪರ್ಯವಸಾನವಾಗುವುದೆಂದು ನಾವೆಣಿಸಿರಲಿಲ್ಲ, ಅಲ್ಲವೆ?' ಎಂದು ಜೋ ಕೇಳಿದ.

ಅವಳು ತಲೆ ಅಲ್ಲಾಡಿಸಿದಳು. ಮುಖದಲ್ಲಿ ಒಂದು ಕಂಪನವು ಮಿಂಚಿ ಮಾಯವಾಯಿತು.

'ನಿನಗೇನಾದರೂ ಆಗಬೇಕಿದ್ದರೆ ನನ್ನ ಹತ್ತಿರ ಹೇಳಲು ಸಂಕೋಚಪಡಬೇಡ ಲೂಯಿಸಾ. ನಿನ್ನ ನಾನು ಮರೆಯುವಂತೆಯೇ ಇಲ್ಲ' ಎಂದು ಹೇಳಿ ಜೋ ಅವಳನ್ನು ಚುಂಬಿಸಿ ಹೊರಟು ಹೋದನು. ಆ ರಾತ್ರಿ ಲೂಯಿಸಳಿಗೆ ಗೊತ್ತಿಲ್ಲದೆಯೆ ಅಳು ಬಂದಿತು. ಮರುದಿನ ಮುಂಜಾನೆ ಎದ್ದಾಗ ಮಾತ್ರ ತನ್ನ ಸಾಮ್ರಾಜ್ಯವು ಎಲ್ಲಿ ಕಸಿಯಲ್ಪಡುವುದೋ ಎಂದು ಭೀತಳಾದ ಒಬ್ಬ ರಾಣಿ ಸಾಮ್ರಾಜ್ಯವು ತನ್ನ ಕೈಯಲ್ಲೇ ಭದ್ರವಾಗಿರುವುದನ್ನರಿತಾಗ ಎಷ್ಟು ಸಂತೋಷಪಡುವಳೋ ಅಷ್ಟು ಸಂತೋಷವಾಯಿತು ಲೂಯಿಸಳಿಗೆ.

ಇನ್ನು ಸೀಸರ ಕುಟೀರದ ಸುತ್ತಲೂ ಎಷ್ಟು ಹುಲ್ಲು ಹಾವಸೆ ಬೆಳೆದರೂ, ವರ್ಷೇ ವರ್ಷೇ ಎಷ್ಟು ಹಿಮವು ಕುಟೀರದ ಮಾಡಿನ ಮೇಲೆ ಬಿದ್ದರೂ, ಅವನು ಊರಿನಲ್ಲಿ ಅಂಡಲೆಯುವ ದುಸ್ಥಿತಿ ತಪ್ಪಿಹೋಯಿತು.

ಗೂಡಿನ ಹಕ್ಕಿ ಇನ್ನುಮುಂದೆ ಶಾಂತವಾಗಿ ನಿದ್ರಿಸಬಹುದು; ಅದರ ನಿದ್ರಾಭಂಗ ಮಾಡಲು ಯಾರೂ ಮನೆಯೊಳಗೆ ಕಾಲಿಡುವವರಿಲ್ಲ. ಎಷ್ಟು ಬೇಕಾದರೆ ಅಷ್ಟು ಗುಲಾಬಿಯ ರಸವನ್ನು ತೆಗೆಯಬಹುದು. ಹೊಲಿಗೆ ಕೆಲಸ ಮಾಡಬಹುದು ನೆಲ ಗುಡಿಸಿ ಒರಸಬಹುದು, ಯಾರು ಕೇಳುವವರು? ಅಂದು ಸಂಜೆ ಹೊಲಿಗೆಯನ್ನು ಹಿಡಿದು ಕಿಟಿಕಿಯ ಬಳಿ ಕೂತಾಗ ಅವಳ ಅಂತರಂಗವು ಅಪೂರ್ವ ಶಾಂತಿಯನ್ನು ಅನುಭವಿಸಿತು. ಚೆಲುವೆಯಾದ ಲಿಲಿ ಡೈರ್ ರಸ್ತೆಯಲ್ಲಿ ಹೋಗುವುದನ್ನು ನೋಡಿದರೂ ಲೂಯಿಸಳ ಮನಸ್ಸು ಚಂಚಲವಾಗಲಿಲ್ಲ. ತನ್ನ ಜನ್ಮಸಿದ್ಧ ಹಕ್ಕನ್ನು ಇನ್ನೊಬ್ಬಳಿಗೆ ಮಾರಿದರೂ ಅವಳಿಗೆ ವ್ಯಥೆಯಾಗಲಿಲ್ಲ. ಏಕೆಂದರೆ ಗಾಂಭೀರ್ಯ ಮತ್ತು ಶಾಂತತೆ ಕೂಡ ಅವಳ ಜನ್ಮಸಿದ್ಧ ಹಕ್ಕಾಗಿರಲಿಲ್ಲವೆ? ಅವಳಿಗೆ ಭವಿಷ್ಯವು ಒಂದು ದಿನವನ್ನು ಇನ್ನೊಂದು ದಿನಕ್ಕೆ ಪೋಣಿಸಿ ಮಾಡಿದ ಜಪಸರದಂತೆ, ನಿರ್ದುಷ್ಟವೂ, ನಿರೀಹವೂ ಆದ ಮಣಿಗಳ ಸುಂದರಮಾಲೆಯಂತೆ ಗೋಚರಿಸಿತು. ಅವಳು ದೇವರನ್ನು ಮನದಲ್ಲೇ ವಂದಿಸಿದಳು. ಹೊರಗೆ ಬೇಸಗೆಯ ಸೆಕೆ ಆವರಿಸಿತ್ತು; ಕೊಯ್ಲಿನ ಸಮಯ ಉಂಟಾಗುವ ಮನುಷ್ಯ—ಮೃಗ—ಪಕ್ಷಿಗಳ ಧ್ವನಿಯು ವ್ಯಾಪಿಸಿತ್ತು; ನಾನಾ ಬಗೆಯ ಶಬ್ದ ಸಂದೋಹಗಳು ಪರಿಸರದ ಶಾಂತಿಯನ್ನು ಭಗ್ನಗೊಳಿಸುತ್ತಿದ್ದುವು. ಲೂಯಿಸ ದಿನಗಳನ್ನು ಲೆಕ್ಕಮಾಡುತ್ತ ಓರ್ವ ಸನ್ಯಾಸಿನಿಯಂತೆ ಕೂತುಬಿಟ್ಟಳು.

ಜೂನಿಯಸ್ ಮಾಲ್ಟಬೀ

ಜಾನ್ ಸ್ಟೀನ್‌ಬೆಕ್

ಜಾನ್ ಸ್ಟೀನ್‌ಬೆಕ್ ಅವರು ಕ್ಯಾಲಿಫೋರ್ನಿಯದ ಸೆಲಿನಿಸ್ ಎಂಬಲ್ಲಿ 1902ನೆಯ ಇಸವಿಯಲ್ಲಿ ಜನ್ಮವೆತ್ತಿದ್ದರು. ಅವರ ಕೃತಿಗಳಲ್ಲಿ ಅವರ ಹುಟ್ಟು ಜಿಲ್ಲೆ ಮತ್ತು ಮದುವೆಯಾದ ಬಳಿಕ ಅವರು ನೆಲಸಿದ ಮೊಂತೆರೇ ಕರಾವಳಿಯ ನೈಜ ಚಿತ್ರವು ದೊರಕುತ್ತದೆ.

ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಅವರು ನಾಲ್ಕು ವರ್ಷಗಳ ಕಾಲ ವಿಶೇಷ ರೀತಿಯ ವಿದ್ಯಾರ್ಥಿಯಾಗಿದ್ದರು ಅಂದರೆ ಅವರು ಡಿಗ್ರಿ ಪರೀಕ್ಷೆಗಾಗಿ ಓದಲಿಲ್ಲ. ಅಲ್ಲಿ ಅವರು ವಿಜ್ಞಾನ-ಜೀವಶಾಸ್ತ್ರ—ಅದರಲ್ಲಿಯೂ ಸಾಗರದ ಜೀವಗಳ ಕುರಿತ ವಿಶೇಷ ಶಾಸ್ತ್ರದ ಮೇಲೆ ಅಧ್ಯಯನ ನಡೆಸಿದರು.

ಇವರು ಬಹುಮುಖವಾದ ವೃತ್ತಿಗಳಲ್ಲಿ ಅನುಭವವನ್ನು ಪಡೆದವರು. ಇವರು ಮಾಡದ ಕೆಲಸವಿಲ್ಲ ಎಂದರೂ ಸಲ್ಲುವುದು. ಪತ್ರಿಕೆಯ ವರದಿಗಾರ, ಜಾನುವಾರು ಸಂವರ್ಧನೆ, ಮಣ್ಣು ಹೊರುವುದು, ಕಲಾವಿದ, ಮದ್ದಿನಂಗಡಿ, ಆಸ್ತಿ ಆಡಳಿತಗಾರ, ಸಾಗರ ಜೀವಶಾಸ್ತ್ರಜ್ಞ, ಸರ್ವೇಯರ್, ಮೀನುಗಾರ, ಹಣ್ಣಿನ ತೋಟದ ಕೆಲಸ, ಲೇಖಕ— ಎಲ್ಲ ವ್ಯವಸಾಯಗಳಲ್ಲಿಯೂ ಇವರು ಕೈಯಾಡಿಸಿರುವರು.

ಕ್ಯಾಲಿಫೋರ್ನಿಯದ ಹಳ್ಳಿಗಾಡಿನಲ್ಲಿ ಜೀವಿಸುವ ಲೇಖಕ ಸ್ಟೀನ್‌ಬೆಕ್ ಸ್ವಭಾವತಃ ಲಜ್ಜಾಶೀಲ ಪ್ರವೃತ್ತಿಯವರು. ಅವರ ಕಾಯ ಉದ್ದ ತೋರ, ಶ್ವೇತವರ್ಣ, ನೀಲವಾದ ಕಣ್ಣು, ಪ್ರಶಾಂತವಾದ ಸ್ವರ.

ಜೂನಿಯಸ್ ಮಾಲ್ಟ್‌ಬಿ ಕುಲೀನ ಕುಟುಂಬ ಒಂದಕ್ಕೆ ಸೇರಿದ ಸುಶಿಕ್ಷಿತ ಯುವಕನಾಗಿದ್ದನು ಅವನ ತಂದೆ ಸತ್ತಾಗ ಮನೆಯನ್ನು ಬರಿದು ಮಾಡಿಯೇ ಸತ್ತಿದ್ದನಾಗಿ ತರುಣ ಜೂನಿಯಸ್ ಗುಮಾಸ್ತಗಿರಿಗೆ ಸೇರಿ ಮುಂದಿನ ಹತ್ತು ವರ್ಷಗಳಕಾಲ ಅದರಲ್ಲೇ ನವೆಯಬೇಕಾಯಿತು.

ಕೆಲಸವನ್ನು ಮುಗಿಸಿ ಕೊಠಡಿಗೆ ಮರಳಿದವನೇ ಜೂನಿಯಸ್ ಕುರ್ಚಿಯ ದಿಂಬನ್ನು ಜಾಡಿಸಿ ಕತ್ತಲಾಗುವವರೆಗೂ ಓದುವನು. ಸ್ಟಿವನ್‌ಸನ್ ಬರೆದ ಪ್ರಬಂಧಗಳಿಗಂತ ಮಿಗಿಲಾದ ಕೃತಿಗಳು ಆಂಗ್ಲ ಸಾಹಿತ್ಯದಲ್ಲೇ ಇಲ್ಲವೆಂದು ಅವನ ಅಭಿಪ್ರಾಯವಾಗಿತ್ತು. ಸ್ಟಿವನ್‌ಸನ್ ಬರೆದ 'ಕತ್ತೆಯೊಡನೆ ಪ್ರಯಾಣ'ವೆಂಬ ಗ್ರಂಥವನ್ನು ಎಷ್ಟುಸಲ ಓದಿದರೂ ಜೂನಿಯುಸಗೆ ತೃಪ್ತಿ ಇರಲಿಲ್ಲ.

ಮೂವತ್ತೈದನೆಯ ಹುಟ್ಟು ಹಬ್ಬವು ಕಳೆದ ಕೆಲವು ದಿವಸಗಳಲ್ಲಿಯೆ ಜೂನಿಯಸ್ ಹೋಟಿಲಿನ ಮೆಟ್ಟಲಲ್ಲಿ ಮೂರ್ಛೆ ಹೋದನು. ಎಚ್ಚರವಾದಾಗ ಅವನಿಗೆ ತನ್ನ ಉಚ್ಛ್ವಾಸ ನಿಶ್ವಾಸದಲ್ಲಿ ಏನೋ ತೊಡಕು ಇರುವಂತೆ ಭಾಸವಾಯಿತು ಈ ತೊಡಕು ಎಂದು ಆರಂಭವಾಗಿದ್ದಿತೋ ಯಾರು ಬಲ್ಲ? ಡಾಕ್ಟರರನ್ನು ವಿಚಾರಿಸಿದರೆ ಅವರು ಕನಿಕರದಿಂದ ಅವನ ಬೆನ್ನು ತಟ್ಟಿ, ಅಷ್ಟೇನೂ ಗಾಬರಿಯಿಲ್ಲ ಆದರೆ ನಿನ್ನ ಶ್ವಾಸಕೋಶಗಳಿಗೆ ಈ ಸ್ಯಾನ್‌ಫ್ರಾನ್ಸಿಸ್ಕೋ ನಗರದ ಗಾಳಿ ಸ್ವಲ್ಪ ಕಾಲ ತಗಲಿಸಬೇಡ. ಈ ಮಂಜು ಮುಸುಕಿದ ಊರಿನಲ್ಲಿ ಒಂದು ವರ್ಷ

ಕೂಡ ನೀನು ಬದುಕಲಾರೆ. ಬಿಸಿ, ಒಣ ಹವೆ ಇರುವಲ್ಲಿ ಎಲ್ಲಾದರೂ ಹೋಗು' ಎಂದು ಅವರು ಸೂಚಿಸಿದರು.

ತಾನು ಸ್ವತಃ ಬಿಡಿಸಲಾರದ ಒಂದು ಬಂಧನಸೂತ್ರವು ಅನಾರೋಗ್ಯದ ನೆಪದಿಂದ ತಾನಾಗಿ ಬಿಡಿಸಿಕೊಂಡಿತೆಂದು ಜೂನಿಯಸ್ ಸಂತಸಗೊಂಡನು. ಆತ ಹಣ ಉಳಿಸುವ ನಿಶ್ಚಿತ ಪ್ರಯತ್ನವನ್ನೇನೂ ಮಾಡಿರಲಿಲ್ಲವಾದರೂ ಅವನ ಕೈಯಲ್ಲಿ ಅಷ್ಟರಲ್ಲಿ ಐನೂರು ಡಾಲರು ಸಂಗ್ರಹವಾಗಿತ್ತು. ಕಾರಣ ಇಷ್ಟೇ, ಅವನಿಗೆ ಆ ಹಣವನ್ನು ಖರ್ಚು ಮಾಡಲು ಮರೆತು ಹೋಗಿತ್ತು. 'ಇಷ್ಟರಲ್ಲಿ ಒಂದೋ ನನ್ನ ಕಾಯಿಲೆ ಗುಣವಾಗಬೇಕು, ಇಲ್ಲವಾದರೆ ಬೇಗನೆ ಇತಿಶ್ರೀಯಾದರೂ ಸರಿಯೆ' ಎಂದುಕೊಂಡ ಆತ.

ಆತನ ಕಾರ್ಯಾಲಯದಲ್ಲಿ ಯಾರೋ ಅವನಿಗೆ ಸುಖೋಷ್ಣ ಹವೆಯುಳ್ಳ 'ಪ್ಯಾಶ್ಚರ್ಸ್ ಆಫ್ ಹೆವನ್' (ಸ್ವರ್ಗಸೀಮೆ)ಗೆ ಹೋಗು ಎಂದರು. ಅವನು ಅಲ್ಲಿಗೆ ಹೊರಟೇ ಬಿಟ್ಟನು. ಜಾಗದ ಹೆಸರು ಆಕರ್ಷಕವಾಗಿತ್ತು, ಅರ್ಥಪೂರ್ಣವಾಗಿತ್ತು. 'ಬದುಕುವ ಆಸೆ ಇಲ್ಲದವರಿಗೆ ಹೇಳಿಸಿದ ಸ್ಥಳ; ಶಕುನವೋ ಏನೋ—ಯಾರು ಹೇಳಬಲ್ಲರು? ಅಥವಾ ಸಾಯದೆ ಇದ್ದರೆ ಸ್ವರ್ಗಸೀಮೆಯಿಂದ ಮರಳಿದ ಹಾಗಾಗುವುದಲ್ಲಾ!' ಎಂದು ಆತ ಮನಸ್ಸಿನಲ್ಲಿಯೇ ಯೋಚಿಸಿದನು ಆ ಹೆಸರಿನಲ್ಲಿ ಅವನಿಗೆ ತೀರ ತನ್ನದೆಂದು ಅನಿಸುವ ಪದಾರ್ಥವು ಇದ್ದ ಹಾಗಿತ್ತು. ಹೌದು, ಈ ಹತ್ತು ವರ್ಷಕಾಲ ಅವನಿಗೆ ಯಾವುದೂ ತನ್ನದಾಗಿರಲಿಲ್ಲ.

'ಸ್ವರ್ಗಸೀಮೆ'ಯಲ್ಲಿ ವಾಸಮಾಡುತ್ತಿದ್ದ ಮನೆಯುವರು ಅನೇಕರು ತಮ್ಮ ಬಿಡಾರದಲ್ಲಿ ಊಟ-ವಸತಿಗೆ ಜನರನ್ನು ಸೇರಿಸಿಕೊಳ್ಳುತ್ತಿದ್ದರು. ಜೂನಿಯಸ್ ಪ್ರತಿಯೊಂದು ಬಿಡಾರವನ್ನೂ ಪರೀಕ್ಷಿಸಿ ಕೊನೆಗೆ ಶ್ರೀಮತಿ ಕ್ವೇಕರ ಎಂಬ ಮಹಿಳೆಯ ಹೊಲದಲ್ಲಿ ಸೇರಿಕೊಂಡನು. ಆಕೆಗೆ ಅವನ ದುಡ್ಡು ಬೇಕಾಗಿತ್ತು. ಅವನಿಗೆ ಬೇರೆ ಮಲಗಲು ಕೊಠಡಿಯೂ ಮುಖ್ಯ ಮನೆಯ ಪಕ್ಕದಲ್ಲೇ ಇದ್ದಿತು. ಶ್ರೀಮತಿ ಕ್ವೇಕರಿಗೆ ಎರಡು ಗಂಡು ಮಕ್ಕಳಿದ್ದವು; ಹೊಲದ ಕೆಲಸಕ್ಕೆ ಒಬ್ಬ ಆಳೂ ಇದ್ದ.

ಜೂನಿಯಸನ ಶ್ವಾಸಕೋಶಗಳ ಮೇಲೆ ಸುಖೋಷ್ಣವಾದ ಈ ವಾತಾವರಣದಿಂದ ಒಳ್ಳೆಯ ಪರಿಣಾಮವು ಪ್ರಕಟವಾಯಿತು. ಅವನ ಮೈಬಣ್ಣವು ಏರಿದ್ದು ಮಾತ್ರವಲ್ಲದೆ ಭಾರವೂ ಹೆಚ್ಚಲನುವಾಯಿತು. ಹೊಲದಲ್ಲಿ ಅವನೊಬ್ಬ ಸುಖಪುರುಷ. ಹತ್ತು ವರ್ಷದ ದುಡಿಮೆಯ ಕಾಲವನ್ನು ಕಿತ್ತೊಗೆದು ಈಗಾತ ಒಬ್ಬ ಸ್ವತಂತ್ರ ಸೋಮಾರಿಯಾಗಿ ಪ್ರವರ್ಧಮಾನದೆಶೆಗೆ ಬಂದಿದ್ದನು. ಈಗ ಅವನ ಕೆಂಗೂದಲಿಗೆ ಬಾಚಣಿಗೆಯ ಸ್ಪರ್ಶವಾಗದು; ಕನ್ನಡಕವು ಚಚ್ಚೌಕದ ನಾಸಿಕದ ತುದಿಗೆ ಇಳಿದರೂ ಅವನಿಗೆ ಅದರ ಗೋಜಿರಲಿಲ್ಲ. ಕಣ್ಣಿನ ಚುರುಕು ಹೆಚ್ಚುತ್ತಿರುವಾಗ ಕನ್ನಡಕವಾದರೂ ಏತಕ್ಕೆ? ಕೇವಲ ಅದನ್ನು ಮುಟ್ಟುವ ಅಭ್ಯಾಸವನ್ನು ನೀಗಲು ಮಾತ್ರ ತಾನೆ? ದಿನವೆಲ್ಲ ಅವನ ಬಾಯಿಯಲ್ಲಿ ಒಂದು ಹುಲ್ಲು ಕಡ್ಡಿ ನೇತಾಡುತ್ತಿರುವುದು. ಆಳವಾಗಿ ಯೋಚಿಸುವಂಥ ಸೋಮಾರಿ ಜನಕ್ಕೆ ಅದಕ್ಕಿಂತ ಮೇಲಿನ ಭೂಷಣ ಬೇರಾವುದು? ೧೯೧೦ರ ಹೊತ್ತಿಗೆ ಆತನು ರೋಗದಿಂದ ಸಂಪೂರ್ಣ ಮುಕ್ತನಾದನು.

೧೯೧೧ರಲ್ಲಿ ಶ್ರೀಮತಿ ಕ್ವೇಕರಳಿಗೆ ನೆರಮನೆಯವರು ಗುಜುಗುಜುಗುಟ್ಟುವ ಚಿಂತೆ ಹಿಡಿಯಿತು. ಅವಿವಾಹಿತ ತರುಣನೊಬ್ಬನನ್ನು ಮನೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಜನ ಏನೆಂದುಕೊಂಡಾರೆಂದು ಆಕೆಗೆ ಅತಿಯಾದ ಕಳವಳ ಉಂಟಾಯಿತು. ಜೂನಿಯಸ್ ಖಂಡಿತವಾಗಿ ರೋಗಮುಕ್ತನಾಗುವ ಚಿಹ್ನೆ ಕಂಡು ಬಂದೊಡನೆ ವಿಧವೆ ಕ್ವೇಕರ್ ತನ್ನ ಚಿಂತೆಯನ್ನು ಅವನಲ್ಲಿ ತೋಡಿಕೊಂಡಳು. ಅವನು ತ್ವರೆಯಿಂದ ಹಿಂದೆಮುಂದೆ ನೋಡದೆ ಆಕೆಯನ್ನು ಮದುವೆ ಮಾಡಿಕೊಂಡನು. ಅವನಿಗೀಗ ಮನೆಯೂ ಸಿಕ್ಕಿತು, ಭವಿಷ್ಯವೂ ಭದ್ರವಾಯಿತು. ಶ್ರೀಮತಿ ಮಾಲ್ಟ್ಬಿ ಇನ್ನೂರು ಎಕ್ಕರೆ ಹುಲ್ಲುಗಾವಲಿಗೂ, ಐದು ಎಕರೆ ಹಣ್ಣು—ತರಕಾರಿ ಬೆಳೆಯುವ ಭೂಮಿಗೂ ಒಡತಿಯಾಗಿದ್ದಳು. ಜೂನಿಯಸ್ ತನ್ನ ಪುಸ್ತಕಗಳನ್ನೂ, ಹಳೆಯ ಕುರ್ಚಿಯನ್ನೂ, ಕಲಾವಿದ ವೆಲಾಸ್ಕ್ವೆ ಬರೆದ 'ಕಾರ್ಡಿನಲ್' ಎಂಬ ಚಿತ್ರಪಟವನ್ನೂ ತರಿಸಿಕೊಂಡನು. ಅವನ ಭವಿಷ್ಯದ ಹಾದಿಯಲ್ಲಿ ಸುಖದ ಹೂ ಬಿಸಿಲು ಹರಡಿತು.

ಶ್ರೀಮತಿ ಮಾಲ್ಟ್ಬಿ ಸಂಬಳದ ಆಳನ್ನು ಕೆಲಸದಿಂದ ವಜಾ ಮಾಡಿ ಗಂಡನನ್ನು ಹೊಲದ ಕೆಲಸಕ್ಕೆ ಹಚ್ಚಲು ಯತ್ನಿಸಿದಳು. ಆದರೆ ಜೂನಿಯಸ್ ಅಲ್ಲಾಡಲೊಲ್ಲ. ಮೈ ಮುರಿಯುವುದಕ್ಕೆ ಆತ ಬದ್ಧ ವಿರೋಧಿ. ಆತನ ವಿರೋಧವೂ ವಿಚಿತ್ರವಾಗಿತ್ತು. ಖಾಯಿಲೆಯ ಸಮಯ ಅವನಿಗೆ ಸೋಮಾರಿತನದ ಹವ್ಯಾಸ ಬೆಳೆದಿತ್ತು. ಅವನಿಗೆ ತಮ್ಮ ಹೊಲ ಇರುವ ಕಣಿವೆ, ಹೊಲ ಎಂದರೆ ಪ್ರೀತಿ ಇತ್ತು ನಿಜ; ಆದರೆ ಕಣಿವೆ ಕಣಿವೆಯಾಗಿಯೇ ಇರಲಿ ಎನ್ನುವ ಪಂಥದವನಾತ. ಅವನಿಗೆ ಹಳೆಯದನ್ನು ಕೀಳುವ ಹುಚ್ಚೂ ಇಲ್ಲ; ಹೊಸದನ್ನು ನೆಡುವ ಹಂಬಲವೂ ಇಲ್ಲ. ಶ್ರೀಮತಿ ಮಾಲ್ಟ್ಬಿ ಅವನ ಕೈಯಲ್ಲಿ ಒಂದು ಗುದ್ದಲಿಯನ್ನು ಕೊಟ್ಟು ತರಕಾರಿಗೆ ಮಣ್ಣಗೆಯಲು ಕಳಿಸಿದರೆ ಸ್ವಲ್ಪ ಹೊತ್ತಿನಲ್ಲಿ ಅವನು ಸ್ಟಿವನ್‌ಸನ್ ಬರೆದ 'ಕಿಡನ್ಯಾಪ್‌ಡ್' ಎಂಬ ಕಿಸೆ ಕಾದಂಬರಿಯನ್ನೋದುತ್ತ, ಹುಲ್ಲುಗಾವಲಿನ ನಡುವೆ ಹರಿಯುತ್ತಿದ್ದ ತೋಡಿನ ನೀರಿನಲ್ಲಿ ಕಾಲನ್ನಾಡಿಸಿಕೊಂಡು ಕಾಲಹರಣ ಮಾಡುವುದನ್ನು ಆಕೆ ಕಂಡಳು. ಕೆಲಸ ತಪ್ಪಿದ್ದಕ್ಕೆ ಅವನಿಗೆ ತೀರ ವ್ಯಸನವಾಯಿತು. ಆದರೆ ಅದು ಅವನ ಕೈಯೊಳಗಿನ ಮಾತಲ್ಲ. ಸತ್ಯಕ್ಕೂ ಅಲ್ಲ.

ಮೊದ ಮೊದಲು ಆಕೆ ಅವನ ಸೋಮಾರಿತನಕ್ಕೂ, ಉಡುಗೆ ತೊಡಿಗೆಯ ವಿಚಾರದ ತಾತ್ಸಾರಕ್ಕೂ ಬೇಕೆನ್ನುವಷ್ಟು ಜರೆದಾಡಿದಳು. ಆದರೇನು ಅವನು ಅವಳ ಮಾತನ್ನು ಕಿವಿಗೆ ಹಾಕಿಕೊಳ್ಳದಿರುವ ಕಲೆಯನ್ನು ಕರಗತಮಾಡಿಕೊಂಡನು. ಅವಳು ತನ್ನ ಶ್ರೀಮದ್ಗಾಂಭೀರ್ಯವನ್ನು ಬಿಟ್ಟಿರುವಾಗ ಅವಳ ಇರವನ್ನು ಹಚ್ಚಿಕೊಳ್ಳಲೇ ಬಾರದೆಂದು ಆತ ನಿರ್ಧರಿಸಿದನು. ಅಂಗ ಊನವಾಗಿರುವವರನ್ನು ದಿಟ್ಟಿಸಿ ನೋಡುವುದು ಸಭ್ಯತನದ ಲಕ್ಷಣವಲ್ಲವಷ್ಟೆ. ಅವನು ಒಡ್ಡಿದ ವಿರೋಧದ ಮಂಜನ್ನು ತೂರಿಕೊಂಡು ಹೋಗಲು ಶತಯತ್ನವನ್ನು ಮಾಡಿ ವಿಫಲೆಯಾದ ಶ್ರೀಮತಿ ಮಾಲ್ಟ್ಬಿ ಕ್ರಮೇಣ ಜಡೆ ಹಾಕಿಕೊಳ್ಳುವುದನ್ನು ಮರೆಯತೊಡಗಿದಳು.

೧೯೧೧ ರಿಂದ ೧೭೭೮ ವರೆಗೆ ಮಾಲ್ಟ್ಬಿ ದಂಪತಿಗಳಿಗೆ ಬಡತನದ ಕಾಲ ಒದಗಿತು. ಹೊಲದ ಕೆಲಸಕ್ಕೆ ಜೂನಿಯಸ್‌ಗೆ ಮನಸ್ಸೇ ಒಲ್ಲದು.

ಹುಲ್ಲುಗಾವಲಿನಲ್ಲಿ ಕೆಲವು ಎಕ್ರೆ ಮಾರಿ ಊಟ—ತಿಂಡಿ ಬಟ್ಟೆಬರೆ ಒದಗಿಸಿಕೊಂಡರೂ, ಹೊಟ್ಟೆತುಂಬುವಷ್ಟು ಉಣ್ಣುವುದು ಅವರಿಗೆ ಸಾಧ್ಯವಾಗಲಿಲ್ಲ. ಹೊಲದಲ್ಲಿ ಬಡತನದ ಭೂತವು ಚೌಕಶುದ್ಧಮಾಡಿ ಕೊಂಡು ಕೂತುಬಿಟ್ಟಿತು. ಮಾಲ್ಟಬಿ ಕುಟುಂಬವು ಕಂಗಾಲಾಯಿತು. ಅವರು ಹೊಸ ಬಟ್ಟೆ ಕಂಡು ಎಷ್ಟು ವರ್ಷಗಳಾದುವೋ, ಆದರೆ ಜೂನಿಯಸ್ ಡೇವಿಡ್ ಗ್ರೇಸನ್ ಮಹಾಶಯನ ಪ್ರಬಂಧಗಳನ್ನು ಆಸಕ್ತನಾಗಿ ಶೋಧಿಸಿ ಬಿಟ್ಟಿದ್ದನು. ಉದ್ದದ ನಿಲುವಂಗಿಯನ್ನು ತೊಟ್ಟು, ಹುಲ್ಲುಗಾವಲಿನ ತೋಡಿನ ದಂಡೆಗುಂಟ ಬೆಳೆದ ಸಿಕಮೋರ್ ಮರಗಳ ಕೆಳಗಡೆ ಕೂತು ಹೆಂಡತಿಗೂ ಮಕ್ಕಳಿಗೂ 'ಸಂತೃಪ್ತಿಯಲ್ಲಿ ಅಡಗಿರುವ ಸಾಹಸ'ವನ್ನು ಓದಿ ತಿಳಿಸುತ್ತಿದ್ದನು.

೧೯೧೭ರ ಆರಂಭದಲ್ಲಿ ಶ್ರೀಮತಿ ಮಾಲ್ಟಬಿ ಗರ್ಭಿಣಿಯಾದಳು. ಆ ವರ್ಷ ಮುಗಿಯುವಷ್ಟರಲ್ಲಿ ಯುದ್ಧಕಾಲದ ಇನ್‌ಫ್ಲೂಯೆಂಜ ಜ್ವರವು ಅವರ ಕುಟುಂಬವನ್ನು ಅಂಟಿಕೊಂಡಿತು. ಸರಿಯಾದ ಊಟೋಪಚಾರ ವಿಲ್ಲದೆ ಎರಡು ಮಕ್ಕಳಿಗೂ ಫ್ಲೂ ಏಕಕಾಲಕ್ಕೆ ಅಂಟಿತು. ಮೂರು ದಿನಗಳ ಕಾಲ ಮನೆಯು ಜ್ವರಗ್ರಸ್ತ ಮಕ್ಕಳ ವೇದನೆ ಯಿಂದ ತುಂಬಿಕೊಂಡಿತು. ಹಾಸಿಗೆಯ ನೂಲಿಗೆ ಅವಚಿ ಕೊಂಡು ಮಕ್ಕಳು ಪ್ರಾಣವನ್ನು ಕಾಪಾಡಿಕೊಳ್ಳಲು ಹವಣಿಸಿ ದುವು. ಮೂರು ದಿನಗಳ ಹೋರಾಟದ ಬಳಿಕ ನಾಲ್ಕನೆಯ ದಿನ ಅವು ಗಳ ಕತೆ ಮುಗಿಯಿತು. ತಾಯಿಗೆ ಮಕ್ಕಳ ಅಂತ್ಯ ತಿಳಿಯಲೇ ಇಲ್ಲ: ಆಕೆ ಪ್ರಸವ ವೇದನೆಯಿಂದ ನರಳುತ್ತಿದ್ದಳು. ನೆರೆಮನೆಯ ಯಾರೂ ಆಕೆಯೊಡನೆ ಈ ಸಂಗತಿ ಹೇಳಲು ಮುಂದಾಗಲಿಲ್ಲ. ಪ್ರಸವ ವೇದ ನೆಯ ಜತೆಗೆ ಕರಾಳ ಜ್ವರವೂ ಆಕೆಗೆ ಅಂಟಿಕೊಂಡು ಹುಟ್ಟಿದ ಮಗು ವನ್ನು ನೋಡುವ ಮುನ್ನವೇ ತಾಯಿ ಪರಲೋಕಕ್ಕೆ ತೆರಳಿದಳು.

ಹೆರಿಗೆ ಮಾಡಿಸಲು ನೆರವು ಬಂದ ಹೆಂಗಸರು ಹೆಂಡತಿ ಮಕ್ಕಳು ಸಾಯುತ್ತಿರುವಾಗ ಜೂನಿಯಸ್ ಮಾಲ್ಟಬಿ ತೋಡಿನ ಬಳಿ ಪುಸ್ತಕ ಓದುತ್ತಿದ್ದನೆಂಬ ಸುದ್ದಿಯನ್ನು ಸ್ವರ್ಗಸೀಮೆಯಲ್ಲಿ ಸರ್ವತ್ರ ಪ್ರಸಾರ ಮಾಡಿದರು. ಆದರೆ ಈ ಸಂಗತಿ ಸಂಪೂರ್ಣ ನಿಜವಾಗಿರಲಿಲ್ಲ ಜ್ವರವು

ಮಕ್ಕಳಿಗೆ ಅಂಟಿದ ಮೊದಲ ದಿನ ಅವನಿಗೆ ಅವಕ್ಕೆ ಜ್ವರವಿದೆ ಎಂಬ ಜ್ಞಾನವೇ ಉದಯವಾಗಿರಲಿಲ್ಲವಾಗಿ ಅವನು ತೋಡಿನ ನೀರಿನಲ್ಲಿ ಕಾಲ ಸ್ನಾಡಿಸಿಕೊಂಡು ಯಥಾಪ್ರಕಾರ ಕಾಲಹರಣ ಮಾಡಿದ್ದು ನಿಜ. ಆದರೆ ಉಳಿದ ದಿನಗಳಲ್ಲಿ ಜ್ವರವೇರಿದ ಮಕ್ಕಳಲ್ಲಿ ಒಮ್ಮೆ ಒಬ್ಬನಿಗೆ ಇನ್ನೊಮ್ಮೆ ಒಬ್ಬನಿಗೆ ಏನೇನೋ ಹುಚ್ಚು ಹುಚ್ಚು ಮಾತುಗಳನ್ನು ಹೇಳುತ್ತಾ ಆತ ಕಾಲಯಾಪನೆ ಮಾಡಿದನು. ಹಿರಿಯನು ಸಾಯಲು ಬಿದ್ದಿದ್ದಾಗ ಅವನಿಗೆ ವಜ್ರಗಳನ್ನು ತಯಾರಿಸುವ ವಿಧಾನವನ್ನು ವಿವರಿಸಿ ಹೇಳಿದನು. ಕಿರಿಯನಿಗೆ 'ಸ್ವಸ್ತಿಕ'ದ ಸೌಂದರ್ಯ, ಪ್ರಾಚೀನತೆ, ಮತ್ತು ಮಾಹಾತ್ಮ್ಯವನ್ನು ವರ್ಣಿಸಿದನು. 'ಟ್ರೆಜರ್ ಐಲೆಂಡ್'ನ ಎರಡನೆಯ ಅಧ್ಯಾಯವನ್ನು ಓದುತ್ತಿರುವಾಗ ಒಂದು ಜೀವ ಹಾರಿ ಹೋಯಿತು. ಮಾಲ್ಟಬಿಗೆ ಇದು ಗೊತ್ತಾದುದು ಅಧ್ಯಾಯವು ಪೂರ್ತಿ ಮುಗಿದ ಮೇಲೆಯೆ. ಮಕ್ಕಳ ಕಾಯಿಲೆಯಿಂದ ಅವನಿಗೆ ಗಾಬರಿಯಾಗದಿರಲಿಲ್ಲ. ಅವನ ಕೈಯಲ್ಲಿದ್ದ ಸರಕನ್ನು ಅವನು ರೋಗಕ್ಕೆ ತಂದು ತೋರಿಸಿದನು; ಆದರೆ ಅದು ಮೃತ್ಯುವಿಗೆ ಮದ್ದಲ್ಲವೆಂದು ಅವನಿಗೆ ಗೊತ್ತು, ಮೊದಲೇ ಗೊತ್ತು. ಹೀಗಾಗಿ ಈ ಪ್ರಸಂಗದ ಭೀಕರತೆ ಇನ್ನಷ್ಟು ಅಧಿಕವಾಯಿತು.

ಎಲ್ಲ ಜೀವಗಳೂ ಹಾರಿ ಹೋದ ಮೇಲೆ ಜೂನಿಯಸ್ ತೋಡಿನ ಬಳಿಗೆ ಹೋಗಿ 'ಕತ್ತೆಯೊಡನೆ ಪ್ರಯಾಣ'ದಲ್ಲಿ ಕೆಲವು ಪುಟಗಳನ್ನು ಓದಿದನು. ಅದರಲ್ಲಿ ಬರುವ ಮೊಡೆಸ್ಟೀನ್ ಎಂಬ ಕತ್ತೆಯ ಚಂಡಿತನವು ಅವನಿಗೆ ಭಲೇ ಮೋಜೆನಿಸಿತು. ಅಲ್ಲ, ಕತ್ತೆಗೆ ಮೊಡೆಸ್ಟೀನ್ (ಲಜ್ಜಾವತಿ) ಎಂದು ಹೆಸರಿಡಲು ಸ್ಟೀವನ್‌ಸನ್ ಅಲ್ಲದೆ ಬೇರೆ ಯಾರಿಗೆ ಸಾಧ್ಯ! ಎಂದು ಅವನು ವಿಮರ್ಶಿಸಿದನು.

ನೆರೆಕರೆಯ ಒಬ್ಬ ಹೆಂಗಸು ಅವನ ಸಮೀಪದಲ್ಲೇ ಶಪಿಸಹತ್ತಿದಳು. ಅವನಿಗೆ ಅಷ್ಟು ಸಮೀಪದಲ್ಲಿ ಯಾರಾದರೂ ಬೈಯುವುದು ಹಿತವೆನಿಸಲಿಲ್ಲ. ಆದರೆ ಅವಳ ಬೈಗಳ ಅರ್ಥ ಮಾಡಿಕೊಳ್ಳಲು ಆತ ಹವಣಿಸಲಿಲ್ಲ. ಅವುಗಳಿಗೆ ಕಿವಿ ಕೊಡಲೂ ಇಲ್ಲ. ಆಕೆ ಸೊಂಟದ ಮೇಲೆ ಕೈಗಳನ್ನಿರಿಸಿ ಅವನನ್ನು ಗುರಗುರನೆ ದಿಟ್ಟಿಸಿದಳು. ಆ ಮೇಲೆ ಸ್ವಲ್ಪ ಹೊತ್ತಿನಲ್ಲಿ ಅವನ ಮಗುವನ್ನು ತಂದು ಅವನ ಕೈಯೊಳಗಿರಿಸಿ

ಹೊರಟು ಹೋದಳು. ಗೇಟಿನ ಬಳಿಯಿಂದ ಆಕೆ ತಿರುಗಿ ನೋಡಿದಾಗ ಮಗು ತಂದೆ ಜೂನಿಯಸ್ ಕೈಯಲ್ಲಿ ಕಿಟ್ಟೆಂದು ಕಿರಿಚುತ್ತಿತ್ತು. ಅದನ್ನು ಎಲ್ಲಿಡುವುದೆಂದು ತಿಳಿಯದೆ ಆತ ಅದನ್ನು ಹಿಡಿದುಕೊಂಡ ಹಾಗಿತ್ತು.

ಕಣಿವೆಯ ಜನರ ಬಾಯಲ್ಲಿ ಜೂನಿಯಸ್ ವಿಷಯ ಹಲವು ಕತೆಗಳು ಹುಟ್ಟಿಕೊಂಡವು. ಕಾರ್ಯತತ್ಪರರಾದ ಜನರು ಸೋಮಾರಿಗಳನ್ನು ತಾತ್ಸಾರಿಸುವ ರೀತಿಯಲ್ಲಿ ಅವರು ಒಮ್ಮೆ ಅವನನ್ನು ಹೀಯಾಳಿಸುವರು, ಮತ್ತೊಮ್ಮೆ ಯಾವ ಉಸಾಬರಿಯೂ ಇಲ್ಲದ ಅವನೇ ಪುಣ್ಯವಂತ ಎಂದುಕೊಳ್ಳುವರು. ಹೆಚ್ಚಿನ ಪಾಲು ಅವರಿಗೆ ಅವನ ಮೇಲೆ ಕನಿಕರ ಉಂಟಾಗುತಿತ್ತು.ಆದರೆ ಯಾರಿಗೂ ಆತ ಸುಖಿಯಾಗಿದ್ದ ಕತೆ ತಿಳಿಯದು.

ಡಾಕ್ಟರರು ಹೇಳಿದರೆಂದು ಜೂನಿಯಸ್ ಮಗುವಿಗೆ ಹಾಲಿಗೋಸ್ಕರ ತಂದ ಆಡಿನ ಕತೆ ಸ್ವಾರಸ್ಯವಾಗಿದೆ. ಆಡು ಗಂಡೋ ಹೆಣ್ಣೋ ಎಂಬ ಗೋಜಿಗೆ ಅವನು ಹೋಗಿರಲಿಲ್ಲ. ಮಾರಾಟಗಾರನ ಹತ್ತಿರ ಅದು ಯಾತಕ್ಕೆಂಬುದನ್ನೂ ತಿಳಿಸಲಿಲ್ಲ. ಆಡು ಮನೆಗೆ ಬಂದಾಗ ಅವನು ಬಗ್ಗಿ ನೋಡಿ, 'ಇದು ನಿಜವಾಗಿಯೂ ಆರೋಗ್ಯವಾಗಿರುವ ಆಡು ತಾನೆ?' ಎಂದು ಕೇಳಿದ. ಮಾರಾಟಗಾರನು 'ಹೌದು' ಎಂದ. 'ಹಾಗಾದರೆ ಹಿಂದಿನ ಕಾಲುಗಳ ನಡುವೆ ಒಂದು ಚೀಲ ಇರಬೇಕಾಗಿತ್ತಲ್ಲಾ — ಹಾಲಿಗೆ?' ಎಂದು ಜೂನಿಯಸ್ ಕೇಳಿದನಂತೆ

ಈ ಕತೆಯನ್ನು ಹೇಳಿ ಕಣಿವೆಯ ಜನ ಬಿದ್ದು ಬಿದ್ದು ನಗುವರು. ಆ ಮೇಲೆ ಮತ್ತೊಂದು ಒಳ್ಳೆಯ ಆಡನ್ನು ಜೂನಿಯಸ್ ತರಿಸಿದನಂತೆ. ಎರಡು ದಿನಗಳ ಕಾಲ ಏನು ಕಸರತ್ತು ಮಾಡಿದರೂ ಅದರ ಹಾಲು ಹಿಂಡುವುದು ಅವನಿಂದ ಆಗಲಿಲ್ಲವಂತೆ. ಇದೂ ಸರಿಯಾದ ಆಡಲ್ಲವೆಂದು ಅದನ್ನು ಹಿಂದೆಕೊಡಬೇಕೆಂದು ಆತ ಯೋಚಿಸುವಷ್ಟರಲ್ಲಿ ಮಾರಾಟಗಾರನೇ ಬಂದು ಹಾಲು ಹಿಂಡುವುದು ಹೇಗೆಂದು ಕಲಿಸಿಕೊಟ್ಟನಂತೆ. ಕೆಲವರಂತೂ ಮಗುವಿನ ಬಾಯನ್ನು ಆಡಿನ ಮೊಲೆಗೆ ಹಿಡಿದೇ ಜೂನಿಯಸ್ ಹಾಲು ಕುಡಿಸಿದನೆಂದು ಹೇಳುತ್ತಿದ್ದರು. ಆದರೆ

ಇದು ಸುಳ್ಳೆಂಬುದು ಹೆಚ್ಚಿನವರ ಅಭಿಪ್ರಾಯ. ಆದು ಹೇಗೆ ಜೂನಿಯಸ್ ಮಗುವನ್ನು ಬೆಳಸಿದನೋ ಎಂಬುದು ಮಾತ್ರ ಎಲ್ಲರಿಗೂ ಗೂಢವಾದ ಸಮಸ್ಯೆ.

ಒಂದು ದಿನ ಜೂನಿಯಸ್ ವೊಂಟೆರೆ ಪಟ್ಟಣಕ್ಕೆ ಹೋಗಿ ಹೊಲದ ಕೆಲಸಕ್ಕೆಂದು ಒಬ್ಬ ಜರ್ಮನ್ ಆಳನ್ನು ಕರೆದುಕೊಂಡು ಬಂದನು. ಅವನಿಗೆ ಐದು ಡಾಲರ್ ಮುಂಗಡ ಕೂಲಿಯನ್ನೂ ತೆತ್ತನು. ಆದರೆ ಆ ಮೇಲೆ ಅವನಿಗೆ ಏನನ್ನೂ ಕೊಡಲಿಲ್ಲ. ಎರಡು ವಾರಗಳಲ್ಲಿ ಆ ಜರ್ಮನ್ ಕೂಲಿಯಾಳು ಕೂಡ ಒಡೆಯನಂತೆ ಸೋಮಾರಿಯಾದನು ಒಡೆಯನು ಮಾಡುತ್ತಿರುವುಕ್ಕಿಂತ ಹೆಚ್ಚಿನ ಕೆಲಸ ಮಾಡುವ ಅಗತ್ಯ ಅವನಿಗೆ ತೋರಲಿಲ್ಲ. ಯಾವಾಗ ನೋಡಿದರೂ ಅವರಿಬ್ಬರೂ ಹೂವಿಗೆ ಬಣ್ಣ ಏತಕ್ಕೆ? ನಿಸರ್ಗದಲ್ಲಿ ಪ್ರತಿಮಾ–ಪ್ರತಿಕೃತಿಗಳಿವೆಯೆ? ಅಟ್ಲಾಂಟಿಸ್ ಭೂಖಂಡ ಇದೆಯೋ, ಇಲ್ಲವೋ, ಇನ್ಕಾ ಜನರ ಅಂತ್ಯ ಕ್ರಿಯೆಯ ವಿಧಾನ ಯಾವುದು?—ಮುಂತಾದ ಪ್ರಾಮುಖ್ಯ ವಿಷಯ ಗಳನ್ನು ಚರ್ಚಿಸುತ್ತಿದ್ದರು.

ವಸಂತಕಾಲದಲ್ಲಿ ಅವರು ಬಟಾಟೆ ಬೆಳಸಿದರು. ಆದರೆ ಅದರ ಮೇಲೆ ಬೂದಿ ಚೆಲ್ಲಿ ಕೀಟಗಳನ್ನು ದೂರವಿಡಬೇಕೆಂಬುದು ಅವರಿಗೆ ಮರೆತು ಹೋಯಿತು. ಅವರೆ ಕಾಳು, ಮತ್ತು ಧಾನ್ಯಗಳನ್ನು ಬೀಸಿದರು, ಸ್ವಲ್ಪ ಕಾಲ ಎಚ್ಚರದಿಂದ ಅವು ಮೇಲೆ ಬರುತ್ತಿರುವುದನ್ನು ನಿರೀಕ್ಷಿಸಿ ದರು, ತದನಂತರ ಯಥಾಪ್ರಕಾರ ಅವುಗಳ ಇರವನ್ನೇ ಮರೆತುಬಿಟ್ಟರು. ಸ್ವಲ್ಪಕಾಲದಲ್ಲಿ ಅವರು ಕೃಷಿಮಾಡಿದ ಜಾಗದಲ್ಲಿ ಉದ್ದನ್ನ ಕಳೆ ಹುಲುಸಾಗಿ ಬೆಳೆದು ಅವರ ಅವರೇಕಾಯಿಗಳನ್ನು ಮುಚ್ಚಿಕೊಂಡಿತು. ಒಮ್ಮೊಮ್ಮೆ ಜೂನಿಯಸ್ ಕಳೆಯೊಳಗೆ ಪ್ರವೇಶಿಸಿ ಅದನ್ನು ಕೆದಕಿ ಬಣ್ಣ ಗುಂದಿದ ಒಂದು ಗುಂಬಳ ಕಾಯಿಯನ್ನು ಕೊಯ್ದು ತರುತಿದ್ದ. ಅವನು ಈಗೀಗ ಪಾದರಕ್ಷೆಗಳನ್ನು ಹಾಕುತ್ತಿರಲಿಲ್ಲ. ಇದಕ್ಕೆ ಎರಡು ಕಾರಣವಿತ್ತು. ಒಂದನೆಯದು ಅವನಿಗೆ ಬಿಸಿಯಾದ ಮಣ್ಣಿನ ಸ್ಪರ್ಶ ಹಿತವೆನಿಸುತ್ತಿತ್ತಂತೆ, ಎರಡನೆಯದು ಅವನ ಹತ್ತಿರ ಪಾದರಕ್ಷೆಗಳೇ ಇರಲಿಲ್ಲ.

ಅಂದು ಸಾಯಂಕಾಲ ಜೂನಿಯಸ್ ಜಾಕೊಬಸ್ಟಟ್ಸ್ ಹತ್ತಿರ ಬಹಳವಾಗಿ ಸಲ್ಲಾಪ ಮಾಡಿದನು. 'ಮಕ್ಕಳು ಸತ್ತಾಗ ನಾನು ಭೀತಿಯ ತುತ್ತತುದಿಯನ್ನು ಮುಟ್ಟಿದಂತೆ ನನಗನಿಸಿತು ಆದರೆ ಸ್ವಲ್ಪ ಹೊತ್ತಿನಲ್ಲಿ ಭೀತಿಯು ದುಃಖದಲ್ಲಿಯೂ, ದುಃಖವು ವ್ಯಥೆಯಲ್ಲಿಯೂ ಪರ್ಯವಸಾನಗೊಂಡಿತು. ನನಗೆ ನನ್ನ ಮಕ್ಕಳ ಮತ್ತು ಹೆಂಡತಿಯ ಪರಿಚಯ ಬಹಳಷ್ಟು ಇರಲಿಲ್ಲವೆಂದೇ ಹೇಳಬೇಕು. ಅವರು ನನಗೆ ತೀರ ಸಮೀಪದಲ್ಲಿದ್ದುದೂ ಇದಕ್ಕೊಂದು ಕಾರಣವಿರಬಹುದು. ಒಬ್ಬ ರನ್ನೊಬ್ಬರು ತಿಳಿಯುವುದು ಇದೆಯಲ್ಲಾ, ಇದೊಂದು ವಿಚಿತ್ರ. ವಿಷಯ ವನ್ನು ತಿಳಿಯುವುದು ಎಂದರೇನು?—ವಿವರಗಳನ್ನು ಜ್ಞಾಪಿಸುವುದು. ಕೆಲವರ ಬುದ್ಧಿಗೆ ದೂರ ದೃಷ್ಟಿ ಇರುತ್ತದೆ ಕೆಲವಕ್ಕೆ ಸಮೀಪ ದೃಷ್ಟಿ. ನನಗೆ ದೂರದ್ದು ಮಾತ್ರ ಗೋಚರ, ಹತ್ತಿರದ್ದು ಅದೃಶ್ಯ. ಉದಾಹರಣೆ ಕೊಡುವುದಾದರೆ ನನಗೆ ಗ್ರೀಸ್ ದೇಶದಲ್ಲಿರುವ ಪಾರ್ಥಿನಾನ್ ದೇವ ಮಂದಿರವು ನಮ್ಮ ಈ ಮನೆಗಿಂತಲೂ ಸಮೀಪವೆಂದು ಭಾಸವಾಗು ವುದು! ಪಾರ್ಥಿನಾನ್ ನೆನಪಾದೊಡನೆ ಜೂನಿಯುಸನ ವ್ಯಕ್ತಿತ್ವವು ಭಾವೋತ್ತೇಜನೆಯಿಂದಲೂ ಉತ್ಸಾಹದಿಂದಲೂ ತುಂಬಿ ಹರಿಯಿತು. 'ಜಾಕೋಬ್, ಪಾರ್ಥಿನಾನ್ ಮಂದಿರದ ಬುಡದಲ್ಲಿರುವ ಕೆತ್ತನೆ ಕೆಲಸ ವನ್ನು ನೀನು ಕಂಡಿರುವೆಯಾ?' ಎಂದು ಆತ ಕೇಳಿದನು.

'ಹೌದು, ಎಷ್ಟು ಚೆನ್ನಾಗಿದೆ ಅದು?' ಎಂದು ಜಾಕೋಬ ನಿಟ್ಟುಸಿರುಗರೆದನು.

ಜೂನಿಯಸ್ ಕೂಲಿಯಾಳಿನ ಮೇಲೆ ಕೈಯಿರಿಸಿ 'ಆ ಕುದುರೆ ಗಳೋ, ಸ್ವರ್ಗದ ಕಡೆಗೆ ನಾಗಾಲೋಟ ಓಡುವಂತಿರುವ ಸುಂದರ ಅಶ್ವಗಳೋ! ಆ ಹಾ ಹಾ! ಅವುಗಳ ಮೇಲೆ ಸವಾರಿ ಮಾಡುತ್ತಿರುವ ತರುಣರೋ! ಕುದುರೆಗೆ ಸಂತೋಷವಾದ್ದನ್ನು ಮನುಷ್ಯರಿಗೆ ಕಂಡು ಹಿಡಿ ಯಲು ಸಾಧ್ಯವೆ? ಆ ಚಿತ್ರವನ್ನು ನೋಡಿದರೆ ಶಿಲ್ಪಿಗೆ ಕುದುರೆಗಳ ಮನೋಭಾವ ವಿದಿತವಾಗಿರಬೇಕು. ಅಲ್ಲವಾದರೆ ಅವುಗಳ ಭಂಗಿಯಲ್ಲಿ ಅಂಥ ಉತ್ಸಾಹವನ್ನು ಆತ ಹೇಗೆ ಕಂಡರಿಸಬಲ್ಲ?' ಎಂದನು.

ಇದೇ ಪರಿಯಾಗಿ ಇನ್ನೂ ಏನೇನೋ ವಿಷಯಗಳ ಕುರಿತು ಅವರು ಹರಟುವರು. ಒಂದು ವಿಷಯದಲ್ಲಿಯೇ ಸ್ಥಿರವಾಗಿ ನಿಲ್ಲುವುದು ಜೂನಿಯಸಗೆ ತಿಳಿಯದು. ಊಟದ ಹೊತ್ತಾಗಲು ಕಾಡುಕೋಳಿಯ ಮೊಟ್ಟೆಗಳು ಕಾಲಿಗೆ ಎಡತಾಕಿದರೆ ಅಂದು ಅವರಿಗೆ ಊಟ; ಆದರೆ ಅಂಥ ಕೋಳಿಯ ಮೊಟ್ಟೆಗಳು ಹೊಲದಲ್ಲಿ ಎಲ್ಲಾ ಕಡೆ ಇರುವುದು ಸಾಧ್ಯವಿಲ್ಲವಾಗಿ ಹೆಚ್ಚಿನ ದಿನ ಉಪವಾಸವೇ ಗತಿ ಆಗುತಿತ್ತು.

ಜೂನಿಯುಸನ ಮಗನಿಗೆ ಅವರು ರಾರ್ಬಟ ಲೂಯಿಸ್ ಎಂದು ನಾಮಕರಣ ಮಾಡಿದರು. ಒಬ್ಬ ಸಾಹಿತ್ಯ ಸಾರ್ವಭೌಮನ ಹೆಸರನ್ನು ಈ ರೀತಿ ಸಾಮಾನ್ಯಗೊಳಿಸುವುದು ಜಾಕೊಬ್ ಸ್ಟಟ್ಸ್ ಮನಸ್ಸಿಗೆ ಹಿಡಿಸಲಿಲ್ಲವಾದರೂ, ಜೂನಿಯುಸನ ತಲೆಗೆ ಹೊಳೆದ ಪ್ರಥಮ ಹೆಸರು ಅದೇ. ಹುಡುಗರಿಗೆ ನಾಯಿಗಳ ಹಾಗೆ ಹೆಸರಿಡಬೇಕು. ಹೆಸರಿಗೆ ಒಂದೇ ಸ್ವರ ಇರಬೇಕು— ಎಂಬುದು ಸ್ಟಟ್ಸ ಅಭಿಪ್ರಾಯ. ರಾಬರ್ಟ ಕೂಡ "ಉದ್ದವಾಯಿತು: 'ಬಾಬ್' ಎಂದರೆ ಸಾಕು" ಎಂದು ತನ್ನ ಅಭಿಪ್ರಾಯವನ್ನು ಆತ ಬಿತ್ತರಿಸಿದುದು ಮಾತ್ರವಲ್ಲದೆ ವಾದದಲ್ಲಿ ಗೆದ್ದನೆಂತಲೂ ಎನ್ನಬಹುದು. ಜೂನಿಯಸ್ ಮಾತ್ರ 'ಸರಿ, ಒಂದು ರಾಜಿ ಪಂಚಾತಿಕೆ ಮಾಡೋಣ. ಅವನನ್ನು ರಾಬೀ ಎಂದು ಕರೆಯೋಣ ಆಗದೆ? ರಾಬರ್ಟ ಎಂಬುದಕ್ಕೆ ರಾಬೀ ಸರಿಹೋಗುತ್ತದಲ್ಲಾ?' ಎಂದನು. ಜೂನಿಯಸ್ ಜಾಕೊಬ ಸ್ಟಟ್ಸನ ವಾದದ ಮುಂದೆ ಸೋಲ ನ್ನೊಪ್ಪಿಕೊಳ್ಳುವುದೇನೂ ಹೊಸತಾಗಿರಲಿಲ್ಲ.

ರಾಬೀ ಗಂಭೀರನಾಗಿಯೆ ಬಳೆದನು. ಇಬ್ಬರು ಹಿರಿಯರ ಬೆನ್ನು ಹಿಂದೆ ಸುತ್ತಾಡುತ್ತ ಅವರ ವಾದವಿವಾದಗಳನ್ನಾಲಿಸಿದನು. ಆತ ಸಣ್ಣ ಹುಡುಗನೆಂಬ ಕಲ್ಪನೆಯೇ ಜೂನಿಯುಸಗಿರಲಿಲ್ಲ: ಸಣ್ಣ ಹುಡುಗ ರನ್ನು ಪಾಲಿಸುವುದೆಂದರೆ ಏನೆಂದೂ ಅವನಿಗೆ ತಿಳಿಯದು. ರಾಬೀ ಏನಾದರೂ ಹೇಳಿದರೆ ಈ ಇಬ್ಬರು ಹಿರಿಯರೂ ಅವನ ಮಾತನ್ನು ನಮ್ರರಾಗಿ ಆಲಿಸಿ ಅದನ್ನು ತಮ್ಮ ಸಂಭಾಷಣೆಯ ವಿಷಯವಾಗಿಯೋ ಅಥವಾ ವಿವರಣೆಯ ಸಾಧನವಾಗಿಯೋ ಬಳಸಿಕೊಳ್ಳುತ್ತಿದ್ದರು ಅವನ ಅರ್ಥಹೀನ ನುಡಿಗಳಲ್ಲಿ ಅವರಿಗೆ ಜ್ಞಾನಭಾಂಡಾರವೇ ದೊರಕಿದಂತಾಗು

ತ್ತಿತ್ತು. ಪ್ರತಿದಿನವೂ ಅವರಿಗೆ ಮಗುವಿನ ವಿಶ್ವಕೋಶದ ಮೇಲೆ ದಾಳಿಮಾಡುವುದೇ ಒಂದು ಹವ್ಯಾಸವಾಯಿತು.

ದೆವ್ವನಂಥ ದೊಡ್ಡ ಸಿಕಾಮೋರ್ ವೃಕ್ಷದ ಒಂದು ಗೆಲ್ಲು ಸಮಾನಾಂತರವಾಗಿ ಹೊಲದ ತೋಡಿನ ನೀರಿನ ಮೇಲ್ಗಡೆ ಚಾಚಿಕೊಂಡಿತ್ತು. ಅದರ ಮೇಲೆ ಮೂವರೂ ಆಸೀನರಾಗುವರು. ಹಿರಿಯರು ಕಾಲಿನಿಂದ ನೀರಾಟವಾಡುತ್ತ ತಳದ ಕಲ್ಲನ್ನು ಕಾಲ್ಬೆರಳಿಗೆ ಸಿಕ್ಕಿಸಿ ದೂರಕ್ಕೆಸೆಯುವರು. ಇದನ್ನು ನೋಡಿ ರಾಬಿಗೂ ತನ್ನ ಕಾಲು ಅಷ್ಟು ಉದ್ದವಾಗಿ ಬೆಳೆದು ತಾನು ಎಂದು ಇವರಷ್ಟೇ ದೊಡ್ಡವನಾಗುವೆನೋ ಎಂಬ ಹಂಬಲ ಮೊಳೆಯುವುದು. ಅಷ್ಟು ಹೊತ್ತಿಗೆ ಜಾಕೊಬನು ಪಾದರಕ್ಷೆಯ ಅಭ್ಯಾಸವನ್ನು ಬಿಟ್ಟುಗೊಟ್ಟಿದ್ದನು. ರಾಬಿಗೆ ಪಾದ ರಕ್ಷೆಯ ಉಪಯೋಗವೇ ತಿಳಿಯದು.

ಅವರ ಚರ್ಚೆಗಳು ಪಾಂಡಿತ್ಯಪೂರ್ಣವಾಗಿರುತಿದ್ದುವು. ರಾಬಿಯ ವಿಚಾರಸರಣಿಯಲ್ಲಿ ಮಕ್ಕಳಿಗೆ ಸ್ವಾಭಾವಿಕವಾದ್ದು ಯಾವುದೂ ಸಾಧ್ಯ ವಿರಲಿಲ್ಲ. ಕಾರಣವೇನೆಂದರೆ ಅವನಿಗೆ ಮಕ್ಕಳ ಸಂವಾದದ ಅನುಭವವೇ ಇಲ್ಲ. ಅವರು ಸಂಭಾಷಣೆ ಮಾಡುತ್ತಿದ್ದರು ಎಂದರೂ ತಪ್ಪಾಗ ಬಹುದೇನೋ. ಬದಲು ವಿಚಾರದ ಒಂದು ಬೀಜವನ್ನು ಬಿತ್ತಿ ಅದು ಮೊಳಕೆಯೊಡೆದು ಗಿಡವಾಗಿ ಮರವಾಗಿ ಗೆಲ್ಲುಬಿಡುವುದನ್ನು ಆಶ್ಚರ್ಯ ಚಕಿತರಾಗಿ ಪರಿಶೀಲಿಸುತ್ತಿದ್ದರು ಎಂದರೆ ಸರಿಹೋಗಬಹುದು. ಆದರೆ ಈ ವಿಚಾರವೃಕ್ಷದ ಫಲವು ಅವರಿಗೆ ಎಲ್ಲಕ್ಕಿಂತ ಹೆಚ್ಚಿನ ಅಚ್ಚರಿಯನ್ನುಂಟುಮಾಡುವ ವಿಷಯವಾಯಿತು.

ಹೌದು, ನೀರ ಮೇಲೆ ಚಾಚಿಕೊಂಡ ಗೆಲ್ಲಿನ ಮೇಲೆ ಮೂವರೂ ಆಸೀನರಾಗಿದ್ದರು. ಅವರ ಉಡುಗೆಯೋ ಹರಕು ಚಿಂದಿ-ಕೂದಲೋ, ಕಣ್ಣಿಗೆ ಬೀಳದಂತೆ ಹಿಂದಕ್ಕೆ ಸೆಳೆಯಲಾಗಿತ್ತು. ಹಿರಿಯರಿಗೆ ಹುಲುಸಾಗಿ ಗಡ್ಡ ಬೆಳೆದಿತ್ತು: ಅವರ ಸೋಮಾರಿ ಕಾಲುಗಳ ನೀರಾಟದಿಂದ ಅವರ ಕೆಳಗಡೆಯಲ್ಲಿ ತೋಡು ಆಳವಾಗಿತ್ತು. ಅವರ ಮೇಲ್ಗಡೆಯ ದೆವ್ವನಂಥ ಮರವು ಗಾಳಿಗೆ ತೊನೆಯುತ್ತಾ ಆಗೊಮ್ಮೆ ಈಗೊಮ್ಮೆ ಒಣ ಎಲೆಯನ್ನು ವಿಸರ್ಜಿಸುವುದು, ರಾಬಿಗೆ ಐದು ವರ್ಷ ಸಂದಿತು.

ಒಣಗಿದೆಲೆಯೊಂದು ಅವನ ತೊಡೆಯ ಮೇಲೆಬಿದ್ದಾಗ ರಾಬೀ 'ಸಿಕಾಮೋರ್ ವೃಕ್ಷಗಳು ಒಳ್ಳೆಯ ವೃಕ್ಷಗಳಲ್ಲವೆ?' ಎಂದು ಕೇಳಿದನು. ಜಾಕೊಬ್ ಆ ಎಲೆಯನ್ನು ತೆಗೆದು ಅದನ್ನು ಸೀಳಿ ದಂಟನ್ನು ಹೊರ ತೆಗೆದು 'ಹೌದು. ನೀರಿನ ಹತ್ತಿರ ಬೆಳೆಯುವ ಮರಗಳಿವು. ಎಲ್ಲಾ ಒಳ್ಳೆಯ ಪದಾರ್ಥಗಳಿಗೂ ನೀರೆಂದರೆ ಪ್ರಾಣ. ಕೆಟ್ಟ ಪದಾರ್ಥಗಳು ಒಣ ಜಾಗದಲ್ಲಿ ಮಾತ್ರವೇ ಬೆಳೆಯುತ್ತವೆ' ಎಂದನು.

'ಸಿಕಾಮೋರ್ ಮರ ದೊಡ್ಡದಾಗಿಯೂ ಒಳ್ಳೆಯದಾಗಿಯೂ ಬೆಳೆಯುವಂಥದು. ಒಳ್ಳೆಯ ಪದಾರ್ಥಗಳು ಬದುಕಬೇಕಾದರೆ ದೊಡ್ಡ ದಾಗಿರಬೇಕಾದ್ದು ಅನಿವಾರ್ಯವೆಂದು ನನಗೆ ತೋರುತ್ತದೆ ಚಿಕ್ಕಪುಟ್ಟ ಗಾತ್ರದ ಒಳ್ಳೆಯ ಪದಾರ್ಥಗಳನ್ನು ಚಿಕ್ಕ ಪುಟ್ಟ ಕೆಟ್ಟ ಪದಾರ್ಥಗಳು ನಾಶಮಾಡಿ ಬಿಡುವುವು. ದೊಡ್ಡ ಪದಾರ್ಥವು ವಿಷಪೂರ್ಣವಾಗಿರು ವುದೂ, ದ್ರೋಹವೆಸಗುವುದೂ ಅಪರೂಪ. ಆದುದರಿಂದ ಮನುಷ್ಯನ ವಿಚಾರದಲ್ಲಿ ಯಾವುದು ದೊಡ್ಡದೋ ಅದು ಒಳ್ಳೆಯದು, ಯಾವುದು ಚಿಕ್ಕದೋ ಅದು ಕೆಟ್ಟದ್ದು. ರಾಬೀ, ತಿಳಿಯಿತೇನಪ್ಪಾ?'

'ಹೌದು, ತಿಳಿಯಿತು. ಆನೆಗಳ ಹಾಗಲ್ಲವೆ?'

'ಆನೆಗಳು ದುಷ್ಟ ಪ್ರಾಣಿಗಳು ನಿಜ. ಆದರೆ ಅವುಗಳ ವಿಷಯ ಯೋಚನೆ ಮಾಡುವಾಗ ಅವು ಸಾಧು ಮತ್ತು ಒಳ್ಳೆಯ ಪ್ರಾಣಿಗಳಂತೆ ತೋರುವುವು'.

'ಆದರೆ ನೀರು, ನೀರಿನ ವಿಷಯ ಏನನ್ನುತ್ತೀಯಾ?' ಎಂದು ಜಾಕೊಬ್ ನಡುವೆ ಬಾಯಿ ಹಾಕಿ ರಾಬಿಯನ್ನು ಪ್ರಶ್ನಿಸಿದನು.

'ನೀರಿನ ವಿಷಯ ನನಗೆ ಗೊತ್ತಿಲ್ಲ' ಎಂದ ರಾಬಿ.

'ನಾನು ಹೇಳುವೆ. ನೀರು ಜೀವನದ ಮೂಲ ಬೀಜ. ಮೂರು ಭೂತಗಳಲ್ಲಿ ನೀರು ಶುಕ್ಲ, ಭೂಮಿಯು ಗರ್ಭ, ಸೂರ್ಯನ ಪ್ರಕಾಶವು ಅಂಕುರ'.

ಹೀಗೆ ಮಗು ರಾಬಿಗೆ ಅವರು ಅರ್ಥಹೀನವಾದ ಹುಚ್ಚುಚ್ಚಾರ ಗಳನ್ನೆಷ್ಟೋ ಪಾಠ ಮಾಡಿಸಿದರು.

ಜೂನಿಯಸ್ ಮಾಲ್ಟ್‌ಬಿಯ ಹೆಂಡತಿ ಮತ್ತು ಇಬ್ಬರು ಮಕ್ಕಳು ಸತ್ತ ಮೇಲೆ ಕಣಿವೆಯ ಜನ ಅವನ ಹತ್ತಿರ ಮಾತನ್ನೇ ಬಿಟ್ಟರು. ಆದರೆ ರೋಗಕಾಲದಲ್ಲಿ ಜೂನಿಯಸನ ಕ್ರೌರ್ಯದ ಕಥೆಗೆ ಎಷ್ಟು ಶಾಖೋಪಶಾಖೆಗಳು ಹರಡಿದುವೆಂದರೆ ಕೊನೆಗೆ ಸ್ವಂತ ಭಾರದಿಂದಲೆ ಆ ಕಥೆಯ ಹೆಮ್ಮರವು ಉರುಳಿ ಹೋಯಿತು. ಮಕ್ಕಳು ಸಾಯುತ್ತಿರುವಾಗ ಜೂನಿಯಸ್ ಪುಸ್ತಕವನ್ನೋದುತ್ತಿದ್ದ ಕಥೆಯನ್ನು ಅವರು ಮರೆತರೂ ಜೂನಿಯಸನು ಮುಂತರುತಿದ್ದ ಸಮಸ್ಯೆಯನ್ನು ಅವರು ಮರೆಯಲಾರರು. ಇಂಥ ಫಲವತ್ತಾದ ಕಣಿವೆಯಲ್ಲಿ ಈ ಮನುಷ್ಯ ಕಂಗಾಲು ಜೀವನ ನಡೆಸುತ್ತಿದ್ದ. ಬೇರೆ ಕುಟುಂಬಗಳು ಹಣ ಮಾಡಿ, ಫೋರ್ಡ್ ಕಾರು ರೇಡಿಯೋಗಳನ್ನು ಕೊಂಡು ತಂದು, ವಿದ್ಯುದ್ದೀಪಗಳನ್ನು ಬೆಳಗಿಸಿ ವಾರಕ್ಕೆರಡಾವರ್ತಿ ಮೋಂಟೆರೆಗೋ, ಸೆಲಿನಾಸಿಗೋ ಹೋಗಿ ಚಲನಚಿತ್ರವನ್ನು ನೋಡಿ ಬರುತ್ತಿದ್ದರೆ ಜೂನಿಯಸ್ ದಿನೇದಿನೇ ಅನಾಗರಿಕತೆಯ ಮಾರ್ಗದಲ್ಲಿ ಪತನೋನ್ಮುಖನಾಗಿದ್ದನು. ಅವನ ಬಂಗಾರದಂಥ ಹೊಲವು ಪಾಳುಬಿದ್ದಿರುವುದನ್ನು ನೋಡಿದರೆ ಕಣಿವೆಯ ಜನರಿಗೆ ಹೊಟ್ಟೆಯಲ್ಲಿ ಉರಿ ಏಳುವುದು. ಅವನ ಮನೆಯ ಸುತ್ತಲಿನ ಹೊಲಸನ್ನು ಕಂಡು ನೆರೆಹೊರೆಯ ಹೆಂಗಸರಿಗೆ ಓಕರಿಕೆ ಬರುವುದು. ಅವನ ಸೋಮಾರಿತನವನ್ನೂ, ಅಭಿಮಾನಶೂನ್ಯತೆಯನ್ನೂ ಕಂಡು ಅವರು ಉರಿದೇಳುವರು. ಕೆಲವರು ಅವನಿಗೆ ಭೇಟಿಕೊಟ್ಟು ತಮ್ಮನ್ನು ನೋಡಿ ಯಾಬರೂ ಕಲಿತಾನೆಂದು ಆಸೆ ಕಟ್ಟಿಕೊಂಡರು. ಆದರೆ ವ್ಯತ್ಯಾಸವೇ ತಿಳಿಯದಂತೆ ಅವನು ವರ್ತಿಸುತ್ತಿದ್ದನು. ಜೂನಿಯಸ್ ನೆರೆಹೊರೆಯವರ ದೃಷ್ಟಿಯಲ್ಲಿ ಅಸ್ಪೃಶ್ಯನಾಗಲು ಬಹಳ ಕಾಲ ಹಿಡಿಯಲಿಲ್ಲ. ಅವನ ಮನೆಗೆ ಹೋಗುವ ಖಾಸಗಿ ಹಾದಿಯಲ್ಲಿ ಈಗೀಗ ಯಾರೂ ಕಾಲಿಡುತಿದ್ದಿಲ್ಲ. ಅವನನ್ನು ಸಮಾಜದಿಂದ ಹೊರಹಾಕಿ ಹತ್ತಿರ ಬಂದರೆ ಹೊರತಳ್ಳಬೇಕೆಂದೂ ಅವರು ನಿರ್ಧರಿಸಿದರು.

ಜೂನಿಯಸಗೆ ಅವರ ಯಾವ ನಿರ್ಣಯವೂ ತಿಳಿಯದು, ಅವನು ಈಗಲೂ ಪರಮ ಸುಖಿಯಾಗಿದ್ದನು. ಅವನ ಬದುಕು ಅವನ ವಿಚಾರಧಾರೆಯಷ್ಟೇ ಅಸ್ವಾಭಾವಿಕವೂ ರೋಮಾಂಚಕಾರಿಯೂ, ಅಪ್ರಧಾನವೂ

ಆಗಿದ್ದಿತು. ಎಳೆಬಿಸಿಲಲ್ಲಿ ಮೈಯೊಡ್ಡಿ ನೀರಿನಲ್ಲಿ ಕಾಲುಗಳನ್ನು ಮುಳುಗಿಸಿ ಕೂಡುವುದಕ್ಕಿಂತ ಬೇರೇನು ಸುಖವಿದ್ದೀತು? ಉಡುಗೆ ಚೆನ್ನಾಗಿಲ್ಲದಿದ್ದರೇನಾಯಿತು, ಎಲ್ಲಿಗೂ, ಯಾರಲ್ಲಿಗೂ ಹೋಗುವ ಅಗತ್ಯವೇ ಇರಲಿಲ್ಲವಲ್ಲಾ?

ಜೂನಿಯಸನನ್ನು ದ್ವೇಷಿಸುವ ಜನರು ಅವನ ಮಗನ ಮೇಲೆ ಅಪೂರ್ವ ಕರುಣೆಯ ಮಳೆಯನ್ನು ಕರೆಯಲಾರಂಭಿಸಿದರು. ಮಗುವಿನ ಶೈಶವದ ಚಿಂತೆ ಹಲವರಿಗೆ. ಪಾಪ, ಆದರೂ ಜೂನಿಯಸನ ಜೀವನ ಕ್ರಮವನ್ನು ವ್ಯತ್ಯಾಸಗೊಳಿಸಲು ಅವರಲ್ಲಿ ಯಾರಿಗೂ ಮನಸ್ಸಿರಲಿಲ್ಲ. ಅವನಿಗೆ ಶಾಲೆಗೆ ಹೋಗುವ ವಯಸ್ಸಾದಾಗ ಜಿಲ್ಲಾಧಿಕಾರಿಗಳ ಅಧಿಕಾರಕ್ಕೆ ಆತ ಒಳಪಡುವುದರಿಂದ ಆಗಲಾದರೂ ಅವನಿಗೆ ಹೊಸ ಬಟ್ಟೆಬರೆ ತೊಡಿಸಿ ಅವನ ಸುಧಾರಣೆ ಮಾಡಬಹುದೆಂದು ಅವರು ನಿರ್ಧರಿಸಿ, ಅವನಿಗೆ ವಯಸ್ಸಾಗುವುದನ್ನೇ ಇದಿರು ನೋಡುತ್ತಿದ್ದರು.

ಇಡಿ ಕಣಿವೆಯೇ ರಾಬಿ ಶಾಲೆಗೆ ಹೋಗುವ ವಯಸ್ಸಾಗುವುದನ್ನು ಕಾದು ನಿಂತ ಹಾಗಿತ್ತು. ಆರನೇ ಹುಟ್ಟು ಹಬ್ಬವಾದರೂ ಅವನು ಶಾಲೆಯ ಸಮೀಪ ಸುಳಿಯದಿದ್ದಾಗ ಸ್ಕೂಲ್‌ಬೋರ್ಡಿನ ಗುಮಾಸ್ತ ಜಾನ್ ವೈಟ್‌ಸೈಡ್ ಜೂನಿಯಸ್ ಮಾಲ್ಟ್‌ಬಿಗೆ ಒಂದು ಪತ್ರವನ್ನು ಬರೆದರು.

'ಅಯ್ಯೋ, ಇದರ ಯೋಚನೆಯೆ ನನಗಿರಲಿಲ್ಲ. ರಾಬಿ, ನೀನಿನ್ನು ಶಾಲೆಗೆ ಹೋಗಬೇಕು' ಎಂದ ಜೂನಿಯಸ್.

'ಇಲ್ಲ, ನಾನು ಹೋಗುವುದಿಲ್ಲ' ಎಂದ ರಾಬಿ.

'ಅದು ನನಗೆ ಗೊತ್ತು. ನೀನು ಹೋಗಬೇಕೆಂದು ನನ್ನ ಒತ್ತಾಯವೂ ಇಲ್ಲ: ಆದರೆ ನಮ್ಮಲ್ಲಿ ಕಾನೂನಿದೆಯಲ್ಲಾ— ಕಾನೂನನ್ನು ಮುರಿದರೆ ಶಿಕ್ಷೆ ಎಂಬುದಿದೆಯಲ್ಲಾ? ಕಾನೂನನ್ನು ಮುರಿಯುವಾಗ ಉಂಟಾಗುವ ಸಂತೋಷವನ್ನೂ, ಫಲಿತಾಂಶವಾಗಿ ದೊರೆಯುವ ದಂಡನೆಯನ್ನೂ ನಾವು ತುಲನೆ ಮಾಡಿ ನೋಡುವುದು ಯೋಗ್ಯ. ಕಾರ್ಥೇಜಿನಲ್ಲಿ ದುರವಸ್ಥೆಗೂ ದಂಡನೆ ಇತ್ತು: ಯಾರಾದರೂ ಸೇನಾಪತಿ ದುರ್ದೈವದಿಂದ ಯುದ್ಧದಲ್ಲಿ ಸೋತರೆ ಅವನಿಗೆ ಮರಣ ದಂಡನೆ ವಿಧಿಸು

ತ್ತಿದ್ದರು. ಈಗಿನ ಕಾಲದಲ್ಲಿ ಜನನ ವಶಾತ್ ಅಥವಾ ಪರಿಸ್ಥಿತಿ ವಶಾತ್ ಒದಗುವ ದುರ್ಘಟನೆಗಳಿಗೆ ದಂಡನೆ ವಿಧಿಸುತ್ತಾರೆ’.

ತರುವಾಯ ಅವರೊಳಗೆ ನಡೆದ ಚರ್ಚೆಯ ನಡುವೆ ಅವರಿಗೆ ಕಾಗದದ ವಿಷಯ ಮರೆತೇ ಹೋಗಿ ಜಾನ್‌ವೈಟ್‌ಸೈಟ್ ಜೂನಿಯಸಗೆ ಎರಡನೆಯ ಎಚ್ಚರಿಕೆಯನ್ನು ನೀಡಬೇಕಾಯಿತು. ಅದು ಬಂದ ಕೂಡಲೇ ಜೂನಿಯಸ್ ‘ರಾಬಿ, ನೀನು ಇನ್ನು ಹೋಗದೆ ಉಪಾಯವಿಲ್ಲ. ಚಿಂತಿಸಬೇಡ. ಅಲ್ಲಿ ನಿನಗೆ ತುಂಬಾ ವಿಷಯಗಳನ್ನು ಹೇಳಿಕೊಡುತ್ತಾರೆ, ಹೋಗು’ ಎಂದನು.

‘ನೀನೇ ಹೇಳಿಕೊಡಬಾರದೆ?’ ಎಂದು ರಾಬಿ ಮರುನುಡಿದನು.

‘ಊಂ, ಹೂಂ, ನನ್ನಿಂದ ಈಗ ಸಾಧ್ಯವಿಲ್ಲ. ಅವರು ಕಲಿಸುವ ವಿಷಯಗಳು ನನಗೀಗ ಸಂಪೂರ್ಣ ಮರೆತು ಹೋಗಿವೆ’.

‘ನಾನು ಹೋಗುವುದಿಲ್ಲ, ನನಗೆ ಕಲಿಯುವ ಇಚ್ಛೆಯೇ ಇಲ್ಲ’.

‘ನಿನಗೆ ಇಚ್ಛೆ ಇಲ್ಲವೆಂದು ನನಗೂ ಗೊತ್ತಿದೆ. ಆದರೆ ಬೇರೆ ಉಪಾಯವಿಲ್ಲ.’

ಹೀಗೆ ಒಂದು ದಿನ ಮುಂಜಾನೆ ರಾಬಿ ಶಾಲೆಯ ಹಾದಿ ಹಿಡಿಯಬೇಕಾಯಿತು. ಯಾವುದೋ ಓಬೀರಾಯನ ಕಾಲದ, ಕಾಲ್ಗಂಟಿನಲ್ಲಿಯೂ ಹಿಂಬದಿಯಲ್ಲಿಯೂ ಹರಿದು ಹೋದ ಪೈಜಾಮು, ಕಾಲರ್ ಹರಿದ ಒಂದು ನೀಲವಾದ ಅಂಗಿ ಇಷ್ಟೇ ಅವನ ಶಾಲೆಯ ಪೋಷಾಕು. ಅದನ್ನು ಧರಿಸಿ ಬೂದು ಬಣ್ಣದ ಕಣ್ಣುಗಳ ಮೇಲೆ ಬಿರುಗೂದಲನ್ನು ಕೆದರಿಕೊಂಡು ಅವನು ಬರುವುದನ್ನು ನೋಡಿದರೆ ಕುದುರೆಮರಿಯಂತೆ ಕಾಣುತ್ತಿದ್ದನು.

ಮಕ್ಕಳು ಶಾಲೆಯ ಅಂಗಳದಲ್ಲಿ ಅವನನ್ನು ಸುತ್ತುಗಟ್ಟಿ ಬಹಳ ಹೊತ್ತು ದಿಟ್ಟಿಸಿ ನೋಡಿದರು. ಅವರು ಜೂನಿಯಸ್ ಕುಟುಂಬದ ಸೋಮಾರಿತನ, ಬಡತನದ ಕಥೆಯನ್ನು ಕೇಳಿದ್ದರು. ರಾಬಿ ಬಂದ ಕೂಡಲೆ ಅವನಿಗೆ ಹಿಂಸೆಕೊಡಬೇಕೆಂದೂ ಅವರು ತೀರ್ಮಾನಿಸಿದ್ದರು. ಆ ಶುಭಮುಹೂರ್ತ ಇದೀಗ ಬಂದಿದೆಯಾದರೂ ಅವರು ಅವನನ್ನು ಸುತ್ತುಗಟ್ಟಿ ದುರುಗುಟ್ಟುವುದಷ್ಟೇ ಮಾಡಬಲ್ಲರು. ‘ಈ ಅಂಗಿ ಎಲ್ಲಿಂದ

ತಂದೆಯೋ?'‘ಅವನ ಕೂದಲು ನೋಡಿ'ಎಂದು ಹೇಳಬೇಕು ಎಂಬುದಾಗಿ ಅವರು ಎಣಿಸಿದ್ದಿಲ್ಲ ತನ್ನಂತೆ ಇಂಗಿಹೋಯಿತು. ಅವನ ಮುಂದೆ ಅವರು ಹತಪ್ರಭರಾದರು.

ರಾಬಿ ಅವರನ್ನು ಗಂಭೀರವಾಗಿ ಪರಿಕಿಸಿದನು. ಅವನಿಗೆ ಒಂದಿಷ್ಟೂ ಅಂಜಿಕೆ ಎನಿಸಲಿಲ್ಲ. ‘ಏನು, ನೀವು ಆಟವಾಡುವುದಿಲ್ಲವೆ? ನಮ್ಮ ತಂದೆ ಹೇಳಿದ–ನೀವು ಆಟ ಆಡುತ್ತಿರುತ್ತೀರೆಂತ?' ಎಂದು ಅವನು ಕೇಳಿದ ಕೂಡಲೆ ಅವನ ಸುತ್ತಣ ಗುಂಪಿನಲ್ಲಿ ಕೂಗಾಟ ಕಿರಿಚಾಟ ಆರಂಭ ವಾಯಿತು: ‘ಇವನಿಗೆ ಆಟ ಗೊತ್ತಿಲ್ಲ' ‘ಹಾಗಾದರೆ ಇವನಿಗೆ ಪೀವೀ ಕಲಿಸುವಾ' ‘ಬೇಡ, ನಿಗ್ಗರ್ ಬೇಬಿ ಆಗಬಹುದು' ‘ಅದು ಬೇಡ— ಕೈದಿಯಾಟ ಕಲಿಸೋಣ'. ‘ಇವನಿಗೆ ಆಟ ಗೊತ್ತಿಲ್ಲಾ'

ಇಷ್ಟೆಲ್ಲ ಅಂದರೂ ಮಕ್ಕಳಿಗೆ ಅವತ್ತು ಆಟ ಗೊತ್ತಿಲ್ಲದಿರುವುದೇ ಒಂದು ಭೂಷಣವೆಂದು ಅದೇಕೋ ಅನಿಸಹತ್ತಿತು. ರಾಬಿಯ ಮುಖ ದಲ್ಲಿ ಗಾಂಭೀರ್ಯವಿತ್ತು. ಆತ ನಿಧಾನವಾಗಿ ‘ಪೀವೀ ನೋಡೋಣ' ಎಂದ. ಎಲ್ಲರೂ ನಾನು ಮುಂದೆ ತಾನು ಮುಂದೆ ಎಂದು ಅವನಿಗೆ ಆಟ ಕಲಿಸಹೊರಟರು. ಅಲ್ಲಿಯೂ ರಾಬಿಯೆ ನಾಯಕನಾದ. ಅವನು ತನಗೆ ಬೇಕಾದ ಒಬ್ಬ ಶಿಕ್ಷಕನನ್ನೆ ಆರಿಸಿದನು.

ರಾಬಿ ಶೀಘ್ರದಲ್ಲೇ ಇಡಿ ಶಾಲೆಗೆ ಪ್ರಭಾವಶಾಲಿ ಪುರುಷನಾಗಿ ಬಿಟ್ಟನು ವಯಸ್ಸಾದ ಹುಡುಗರು ಅವನ ಗೋಜಿಗೆ ಬರುತ್ತಿರಲಿಲ್ಲ. ಸಣ್ಣ ಹುಡುಗರಗಂತೂ ಅವನನ್ನೇಅನುಕರಿಸುವ ಹಂಬಲವು ಅತಿಯಾಗಿ ಅಂಗಿಯಲ್ಲಿ ಬೇಕೆಂತಲೆ ತೂತು ಕೊರೆದವರೂ ಇದ್ದರು. ಶಾಲೆಯ ಗೋಡೆಗೆ ಒರಗಿಕೊಂಡು ಮಧ್ಯಾಹ್ನದ ಹೊತ್ತು ಅವರು ಭೋಜನ ಮಾಡುವ ವೇಳೆ ರಾಬಿ ತನ್ನ ತಂದೆಯ ಕಥೆಯನ್ನೂ, ಸಿಕಮೋರ್ ಮರಗಳ ಚೆಲುವನ್ನೂ ವರ್ಣಿಸುವನು.ಆಗ ಅವರಿಗೆ ತಮ್ಮ ತಂದೆ ಕೂಡ ಇದೇ ರೀತಿ ಸೋಮಾರಿಯಾದರೆ ಎಷ್ಟು ಚೆನ್ನೆಂದು ಅನಿಸುವುದು

ಅವರಲ್ಲಿ ಕೆಲವರು ತಮ್ಮ ಹೆತ್ತವರ ಮಾತನ್ನು ಮೀರಿಯೂ ಮಾಲ್ಟಬೀ ಹೊಲದ ಕಡೆಗೆ ಓಡಿ ಜೂನಿಯಸನ ಅಕ್ಕ ಪಕ್ಕದಲ್ಲಿ ಕೂತು ಆತ ಓದುವ ‘ಟ್ರೆಜರ್ ಐಲೆಂಡ್' ಕಾದಂಬರಿಯನ್ನೊ, ಗ್ಯಾಲಿಕ್

ಅಥವಾ ಟ್ರಾಫಲ್ಗಾರ ಯುದ್ಧದ ಬಣ್ಣನೆಯನ್ನೋ ಆಸಕ್ತಿಯಿಂದ ಆಲಿಸುವರು. ಕೆಲವೇ ದಿನಗಳಲ್ಲಿ ತಂದೆಯ ಪ್ರೋತ್ಸಾಹದಿಂದ ರಾಬಿ ಇಡಿ ಶಾಲೆಗೇ ನಾಯಕನಾದನು. ಅವನಿಗೆ ಸಮೀಪದ ಸ್ನೇಹಿತರು ಯಾರೂ ಇರಲಿಲ್ಲ, ಅವನಿಗೆ ಅಡ್ಡ ಹೆಸರನ್ನಿಟ್ಟವರೂ ಇಲ್ಲ. ಬದಲು ಎಲ್ಲಾ ಜಗಳಗಳಿಗೂ ಕೊನೆಯ ತೀರ್ಮಾನ ರಾಬಿಯೇ ಕೊಡಬೇಕು. ಅವನ ಉಚ್ಚಸ್ಥಾನದಿಂದಾಗಿ ಅವನೊಡನೆ ಜಗಳ ಕೆರೆಯುವವರಂತೂ ಇರಲೇ ಇಲ್ಲ. ರಾಬಿಗೆ ತನ್ನ ಸ್ಥಾನಮಾನದ ಅರಿವಾಗಲು ಬಹಳ ಕಾಲ ಹಿಡಿಯಿತು. ಅವನಲ್ಲಿ ಪ್ರಕಟವಾಗುತ್ತಿದ್ದ, ವಯಸ್ಸಿಗೆ ಮೀರಿದ ಹಿರಿತನದಿಂದ ಅವನಿಗೆ ನಾಯಕತ್ವವು ಸ್ವಯಂ ಪ್ರಾಪ್ತವಾಗಿತ್ತು. ಅನತಿ ಕಾಲದಲ್ಲಿ ಹುಡುಗರು ಯಾವ ಆಟವನ್ನಾಡಬೇಕೆಂದು ರಾಬಿಯೇ ನಿರ್ಣಯಿಸುವಂತಾಯಿತು. ಆಟದಲ್ಲಿ ಅವನು ಹಿಂದಾದರೂ ಆಟದ ನಿಯಮಗಳನ್ನೂ, ಧರ್ಮವನ್ನೂ ಪಾಲಿಸುವಲ್ಲಿ ಆತ ನ್ಯಾಯಪಾಲಕನಂತೆ ವರ್ತಿಸಬೇಕಾಗುತ್ತಿತ್ತು. ಸಾಲದುದಕ್ಕೆ ಜೂನಿಯಸ್ ಮತ್ತು ಜಾಕೊಬ ಅವರೊಡನೆ ವಿಚಾರಪರಾಮರ್ಶೆ ನಡೆಸಿ ರಾಬಿ ಎರಡು ಆಟಗಳನ್ನು ತಾನೇ ಸೃಷ್ಟಿ ಮಾಡಿದನು. ಅಲ್ಲಿನ ನಿಯಮಗಳನ್ನು ಮಾಡಿದವನೂ ಅವನೇ ಎಂದು ಬೇರೆ ಹೇಳಬೇಕಾಗಿಲ್ಲ.

ಆಟದ ಬಯಲಲ್ಲಿ ಮಾತ್ರವೇ ಅಲ್ಲದೆ ಪಾಠದಲ್ಲಿಯೂ ಶಾಲೆಯ ಉಪಾಧ್ಯಾಯಿನಿ ಕುಮಾರಿ ಮಾರ್ಗನಳಿಗೆ ರಾಬಿಯ ವಿಷಯದಲ್ಲಿ ಆಶ್ಚರ್ಯವೇ ಉಂಟಾಯಿತು. ಅವನು ಓದಬಲ್ಲ, ದೊಡ್ಡವರ ಪದಪ್ರಯೋಗಗಳನ್ನುಚ್ಚರಿಸಬಲ್ಲ, ಆದರೆ ಬರೆಯಲಾರ. ಎಷ್ಟು ದೊಡ್ಡ ಸಂಖ್ಯೆಯೇ ಇರಲಿ, ಅದು ಅವನಿಗೆ ಗೊತ್ತು. ಆದರೆ ಯಾವ ಸಣ್ಣ ಲೆಕ್ಕವನ್ನೂ ಅವನಿಂದ ಮಾಡಿಸಲು ಆಗದು. ಬರೆಯುವುದು ಅವನಿಗೆ ಬಹಳ ಪ್ರಯಾಸದ ಕೆಲಸವೇ ಆಯಿತು. ಪುಸ್ತಕದಲ್ಲಿ ಏನೇನೋ ಗೀಚುತ್ತಿರುವುದನ್ನು ಕಂಡು ಮಿಸ್ ಮಾರ್ಗನ್ 'ನೋಡಪ್ಪಾ, ಮರಳಿ ಮರಳಿ ಬರೆದದ್ದನ್ನೇ ಬರೆ, ಆಗ ತಾನೇ ಬರುತ್ತದೆ. ಪ್ರತಿಯೊಂದು ಅಕ್ಷರವನ್ನೂ ಜಾಗ್ರತೆಯಿಂದ ಬರೆ' ಎಂದಳು.

ರಾಬಿ ಏನು ಬರೆಯಲಿ ಎಂದು ಮನಸ್ಸನ್ನೆಲ್ಲ ತಡಕಿದನು. ಕೊನೆಗೆ

'ನಾವು ನಂಬಲಾರದ ಅದ್ಭುತ ವಿಷಯವು ಪ್ರಪಂಚದಲ್ಲಿಯೇ ಇಲ್ಲ' ಎಂದು ಬರೆದನು 'ಅದ್ಭುತ' ಎಂಬ ಪದದಲ್ಲಿನ ಧ್ವನಿಯೇ ಅದರ ಅರ್ಥ ವನ್ನು ಸೂಚಿಸುತ್ತಿತ್ತು. ಅದೇ ವಾಕ್ಯವನ್ನು ಮರಳಿ ಮರಳಿ ಬರೆದನು. 'ಅದ್ಭುತ' ಶಬ್ದದ ಚಮತ್ಕಾರಕ್ಕೆ ಅವನೇ ಮರುಳಾಗಿದ್ದನು.

ಮಿಸ್ ಮಾರ್ಗನ್ ರಾಬಿಯ ವಾಕ್ಯವನ್ನು ಕಂಡು 'ಎಲಾ ಇದ ನ್ನೆಲ್ಲಿ ಕಲಿತೆ?' ಎಂದು ಬೆರಗಾದಳು. 'ಸ್ಟಿವನ್‌ಸನ್: ನನ್ನಪ್ಪನಿಗೆ ಸ್ಟಿವನ್‌ಸನ್ ಬಾಯಿಪಾಠ ಬರುತ್ತದೆ' ಎಂದ ರಾಬಿ.

ಜೂನಿಯಸನ ವಿಷಯ ಮಿಸ್ ಮಾರ್ಗನ್ ಕೇಳದ ಕಥೆ ಯಾವುದೂ ಇರಲಿಲ್ಲವಾದರೂ ಅದೇಕೊ ಆಕೆಗೆ ಈಗ ಆ ಮನುಷ್ಯನನ್ನು ನೋಡಬೇಕೆಂಬ ಲವಲವಿಕೆ ಅತಿಯಾಯಿತು.

ಆಟದ ಬಯಲಿನ ಆಟಗಳಲ್ಲಿ ಅಭಿರುಚಿ ಕುಂದುತ್ತಾ ಬಂದಾಗ ರಾಬಿ ತಂದೆಗೆ ವರದಿ ಮಾಡಿದನು. ಅದಕ್ಕೆ ಜೂನಿಯಸ್ 'ಪತ್ತೇ ದಾರಿ ಆಟವನ್ನಾಡಿ, ನಾನು ಚಿಕ್ಕಂದಿನಲ್ಲಿ ಅದನ್ನಾಡಿದ್ದೇನೆ. ಒಳ್ಳೆಯ ಆಟ' ಎಂದನು. 'ಯಾರನ್ನು ಪತ್ತೆ ಹಿಡಿಯುವುದೋ?' ಎಂದು ರಾಬಿ ಕೇಳಿದ. 'ಅದರಲ್ಲೇನಂತೆ ಯಾರನ್ನಾದರೂ ಪತ್ತೆ ಹಿಡಿದರಾಯಿತು. ನಾವು ಇಟಾಲಿಯಾನರನ್ನು ಪತ್ತೆ ಹಚ್ಚುತ್ತಿದ್ದೆವು' ಎಂದು ಜೂನಿಯಸ್ ಮರುನುಡಿದನು.

ಆ ದಿನವೇ ರಾಬಿ ಶಾಲೆಗೆ ಓಡಿ ವಿಘಂಟುವಿನ ಪುಟಗಳನ್ನು ಮಗುಚಿ B. A. S. S. F. E. A. J. ಎಂಬ ಗುಪ್ತ ಸಂಸ್ಥೆಯನ್ನು ಸ್ಥಾಪಿಸಿದನು. ಅದರ ಅರ್ಥ: ಬಾಯ್ಸ್ ಆಕ್ಸಿಲಿಯರಿ ಸೀಕ್ರೆಟ್ ಸರ್ವಿಸ್ ಫಾರ್ ಎಸ್ಪಯೊನೇಜ್ ಎಗೆನ್ಸ್ಟ್ ದ ಜಪನೀಸ್' ಎಂದಾಗುವುದು. ಬೇರೇನಿಲ್ಲವಾದರೂ ಹೆಸರು ಗಂಭೀರವಾಗಿತ್ತು. ಜಪಾನರ ವಿರುದ್ಧ ಬೇಹು ಹೇಳುವ ಗುಪ್ತಚರ ಸಹಾಯಕ ಬಾಲ ಸಂಘಕ್ಕೆ ಶಾಲೆಯ ಪಕ್ಕದ ಹಸುರು ಮರಗಳ ಎಡೆಯಲ್ಲಿ ಹುಡುಗರಿಗೆ ದೀಕ್ಷೆ ಕೊಡುವ ಕೆಲ ಸವೂ ಮುಗಿಯಿತು. ಸಂಘದ ಸದಸ್ಯರ ಪ್ರತಿಜ್ಞಾ ವಾಕ್ಯವನ್ನು ಕೇಳಿ ಯಾರಾದರೂ ಅಂಜತಕ್ಕದ್ದೇ. ಆ ಮೇಲೆ ದೀಕ್ಷಾಬದ್ಧ ಸದಸ್ಯರ ಗುಂಪನ್ನುದ್ದೇಶಿಸಿ ರಾಬಿ ರಾಷ್ಟ್ರವು ಒಂದಲ್ಲ ಒಂದು ದಿನ ಜಪಾನಿಯರ

ವಿರುದ್ಧ ಕದನವನ್ನು ಸಾರುವುದು ಖಂಡಿತವಾದುದರಿಂದ ಈಗಿನಿಂದಲೆ ಸನ್ನದ್ಧರಾಗಿರುವುದು ಒಳ್ಳೆಯದೆಂದು ಅವರಿಗೆ ವಿವರಿಸಿ ಹೇಳಿದನು. ಈ ದುಷ್ಟ ಜನಾಂಗದ ನೀಚ ಕೃತ್ಯಗಳನ್ನು ಬಯಲಿಗೆಳೆದಷ್ಟೂ ಯುದ್ಧ ಕಾಲದಲ್ಲಿ ದೇಶಸೇವೆ ಮಾಡಿದಂತಾಗುವುದೆಂದು ತಿಳಿಸಿದನು.

ದೀಕ್ಷಾಬದ್ಧ ಸದಸ್ಯರು ಅವನ ಪದಪುಂಜಗಳಿಗೆ ಮಾರು ಹೋದರು. ಅಂಥ ದೊಡ್ಡ ದೊಡ್ಡ ಶಬ್ದಗಳನ್ನುಪಯೋಗಿಸುವ ಸ್ಥಳದಲ್ಲಿ ಹಾಜರಿರುವುದೇ ಒಂದು ಅದ್ಭುತ ಪ್ರಸಂಗವಲ್ಲವೆ? ಹೊಂಚುಹಾಕುವ ಕೆಲಸವನ್ನು ಸಂಘದ ಸದಸ್ಯರು ಆರಂಭಿಸಿದಂದಿನಿಂದ ನೂರನೆಯ ವರ್ಗದ ಟಕಾಷಿ ಕಟೋ ಎಂಬ ಹುಡುಗನಿಗೆ ಬಿಡುವೇ ಇಲ್ಲವಾಯಿತು. ಟಕಾಷಿ ಯಾರೊಡನಾದರೂ ಜಗಳಕ್ಕೆ ಬೆರಳೆತ್ತಿದರೆ ಸಾಕು ರಾಬಿಯ ಆಜ್ಞಾಪಾಲನೆಗೆ ಹತ್ತು ಕೈಗಳು ಮುಂದಾಗುತ್ತಿದ್ದುವು. ಟಕಾಷಿ ಶಾಲೆಯಿಂದ ಮನೆಗೆ ಹೊರಟರೆ ಅವನ ಹಿಂದಿನಿಂದ ಪೊದೆಗಳಲ್ಲಿ ಅವಿತುಕೊಂಡು ಐದು ಜನ ಸದಸ್ಯರಾದರೂ ಅವನ ಬೆನ್ನು ಹಿಡಿಯುತ್ತಿದ್ದರು. ರಾತ್ರಿ ಕಾಲದಲ್ಲಿ ಕಟೋ ಮನೆಯ ಮೇಲೆ ಹೊಂಚುಹಾಕುವುದು ನಿಲ್ಲಬೇಕಾದರೆ ಹಿರಿಯ ಕಟೋ ಒಂದು ಸಲ ಇರುಳಿನ ಕತ್ತಲಿಗೆ ಗುಂಡನ್ನು ಎಸೆದು ಬೆದರಿಸಬೇಕಾಯಿತು. ಅಂದಿನಿಂದ ಗುಪ್ತಚರರ ನಾಯಕ ರಾಬಿ ಸಂಗಾತಿಗಳಿಗೆ ರಾತ್ರಿಯ ಪಾಳಿಯನು ಬಿಡಿಸಿದನು. ರಾತ್ರಿ ನಮಗೇನು ಕಾಣುತ್ತದೆ?' ಎಂದು ವೈರಾಗ್ಯದ ಮಾತನ್ನಾಡಿದನು.

ಕಟ್ಟಕಡೆಗೆ ಟಕಾಷಿಗೆ ಎಲ್ಲಿ ವಿಹಾರಕ್ಕೆ ಹೋದರೂ ಆಮಂತ್ರಣ ದೊರೆಯಲು ಆರಂಭವಾಯಿತು. ಯಾಕೆಂದರೆ ಆತನನ್ನು ಬಿಟ್ಟರೆ ಹೊಂಚುಹಾಕಲು ಒಬ್ಬನಿರಬೇಕಲ್ಲಾ, ಆ ಕೆಲಸಕ್ಕೆ ಯಾರೂ ಸಿದ್ಧರಾಗಿರಲಿಲ್ಲ.

ಆದರೆ ಒಂದು ದಿನ ಅವರ ಸಂಘಕ್ಕೆ ತಾನೂ ಸದಸ್ಯನಾಗುವೆನೆಂದು ಟಕಾಷಿ ಅರ್ಜಿ ಸಲ್ಲಿಸಿದಾಗ ತಂಡಕ್ಕೆ ತಂಡವೇ ಸ್ತಬ್ಧವಾಯಿತು.

ರಾಬಿ ಕನಿಕರದಿಂದ 'ನಿನ್ನನ್ನು ಹೇಗಪ್ಪಾ ಸೇರಿಸಲಿ? ನೀನು ನಾವು ದ್ವೇಷಿಸುವ ಜಪಾನಿ ಜನಾಂಗಕ್ಕೆ ಸೇರಿದವನಲ್ಲವೆ?' ಎಂದು ಕೇಳಿದನು.

ಟಕಾಷಿ ಅಳುದನಿಯಿಂದ 'ನಾನು ನಿಮ್ಮ ಹಾಗೆ ಇಲ್ಲೇ ಹುಟ್ಟಿ ಬಳೆದವನು. ನಿಮ್ಮಂತೆ ಅಮೇರಿಕದವನು' ಎಂದನು.
ರಾಬಿಗೆ ಕಷ್ಟಕಿಟ್ಟುಕೊಂಡಿತು. ಅವನು ದೀರ್ಘವಾಗಿ ಯೋಚಿಸಿದನು. ಟಕಾಷಿಯ ಕುರಿತು ಕ್ರೌರ್ಯವನ್ನು ಆತ ತೋರಿಸಲಾರ. ಗಂಟು ಹಾಕಿದ ಹುಬ್ಬನ್ನು ಬಿಡಿಸಿ 'ನಿನಗೆ ಜಪಾನಿ ಭಾಷೆ ಬರುತ್ತದೆಯೆ?' ಎಂದು ಕೇಳಿದನು.

'ಬರದೆ ಏನು. ಸಾಕಷ್ಟು ಚೆನ್ನಾಗಿಯೇ ಬಲ್ಲೆ'.

'ಸರಿ, ಹಾಗದರೆ ನೀನು ನಮ್ಮ ದುಭಾಷಿಯಾಗಿ ಕೆಲಸಮಾಡು. ಗುಪ್ತ ಸಂದೇಶಗಳನ್ನು ಅನುವಾದಿಸಿ ನಮಗೆ ತಿಳಿಸಲು ನೀನು ನೆರವಾಗುವಿಯಂತೆ'.

ಟಕಾಷಿಗೆ ಹಿಡಿಸಲಾರದಷ್ಟು ಸಂತೋಷವಾಯಿತು 'ಅದಕ್ಕೇನಂತೆ? ಬೇಕಾದರೆ ನನ್ನಪ್ಪನ ಮೇಲೆ ನಿಗಾ ಇಡುತ್ತೇನೆ' ಎಂದು ಕೂಡ ಅವನು ಉತ್ಸಾಹದಿಂದ ಹೇಳಿದನು.

ಆದರೂ ಸಂಘದ ಚಟುವಟಿಕೆಗೆ ಈ ಪ್ರಸಂಗದಿಂದ ವಿಘ್ನವೇ ಬಂದಿತು. ಇನ್ನುಳಿದ ಜಪಾನಿಜನ ಎಂದರೆ ಮಿಸ್ಟರ್ ಕಟೋ. ಆದರೆ ಅವರ ಹತ್ತಿರ ಕೋವಿ ಇದ್ದುದರಿಂದ ಅವರ ಹೊಂಚು ಹಾಕುವುದು ಅಪಾಯಕರ.

ಕಾಲ ಕಳೆದಂತೆ ಹುಡುಗರ ಶಬ್ದ ಭಾಂಡಾರದ ಮೇಲೆ ರಾಬಿಯ ಪ್ರಭಾವವು ಬೆಳೆಯ ತೊಡಗಿತು. ಅವರ ಉಡುಗೆ ತೊಡಿಗೆಯ ಮೇಲೂ ಸಾಕಷ್ಟು ಪರಿಣಾಮವಾಯಿತು. ರಾಬಿಯ ವೇಷವೇ ಹುಡುಗರ ಪೋಷಾಕಿನ ಮಾದರಿ ಎನಿಸಿತು. ಬಳ್ಳಿಯ ಬಟ್ಟೆ ಧರಿಸುವುದು ಗಂಡಸಾದವನಿಗೆ ಅವಮಾನ, ಅಲ್ಲದೆ ರಾಬಿಗೆ ಅದರಿಂದ ವೈಯಕ್ತಿಕ ಅಪಮಾನವೂ ಆದೀತೆಂದು ಅವರು ಅಂಜಿದರು.

ಒಂದು ಶುಕ್ರವಾರ ಅಪರಾಹ್ನ ರಾಬಿ ಹದಿನಾಲ್ಕು ಹುಡುಗರಿಗೆ ಹದಿನಾಲ್ಕು ಚೀಟಗಳನ್ನು ಗುಟ್ಟಿನಲ್ಲಿ ವಿತರಣೆ ಮಾಡಿದನು. ಎಲ್ಲಾ ಚೀಟಿನಲ್ಲಿಯೂ ಬರೆದ ವಿಷಯ ಒಂದೇ: ನಾಳೆ ಹತ್ತು ಗಂಟೆಗೆ ನಮ್ಮ ಮನೆಯಲ್ಲಿ ಅಮೇರಿಕದ ಅಧ್ಯಕ್ಷರನ್ನು ಹಲವಾರು ಜನ ರೆಡ್ ಇಂಡಿಯ

ನರು ಗಲ್ಲಿಗೇರಿಸಲು ಪ್ರಯತ್ನಿಸುತ್ತಾರೆ—ನಮ್ಮ ಕೆಳಗಿನ ಹೊಲದ ಅಂಚಿನಲ್ಲಿ ನರಿಗಳಂತೆ ನುಸುಳಿ ನೀವು ಮುಂದೊತ್ತಿ. ಆ ಬಡಪಾಯಿಯನ್ನು ಗಲ್ಲಿನಿಂದ ವಿಮೋಚನೆಗೊಳಿಸುವ ಕೆಲಸದಲ್ಲಿ ನಾನು ನಿಮ್ಮನ್ನು ಸೇರಿಸಿಕೊಂಡು ಮುಂದಾಗುತ್ತೇನೆ'.

ಈಗೆಷ್ಟೋ ತಿಂಗಳಿಂದ ಮಿಸ್ ಮಾರ್ಗನ್ ಜೂನಿಯಸ್ ಮಾಲ್ಟಬಿಯನ್ನು ಕಾಣುವ ತವಕದಿಂದಿದ್ದಳು. ಅವನ ವಿಷಯ ಕೇಳಿದ ಕಥೆ, ಅವನು ಮಗನನ್ನು ಬೆಳಸಿದ ರೀತಿ, ಈಗ ರಾಬಿಯ ಸಂಪರ್ಕ—ಹೀಗೆ ಅವಳ ತವಕವು ಅತಿಶಯವಾಗುತ್ತ ನಡೆಯಿತು. ಶಾಲೆಯಲ್ಲಿ ಆಗೊಮ್ಮೆ ಈಗೊಮ್ಮೆ ಹುಡುಗರು ಅವಳಿಗೆ ರುಚಿಕರವಾದ ಪ್ರಸಂಗಗಳನ್ನು ಜ್ಞಾಪಿಸುವರು. ಒಂದು ದಿನ ಒಬ್ಬ ಶತದಡ್ಡ ಹುಡುಗನು ಬ್ರಿಟನ್ ದೇಶಕ್ಕೆ ಹೆಂಗೆಸ್ಟ್ ಮತ್ತು ಹೊರ್ಸಾ ದಂಡೆತ್ತಿ ಬಂದರು ಎಂದನು. ಈ ಚಾರಿತ್ರಿಕ ಜ್ಞಾನದ ಮೂಲವು ಜೂನಿಯಸ್ ಮಾಲ್ಟಬಿ ಎಂದು ಮಿಸ್ ಮಾರ್ಗನ್ ಸಂಶೋಧನೆಯಿಂದ ಪತ್ತೆಹಿಡಿದಳು. ಆಡಿನ ಕುರಿತ ಹಳೆ ಕಥೆಯನ್ನು ಆಕೆ ವಿಸ್ತರಿಸಿ ಒಂದು ಸಣ್ಣ ಕತೆಯಾಗಿ ಮಾರ್ಪಡಿಸಿ ಪತ್ರಿಕೆಗಳಿಗೆ ಕಳಿಸಿದಳು. ಯಾವ ಪತ್ರಿಕೆಯೂ ಅದನ್ನು ಪ್ರಚಾರಪಡಿಸಲಿಲ್ಲವಾದರೂ ಜೂನಿಯಸನನ್ನು ಕಾಣುವ ಆಕೆಯ ಬಯಕೆ ಕುಂದಿಹೋಗಲಿಲ್ಲ.

ದಶಂಬರ ತಿಂಗಳಲ್ಲಿ ಒಂದು ಶನಿವಾರ ಆಕೆ ಮುಂಜಾನೆ ಎದ್ದಾಗ ಸೂರ್ಯನು ನಿಚ್ಚಳವಾಗಿ ಪ್ರಕಾಶಿಸುತ್ತಿದ್ದನು. ತಿಂಡಿ ತಿಂದು ಕೊರ್ಡುರಾಯ್ ಗವನನ್ನು ಹಾಕಿ, ಬೂಟ್ಸ್ ಧರಿಸಿ ಮಿಸ್ ಮಾರ್ಗನ್ ಮನೆ ಬಿಟ್ಟಳು. ದಾರಿಯಲ್ಲಿ ಯಾವುದಾದರೂ ಹುಲ್ಲುಗಾವಲಿನ ನಾಯಿಗಳು ತನ್ನೊಡನೆ ಬರಲೆಂದು ಅವನ್ನು ಕರೆದಳು. ಅವು ಮಾತ್ರ ಬಾಲ ಅಲ್ಲಾಡಿಸಿ ಸುಖವಾಗಿ ಬಿಸಿಲಲ್ಲಿ ಹೊರಳಾಡುತ್ತ ಬಿದ್ದುಕೊಂಡುವು.

ಮಾಲ್ಟಬಿ ಸ್ಥಳಕ್ಕೆ ಅಲ್ಲಿಂದ ಎರಡು ಮೈಲು. ಅದು ಒಂದು ಕಣಿವೆಯ ಬುಡದಲ್ಲಿತ್ತು. ದಾರಿಯ ಪಕ್ಕದಲ್ಲೇ ತೋಡು ಹರಿಯುತ್ತಿತ್ತು. ಕಣಿವೆಯಲ್ಲಿ ಇನ್ನೂ ಬಿಸಿಲು ಬಿದ್ದಿರಲಿಲ್ಲವಾಗಿ ಚಳಿ ವಾಯುವಾಗಿರಲಿಲ್ಲ. ನಡೆಯುತ್ತಿದ್ದ ಹಾಗೆ ಏನೋ ಸ್ವರ, ಪದಧ್ವನಿ ಕೇಳಿಸಿ

ದಂತೆ ಒಮ್ಮೆ ಆಕೆಗೆ ಅನಿಸಿತು. ಆದರೆ ತಿರುವಿನಲ್ಲಿ ಎಲ್ಲವೂ ನಿಶ್ಯಬ್ದ. ಆದರೂ ಅಕ್ಕಪಕ್ಕದ ಪೊದರುಗಳಲ್ಲಿ ಏನೋ ಚಟಚಟಲೆಂದು ಮುರಿಯುವ ಸದ್ದಾಗುತಿತ್ತು.

ಮಾಲ್ಟಬಿಯ ಹೊಲಯಾವುದೆಂದು ಗುರುತು ಹಿಡಿಯಲು ಮಿಸ್ ಮಾರ್ಗನಳಿಗೆ ಕಷ್ಟವಾಗಲಿಲ್ಲ. ಗಿಡಗಂಟೆಯ ಭಾರಕ್ಕೆ ಬೇಲಿಯು ನೆಲದ ಮೇಲೆ ಮಲಗಿತ್ತು, ಸೇಬು ಹಣ್ಣಿನ ಗಿಡದ ಮೇಲೆ ಕಾಡು ಬಳ್ಳಿಯ ಪೊದೆ ಬೆಳೆದಿತ್ತು. ಪೇರ ಹಣ್ಣಿನ ಎತ್ತರವಾದ ಗಿಡದ ಮೇಲೆ ನೀಲಿ ಹಕ್ಕಿಗಳು ಸಭೆ ಸೇರಿ ಉಲಿಯುತ್ತಿದ್ದವು. ಮಾಲ್ಟಬಿ ಮನೆಯ ಮಾಡಿನ ಮೇಲಿನ ಹಾವಸೆಯು ಆ ಮಂಜಿನೊಳಗಿಂದಲೂ ತೂರಿಕೊಂಡು ತೋರುವಷ್ಟು ದಟ್ಟವಾಗಿದ್ದಿತು. 'ಕೊಳಕಾದರೂ ಎಂಥ ಸುಂದರ ದೃಶ್ಯ' ಎಂದುಕೊಂಡಳಾಕೆ. ಅಂಗಳದ ಗೇಟು ಒಂದೇ ಕೊಂಡಿಗೆ ನೇತ ಹಾಕಿಕೊಂಡಿದ್ದಿತು ಮನೆಯ ತಿರುವಿನಲ್ಲಿ ಅದೇಕೋ ಮಿಸ್ ಮಾರ್ಗನ್ ಅವಾಕ್ಕಾಗಿ ಭೀತಿಯಿಂದ ನಿಂತು ಬಿಟ್ಟಳು. ಅಂಗಳದ ನಟ್ಟ ನಡುವೆ ಒಂದು ದಪ್ಪ ಕಂಭವನ್ನು ನೆಟ್ಟಿದ್ದರು ಅದಕ್ಕೆ ಒಬ್ಬ ಕುರಿಚಲು ಗಡ್ಡದ ಮುದುಕನನ್ನು ಹಗ್ಗದಿಂದ ಬಿಗಿದು ಹಾಕಿದ್ದರು ಅವನ ಕಾಲ ಬುಡಕ್ಕೆ ಒಬ್ಬ ಕಿರಿಯನು ಮರದ ಒಣ ಎಲೆಗಳನ್ನು ರಾಶಿ ಹಾಕುತ್ತಿದ್ದನು. ಮಿಸ್ ಮಾರ್ಗನಳ ಹೆಜ್ಜೆ ತನ್ನಿಂದ ತಾನೇ ಹಿಂಜರಿಯಿತು. 'ಇಂಥ ದೃಶ್ಯವು ನಿಜವಾಗಿ ನಡೆಯುವುದು ಸಾಧ್ಯವೇ, ಇಲ್ಲ ಸಾಧ್ಯವಿಲ್ಲ' ಎಂದು ಆಕೆ ಧೈರ್ಯ ಮಾಡಿಕೊಂಡಳು. ಅಷ್ಟರಲ್ಲಿ ಆಕೆಯ ಕಿವಿಗೆ ಭಾರೀ ಸ್ನೇಹಪೂರ್ಣವಾದ ಸಂಭಾಷಣೆ ಕೇಳಿಸಿತು.

'ಹತ್ತು ಗಂಟೆಯಾಗುತ್ತಾ ಬಂದಿತು' ಎನ್ನುತ್ತಿದ್ದ ಹಿಂಸಕ ಮಹಾನುಭಾವ.

ಬಂಧಿತ ವ್ಯಕ್ತಿ ಅಷ್ಟೇ ಸಲುಗೆಯಿಂದ 'ಆ ಎಲೆಗಳಿಗೆ ಜಾಗ್ರತೆ ಬೆಂಕಿ ಕೊಡಲು ಮರೆಯಬೇಡ, ಜೋಕೆ. ಅವರು ಬರುವುದನ್ನು ಖಾತ್ರಿ ಮಾಡದೆ ಬೆಂಕಿ ಹಚ್ಚಬೇಡ' ಎನ್ನುತ್ತಿದ್ದ.

ಮಿಸ್ ಮಾರ್ಗನಳಿಗೆ ದೃಶ್ಯದ ಅರ್ಥವು ಆಗತಾನೆ ಹೊಳೆದುದರಿಂದ ಆಕೆಗೆ ಧೈರ್ಯವಾಯಿತು. ವಧಸ್ತಂಭದ ಬಳಿಗೆ ಹೋಗುವಾಗ ಆವಳ ಕಾಲುಗಳು ನಡುಗಿದರೂ, ವಧಸ್ತಂಭದ ವ್ಯಕ್ತಿ ಅವಳನ್ನು ಕಂಡೊಡನೆ ತಲೆ ಬಗ್ಗಿಸಿ ವಂದಿಸಿದನು. ಹರಕಲು ಚಿಂದಿಯ ಕುರಿಚಲು ಗಡ್ಡದ ಆ ವಂದನೆಯಲ್ಲಿ ಏನೋ ವಿನೋದ, ಯಾವುದೋ ಚೆಲುವನ್ನು ಕಂಡಳು ಮಿಸ್ ಮಾರ್ಗನ್.

'ನಾನು ಇಲ್ಲಿಯ ಉಪಾಧ್ಯಾಯಿನಿ. ಸುಮ್ಮನೆ ಬರುತ್ತಾ ಇದ್ದೆ. ಒಂದರೆಕ್ಷಣ ನಿಮ್ಮ ಈ ಅಗ್ನಿಪರೀಕ್ಷೆಯು ವಾಸ್ತವವೆಂದು ಎಣಿಸಿ ನನಗೆ ಅಂಜಿಕೆಯೂ ಆಯಿತು.'

ಜೂನಿಯಸ್ ನುಡಿದನು. 'ಹೌದು ಇದು ವಾಸ್ತವ ಗಂಭೀರ ಪ್ರಸಂಗ. ಒಂದರೆಕ್ಷಣ ನೀವೇ ವಿಮೋಚನೆಗೆ ಬಂದಿರೆಂದು ನಾನು ಎಣಿಸಿದೆ. ಇನ್ನೇನು ವಿಮೋಚಕರು ಬರುವ ಹೊತ್ತಾಯಿತು' ಎಂದನು.

ತಕ್ಷಣ ಸುತ್ತಲಿಂದ ನರಿಗಳ ಹುಯ್ಯಲು ಕೇಳಿಸಿತು. 'ಆಗೋ, ಬಂತೇ ಬಂತು ವಿಮೋಚಕದಳ' ಎಂದು ಜೂನಿಯಸ್ ಸಂಭ್ರಮದಿಂದ ನುಡಿದು, 'ಕ್ಷಮಿಸಿ, ಮಿಸೆಸ್ ಮಾರ್ಗನ್ ನಾನೆ ಜೂನಿಯಸ್ ಮಾಲ್ಟಬಿ, ಈ ಮಹನೀಯನು ನಿತ್ಯವೂ ಜಾಕೊಬ ಸ್ಟಟ್ಸ್ ಎಂಬ ಹೆಸರಿನಿಂದ ಕರೆಯಲ್ಪಡುವನು. ಆದರೆ ಇಂದು ಈತ ರೆಡ್ ಇಂಡಿಯನರ ಅಗ್ನಿಗೆ ಆಹುತಿಯಾಗಲಿರುವ ಅಮೇರಿಕದ ರಾಷ್ಟ್ರಾಧ್ಯಕ್ಷರು. ಇವರನ್ನು ಇತಿಹಾಸದ ಗ್ವೆನಿವೆರೆಯನ್ನಾಗಿ ಪರಿಗಣಿಸಬೇಕೆಂದು ಒಮ್ಮೆ ಭಾವಿಸಿದೆ. ಆದರೆ ಇವನ ವೇಷಕ್ಕೆ ರಾಷ್ಟ್ರಾಧ್ಯಕ್ಷತನವೇ ಒಳ್ಳೆಯದೆನಿಸಿತು' ಎಂದನು.

'ಸಾಕು, ನಿಲ್ಲಿಸು' ಎಂದು ರಾಷ್ಟ್ರಾಧ್ಯಕ್ಷನು ನಿಧಾನವಾಗಿ ಹೇಳಿದನು.

'ಮಾಲ್ಟಬಿಯವರೇ, ನಾನು ನಿಮ್ಮ ವಿಮೋಚನೆಯನ್ನು ನೋಡಬಹುದಲ್ಲವೆ? ಎಂದು ಮಿಸ್ ಮಾರ್ಗನ್ ಪ್ರಶ್ನಿಸಿದಳು.

'ನಾನು ಈಗ ಮಾಲ್ಟಬಿಯಲ್ಲ. ನಾನೀಗ ಮೂನ್ನೂರು ಇಂಡಿಯಾನರಿಗೆ ಸಮಾನ.'

ನರಿಗಳ ಹುಯ್ಯಲು ಮತ್ತೊಮ್ಮೆ ಎದ್ದಿತು. 'ಬನ್ನಿ, ಬನ್ನಿ ಮೆಟ್ಟಲುಗಳನ್ನು ಹತ್ತಿಬನ್ನಿ,' ಎಂದು 'ಮುನ್ನೂರು ಇಂಡಿಯನ್' ನುಡಿದರು. ಮಾತ್ರವಲ್ಲದೆ ಬೆಂಕಿ ಕಡ್ಡಿಯನ್ನು ಗೀರಿ ಎಲೆಗಳಿಗೆ ಬೆಂಕಿ ಹಚ್ಚಿದರು. ವಿಲ್ಲೋ ಮರಗಳ ಎಡೆಯಿಂದ ಬಾಲವಿಮೋಚಕರ ತಂಡವು ಹಠಾತ್ತನೆ ಫ್ರೆಂಚರು ಬ್ಯಾಸ್ಟಿಲಿಗೆ ಧಾಳಿ ಇಟ್ಟ ರೀತಿಯಲ್ಲಿ ವಿಧವಿಧವಾದ ಆಯುಧಗಳನ್ನು ಹಿಡಿದುಕೊಂಡು ವಧಸ್ತಂಭದ ಬಳಿಗೆ ಧಾವಿಸಿತು. ಬೆಂಕಿಯು ರಾಷ್ಟ್ರಾಧ್ಯಕ್ಷನನ್ನು ನೆಕ್ಕುವುದಕ್ಕೆ ಮುನ್ನವೇ ಎಲೆಗಳನ್ನು ಕಾಲಿನಿಂದ ತುಳಿದು ದೂರಕ್ಕೆ ಸರಿಸಿ ಆಯಿತು. ಆ ಮೇಲೆ ವಿಮೋಚಕರು ಕುಶಲಹಸ್ತದಿಂದ ರಾಷ್ಟ್ರಾಧ್ಯಕ್ಷರನ್ನು ಬಂಧಿಸಿದ ಹಗ್ಗಗಳನ್ನು ಬಿಡಿಸಿ ಅವನನ್ನು ಬಿಡುಗಡೆ ಮಾಡಿದರು. ಮುಂದಿನ ದೃಶ್ಯವು ಅನುಪಮ ಗಾಂಭೀರ್ಯವನ್ನೊಳಗೊಂಡಿತ್ತು. ರಾಷ್ಟ್ರಾಧ್ಯಕ್ಷರು ಮೆಲ್ಲನಡೆಯಿಂದ ಬಾಲ ವಿಮೋಚಕರ ವಂದನೆಗಳನ್ನು ಸ್ವೀಕಾರ ಮಾಡುತ್ತ ಮುಂದುವರಿದರು. ಒಬ್ಬೊಬ್ಬರಿಗೂ "ಪರಮ ವೀರ"ನೆಂದು ಕೆತ್ತಲ್ಪಟ್ಟ ಸೀಸದ ಬಿಲ್ಲೆಯನ್ನು ಅಂಟಿಸಿದರು. ಅಲ್ಲಿಗೆ ಆಟ ಮುಗಿಯಿತು.

"ಬರುವ ಶನಿವಾರ ನಾವು ಈ ಒಳಸಂಚಿಗೆ ಹೊಣೆಗಾರರಾದ ಜನರನ್ನು ಗಲ್ಲಿಗೇರಿಸುವಾ" ಎಂದು ರಾಬಿ ಉಚ್ಚ ಸ್ವರದಿಂದ ಸಾರಿದನು.

'ಈಗಲೇ ಏರಿಸುವಾ, ಅದರಲ್ಲೇನಂತೆ? ಈಗಲೇ ಮುಗಿದು ಹೋಗಲಿ' ಎಂದು ತಂಡದವರು ಸೂಚಿಸಿದರು.

"ಇಲ್ಲ ಗೆಳೆಯರೆ, ಅದಕ್ಕೆ ಪೂರ್ವ ಸಿದ್ಧತೆ ಬೇಕು. ವಧಸ್ತಂಭವು ಬೇರೆಯೇ ಆಗಬೇಕು" ಎಂದು ಹೇಳಿ ರಾಬಿ ತಂದೆಯ ಕಡೆಗೆ ತಿರುಗಿ "ನಿಮ್ಮಿಬ್ಬರನ್ನೂ ಗಲ್ಲಿಗೇರಿಸಿಬಿಡುತ್ತೇವೆ" ಎಂದನು. ಮಿಸ್ ಮಾರ್ಗನ್ ಕಡೆಗೆ ಅವನ ಆಶಾಪೂರ್ಣ ನೇತ್ರಗಳು ಹೊರಳಿದುವು ಹೊರಳಿ ಅಷ್ಟಕ್ಕೆ ಅಲ್ಲಿಂದ ಹಿಂದೆ ಸರಿದುವು.

ಮಿಸ್ ಮಾರ್ಗನಳ ಜೀವನದಲ್ಲಿಯೇ ಅಂದಿನ ಸಾಯಂಕಾಲ ಚಿರಸ್ಮರಣೀಯವಾಗಿ ಉಳಿಯುವಂತಾಯಿತು. ಸಿಕಮೋರ್ ವೃಕ್ಷದ ಗೆಲ್ಲಿನಲ್ಲಿ ಅವಳಿಗೂ ಒಂದು ಗೌರವಾರ್ಹ ಸ್ಥಾನವು ದೊರೆತುದು

ಮಾತ್ರವಲ್ಲದೆ, ಹುಡುಗರಿಗೆ ಅವಳು ಉಪಾಧ್ಯಾಯಿನಿಯಂತೆ ಅಂದು ಕಾಣಿಸಲಿಲ್ಲ.

'ಬೂಟುಗಳನ್ನು ಕಳಚಿದರೆ ವಾಸಿ' ಎಂದು ರಾಬಿ ಹೇಳಿದಾಗ ಅವಳು ಅದನ್ನು ಕಳಚಿ ಕಾಲನ್ನು ನೀರಲ್ಲಿ ಮುಳುಗಿಸಿ ವಾಸಿ ಎಂದು ಸ್ವಾನುಭವದಿಂದ ಕಂಡುಕೊಂಡಳು.

ಅಲೂಷಿಯನ್ ಇಂಡಿಯನ ಜನರಲ್ಲಿ ನರಭಕ್ಷಕ ಸಮಾಜದ ಚಿತ್ರವನ್ನು ಅಂದು ಜೂನಿಯಸ್ ನೆರೆದ ಸಭಿಕರ ಮುಂದೆ ರಸಪೂರ್ಣ ವಾಗಿ ವಿವರಿಸಿದನು. ಕಾರ್ಥೇಜದ ಸೈನಿಕರು ದಂಗೆ ಎದ್ದ ಕಾರಣವನ್ನು ಸೋದಾಹರಣವಾಗಿ ಬಣ್ಣಿಸಿದನು. ಲೆಸಿಡೆಮೋನಿಯನ್ ಜನರು ಥರ್ಮೋಪೈಲೆಯ ಸಮರದಲ್ಲಿ ಸಾಯುವುದಕ್ಕಿಂತ ಮೊದಲು ತಲೆಯನ್ನು ಬಾಚಿಕೊಂಡ ಘಟನೆಯನ್ನು ಪ್ರಾಸಂಗಿಕವಾಗಿ ಹೇಳಿದನು. ಆತ ಮಕರೋನಿಯೆಂಬ ಭೋಜ್ಯವನ್ನು ತಯಾರಿಸುವ ಕ್ರಮವನ್ನು ವಿವರಿಸಿದಾಗ ಎಲ್ಲರಿಗೂ ಬಾಯಲ್ಲಿ ನೀರೂರಿತು. ಆತ ತಾಮ್ರವನ್ನು ಸಂಶೋಧಿಸಿದ ವಿವರಗಳನ್ನು ಕೊಡುವ ಮಾದರಿಯನ್ನು ಕಂಡರೆ ಇವನೇನು ಸಂಶೋಧನೆಯ ಸಮಯ ಅಲ್ಲಿ ಹಾಜರಿದ್ದನೇನೋ ಎಂದು ಅನಿಸಬೇಕು. ಎಡೆನ್ ಎಂಬ ಸ್ವರ್ಗದ ಉಪವನದಲ್ಲಿ ಆದಂ ಮತ್ತು ಇವ್ ಎಂಬ ಆದಿಪುರುಷ ಮತ್ತು ಸ್ತ್ರೀಯನ್ನು ಗಡಿಪಾರುಮಾಡಿದ ಕಥೆಗೆ ಜಾಕೋಬ ಧೃಷ್ಟತೆಯಿಂದ ವಿರೋಧವನ್ನೊಡ್ಡಿದ ಮೇಲೆ ತಂಡದವರು ಮನೆಗೆ ಹೊರಡುವ ಮನಸ್ಸು ಮಾಡಿದರು. ಅಂದು ತಾನು ಭೇಟಿಯಾದ ಅಪೂರ್ವ ಮನುಷ್ಯನ ಕುರಿತು ನಿಧಾನವಾಗಿ ಯೋಚಿಸುತ್ತಾ ಬರುತ್ತಿದ್ದ ಮಿಸ್ ಮಾರ್ಗನಳಿಗೆ ಹುಡುಗರು ಎಷ್ಟೋ ಮಾರು ದೂರದಲ್ಲಿದ್ದರು.

ಶಾಲಾ ಆಡಳಿತ ಮಂಡಳಿಯ ಸದಸ್ಯರು ಶಾಲೆಗೆ ಪರೀಕ್ಷಾರ್ಥವಾಗಿ ಬರುವ ದಿವಸವನ್ನು ಉಪಾಧ್ಯಾಯಿನಿ ಮತ್ತು ಹುಡುಗರು ಇಬ್ಬರೂ ಗಾಬರಿಯಿಂದ ಇದಿರುನೋಡುತ್ತಿದ್ದರು. ಅದು ಎಲ್ಲರಿಗೂ ಗಂಡಾಂತರದ ದಿವಸ. ಅಂದು ಶಬ್ದೋಚ್ಚಾರವಾಗಲಿ, ಬರವಣಿಗೆಯಾಗಿ ಒಂದಿಷ್ಟು ತಪ್ಪಿದರೂ ಮಹಾಪರಾಧವೆಂದು ತೋರುವ ಪ್ರಸಂಗವಲ್ಲವೆ? ಆದರೆ

ಪರೀಕ್ಷಾದಿನದಷ್ಟು ಅಪರಾಧಗಳನ್ನು ಹುಡುಗರು ಇನ್ನಾವ ದಿನ ತಾನೇ ಮಾಡಬಲ್ಲರು? ಅಂದಿನಷ್ಟು ಉಪಾಧ್ಯಯರಿಗೆ ಗಾಬರಿ ಹಚ್ಚುವ ದಿನ ವಾದರೂ ಬೇರಾವುದು?

ಸ್ವರ್ಗಸೀಮೆಯ ಶಾಲಾ ಆಡಳಿತ ಮಂಡಳಿಯು ದಶಂಬರ 15ರ ಅಪರಾಹ್ನ ಶಾಲೆಗೆ ಭೇಟಿಕೊಟ್ಟಿತು. ಭೋಜನವನ್ನು ತೀರಿಸಿ ಅವರು ಶಾಲೆಯನ್ನು ಪ್ರವೇಶಿಸಿದಾಗ ಅವರ ಮುಖವು ನಿಸ್ತೇಜವಾಗಿಯೂ ತುಸು ಲಜ್ಜಾಪೂರ್ಣವಾಗಿಯೂ ಇರುವಂತೆ ಕಂಡಿತು. ಮುದುಕನೂ ನರೆಗೂದಲಿನವನೂ ಆದ ಕ್ಲಾರ್ಕ ಜಾನ್‌ವ್ಹೈಟ್‌ಸೈಡಗೆ ಶಿಕ್ಷಣವು ಅಂಥ ಗಹನವಾದ ವಿಷಯುವೇ ಅಲ್ಲವೆಂಬ ಧೋರಣೆ ಇತ್ತು. ಅವನ ಹಿಂದೆ ಬರುತ್ತಿದ್ದವನು ಪ್ಯಾಟ್ ಹಂರ್ಬಟ್. ಅವನು ಮುದ್ದಾಂ ಶಾಲಾ ಮಂಡಳಿಯನ್ನು ಸೇರಲು ಪ್ರಯತ್ನಿಸಿದವರಲ್ಲೊಬ್ಬ. ಅವನಿಗೆ ಜನರ ಸಂಪರ್ಕಮಾಡಿಕೊಳ್ಳುವ ಕಲೆಯು ಕರಗತವಾಗಿರಲಿಲ್ಲವಾದರೂ ಇಂಥ ಸಂದರ್ಭಗಳನ್ನು ಅವನು ಪುಕ್ಕಟೆ ಹೋಗಗೊಡಲೊಲ್ಲನು. ಇನ್ನು ಅವನ ಉಡುಗೆಯೇ, ವಾಷಿಂಗ್‌ಟನ್ನಿನಲ್ಲಿ ಲಿಂಕನನ ಶಿಲಾ ಮೂರ್ತಿಗೆ ತೊಡಿಸಿದ ಉಡುಗೆಯಷ್ಟೇ ನಿಷ್ಠುರವಾಗಿತ್ತು. ಟಿ ಬಿ. ಎಲಿನ್ ಕಾಲುವೆಗೆ ಒಬ್ಬನೇ ವರ್ತಕನಾದುದರಿಂದ ಅವನ ಸ್ಥಾನವನ್ನು ಯಾರೂ ಕಸಿದುಕೊಳ್ಳುವ ಹಾಗಿರಲಿಲ್ಲ. ಅವನ ಹಿಂದುಗಡೆ ಬರುತ್ತಿದ್ದ ರೇಮಂಡ ಬ್ಯಾಂಕ್ಸ್ ಧಡಿಯನ ಹಾಗಿದ್ದನು. ಕೊನೆಯಲ್ಲಿದ್ದ ಬರ್ಟ್ ಮನ್ರೋ ಮಂಡಳಿಗೆ ಹೊಸದಾಗಿ ಆಯ್ಕೆ ಹೊಂದಿದ ಸದಸ್ಯನಾದುದ ರಿಂದ ಅವನ ನಡಿಗೆಯಲ್ಲಿ ತುಸು ಸಂಕೋಚದ ಭಾವವಿದ್ದಿತು.

ಮಂಡಳಿಯು ಗಂಭೀರವಾಗಿ ತಮ್ಮ ತಮ್ಮ ಸ್ಥಾನಗಳನ್ನು ಆಕ್ರ ಮಿಸಿದ ತರುವಾಯ ಅವರ ಹೆಂಡಂದಿರು ಕೊಠಡಿಯ ಕೊನೆಯ ಸ್ಥಳ ಗಳನ್ನು ಆವರಿಸಿದರು. ಹುಡುಗರು ಕಸಿವಿಸಿಯಿಂದ ಒದ್ದಾಡುತ್ತಿ ದ್ದರು. ಹಿಂದೆ ತಿರುಗಿ ನೋಡಿದರೆ ಮಂಡಳಿಯ ಮಹಿಳೆಯರು ಕನಿಕರ ದಿಂದ ಮಂದಹಾಸವನ್ನು ಬೀರುತ್ತಿದ್ದರು. ಶ್ರೀಮತಿ ಮನ್ರೋ ಅವರ ಮಡಿಲಲ್ಲಿ ಕಾಗದದಲ್ಲಿ ಸುತ್ತಿದ ಒಂದು ದೊಡ್ಡ ಗಂಟು ಎದ್ದು ಕಾಣು

ತ್ತಿತ್ತು. ಅಂತೂ ಹುಡುಗರಿಗೆ ಹಿಂದೂ ಮುಂದೂ ದಿಗ್ಬಂಧನವಾಗಿ ಉಸಿರು ಕಟ್ಟುತಿತ್ತು.

ಶಾಲೆ ಆರಂಭವಾಯಿತು. ಶ್ರೀಮತಿ ಮಾರ್ಗನ್ ಆಡಳಿತ ಮಂಡಳಿಯನ್ನು ಸ್ವಾಗತಿಸಿ 'ಮಹನೀಯರೆ, ನಾವು ನಿಮಗೋಸ್ಕರ ಇಂದು ಹೊಸದು ಯಾವುದನ್ನು ತೋರಿಸುವಂತಿಲ್ಲ. ದಿನ ನಿತ್ಯವೂ ಇಲ್ಲಿ ನಡೆಯುವ ಪಾಠ ಪ್ರವಚನದ ಮಾದರಿಯನ್ನಷ್ಟೇ ನಿಮಗೆ ಕೊಡಬಲ್ಲೆವು' ಎಂದಳು. ಸ್ವಲ್ಪ ಹೊತ್ತಿನಲ್ಲಿ ತಾನು ಹಾಗೇಕೆ ಹೇಳಿದೆ? ಎಂದೆನಿಸಿತು. ಅಂದಿನಷ್ಟು ತಪ್ಪುಗಳನ್ನು ಹುಡುಗರು ಹಿಂದೆಂದೂ ಮಾಡಿರಲಿಲ್ಲ ಉಚ್ಚಾರದಲ್ಲಿಯೂ ಮಾಡಿರಲಿಲ್ಲ, ಬರವಣಿಗೆಯಲ್ಲಿಯೂ ಮಾಡಿರಲಿಲ್ಲ. ಆಡಳಿತ ಮಂಡಳಿಯವರು ಎಷ್ಟು ಪ್ರಯತ್ನಿಸಿದರೂ ಅವರಿಂದ ಒತ್ತಿಬರುವ ನಗುವನ್ನು ನಿಯಂತ್ರಿಸಲಾಗಲಿಲ್ಲ. ಮಿಸ್ ಮಾರ್ಗನಳ ಹಣೆಯಲ್ಲಿ ಬೆವರಿನ ಹನಿಗಳು ಮೂಡಿದುವು. ಇನ್ನೇನು ತನ್ನನ್ನು ಕೆಲಸದಿಂದ ವಜಾಮಾಡುತ್ತಾರೆ ಎಂದುಕೊಂಡಳು. ಹಿಂದಿನ ಸಾಲಿನಲ್ಲಿ ಕೂತ ಮಂಡಳಿಯವರ ಶ್ರೀಮತಿಯರು ಯಥಾಪೂರ್ವ ಮಂದಹಾಸವನ್ನು ಬೀರುತ್ತಿದ್ದರು. ಲೆಕ್ಕಗಳೂ ಯದ್ವಾ ತದ್ವಾ ಆಗುವುದನ್ನು ಕಂಡಮೇಲೆ ಜಾನ್ ವೈಟ್‌ಸೈಡ್ ಕುರ್ಚಿಯಿಂದ ಎದ್ದರು. 'ಥ್ಯಾಂಕ್‌ಯೂ, ಮಿಸ್ ಮಾರ್ಗನ್. ಕ್ಷಮಿಸಿ, ನಾನು ಮಕ್ಕಳಿಗೆ ಒಂದೆರಡು ಮಾತು ಹೇಳುತ್ತೇನೆ. ಆ ಮೇಲೆ ಅವರನ್ನು ಬಿಟ್ಟುಬಿಡಿ. ನಾವು ಬಂದು ಅವರನ್ನು ಈ ರೀತಿ ಗೋಳು ಹೊಯ್ದುದಕ್ಕೆ ಅವರಿಗೆ ಅಷ್ಟಾದರೂ ಪ್ರತಿಫಲ ಇರಲಿ' ಎಂದು ಅವರು ನುಡಿದರು. ಉಪಾಧ್ಯಾಯಿನಿಗೆ ಸ್ವಲ್ಪ ಜೀವ ಬಂದಿತು 'ಹಾಗಾದರೆ ಈ ಹುಡುಗರು ಇವತ್ತು ಎಂದಿನ ಹಾಗೆ ಇರಲಿಲ್ಲವೆಂದು ನಿಮಗೆ ಗೊತ್ತಾಗಿರಬೇಕಲ್ಲಾ? ಅದು ನಿಮಗೆ ತಿಳಿದರೆ ನನ್ನ ಭಾಗ್ಯ' ಎಂದಳು.

ಜಾನ್ ವೈಟ್‌ಸೈಡ್ ಮುಗುಳ್ನಕ್ಕರು. ಅವರು ಈ ರೀತಿ ಪರೀಕ್ಷಾದಿನವೇ ಗಾಬರಿಯಲ್ಲಿ ಮುಳುಗೇಳುತ್ತಿದ್ದ ಎಷ್ಟೊ ಉಪಾಧ್ಯಾಯಿನಿಯರನ್ನು ಕಂಡಿದ್ದರು. ಆವತ್ತು ಅವರು ತೋರಿಸಿದ ಪಾಠವೇ ಉತ್ತಮವೆಂದು ನಾನು ಭಾವಿಸಿದ್ದರೆ ಶಾಲೆಯನ್ನು ಮುಚ್ಚಿ ಇಂದಿಗೆ

ಬಹಳ ವರ್ಷ ಆಗಬೇಕಾಗಿತ್ತು ಎಂದು ನುಡಿದು ಮಕ್ಕಳ ಹತ್ತಿರ, 'ಚೆನ್ನಾಗಿ ಕಲಿಯಿರಿ, ನಿಮ್ಮ ಗುರುವನ್ನು ಪ್ರೀತಿಸಿ', ಎಂದು ಐದು ಮಿನಿಟುಗಳ ಕಾಲ ಉಪದೇಶಮಾಡಿದರು. ಈ ಚಿಕ್ಕ—ಚೊಕ್ಕ ಭಾಷಣವನ್ನು ಅವರು ವರ್ಷ ವರ್ಷ ಮಾಡುವರು. ಅದು ಮುಗಿದಬಳಿಕ ಉಪಾಧ್ಯಾಯಿನಿಯ ಹತ್ತಿರ ಶಾಲೆಗೆ ರಜೆಕೊಡಿರೆಂದು ಹೇಳುವರು. ಅದರಂತೆ ಹುಡುಗರು ಹೊರಗೆ ಹೋಗಿ ನಗುತ್ತ ಕೆಲೆಯುತ್ತ ಕೇಕೆ ಹಾಕುವುದೂ ವರ್ಷಾವಧಿ ರೂಢಿಯಾಗಿತ್ತು.

ಜಾನ್ ವ್ಹೈಟ್‌ಸೈಡ್ ಅವರು ಇಂದು ಮಿಸ್ ಮಾರ್ಗನಳ ಕೈಕುಲುಕಿ 'ಇಷ್ಟೊಂದು ಶಿಸ್ತಿನಿಂದ ಹುಡುಗರನ್ನು ನಡೆಸಿದ ಉಪಾಧ್ಯಾಯಿನಿಯನ್ನು ನಾನು ಈ ವರೆಗೂ ಕಂಡಿಲ್ಲ. ನಿಮ್ಮ ಮೇಲೆ ಹುಡುಗರಿಗಿರುವ ಪ್ರೀತಿವಿಶ್ವಾಸವನ್ನು ನಾನು ವರ್ಣಿಸಿದರೆ ನೀವು ಸಂಕೋಚಪಡುವಿರಿ" ಎಂದರು.

"ಹೌದು, ಅವು ಒಳ್ಳೆಯ ಹುಡುಗರು, ಭಾರೀ ಒಳ್ಳೆಯ ಹುಡುಗರು," ಎಂದು ಮಿಸ್ ಮಾರ್ಗನ್ ನಿಷ್ಠೆಯಿಂದ ನುಡಿದಳು.

"ಅದು ಸರಿಯೆ, ಆದರೆ ಮಾಲ್ಟ್ಬಿ ಹುಡುಗ ಹೇಗಿದ್ದಾನೆ?"

"ಓಹೋ ಅವನೋ, ಅವನೊಂದು ವಿಚಿತ್ರ ಮಾದರಿಯ ಹುಡುಗ, ಆದರೆ ಭಾರೀ ಬುದ್ಧಿವಂತ."

"ಅವನ ವಿಷಯ ನಾವು ಆಗಾಗ ಮಂಡಳಿಯ ಸಭೆಯಲ್ಲಿ ಮಾತನಾಡುವುದುಂಟು. ಪಾಪ, ಅವನ ಗೃಹಜೀವನದ ತಾಪತ್ರಯವನ್ನೂ ನಾವು ಬಲ್ಲೆವು. ಅವನನ್ನು ಇವತ್ತು ಪ್ರತ್ಯಕ್ಷ ನೋಡಿಯೂ ನೋಡಿದೆವು. ಎಂಥ ಚಿಂದಿಯಲ್ಲಿ ಶಾಲೆಗೆ ಬರುತ್ತದೆ ಮಗು?"

"ಅದು ನಿಜ. ಅವನ ಮನೆಯ ವಾತಾವರಣ ವಿಚಿತ್ರವೇ ಸರಿ. ಆದರೆ ಅದರಲ್ಲಿ ಅಂಥಾ ಕೆಟ್ಟದ್ದೇನೂ ಇಲ್ಲವೆಂದು ನನ್ನ ನಂಬಿಕೆ.

"ಅಯ್ಯಯ್ಯೊ, ನಾನೆಲ್ಲಿ ಹಾಗೆಂದೆ? ಆದರೆ ಅವನ ಬಡ ತಂದೆಗೆ ಏನಾದರೂ ಕೊಂಚ ಸಹಾಯ ಮಾಡೋಣ ಎಂದು ನಮಗೆ ಆಸೆಯಾಗಿದೆ. ಅಷ್ಟೆ."

"ಅದು ನನಗೆ ಗೊತ್ತು."

''ಮಿಸೆಸ್ ಮನ್ರೋ ಕೆಲವು ಬಟ್ಟೆಬರೆ ತಂದಿದ್ದಾರೆ, ಆ ಹುಡುಗ ನನ್ನ ಒಳಗೆ ಕರೆದರೆ ಅದನ್ನಷ್ಟು ಅವನಿಗೆ ಒಪ್ಪಿಸಿಬಿಡೋಣ.'

''ಆದರೆ, ಸ್ವಲ್ಪ ತಡೆಯಿರಿ........"

''ಛೀ ಛೀ ಹಾಗೆಂದರೇನು? ಬೇರೇನೂ ಇಲ್ಲ. ಒಂದು ನಾಲ್ಕು ಅಂಗಿ, ಒಂದು ಜತೆ ಪ್ಯಾಂಟು, ಮತ್ತೆ ಬೂಟು.'

'ಮಿಸ್ಟರ್ ವ್ಹೈಟ್‌ಸೈಡ್, ಅವನ ವಿಷಯ ನಿಮಗೆ ತಿಳಿಯದು. ಅವನು ಭಾರೀ ಸ್ವಾಭಿಮಾನಿ ಹುಡುಗನಾದುದರಿಂದ ನಿಮ್ಮ ಉಡುಗೊರೆಯಿಂದ ಅವನಿಗೆ ತೊಂದರೆಯಾಗಬಹುದು.'

'ತೊಂದರೆ, ಎಲ್ಲಿನ ತೊಂದರೆ? ಛೀ, ನೀವೇನನ್ನುತ್ತೀರಾ? ಅದು ಇಲ್ಲದೆ ಅವನಿಗೆ ತೊಂದರೆಯಾಗಿದೆ. ಅಲ್ಲದೆ ಈ ಚಳಿಯಲ್ಲಿ ದಿನಾಲೂ ಹಿಮದ ಮೇಲೆ ಬರಿಗಾಲಿಂದ ಅದು ಹೇಗೆ ಬರುತ್ತಾನೋ, ಪಾಪ!'

ಮಿಸ್ ಮಾರ್ಗನ್ ಅಸಹಾಯಳಾಗಿ 'ಬೇಡ ಅವನ ಪಾಡಿಗೆ ಅವನನ್ನು ಬಿಡುವುದು ವಾಸಿ ಎಂದು ನನ್ನ ಅಭಿಪ್ರಾಯ' ಎಂದಳು.

'ಮಿಸ್ ಮಾರ್ಗನ್, ಇದೇನು ಈ ರೀತಿ ಚಂಡಿ ಹಿಡಿಯುತ್ತೀರಾ? ಮಿಸೆಸ್ ಮನ್ರೋ ಎಷ್ಟು ಪ್ರೀತಿಯಿಂದ ಈ ಬಟ್ಟೆಬರೆ ತಂದಿದ್ದಾರೆ? ಕರೆಯಿರಿ ಆ ಹುಡುಗನನ್ನು — ಕೊಟ್ಟು ಮುಗಿಸಿ ಬಿಡೋಣ' ಎಂದು ಜಾನ್ ವ್ಹೈಟ್‌ಸೈಡ್ ಆದೇಶವಿತ್ತರು.

ಸ್ವಲ್ಪ ಹೊತ್ತಿನಲ್ಲಿ ರಾಬಿ ಅವರ ಮುಂದೆ ನಿಂತಿದ್ದ. ಅವರೆಲ್ಲ ಸುತ್ತುಗಟ್ಟಿ ಅವನನ್ನು ಕನಿಕರದಿಂದ ನೋಡುತ್ತಿದ್ದರೂ ಅವನ ಬಟ್ಟೆಯ ಹೀನಾವಸ್ಥೆಯನ್ನು ಕಾಣದವರಂತೆ ನಟಿಸುತ್ತಿದ್ದರು.

'ಮಿಸೆಸ್ ಮನ್ರೊ ನಿನಗೇನೋ ಕೊಡಬೇಕೆಂದು ತಂದಿದ್ದಾರೆ ರಾಬರ್ಟ್' ಎಂದು ಮಿಸ್ ಮಾರ್ಗನ್ ನುಡಿದಳು.

ತರುವಾಯ ಮಿಸೆಸ್ ಮನ್ರೋ ಮುನ್ನುಗ್ಗಿ ಹುಡುಗನ ಕೈಗಳಲ್ಲಿ ಆ ಗಂಟನ್ನು ಇರಿಸಿದಳು.

ರಾಬಿ ಅದನ್ನು ಸಾವಕಾಶವಾಗಿ ನೆಲದ ಮೇಲೆ ಇರಿಸಿ ಕೈಯನ್ನು ಬಿಗಿದುಕೊಂಡು ನಿಂತು ಕೊಂಡನು.

ಟಬಿ ಎರೆನ್ 'ಅದನ್ನು ಬಿಚ್ಚೋ ಮಗೂ, ನಿನಗೆ ಕೊಟ್ಟವರಿಗೆ ಗೌರವ ಕೊಡುವುದೂ ತಿಳಿಯದೇನು?' ಎಂದು ಗರ್ಜಿಸಿದನು.

ರಾಬಿ ಅವನ ಕಡೆಗೆ ವಿರೋಧಪೂರ್ಣ ದೃಷ್ಟಿಯನ್ನು ಬೀರಿ 'ಆಗಬಹುದು, ಸಾರ್ ಎಂದು ಹೇಳಿ ಗಂಟನ್ನು ಬಿಚ್ಚಿದನು. ಗಂಟಿನಿಂದ ಹೊಸ ಬಟ್ಟೆಬರೆ ಹೊರಬಿದ್ದುವು ಅರ್ಥವಾಗದವನಂತೆ ರಾಬಿ ಎರಡು ಕ್ಷಣ ಅವನ್ನೇ ದಿಟ್ಟಿಸಿದನು. ಫಕ್ಕನೆ ಅವನಿಗೆ ಪರಿಸ್ಥಿತಿಯ ಅರ್ಥವು ಹೊಳೆದು ಅವನ ಮೋರೆ ಕೆಂಪೇರಿತು. ಒಂದು ಕ್ಷಣಕಾಲ ಅವನು ಬೋನಿನೊಳಗೆ ಬಿದ್ದ ಪ್ರಾಣಿಯಂತೆ ವಿಲಿವಿಲಿ ಎಂದನಾದರೂ ಮರು ಕ್ಷಣ ಬಾಗಿಲಿನಿಂದ ಓಡಿ ಪರಾರಾದನು. ಶಾಲಾ ಆಡಳಿತ ಮಂಡಳಿಗೆ ಅವನ ಎರಡು ಹೆಜ್ಜೆ ಮಾತ್ರ ಕೇಳಿಸಿತು.

ಮಿಸೆಸ್ ಮನ್ರೋ ಅಸಹಾಯತೆಯಿಂದ ಉಪಾಧ್ಯಾಯಿನಿಯ ಕಡೆಗೆ ತಿರುಗಿ 'ಅವನಿಗೆ ಆಗಿರುವುದಾದರೂ ಏನು?" ಎಂದು ವಿಚಾರಿಸಿದಳು.

'ನಾಚುಗೆ, ಬೇರೇನು?" ಎಂದಳು ಮಿಸ್ ಮಾರ್ಗನ್.

'ಅದೇಕೆ? ನಾವು ಅವನಿಗೆ ಏನೂ ಮಾಡಲಿಲ್ಲವಲ್ಲಾ?' ಉಪಾಧ್ಯಾಯಿನಿಗೆ ವಿವರವನ್ನು ಕೊಡುವಾಗ ಅವರೆಲ್ಲರ ಮೇಲೆ ಸ್ವಲ್ಪ ಸಿಟ್ಟು ಬಂದಿತು. 'ನೋಡಿ, ಇದುತನಕ ಅವನಿಗೆ ತಾನು ಬಡವನೆಂಬುದೇ ತಿಳಿದಿರಲಿಲ್ಲ. ಈಗ ಅರ್ಥವಾಯಿತು.

'ಕ್ಷಮಿಸಿ, ಮಿಸ್ ಮಾರ್ಗನ್. ಇದು ನನ್ನಿಂದ ನಡೆದ ಅಪರಾಧ' ಎಂದು ಜಾನ್ ವೈಟ್‌ಸೈಡ್ ಯಾಚಿಸಿದರು.

'ಅವನನ್ನು ಹಾಗಾದರೆ ಏನು ಮಾಡೋಣ' ಎಂದು ಬರ್ಟ್ ಮನ್ರೋ ಮಹಾಶಯರು ವಿಚಾರಿಸಿದರು.

'ನನಗೆ ಗೊತ್ತಿಲ್ಲ, ಊಂ ಹೂ, ನನ್ನ ತಲೆಗೆ ಹೊಳೆಯುವುದಿಲ್ಲ.'

ಮಿಸೆಸ್ ಮನ್ರೋ ಗಂಡನ ಕಡೆಗೆ ತಿರುಗಿ 'ನೀವು ಮಾಲ್ಟ್‌ಬಿ ಹತ್ತಿರ ಹೋಗಿ ಮಾತನಾಡಿ. ಇಂಥ ಅತಿಶಯವಾದ ಚಳಿಯಲ್ಲಿ ಬರಿಗಾಲಲ್ಲಿ ನಡೆಯುವುದು ಅಪಾಯವಲ್ಲವೇ ಎಂದು ಅವರನ್ನು

ವಿಚಾರಿಸಿ. ಹಾಗೆ ಸರಿಯಾಗಿ ಮಾತನಾಡಿದರೆ ಮಾಲ್ಟ್ಬಿಯೇ ಬಟ್ಟೆ ತೆಕೋ ಎಂದು ರಾಬಿಗೆ ಹೇಳಬಹುದು. ಅಲ್ಲವೇ. ಮಿಸ್ಟರ್ ವೈಟ್‌ಸೈಡ್?' ಎಂದು ಹೇಳಿದಳು.

'ಬೇಡವೇ ಬೇಡ. ನಾನು ಇದಕ್ಕೆ ಆಕ್ಷೇಪಿಸುತ್ತೇನೆ. ಬೇಕಾದರೆ ನೀವೆಲ್ಲಾ ಮತ ತೆಗೆದು ನನ್ನ ಆಕ್ಷೇಪವನ್ನು ಕಿತ್ತುಹಾಕಿ. ನನ್ನಿಂದ ಇಷ್ಟು ಉಪದ್ರವವಾದದ್ದೇ ಸಾಕು' ಎಂದರು ಮಿ. ವೈಟ್‌ಸೈಡ್.

ಮಿಸೆಸ್ ಮನ್ರೋ 'ಅವನ ಭಾವನೆಗಳಿಗಿಂತ ಅವನ ಆರೋಗ್ಯವು ಹೆಚ್ಚೆಂದು ನನ್ನ ಅಭಿಮತ'ವೆಂದು ಒತ್ತಾಯಿಸಿದಳು.

ದಶಂಬರ ಇಪ್ಪತ್ತನೆಯ ದಿನ ಶಾಲೆಗೆ ಕ್ರಿಸ್ಮಸ್ ಹಬ್ಬದ ಸಲುವಾಗಿ ರಜೆ ಸಿಕ್ಕಿತು. ರಜಾ ದಿನಗಳನ್ನು ಲಾಸ್ ಏಂಜಲಿಸ್ ನಗರದಲ್ಲಿ ಕಳೆಯಲೆಂದು ಉದ್ದೇಶಿಸಿ ಮಿಸ್ ಮಾರ್ಗನ್ ಹಾದಿಯಲ್ಲಿರುವ ಸೆಲಿನಾಸ್ ಪಟ್ಟಣಕ್ಕೆ ಹೋಗುವ ಬಸ್ಸನ್ನು ಕಾಯುತ್ತಾ ನಿಂತಿದ್ದಾಗ ದೂರದಲ್ಲಿ ಒಬ್ಬ ಮನುಷ್ಯನು ಒಬ್ಬ ಹುಡುಗನನ್ನು ಕರೆದುಕೊಂಡು ಬರುವುದನ್ನು ಕಂಡಳು ಅವರ ಮೈಮೇಲೆ ಅಗ್ಗದರದ ಹೊಸ ಬಟ್ಟೆಗಳಿದ್ದು ಅವರು ನಡೆಯುವುದನ್ನು ನೋಡಿದರೆ ಅವರ ಕಾಲಿಗೆ ಗಾಯವಾದಂತೆ ತೋರುತ್ತಿತ್ತು. ಹತ್ತಿರ ಬಂದಹಾಗೆ ಚಿಕ್ಕ ಹುಡುಗನ ಪರಿಚಯವಾಯಿತು ಆಕೆಗೆ. ಅವನೇ ರಾಬಿ. ಅವನ ಮುಖದಲ್ಲಿ ಕಳೆ ಇರಲಿಲ್ಲ. ಅವನೀಗ ದುಃಖಿ.

'ಎಲಾ ರಾಬರ್ಟ್, ಇದೆಲ್ಲಿಗೆ ಹೊರಟಿದ್ದೀಯಾ?'

ದೊಡ್ಡವನು ಬಾಯಿ ತೆರೆದನು. 'ಮಿಸ್ ಮಾರ್ಗನ್ ನಾವು ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ಹೊರಟವರು' ಎಂದನಾತ.

ಅವನನ್ನು ಕಣ್ಣೆತ್ತಿ ಮಿಸ್ ಮಾರ್ಗನ್ ಕಂಡದ್ದು ಆಗಲೇ. ಚೆನ್ನಾಗಿ ನೋಡಿದರೆ ಆತನು ಗಡ್ಡವನ್ನು ಕಳೆದುಕೊಂಡ ಜೂನಿಯಸ್ ಆಗಿದ್ದನು. ಅವನಿಗೆ ಅಷ್ಟು ವಯಸ್ಸಾಗಿರಬಹುದೆಂದು ಆಕೆಗೆ ಆವರೆಗೂ ಅನಿಸಿರಲಿಲ್ಲ. ಕಣ್ಣುಗಳಲ್ಲಿದ್ದ ಹರೆಯವೂ ಈಗ ಇಂಗಿ ಹೋಗಿತ್ತು. ಅವನ ಮುಖದಲ್ಲಿ ಆಳವಾದ ಚಿಂತೆ ಪ್ರಕಟವಾಗುತಿತ್ತು.

'ರಜೆಗೆ ಹೋಗುತ್ತೀರಾ? ನನಗೆ ನಗರದ ಅಂಗಡಿಗಳನ್ನು ನೋಡುವುದೆಂದರೆ ಬಹಳ ಆಸೆ' ಎಂದಳು ಮಿಸ್ ಮಾರ್ಗನ್.

ಅದಕ್ಕೆ ಜೂನಿಯಸ್ ಮೆಲ್ಲನೆ ನುಡಿದನು: 'ಅಲ್ಲ. ನಮಗೆ ಅಲ್ಲಿಂದ ಹಿಂದೆ ಬರುವ ಯೋಚನೆ ಇಲ್ಲ. ಮಿಸ್ ಮಾರ್ಗನ್ ನಾನೊಬ್ಬ ಗುಮಾಸ್ತೆ, ಅಥವಾ ಇಪ್ಪತ್ತು ವರ್ಷಗಳ ಹಿಂದೆ ಆ ಕೆಲಸ ಮಾಡುತ್ತಿದ್ದೆ ಅನ್ನಿರಿ. ಇನ್ನು ಹೋಗಿ ಅಂಥದೇ ಒಂದು ಏನಾದರೂ ಕೆಲಸ ನೋಡಬೇಕು.'

'ಅದೇಕೋ?'

'ನನಗೆ ಈ ವರೆಗೂ ನನ್ನಿಂದ ಈ ಹುಡುಗನಿಗೆ ತೊಂದರೆಯಾಗಿದೆ ಎಂಬುದು ತಿಳಿದಿರಲಿಲ್ಲ, ಮಿಸ್ ಮಾರ್ಗನ್. ನಾನು ಈ ಮೊದಲೇ ಯೋಚಿಸಬೇಕಾಗಿತ್ತು. ಅವನನ್ನು ಬಡತನದಲ್ಲಿ ಬೆಳಸಿದರೆ ಏನು ಬಂತು? ನಿಮಗೆ ನಾನು ಹೇಳುವುದು ಅರ್ಥವಾಗುತ್ತದಲ್ಲಾ? ಜನ ನಮ್ಮ ವಿಷಯ ಏನೇನು ಆಡಿಕೊಳ್ಳುತ್ತಾರೋ?'

'ನೀನು ನಿನ್ನ ಹುಲ್ಲುಗಾವಲಿನಲ್ಲಿಯೇ ಇರುವಿಯಂತೆ. ಅದು ಒಳ್ಳೆಯ ಹೊಲ, ಹುಲ್ಲುಗಾವಲು!'

'ಅದರಲ್ಲಿ ನಾನೇನು ಮಾಡಲಿ? ನನಗೆ ಹೊಲದ ಕೆಲಸ ಬಾರದು. ಜಾಕೋಬನಿಗೆ ಅದನ್ನು ಬಿಟ್ಟಿದ್ದೇನೆ. ಅವನೂ ಒಬ್ಬ ಸೋಮಾರಿ, ಏನು ಮಾಡುತ್ತಾನೋ ಬಿಡುತ್ತಾನೋ ಅಂತೂ ಕೊನೆಗೆ ಅದನ್ನು ಮಾರಿ ರಾಬಿಗೆ ಬೇಕಾದ್ದೇನಾದರೂ ಕೊಂಡುಕೊಳ್ಳಬಹುದಲ್ಲಾ?'

ಮಿಸ್ ಮಾರ್ಗನಳಿಗೆ ಸಿಟ್ಟು ಬರುತಿತ್ತು. ನಡುವೆ ಅಳುವೂ ಬರುವಂತಾಗುತಿತ್ತು. 'ಮೂರ್ಖ ಜನರು ಹೇಳುವುದನ್ನೆಲ್ಲಾ ನೀನು ನಂಬ ಬೇಕೆ?' ಎಂದು ಆಕೆ ಕೇಳಿದಳು.

ಅವನು ಅವಳ ಕಡೆಗೆ ಆಶ್ಚರ್ಯದಿಂದ ನೋಡಿ 'ನಂಬದೆ ಹೋದರೂ ಒಬ್ಬ ಬೆಳೆಯುವ ಹುಡುಗನನ್ನು ಪ್ರಾಣಿಯಂತೆ ಸಾಕುವುದು ತರವೇ ನಮ್ಮ?'

ದೂರದ ರಾಜಮಾರ್ಗದಲ್ಲಿ ಬಸ್ಸು ಧಾವಿಸಿ ಬರುತ್ತಿತ್ತು. ಜೂನಿಯಸ್ ರಾಬಿಯ ಕಡೆಗೆ ಕೈತೋರಿಸಿ, 'ಇವನು ಬರಲಿಕ್ಕೆ ಕೇಳಲಿಲ್ಲ. ಕಣ್ಣು ತಪ್ಪಿಸಿ ಬೆಟ್ಟದ ಕಡೆಗೆ ಓಡಿ ಹೋಗಿದ್ದ. ನಮಗೆ ನಿನ್ನೆ ತಾನೇ ಸಿಕ್ಕಿದ. ಅವನಿಗೆ ಪ್ರಾಣಿಗಳಂತೆ ಬದುಕುವುದು ಅಭ್ಯಾಸವಾಗಿ ಬಿಟ್ಟದೆ. ಅಲ್ಲದೆ ಸ್ಯಾನ್‌ಫ್ರಾನ್ಸಿಸ್ಕೋದ ರುಚಿ ಅವನಿಗೆ ಇನ್ನು ತಿಳಿಯದು, ಮಿಸ್ ಮಾರ್ಗನ್'

ಬಸ್ಸು ನಿಂತಿತು. ಜೂನಿಯಸ್ ಮತ್ತು ರಾಬಿ ಹಿಂದಿನ ಸೀಟಿನಲ್ಲಿ ಹತ್ತಿ ಕೂತರು. ಮಿಸ್ ಮಾರ್ಗನ್‌ಗೆ ಅವರ ಜತೆಯಲ್ಲೇ ಕೂರುವ ಮನಸ್ಸಾಯಿತು. ಆದರೆ ಅವಳು ಹಠಾತ್ತನೆ ಮುಂದುಗಡೆಗೆ ಹೋಗಿ ಡ್ರೈವರನ ಪಕ್ಕದ ಸೀಟಿನಲ್ಲಿ ಕೂತಳು. 'ಅವರು ಇಬ್ಬರೇ ಜತೆಯಾಗಿರುವುದು ಒಳ್ಳೆಯದು' ಎಂದು ಆಕೆ ಎಣಿಸಿದಳು.

Navayuga Press, Udipi. 2000/4-'59

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು. ಶಿ. ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀ-ನಾರಾಯಣಾಚಾರ್ಯ ಮತ್ತು ಕೆ. ಬಿ. ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು (,,)	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟಿಮಾರಾ (ಅನು: ಕು. ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯುಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ (,,)	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನಮ್ಮಲ್ಲಿ ಸಿಗುವ ಪುಸ್ತಕಗಳ ಯಾದಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ನವಯುಗ ಪ್ರೆಸ್, ಉಡುಪಿ.